
ಶಿಕ್ಷಣ ಮಾಧ್ಯಮ ಕನ್ನಡಪರ ಆಂದೋಲನ ಮತ್ತು ವರದಿಗಳು

ಸ.ರ. ಸುದರ್ಶನ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಶಿಕ್ಷಣ ಮಾಧ್ಯಮ - ಕನ್ನಡಪರ ಆಂದೋಲನ ಮತ್ತು ವರದಿಗಳು

ಸ.ರ. ಸುದರ್ಶನ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

SHIKSHANA MAADHYAMA - KANNADAPARA AANDOLANA MATTU VARADIGALU by : **Sri. Sa. Ra. Sudarshana**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : viii + 166 Price : Rs. **50=00 : 2006**

ಪ್ರಥಮ ಮುದ್ರಣ : ೨೦೦೬
ಪ್ರತಿಗಳು : ೧೫೦೦
ಬೆಲೆ : ಐವತ್ತು ರೂಪಾಯಿಗಳು

ಬೀದರಿನಲ್ಲಿ ನಡೆದ ಅಖಿಲ ಭಾರತ ೭೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೀದರ ಸ್ವಾಗತ ಸಮಿತಿ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ, ಅಧ್ಯಕ್ಷರು
ಶ್ರೀ ಮೆರಾಜುದ್ದೀನ ಪಟೇಲ, ಹಿರಿಯ ಉಪಾಧ್ಯಕ್ಷರು.
ಶ್ರೀ ನರಸಿಂಗರಾವ ಸೂರ್ಯವಂಶಿ, ಲೋಕ ಸಭಾ ಸದಸ್ಯರು
ಶ್ರೀ ಬಂಡೆಪ್ಪ ಖಾಶೆಂಪೂರ, ಶಾಸಕರು
ಶ್ರೀ ಮುನೀಶ ಮೌದ್ಗಿಲ್, ಪ್ರಧಾನ ಸಂಚಾಲಕರು
ಶ್ರೀ ಕೆ.ಎಲ್. ಸುಧೀರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು
ಶ್ರೀ ಆ್ಯಂಟನಿ ಮೆಂಡೋನ್ಸಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಚೆನ್ನಬಸಪ್ಪ ಹಾಲಹಳ್ಳಿ, ಕೋಶಾಧ್ಯಕ್ಷರು
ಶ್ರೀ ಡಾ. ಜಗನ್ನಾಥ ಹೆಬ್ಬಾಳೆ, ಪ್ರಧಾನ ಕಾರ್ಯದರ್ಶಿಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು

ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ), ಬೆಂಗಳೂರು
ಶ್ರೀ ಜರಗನಹಳ್ಳಿ ಶಿವಶಂಕರ್, ಬೆಂಗಳೂರು
ಡಾ. ಎಚ್. ಜಯಮ್ಮ ಕರಿಯಣ್ಣ, ಬೆಂಗಳೂರು
ಶ್ರೀ ಪುಂಡಲೀಕ ಹಾಲಂಬಿ, ಬೆಂಗಳೂರು
ಶ್ರೀ ಶ್ರ.ದೇ ಪಾರ್ಶ್ವನಾಥ, ಬೆಂಗಳೂರು-೫೦.
ಶ್ರೀ ಎಸ್. ರಾಮಲಿಂಗೇಶ್ವರ (ಸಿಸಿರಾ), ಬೆಂಗಳೂರು ಗ್ರಾಮಾಂತರ
ಶ್ರೀ ಎನ್.ಎಸ್. ರಾಮಪ್ರಸಾದ್, ಕೋಲಾರ
ಶ್ರೀ ಆರ್.ಎಸ್. ಸದಾನಂದ, ತುಮಕೂರು
ಶ್ರೀ ಕೆ.ಎಂ. ವೀರೇಶ್, ಚಿತ್ರದುರ್ಗ
ಶ್ರೀ ಎಸ್.ಎಚ್. ಹೂಗಾರ್, ದಾವಣಗೆರೆ
ಶ್ರೀ ಡಿ. ಮಂಜುನಾಥ, ಶಿವಮೊಗ್ಗ
ಶ್ರೀ ಮಾನಸ, ಮೈಸೂರು
ಶ್ರೀ ಮಲೆಯೂರು ಗುರುಸ್ವಾಮಿ, ಮೈಸೂರು
ಶ್ರೀ ಹೆಚ್.ವಿ. ಜಯರಾಂ, ಮಂಡ್ಯ
ಶ್ರೀ ಟಿ.ಪಿ. ರಮೇಶ್, ಕೊಡಗು
ಶ್ರೀ ಎಚ್.ಬಿ. ರಮೇಶ್, ಹಾಸನ

ಶ್ರೀ ಎಚ್. ವಿ. ಶ್ರೀವತ್ಸ ಹುಲಸೆ, ಚಿಕ್ಕಮಗಳೂರು

ಶ್ರೀ ಎಸ್. ಪ್ರದೀಪ ಕಲ್ಕೂರ, ದಕ್ಷಿಣ ಕನ್ನಡ

ಶ್ರೀ ಯು. ಚಂದ್ರಶೇಖರ ಹೊಳ್ಳ, ಉಡುಪಿ

ಶ್ರೀ ಮೋಹನ ಬಸವನಗೌಡ ಪಾಟೀಲ, ಬೆಳಗಾವಿ

ಶ್ರೀ ಬಿ.ಎಂ. ಪಾಟೀಲ, ಬಿಜಾಪುರ

ಶ್ರೀ ವಿಶ್ವನಾಥ ಕಾ. ವಂಶಾಕೃತಮಠ, ಬಾಗಲಕೋಟೆ

ಶ್ರೀ ಮಧು ವೆಂಕಾರೆಡ್ಡಿ, ಧಾರವಾಡ

ಶ್ರೀ [illegible].ಸಿ. ಹಿರೇಮಠ, ಹಾವೇರಿ

ಪ್ರೊ. ಕ.ಬಿ. ತಳಗೇರಿ, ಗದಗ

ಶ್ರೀ ರೋಹಿದಾಸ ನಾಯಕ, ಉತ್ತರಕನ್ನಡ

ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ

ಡಾ. ಜಗನ್ನಾಥ ಹೆಬ್ಬಾಳೆ, ಬೀದರ

ಶ್ರೀ ಕ.ಮ. ಪುರದ, ರಾಯಚೂರು

ಶ್ರೀ ಶೇಖರಗೌಡ ಮಾಲಿಪಾಟೀಲ, ಕೊಪ್ಪಳ

ಶ್ರೀ ನಿಷ್ಠಿ ರುದ್ರಪ್ಪ, ಬಳ್ಳಾರಿ

Sri H.B.L. Rao, Navi Mumbai

Sri I.V. Bhatta, Kasaragod

Sri C. Ramaswamy, Chennai

Sri H. Ramachandrappa, Ananthpura

ಧರ್ಮದರ್ಶಿ ಹರಿಕೃಷ್ಣ ಪುನರೂರು, ದಕ್ಷಿಣ ಕನ್ನಡ

ಡಾ. ಕಮಲಾ ಹಂಪನಾ, ಬೆಂಗಳೂರು

ನಿರ್ದೇಶಕರು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು

ಶ್ರೀಮತಿ ಭಾನು ಮುಷ್ತಾಕ್, ಹಾಸನ

ಶ್ರೀ ರಫಾಯಲ್ ರಾಜ್, ಬೆಂಗಳೂರು

ಡಾ. ಎಲ್. ಹನುಮಂತಯ್ಯ, ಬೆಂಗಳೂರು

ಡಾ. ಕರೀಗೌಡ ಬೀಚನಹಳ್ಳಿ, ಬಳ್ಳಾರಿ

ಡಾ. ಸಿದ್ಧಲಿಂಗಯ್ಯ, ಬೆಂಗಳೂರು

ಅಧ್ಯಕ್ಷರ ನುಡಿ

ಕಳೆದ ತೊಂಬತ್ತು ವರ್ಷಗಳಿಂದ ನಾಡು-ನುಡಿ-ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ- ಅಕ್ಷರ- ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ- (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಜನವರಿ ೨೦೦೬ ರಲ್ಲಿ ಬೀದರಿನಲ್ಲಿ ನಡೆಯಲಿರುವ ೭೨ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ, ಸೃಜನೇತರ ಕ್ಷೇತ್ರಗಳಿಗೆ ಸಂಬಂಧಿಸಿದ ೭೨ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದೆಂದು ನಮ್ಮ ಪ್ರಕಟನಾ ಸಮಿತಿ ತೀರ್ಮಾನಿಸಿತು. ಈ ಯೋಜನೆಯ ಅನುಷ್ಠಾನಕ್ಕೆ ವಿಶೇಷ ಆರ್ಥಿಕ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ ನಾವು ಕೃತಜ್ಞರು. ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ನಮ್ಮ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿಗೆ, ಮುಖಪುಟ ವಿನ್ಯಾಸದ ಕಲಾವಿದರಿಗೆ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಲೇಖಕರ ಮಾತು

ನಾನು ಆಗಾಗ್ಗೆ ಪತ್ರಿಕೆಗಳಿಗೆ ಕನ್ನಡದ ಬಗ್ಗೆ ಲೇಖನಗಳನ್ನು ಬರೆದಿದ್ದೇನಾದರೂ ಅವೆಲ್ಲ ಸಮಯಸ್ಫೂರ್ತಿಯಿಂದ ಬರೆದವು. ಆದರೆ ನಿಯೋಜಿತ ಬರಹವನ್ನು ಪೂರ್ಣಗೊಳಿಸದ್ದು ಅಪರೂಪ. ಅದು ನನ್ನ ಸ್ವಭಾವದ ದೋಷವೆನಿಸುತ್ತದೆ.

ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಚಂಪಾ ಅವರು ಬೀದರ್ ಸಾಹಿತ್ಯ ಸಮ್ಮೇಳನದಲ್ಲಿ ೭೨ ಪುಸ್ತಕಗಳನ್ನು ಹೊರತರಬೇಕೆಂದು ನಿಶ್ಚಯಿಸಿದ್ದು, ಮಾತೃಭಾಷಾ ಶಿಕ್ಷಣ ಮಾಧ್ಯಮದ ಬಗ್ಗೆ ಬಂದಿರುವ ವರದಿಗಳನ್ನು ಕ್ರೋಡೀಕರಿಸಿ ಒಂದು ಪುಸ್ತಕವನ್ನು ಬರೆದುಕೊಡಬೇಕೆಂದು ನನ್ನನ್ನು ಕೇಳಿದಾಗ ಒಪ್ಪಿಕೊಳ್ಳಲು ಸ್ವಲ್ಪ ಹಿಂಜರಿಕೆಯಾದರೂ ಕನ್ನಡ ಮಾಧ್ಯಮದ ಮೇಲಿನ ಪ್ರೀತಿ ಹಾಗೂ ಚಂಪಾ ಅವರ ಬಗೆಗಿನ ಗೌರವದಿಂದಾಗಿ ಒಪ್ಪಿಕೊಂಡೆ.

ಮೊದಲೇ ಹೇಳಿದಂತೆ ನನ್ನ ದೌರ್ಬಲ್ಯದಿಂದಾಗಿ ಬರಹದ ಪ್ರಾರಂಭ ಆಗುವುದೇ ಕಷ್ಟವಾಯಿತು. ಆದರೆ ಚಂಪಾ ಅವರು ಮಾಡುತ್ತಿದ್ದ ಪದೇಪದೇ ಜ್ಞಾಪಕದಿಂದಾಗಿ ಸಂಕೋಚವಾಗಿ, ಒಮ್ಮೆ ದೃಢನಿರ್ಧಾರ ಕೈಗೊಂಡು, ಬರೆಯಲು ಕುಳಿತೆ. ಕೇವಲ ವರದಿಗಳ ಸಂಕಲನ ಮಾಡುವುದರ ಬದಲು ಮಾತೃಭಾಷಾ ಮಾಧ್ಯಮದ ಬಗೆಗಿನ ಸೈದ್ಧಾಂತಿಕತೆ, ಕನ್ನಡ ಮಾಧ್ಯಮದ ಬಗ್ಗೆ ಆರಂಭದಿಂದ ಈವರೆಗಿನ ಒತ್ತಾಯ, ಅದನ್ನು ಕಾರ್ಯಸಾಧ್ಯಗೊಳಿಸುವಲ್ಲಿ ನಡೆದಿರುವ ಪ್ರಯತ್ನಗಳನ್ನೆಲ್ಲ ಒಗ್ಗೂಡಿಸಲು ಹೊರಟಿದ್ದರಿಂದ ಅನೇಕ ಹೊಸ ವಿಷಯಗಳು ನನಗೂ ತಿಳಿದಂತಾಗಿ, ನಿಮ್ಮ ಮುಂದಿರುವ ರೂಪದಲ್ಲಿ ಪುಸ್ತಕ ಹೊರಬಂದಿದೆ. ದೇಶಭಾಷಾ ಮಾಧ್ಯಮಕ್ಕಾಗಿ ಮೊದಲಿಗೆ ಆಂಗ್ಲವೇತ್ತರಿಂದಲೇ ಒತ್ತಾಯ ಬಂದ ಸಂಗತಿ ಆಸಕ್ತಿದಾಯಕವಾದುದು.

ಈ ಪುಸ್ತಕ ಹೊರಬರಲು ಕಾರಣರಾದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪ್ರೊ. ಚಂಪಾ ಹಾಗೂ ಇತರ ಪದಾಧಿಕಾರಿಗಳಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ.

ಇದನ್ನು ಬರೆಯಲು ಕೆಲವು ಆಕರ ಗ್ರಂಥಗಳನ್ನು ಒದಗಿಸಿದ ಮೈಸೂರಿನ ಶಾರದಾ ವಿಲಾಸ ಶಿಕ್ಷಣ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಚ್.ಎಸ್.ಉಮೇಶ್ ಹಾಗೂ ಗ್ರಂಥಪಾಲಕ ಶ್ರೀ ಆರ್.ಎಸ್.ಗಿರಿ, ವಿಜ್ಞಾನ ಲೇಖಕರಾದ ಪ್ರೊ. ಜೆ.ಆರ್. ಲಕ್ಷ್ಮಣ ರಾವ್, ಗೆಳೆಯರಾದ ಪಂಡಿತಾರಾಧ್ಯ ಹಾಗೂ ಸಾಹಿತಿಗಳಾದ ಪ್ರೊ. ಸಿ.ಪಿ.ಕೆ. ಹಾಗೂ ಕೆಲವು ವಿವರಗಳನ್ನು ಕೊಟ್ಟ ವಿಶ್ರಾಂತ ಕುಲಪತಿಗಳಾದ ಪ್ರೊ.ದೇಜಗೌ ಹಾಗೂ ಮೈಸೂರು ಯುವರಾಜ ಕಾಲೇಜಿನ ಮೊದಲ ಬಿ.ಎಸ್ಸಿ. ಕನ್ನಡ ಮಾಧ್ಯಮದ ತಂಡದ ವಿದ್ಯಾರ್ಥಿಯಾಗಿದ್ದ ಗೆಳೆಯ ಎಂ.ಬಿ. ವಿಶ್ವನಾಥ್, ಬರಹವನ್ನು ಪೂರೈಸುವಂತೆ ಪದೇ ಪದೇ ಪ್ರೀತಿಯ ಒತ್ತಡ ಹೇರಿದ ನನ್ನ ಮಡದಿ ಸುಬ್ಬಲಕ್ಷ್ಮಿ ಹಾಗೂ ಮಗಳು ಮೈ. ಸು. ನುಡಿ ಇವರಿಗೆಲ್ಲ ನಾನು ಆಭಾರಿಯಾಗಿದ್ದೇನೆ.

ಪುಸ್ತಕವನ್ನು ಮುದ್ರಿಸಿರುವ ಮುದ್ರಣಾಲಯದವರಿಗೂ ನನ್ನ ವಂದನೆಗಳು

– ಸ. ರ. ಸುದರ್ಶನ

ಪರಿವಿಡಿ

ಅಧ್ಯಾಯ-೧

ಶಿಕ್ಷಣ ಮಾಧ್ಯಮ - ಸೈದ್ಧಾಂತಿಕ ಹಿನ್ನೆಲೆ

ಮಾತೃಭಾಷಾ ಮಾಧ್ಯಮ

"ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಗಣಿತ ಇವುಗಳನ್ನು ನಾನು ನಾಲ್ಕು ವರ್ಷಗಳಲ್ಲಿ ಕಲಿತಿದ್ದನ್ನು ಒಂದೇ ವರ್ಷದಲ್ಲಿ ಕಲಿಯಬಹುದಿತ್ತು. ನಾನದನ್ನು ಇಂಗ್ಲಿಷ್ ಮೂಲಕ ಕಲಿಯದೆ ನನ್ನ ಭಾಷೆಯಾದ ಗುಜರಾತಿಯ ಮೂಲಕ ಕಲಿತಿದ್ದರೆ...." - ಗಾಂಧೀಜಿಯವರ ಈ ಮಾತುಗಳು ಮಗುವಿನ / ವಿದ್ಯಾರ್ಥಿಯ ಭಾಷೆಯೇ ಕಲಿಕೆಯ ಭಾಷೆ ಏಕಾಗಬೇಕು ಅಂದರೆ ಏಕೆ ಶಿಕ್ಷಣ ಮಾಧ್ಯಮವಾಗಬೇಕು ಎಂಬುದಕ್ಕೆ ವೈಜ್ಞಾನಿಕ ಆಧಾರವನ್ನು ನೀಡುವ ಹೇಳಿಕೆಯಾಗಿದೆ.

ಕಲಿತದ್ದನ್ನು ಚೆನ್ನಾಗಿ ಗ್ರಹಿಸಲು, ಗ್ರಹಿಸಿದ್ದನ್ನು ಮನನ ಮಾಡಿಕೊಳ್ಳಲು, ಮನನ ಮಾಡಿಕೊಂಡಿದ್ದನ್ನು ಸಮರ್ಥವಾಗಿ ಅಭಿವ್ಯಕ್ತಿಸಲು ಮಗುವಿಗಾಗಲಿ / ವಿದ್ಯಾರ್ಥಿಗಾಗಲಿ ತನ್ನ ಭಾಷೆಗಿಂತ ಸಮರ್ಥ ಸಾಧನ ಇನ್ನೊಂದಿಲ್ಲ ಎಂಬುದು ಮನೋವಿಜ್ಞಾನಿಗಳ ಮತ್ತು ಶಿಕ್ಷಣತಜ್ಞರ ಅಭಿಪ್ರಾಯ.

'ಮಕ್ಕಳ ಸ್ಕೂಲು ಮನೇಲಲ್ವೇ' ಎಂದರು ಟಿ.ಪಿ. ಕೈಲಾಸಂ. ಅಂದರೆ ಮಗು ಮನೆಯಲ್ಲಿ ಬೆಳೆಯುವಾಗ ತನ್ನ ಪರಿಸರದ ಬಗ್ಗೆ, ಸಂಸ್ಕೃತಿ ಬಗ್ಗೆ ತಿಳುವಳಿಕೆಯನ್ನು ರೂಢಿಸಿಕೊಳ್ಳುತ್ತಾ ಹೋಗುತ್ತದೆ. ಆಗ ಅದು ಗ್ರಹಿಕೆಗೆ, ಅರ್ಥೈಸಿಕೊಳ್ಳುವಿಕೆಗೆ, ಅಭಿವ್ಯಕ್ತಿಗೆ ಬಳಸಿಕೊಳ್ಳುವುದು ತನ್ನ ಭಾಷೆಯನ್ನೇ. ಆ ಹಂತದಲ್ಲಿ ಅದರ ಸೃಜನಶೀಲ ಸಾಮರ್ಥ್ಯ ವಿಕಾಸಗೊಂಡರೆ ಅದಕ್ಕೂ ತನ್ನ ಭಾಷೆಯೇ ಸಾಧನ.

ನಂತರ ಮಗು ಮನೆಯಿಂದ ಹೊರಬಂದು, ಕಲಿಕೆಗಾಗಿ ಶಾಲೆಗೆ ಸೇರುತ್ತದೆ. ಈ ಘಟ್ಟದಲ್ಲಿ ಅದು ಸ್ವಚ್ಛಂದ ಅಥವಾ ಸೀಮಿತ ನಿಯಂತ್ರಣದ ಪರಿಸ್ಥಿತಿಯಿಂದ ನಿಯಂತ್ರಿತ ಪರಿಸರಕ್ಕೆ ಕಾಲಿಡುತ್ತದೆ. ಈ ಹೊಸ ಪರಿಸರಕ್ಕೆ ಹೊಂದಿಕೊಳ್ಳುವಲ್ಲಿ ಅದು ಅನೇಕ ತೆರನ ಸಮಸ್ಯೆಗಳನ್ನು ಎದುರಿಸುತ್ತದೆ. ಅಂತಹ ಸ್ಥಿತಿಯಲ್ಲಿ ಶಾಲೆಯಲ್ಲಿ ತಾನಾಡುವ ಭಾಷೆಯ ಪರಿಸರವಿದ್ದಲ್ಲಿ ಅದಕ್ಕೆ ಪರಕೀಯ ವಾತಾವರಣದ ಅನುಭವವಾಗದೆ, ಹೊಂದಿಕೊಳ್ಳುವುದು ಸುಲಭವಾಗುತ್ತದೆ.

ಅದಕ್ಕೆ ಬದಲಾಗಿ ತನ್ನದಲ್ಲದ ಅಥವಾ ತನ್ನ ಪರಿಸರದ್ದೂ ಅಲ್ಲದ ಭಾಷೆಯಲ್ಲಿ ಕಲಿಕೆಯನ್ನು ಆರಂಭಿಸಬೇಕಾಗಿ ಬಂದಾಗ ಏನಾಗುತ್ತದೆ? ಅದನ್ನು ತಿಳಿಯಬೇಕಾದರೆ ಭಾಷೆ ಎಂದರೇನು? ಎಂಬುದರ ವಿವೇಚನೆ ಅಗತ್ಯ.

'ಭಾಷೆ' ಎಂಬುದು ಶರೀರವಿಜ್ಞಾನಿಗೆ 'ಅರ್ಥವನ್ನು ರವಾನಿಸುವ ನಿರ್ದಿಷ್ಟ ಶಬ್ದ ಘಟಕಗಳಿಂದ ಕೂಡಿದ ಜೈವಿಕ ಭೌತಿಕ ಸಾಧನ'. ಪುರಾತತ್ವ ಶಾಸ್ತ್ರಜ್ಞನಿಗೆ ಅದು 'ಸಾಂಸ್ಕೃತಿಕವಾಗಿ ಅಂತರ್ಗತವಾದ ಲಕ್ಷಣ'. ಸಮಾಜವಿಜ್ಞಾನಿಗೆ ಅದು 'ಕಲ್ಪನೆಗಳು, ಅರಿವು, ಭಾವನೆಗಳು, ಸಂಸ್ಕೃತಿ ಪ್ರಸಾರದ ಮಾಧ್ಯಮ. ಅದು ಸಂಪರ್ಕದ ಮಾಧ್ಯಮ, ಸಾಮಾಜಿಕ ಕೊಂಡಿ. ಅದು ವ್ಯಕ್ತಿಯ ವ್ಯಕ್ತಿತ್ವ ಮತ್ತು ಸಂಸ್ಕೃತಿಯನ್ನು ಬಿಂಬಿಸುತ್ತದೆ'. ಚಿಂತನೆಯನ್ನು ಕೃತಿಗಿಳಿಸಲು ಭಾಷೆಯೇ ಮಾಧ್ಯಮ.

ಈ ಮಾತುಗಳು ನಮಗೆ ಮಾತೃಭಾಷೆ ಅಥವಾ ವಿದೇಶಿಭಾಷೆಗಳ ನಡುವಣ ವ್ಯತ್ಯಾಸವನ್ನು ಅರಿಯಲು ಸಹಾಯಕವಾಗುತ್ತವೆ.

ಮಾತೃಭಾಷೆ ಎಂಬುದು ಯಾವುದೇ ವ್ಯಕ್ತಿ ತನ್ನ ಬಾಲ್ಯದ ದಿನಗಳಲ್ಲಿ ಗಳಿಸುವ ಭಾಷೆ. ಸಾಮಾನ್ಯವಾಗಿ ಅದು ಆತನ ಚಿಂತನೆ ಮತ್ತು ಸಂವಹನದ ನೈಸರ್ಗಿಕ ಸಾಧನ. ಅದು ಮಗು (ಕಲಿಸದೆಯೇ) ತಾನಾಗಿಯೇ ಗ್ರಹಿಸುವ ಭಾಷೆ. ಅದು ಮನೆಯ ಪರಿಸರದ ಭಾಗ ಮತ್ತು ಅಭಿವ್ಯಕ್ತಿ. ಮನೆಯ ಭಾಷೆಯನ್ನು ಮಗುವು ಗ್ರಹಿಸುವುದು ಸಾಂಸ್ಕೃತಿಕ ಪರಿಸರದ ಬಗ್ಗೆ ಮಗುವಿನ ಗ್ರಹಿಕೆ ಎನ್ನಬಹುದು.

ವಿದೇಶಿ ಅಥವಾ ದ್ವಿತೀಯ ಭಾಷೆ ಎಂಬುದು ಯಾವುದೇ ವ್ಯಕ್ತಿ ತನ್ನ ಮಾತೃಭಾಷೆಯ ಜತೆಗೆ ಆತನು ಪಡೆಯುವ ಭಾಷೆ. ಆದರೆ ಮಾತೃಭಾಷೆ ಗ್ರಹಿಸಿದ್ದಾದರೆ / ರೂಢಿಸಿಕೊಂಡಿದ್ದಾದರೆ, ದ್ವಿತೀಯ ಭಾಷೆ ಕಲಿತ ಭಾಷೆ. ಇದು ಪ್ರಜ್ಞಾಪೂರ್ವಕವಾಗಿ ಮಾಡಿದ, ಉದ್ದೇಶಪೂರ್ವಕವಾದ ಗಳಿಕೆಯಾಗಿರುತ್ತದೆ. '...ಭಾಷೆಯು ಸಂಭಾಷಣೆಯ ವಾಹಕ ಮತ್ತು ಅರಿವಿನ ಸಂಗ್ರಹ' ಎಂದು ಬರ್ಕಲಿ ಹೇಳುತ್ತಾರೆ.

ಹೀಗೆ ಭಾಷೆ ಎಂದರೇನು ಎಂಬುದರ ಬಗ್ಗೆ ಅರಿವು ಮೂಡಿದ ನಂತರ, ಶಿಕ್ಷಣದಲ್ಲಿ ಅದರ ಪಾತ್ರವನ್ನು ಪರಿಶೀಲಿಸಬಹುದು. ಶಿಕ್ಷಣದ ಗುರಿ, ಕ್ರಿಯೆ ಮತ್ತು ಸ್ವರೂಪದ ಬಗ್ಗೆ ವಿಶ್ಲೇಷಿಸಿದ ನಂತರವೇ ಶಿಕ್ಷಣದಲ್ಲಿ ಮಾತೃಭಾಷೆ ಮತ್ತು ದ್ವಿತೀಯ ಭಾಷೆಗಳ ಬಗ್ಗೆ ವ್ಯತ್ಯಾಸವನ್ನು ತಿಳಿಯಬಹುದು.

ಈ ಬಗ್ಗೆ ಅನೇಕ ದಾರ್ಶನಿಕರು ಹೇಳಿದ್ದಾರೆ. ಮಹಾತ್ಮಗಾಂಧಿಯವರ ಪ್ರಕಾರ "ಸಾಕ್ಷರತೆ ಎಂಬುದು ಶಿಕ್ಷಣದ ಅಂತ್ಯವಲ್ಲ, ಆರಂಭವೂ ಅಲ್ಲ".

ಶಿಕ್ಷಣ ಎಂಬುದು ವ್ಯಕ್ತಿಯು ಸಮರ್ಥವಾಗಿ ಅಭಿವ್ಯಕ್ತಿಸಲು ನೆರವಾಗುವ ಪ್ರಕ್ರಿಯೆ. ಅದು ಆತನ ವ್ಯಕ್ತಿತ್ವವನ್ನು ರೂಪಿಸುತ್ತದೆ. ಜವಾಬ್ದಾರಿಯುತ ವಯಸ್ಕನ ಪಾತ್ರವನ್ನು ನಿರ್ವಹಿಸಲು ಅವಕಾಶ ನೀಡಿ, ಆತನನ್ನು ಸಮಾಜದ ಸಂಘಟಿತ /

ಅವಿಭಾಜ್ಯ ಸದಸ್ಯನನ್ನಾಗಿ ಮಾಡುತ್ತದೆ. ಆತನು ತನ್ನ ಜೀವನೋಪಾಯ ಮಾಡಿಕೊಳ್ಳಲು ಸಜ್ಜುಗೊಳಿಸುತ್ತದೆ. ಅದು ಅರಿವು ಮತ್ತು ಕೌಶಲಗಳನ್ನು ಬೆಳೆಸುವ ಕಾರ್ಯವನ್ನು ಮಾಡುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ತಿಳಿವಳಿಕೆಯನ್ನು ಪಡೆದು ಉನ್ನತ ಮಟ್ಟದಲ್ಲಿ ವ್ಯವಹರಿಸಲು ನೆರವಾಗುತ್ತದೆ.

ಶಿಕ್ಷಣಕ್ಕೆ ಸಾಮಾಜಿಕ ಕಾರ್ಯಗಳೂ ಇವೆ. ಕೆಲವು ಸಂದರ್ಭಗಳಲ್ಲಿ ಅದು ಹಾಲಿ ಸಾಮಾಜಿಕ ವ್ಯವಸ್ಥೆಯನ್ನು ಸಂರಕ್ಷಿಸಿದರೆ, ಕೆಲವು ಸಂದರ್ಭಗಳಲ್ಲಿ ಸಾಂಸ್ಕೃತಿಕ ಪ್ರಸಾರದ ಮೂಲಕ ಸಾಮಾಜಿಕ ಬದಲಾವಣೆಗೆ ಕಾರಣವಾಗುತ್ತದೆ. ಇದರ ಜತೆಗೆ ಕೊಠಾರಿ ಆಯೋಗ ಹೇಳಿದಂತೆ ರಾಷ್ಟ್ರೀಯ ಪ್ರಜ್ಞೆಯನ್ನು ಉತ್ತೇಜಿಸುತ್ತದೆ. ಶಿಕ್ಷಣವು ಮಾನವಶಕ್ತಿಯ ಅವಶ್ಯಕತೆಗಳ ಪ್ರಮಾಣ ಮತ್ತು ಗುಣಮಟ್ಟವನ್ನು ಒದಗಿಸುವ ಆರ್ಥಿಕ ಕಾರ್ಯವನ್ನು ಸಹ ನಿರ್ವಹಿಸುತ್ತದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಮಾತೃಭಾಷಾ ಮಾಧ್ಯಮದ ಬಗ್ಗೆ ಚಿಂತನೆ ನಡೆಸಬೇಕು.

ನಮ್ಮ ಬಹುತೇಕ ಚಿಂತನೆ ಪ್ರಕ್ರಿಯೆ ನಡೆಯುವುದು ಮಾತೃಭಾಷೆಯಲ್ಲೇ. ಮಗುವು ಪ್ರತಿಯೊಂದು ಅನುಭವವನ್ನು ತನ್ನ ಮಾತೃಭಾಷೆಯಲ್ಲಿ ಸವಿಯುತ್ತದೆ. ಅನಂತರ ಈ ಅನುಭವಗಳ ಅಭಿವ್ಯಕ್ತಿಗೂ ಮಾತೃಭಾಷೆಯನ್ನೇ ಬಳಸುತ್ತದೆ.

ಪ್ರತಿಯೊಬ್ಬ ವ್ಯಕ್ತಿಯೂ ಗ್ರಹಿಸುವ ಬಹುಭಾಗ ಮಾತೃಭಾಷಾ ಮಾಧ್ಯಮದ ಮೂಲಕವೇ ಹಾಯಿಸಲ್ಪಡುತ್ತದೆ ಎಂದು ಗೋಲ್ಡ್‌ಷ್ಮಿಟ್ ಹೇಳಿದ್ದಾನೆ. ಶಿಕ್ಷಣ ಮಾಧ್ಯಮವು ಮಗುವಿಗೆ ಹೊಂದಿಕೊಂಡಷ್ಟು ಅದರ ಚಿಂತನೆ ಹೆಚ್ಚೆಚ್ಚು ಪರಿಣಾಮಕಾರಿಯಾಗುತ್ತದೆ. ಭಾಷಾ ಮಾಧ್ಯಮದ ಮೇಲೆ ಪ್ರಭುತ್ವವಿದ್ದಷ್ಟೂ ಮಗುವಿನ ಮನಸ್ಸಿನಲ್ಲಿ ವಿವಿಧ ಮಾನಸಿಕ ಕಾರ್ಯಾಚರಣೆಗಳೂ ಪರಿಣಾಮಕಾರಿಯಾಗಿ ಜರುಗುತ್ತವೆ. ಶಾಲೆಯಲ್ಲಿ ಇತರ ಜ್ಞಾನಶಾಖೆಗಳನ್ನು ಅರಿಯಲು ನಿಖರವಾದ ಭಾಷಾಜ್ಞಾನ ಅಗತ್ಯ. ಅದು ಮಾತೃಭಾಷೆಯಿಂದ ಲಭ್ಯವಾಗುತ್ತದೆ. ಆದ್ದರಿಂದಲೇ ಭಾಷಾಕಲಿಕೆಯಲ್ಲೂ ಮಗುವಿನ ಕಲಿಕೆಯ ಮೊದಲ ಹಂತಗಳಲ್ಲಿ ಮಾತೃಭಾಷೆ ಅಥವಾ ಪ್ರಥಮ ಭಾಷೆ ಕಲಿಕೆಯನ್ನು ಗಟ್ಟಿಯಾಗಿ, ದೃಢವಾಗಿ ಮಗುವಿಗೆ ಮಾಡಿಸಬೇಕು.

ಮಗುವು ತನ್ನ ಪರಿಕಲ್ಪನೆಗಳನ್ನು ರೂಪಿಸಿಕೊಳ್ಳಲು ಬಳಸುವ ಮಾಧ್ಯಮ ಮಾತೃಭಾಷೆ. ಆದ್ದರಿಂದಲೇ ತನ್ನ ಮಾತೃಭಾಷೆಯಲ್ಲಿ ಅಭಿವ್ಯಕ್ತಿಗೊಳಿಸಲಾಗದ, ತನ್ನ ಸಾಂಸ್ಕೃತಿಕ ಪರಿಸರಕ್ಕೆ ಭಿನ್ನವಾದ ಹೊಸ ಪರಿಕಲ್ಪನೆಗಳನ್ನು ಗ್ರಹಿಸುವುದು ಮಗುವಿಗೆ ತುಂಬಾ ಕಷ್ಟ. ಸಾಮಾನ್ಯವಾಗಿ ಕಲ್ಪನೆಗಳು ಮಾತೃಭಾಷೆಯಲ್ಲಿ ರೂಪುಗೊಳ್ಳುತ್ತವೆ. ಹಲವರಿಗೆ ಅದನ್ನು ಇನ್ನೊಂದು ಭಾಷೆಯಲ್ಲಿ, ಅದರಲ್ಲೂ ಪರಕೀಯ ಭಾಷೆಯಲ್ಲಿ, ಅಭಿವ್ಯಕ್ತಿಸುವುದು ಕಷ್ಟ. ಅಂತಹ ಸಂದರ್ಭದಲ್ಲಿ, ಅಂದರೆ

ಮಗು ತನ್ನ ಭಾಷೆಯಲ್ಲೇ ವ್ಯಕ್ತಪಡಿಸಲು ಕಷ್ಟಪಡುವ ಹಂತದಲ್ಲಿರುವಾಗ, ಪರಕೀಯ ಭಾಷೆಯಲ್ಲಿ ಕಲಿಸುವುದರಿಂದ, ಅದರ ಗ್ರಹಿಕೆಯೂ ಕುಗ್ಗಿ, ಅಭಿವ್ಯಕ್ತಿಯು ಅಸಾಧ್ಯವಾಗುವ ಸಾಧ್ಯತೆ ಹೆಚ್ಚು. ಇದು ಮಗುವಿನ ಪೂರ್ಣ ವ್ಯಕ್ತಿತ್ವದ ಉದ್ದೇಶವನ್ನು ಹೊಂದಿರುವ ಶಿಕ್ಷಣದ ಉದ್ದೇಶಕ್ಕೆ ವಿರುದ್ಧವಾದುದು. ಮಾತೃಭಾಷಾ ಶಿಕ್ಷಣ ಮಾಧ್ಯಮ ಮಗುವಿನ ಅಭಿವ್ಯಕ್ತಿ ಸಾಮರ್ಥ್ಯವನ್ನು ಮೊನಚುಗೊಳಿಸುತ್ತದೆ ಮತ್ತು ಆ ಮೂಲಕ ವೀಕ್ಷಣಾ ಸಾಮರ್ಥ್ಯವನ್ನು ಬೆಳೆಸುತ್ತದೆ.

ಮಗುವು ತನ್ನ ಪರಿಸರದಲ್ಲಿ ಒಂದಾಗಬೇಕೆಂಬ ಸಾಮಾಜಿಕ ಗುರಿಯನ್ನು ಸಾಧಿಸಲು ಮಾತೃಭಾಷಾ ಮಾಧ್ಯಮ ಹೆಚ್ಚು ಪರಿಣಾಮಕಾರಿ. ಪರಕೀಯ ಭಾಷೆಯಲ್ಲಿ ಶಿಕ್ಷಣ ನೀಡಿದಾಗ ಈ ಗುರಿ ಸಾಧ್ಯವಾಗದೆ, ಶಿಕ್ಷಣ ನಿಷ್ಕ್ರಿಯವಾಗಬಹುದು.

ಅದರಲ್ಲೂ ಶಾಲಾ ಹಂತದಲ್ಲಿ ಮಗುವಿನ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು ಎಂಬುದು ಮನೋವೈಜ್ಞಾನಿಕವಾಗಿಯೂ ಪ್ರತಿಪಾದಿತವಾದ ಅಂಶ. "ಚಿಂತನೆ ಮತ್ತು ಭಾಷೆ ದೇಹ ಮತ್ತು ಆತ್ಮವಿದ್ದಂತೆ. ಮಗು ತನ್ನ ಬದುಕಿನ ಮೊದಲ ಹಂತದ ಅನುಭವಗಳನ್ನು ಗಳಿಸುವ ಮಾತೃಭಾಷೆಯಲ್ಲೇ ಚಿಂತಿಸಿ, ಕನಸು ಕಾಣುತ್ತದೆ" ಎನ್ನುತ್ತಾರೆ ಜಿ.ಸಿ. ಶರ್ಮ. ಭಾವನೆಗಳು ಮತ್ತು ಚಿಂತನೆಯ ನಿಖರ ಸಂವಹನಕ್ಕೆ ಕೂಡ ಮಾತೃಭಾಷೆಯೇ ಸೂಕ್ತ ಮಾಧ್ಯಮ.

ವಿದೇಶಿ ಮಾಧ್ಯಮ ಇಡೀ ಸಂಸ್ಕೃತಿಗೆ ಮಾರಕವಾದುದು. ಅದು ಮಗುವಿನಲ್ಲಿ ತನ್ನ ಸಂಸ್ಕೃತಿಯ ಬಗ್ಗೆ ಪರಕೀಯವಾದ ಭಾವನೆಗಳನ್ನು ತುಂಬಿ ಸಮಾಜದಿಂದ ದೂರೀಕರಿಸುತ್ತದೆ.

"ಚಿಂತನೆ ಮತ್ತು ಒಳಭಾಷೆಗಳು ಪರಸ್ಪರ ಎಷ್ಟೊಂದು ಹೆಣೆದುಕೊಂಡಿರುತ್ತವೆ ಎಂದರೆ ಅವೆರಡೂ ಒಟ್ಟಿಗೆ ಬೆಳೆಯುತ್ತವೆ ಮತ್ತು ನಶಿಸುತ್ತವೆ. ಒಂದನ್ನು ಬಿಟ್ಟು ಇನ್ನೊಂದನ್ನು ಬೆಳೆಸಲಾಗದು. ಮಗು ಚಿಂತಿಸಿ, ಕನಸು ಕಾಣುವ ಭಾಷೆಯಲ್ಲಿ ಶಿಕ್ಷಣ ನೀಡುವುದು ಶಾಲಾ ಶಿಕ್ಷಣದ ಮೊದಲ ಅಗತ್ಯಾಂಶವಾಗಿದೆ..." ಎಂದು ರೈಬರ್ನ್ ಹೇಳುತ್ತಾನೆ.

ಮಾತೃಭಾಷೆಯು ವ್ಯಕ್ತಿಯಲ್ಲಿ ಭಾವನಾತ್ಮಕ ಎಳೆಗಳನ್ನು ಸ್ಪರ್ಶಿಸಿ, ಆತನಲ್ಲಿ ಹೊಸ ಕಲ್ಪನೆಗಳನ್ನು ಬಡಿದೆಬ್ಬಿಸುತ್ತವೆ.

"ಸೃಜನಶೀಲತೆ ಯಾವಾಗಲೂ ಸಹಜಸ್ವಭಾವದ ಭಾಷೆಯಲ್ಲಿ ಅಭಿವ್ಯಕ್ತವಾಗುತ್ತದೆ" ಎಂದು ಚೌಮ್‌ಸ್ಕಿ ಹೇಳುತ್ತಾನೆ.

"ನನಗೆ ಇಂಗ್ಲಿಷ್ ಶಿಕ್ಷಣ ದೊರೆಯದೆ ಬಂಗಾಳಿಯಲ್ಲಿ ನನಗೆ ಹೆಚ್ಚಿನ ಶಿಕ್ಷಣ ದೊರೆತಿದ್ದರೆ ನಾನು ಇನ್ನೂ ಉತ್ತಮ ಕವಿಯಾಗುತ್ತಿದ್ದೆ" ಎಂದು ರವೀಂದ್ರನಾಥ

ಠಾಕೂರರು ಹೇಳಿರುವ ಮಾತು ಸೃಜನಶೀಲತೆಯ ಬೆಳವಣಿಗೆಯಲ್ಲಿ ಮಾತೃಭಾಷಾ ಮಾಧ್ಯಮದ ಪಾತ್ರವನ್ನು ತೆರೆದಿಡುತ್ತದೆ.

ಶಿಕ್ಷಣದಲ್ಲಿ ಪ್ರದೇಶ ಭಾಷೆಗಳ ಬಳಕೆ ಬಗ್ಗೆ ೧೯೫೫ರಲ್ಲಿ ನಡೆದ ಯುನೆಸ್ಕೊ ಸಮ್ಮೇಳನದಲ್ಲೂ ನೇರ ಕಲಿಕೆಯಲ್ಲಿ ಮಾತೃಭಾಷೆ ಮೂಲಕದ ಕಲಿಕೆಗೇ ಒತ್ತು ಕೊಡಲಾಗಿದೆ. ಮಕ್ಕಳು ತಮಗೆ ತಿಳಿದಿರದ ಮಾಧ್ಯಮಕ್ಕಿಂತ ಮಾತೃಭಾಷೆಯಲ್ಲಿ ಬೇಗನೆ ಕಲಿಯುತ್ತಾರೆ.

ಎಲ್ಲರಿಗೂ ಅವರವರ ಮಾತೃಭಾಷೆಯ ಮೂಲಕವೇ ಶಿಕ್ಷಣ ಒದಗಿಸುವುದು ವ್ಯಾವಹಾರಿಕವಾಗಿ ಸಾಧ್ಯವಾಗದೆ ಹೋಗಬಹುದು. ಆದರೂ ಭಾರತದಲ್ಲಿ ಬಹುತೇಕ ರಾಜ್ಯಗಳಲ್ಲಿ ಪ್ರದೇಶಭಾಷೆ / ರಾಜ್ಯಭಾಷೆಯ ಜತೆಗೆ ಅನೇಕ ಮಾತೃಭಾಷೆಗಳಲ್ಲಿ ಪ್ರೌಢಶಾಲೆಯ ತನಕ ಶಿಕ್ಷಣ ಮಾಧ್ಯಮದ ಸೌಲಭ್ಯ ನೀಡಲಾಗಿದೆ. ಆದಾಗ್ಯೂ ಬಹುಜನ ಭಾಷಾ ಅಲ್ಪಸಂಖ್ಯಾತರು ಪ್ರದೇಶಭಾಷೆಯಲ್ಲಿ ಶಿಕ್ಷಣ ಪಡೆಯಲು ಬಯಸಬಹುದು.

ಪ್ರಾದೇಶಿಕ ಭಾಷಾಮಾಧ್ಯಮ

ಭಾರತದಂತಹ ಸನ್ನಿವೇಶದಲ್ಲಿ ಮಾತೃಭಾಷೆಗೆ ಪರ್ಯಾಯವಾಗಿ ರಾಜ್ಯಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ತೆಗೆದುಕೊಳ್ಳಲು ಅವಕಾಶ ಕಲ್ಪಿಸಬಹುದು, ಏಕೆಂದರೆ ಪ್ರದೇಶಭಾಷೆ ಅಲ್ಪಸಂಖ್ಯಾತರ ಮಕ್ಕಳಿಗೂ ಪರಿಸರದ ಭಾಷೆ. ಹೀಗಾಗಿ ಅದು ಅವರಿಗೆ ಎರಡನೆ ಮಾತೃಭಾಷೆಯಿದ್ದಂತೆ. ಈ ಬಗ್ಗೆ ಕರ್ನಾಟಕದ ಉಚ್ಚನ್ಯಾಯಾಲಯ ಹೇಳಿರುವ ಮಾತುಗಳು ಗಮನಾರ್ಹ:

"ಪೂರ್ಣ ನ್ಯಾಯಪೀಠದ ತೀರ್ಪಿನ ೧೪ನೇ ಪ್ಯಾರಾದಲ್ಲಿ ನಿರೂಪಿಸಿರುವಂತೆ ಪ್ರಾಥಮಿಕ ಶಿಕ್ಷಣವು ಪ್ರಾದೇಶಿಕ ಭಾಷೆ ಅಥವಾ ಮಾತೃಭಾಷೆಯಲ್ಲಿ ಆಗಬೇಕೆಂದು, ಏಕೆ ಸ್ಪಷ್ಟವಾಗಿ ನಿಗದಿಪಡಿಸಲಾಗಿದೆಯೆಂದರೆ, ರಾಜ್ಯದ ಖಾಯಂ ನಿವಾಸಿಗಳ ಮಕ್ಕಳು ತಮ್ಮ ಬಾಲ್ಯಾವಸ್ಥೆಯಿಂದಲೇ ಪ್ರಾದೇಶಿಕ ಭಾಷೆಯನ್ನು ಕಲಿತುಕೊಳ್ಳುತ್ತಾರೆ ಹಾಗೂ ಅದು ಅವರ ನೆಚ್ಚಿನ ಮಾತೃಭಾಷೆಯಾಗುತ್ತದೆಂಬ ಕಾರಣದಿಂದ. ವಾಸ್ತವವಾಗಿ ಮರಾಠಿ, ಉರ್ದು, ತಮಿಳು ಮತ್ತು ತೆಲುಗನ್ನು ಪ್ರತಿನಿಧಿಸುವ ಭಾಷಾ ಅಲ್ಪಸಂಖ್ಯಾತರಲ್ಲಿ ಬಹುಮಂದಿ ಬಹಳ ಕಾಲದಿಂದಲೂ ಈ ರಾಜ್ಯದ ನಿವಾಸಿಯಾಗಿದ್ದಾರೆ ಮತ್ತು ಪ್ರಾದೇಶಿಕ ಭಾಷೆ ಎಂದರೆ ಕನ್ನಡವನ್ನು ತಮ್ಮ ಎರಡನೆಯ ಮಾತೃಭಾಷೆಯಾಗಿ ವ್ಯಾವಹಾರಿಕವಾಗಿ ಅಳವಡಿಸಿಕೊಂಡಿರುತ್ತಾರೆ ಎನ್ನುವುದು ಸರ್ವವಿದಿತ ತಿಳುವಳಿಕೆಯೇ.

ಅಲ್ಪಸಂಖ್ಯಾತ ಭಾಷೆಯು ಮಾತೃಭಾಷೆಯಾಗಿರುವ, ಈ ರಾಜ್ಯದ ಕೆಲವು ವರ್ಗಗಳ ವಿಷಯದಲ್ಲೂ ಪರಿಸ್ಥಿತಿ ಅದೇ ಇರುತ್ತದೆ. ಅಂಥ ವರ್ಗದ ಜನರಿಗೆ

ಕನ್ನಡದಲ್ಲಿ ಪ್ರಾಥಮಿಕ ಶಿಕ್ಷಣ ಕೊಡುವುದು ಅವರ ಮಾತೃಭಾಷೆಯಲ್ಲಿ ಕೊಟ್ಟಂತೆಯೇ ಆಗುತ್ತದೆ. ಪೂರ್ಣನ್ಯಾಯಪೀಠ ಅಭಿಪ್ರಾಯಪಟ್ಟಿರುವಂತೆ, ಪ್ರಾಥಮಿಕ ಶಿಕ್ಷಣವು ಮಾತೃಭಾಷೆಯಲ್ಲೇ ಆಗಬೇಕೆಂದು ಎಲ್ಲಾ ಶೈಕ್ಷಣಿಕತಜ್ಞರ ಒಮ್ಮತದ ಅಭಿಪ್ರಾಯವಾಗಿದೆ. ಇದರ ಉದ್ದೇಶವೆಂದರೆ, ತಮ್ಮ ತಾಯಿತಂದೆಯರೊಂದಿಗೆ, ಕುಟುಂಬದವರೊಂದಿಗೆ ಮತ್ತು ಬಂಧುಬಳಗದವರೊಂದಿಗೆ ಹಾಗೂ ತಮ್ಮೊಂದಿಗೆ ಆಟವಾಡುತ್ತಿರುವವರೊಂದಿಗೆ ಯಾವ ಭಾಷೆಯ ಮೂಲಕ ಮಾತನಾಡುತ್ತಾರೋ ಆ ತಮ್ಮ ಮಾತೃಭಾಷೆಯಲ್ಲೇ ಮಕ್ಕಳಿಗೆ ಪೂರ್ವಪ್ರಾಥಮಿಕ ಮಟ್ಟವೂ ಸೇರಿದಂತೆ ನಾಲ್ಕನೇ ತರಗತಿವರೆಗೆ ಶಿಕ್ಷಣ ಕೊಡುವುದರಿಂದ ಮಕ್ಕಳು ಯಾವುದೇ ತೊಂದರೆ ಇಲ್ಲದೆಯೇ ಸ್ಪಷ್ಟವಾಗಿ ಆಲೋಚಿಸಬಲ್ಲವರಾಗಿರುತ್ತಾರೆ ಮತ್ತು ವಿಷಯಗಳನ್ನು ಗ್ರಹಿಸಬಲ್ಲವರಾಗಿರುತ್ತಾರೆ ಮತ್ತು ಆ ಮಟ್ಟದಲ್ಲಿ ಅವರ ಮಾತೃಭಾಷೆಯಲ್ಲೇ ಬೋಧಿಸಿದರೆ ಸಹಜ ಪರಿಸರದಲ್ಲಿ ಸೃಜನಾತ್ಮಕ ಪ್ರತಿಭೆಯನ್ನು ಹಾಗೂ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾರೆ. ಆದ್ದರಿಂದ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕೊಡಲು ಕಲ್ಪಿಸಿರುವ ಸಹಾಯಾನುದಾನ ಸಂಹಿತೆಯ ೧೨(೧) ಮತ್ತು (೨)ನೆ ನಿಯಮವು ಹಿತಕರವಾದುದಾಗಿದೆ ಮತ್ತು ಅದಕ್ಕೆ ಸಮಂಜಸ ಆಧಾರವಿದೆ. ಅದು ಶಿಕ್ಷಣದಲ್ಲಿ ಉನ್ನತಗುಣಮಟ್ಟವನ್ನು ಕಾಪಾಡಿಕೊಂಡು ಬರುವ ಹಾಗೂ ಈ ರಿಟ್ ಅರ್ಜಿಗಳಲ್ಲಿ ಅರ್ಜಿದಾರರುಗಳಾಗಿರುವ ಮತ್ತು ಆ ಮಟ್ಟದಲ್ಲಿ ಮಾತೃ ಭಾಷೆಯಲ್ಲೇ ಶಿಕ್ಷಣವನ್ನು ಕೊಡುವುದಕ್ಕಾಗಿ ಪ್ರಾಥಮಿಕಶಾಲೆಗಳನ್ನು ಸ್ಥಾಪಿಸಿರುವ ಭಾಷಾ ಅಲ್ಪಸಂಖ್ಯಾತರ ಹಿತದೃಷ್ಟಿಗೆ ಅನುಗುಣವಾಗಿದೆ. ವಾಸ್ತವವಾಗಿ, ಇದೇ ಪ್ರಶ್ನೆಯಲ್ಲಿರುವ ಸರ್ಕಾರಿ ಆದೇಶವನ್ನು ಪ್ರಶ್ನಿಸುವುದಕ್ಕೆ ಅವರಿಗೆ ಆಧಾರವಾಗಿದೆ. ಪ್ರಾಥಮಿಕ ಶಿಕ್ಷಣದ ಮೊದಲ ನಾಲ್ಕುವರ್ಷಗಳಲ್ಲಿ ತಮ್ಮ ಮಾತೃಭಾಷೆಯಲ್ಲೇ ಶಿಕ್ಷಣ ಪಡೆದುಕೊಳ್ಳುವ ಹಕ್ಕನ್ನು ಮತ್ತು ರಾಜ್ಯದ ಪ್ರಾದೇಶಿಕ ಮತ್ತು ಆಡಳಿತ ಭಾಷೆಯಾಗಿರುವ ಕನ್ನಡವನ್ನು ಆ ಹಂತದಲ್ಲಿ ತರಬಾರದೆನ್ನುವುದನ್ನು ಪೂರ್ಣನ್ಯಾಯ ಪೀಠವು ಎತ್ತಿಹಿಡಿದಿದೆ. ಶಿಕ್ಷಣದಲ್ಲಿ ಉನ್ನತಮಟ್ಟವನ್ನು ಕಾಪಾಡಿಕೊಂಡು ಬರುವ ಉದ್ದೇಶವನ್ನು ಹೊಂದಿರುವ ಯಾವುದೇ ಸಮಂಜಸ ನಿಯಂತ್ರಣಾತ್ಮಕ ನಿಬಂಧವು ಹಾಗೆಯೇ, ಭಾಷಾ ಅಲ್ಪಸಂಖ್ಯಾತರ ಹಿತದೃಷ್ಟಿಗನುಗುಣವಾಗಿರುವ ನಿಬಂಧನೆಯು ೨೯ ಮತ್ತು ೩೦ನೆಯ ಕಾಲಂ ಅನ್ನು ಉಲ್ಲಂಘಿಸುವುದಿಲ್ಲ....."

ಇಂದು ಪ್ರಾಥಮಿಕ ಶಿಕ್ಷಣ ಮಾತೃಭಾಷೆ ಅಥವಾ ಪ್ರದೇಶಭಾಷೆಯಲ್ಲಿ ಆಗಬೇಕೆಂಬ ಬಗ್ಗೆ ಬಹುಮಟ್ಟಿಗೆ ಸರ್ವಾನುಮತವಿದೆ. ಆದರೆ ಕಾಲೇಜು ಶಿಕ್ಷಣ ಯಾವುದರಲ್ಲಿರಬೇಕೆಂಬ ಬಗ್ಗೆ ಚರ್ಚೆಯಿದೆ. ಇಂಗ್ಲಿಷ್ ಬದಲಿಗೆ ಪ್ರಾದೇಶಿಕ ಭಾಷೆ ಶಿಕ್ಷಣಮಾಧ್ಯಮವಾಗಬೇಕು ಎಂಬ ಬೇಡಿಕೆ ೧೯ನೇ ಶತಮಾನದ ಆದಿಯಿಂದಲೇ ಕೇಳಿಬಂದಿದೆ.

ಕಾಲೇಜು ಶಿಕ್ಷಣ ಅಥವಾ ಉನ್ನತ ಶಿಕ್ಷಣದಲ್ಲಿ ಎರಡು ಅಂಶಗಳಿಗೆ ಗಮನ ನೀಡಬೇಕಾಗುತ್ತದೆ. ಮೊದಲನೆಯದು ವಿದ್ಯಾರ್ಥಿ ತಾನು ಕಲಿಯುವುದನ್ನು ಅರ್ಥಮಾಡಿಕೊಂಡು ಗ್ರಹಿಸಬೇಕು. ಎರಡನೆಯದು ಅದು ಆತನಲ್ಲಿ ಚಿಂತನಶೀಲತೆ ಹುಟ್ಟುಹಾಕಿ, ಸೃಜನಶೀಲತೆಗೆ ದಾರಿ ಮಾಡಿಕೊಡಬೇಕು. ಮೇಲಿನ ಎರಡು ಅಂಶಗಳಿಂದ ಗಮನಿಸಿದರೆ ಇಂಗ್ಲಿಷ್ ಬದಲಿಗೆ ಪ್ರಾದೇಶಿಕ ಭಾಷೆಯೇ ಸಮರ್ಪಕ ಶಿಕ್ಷಣ ಮಾಧ್ಯಮ.

"ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ – ಈ ವಿಷಯಗಳನ್ನು ನಾನು ನಾಲ್ಕು ವರ್ಷಗಳಲ್ಲಿ ಎಷ್ಟು ಕಲಿತೆನೋ ಅಷ್ಟನ್ನು ಒಂದೇ ವರ್ಷದಲ್ಲಿ ಕಲಿಯಬಹುದಿತ್ತು; ನಾನದನ್ನು ಇಂಗ್ಲಿಷ್‌ನಲ್ಲಿ ಕಲಿಯದೆ ನನ್ನ ಭಾಷೆಯಾದ ಗುಜರಾತಿಯಲ್ಲಿ ಕಲಿತಿದ್ದರೆ...." ಎಂದು ಗಾಂಧೀಜಿ ಹೇಳಿರುವ ಮಾತು ಎಷ್ಟು ಸತ್ಯ.

ಇಂದು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಶೇಕಡ ೭೦ ಮಂದಿ ಕನ್ನಡ ಮಾಧ್ಯಮದಲ್ಲೇ ಉತ್ತರಿಸುತ್ತಾರೆ. ಅವರಲ್ಲಿ ಅನೇಕರು ಪ್ರಾಥಮಿಕ ಶಿಕ್ಷಣವನ್ನು ಇಂಗ್ಲಿಷ್ ಮಾಧ್ಯಮದಲ್ಲೇ ಪಡೆದವರು. "ಕನ್ನಡದಲ್ಲಿ ಓದಿದಾಗ ಸುಲಭವಾಗಿ ಅರ್ಥವಾಗುತ್ತದೆ. ಆದ್ದರಿಂದ ಶ್ರಮ ಕಡಿಮೆ. ಆದ ಕಾರಣ ನಾವು ಕೆಪಿಎಸ್‌ಸಿಯಲ್ಲಿ ಕನ್ನಡ ಮಾಧ್ಯಮವನ್ನೇ ಆರಿಸಿಕೊಂಡಿದ್ದೇವೆ" ಎಂಬುದು ಅವರಲ್ಲಿ ಅನೇಕರ ಅಭಿಮತ. ಗಾಂಧಿ ಹೇಳಿದ ಮಾತಿಗೆ ಇದಕ್ಕಿಂತ ವ್ಯಾವಹಾರಿಕ ಸಮರ್ಥನೆ ಬೇಕೆ!

ನನ್ನ ಸ್ವಂತ ಅನುಭವವನ್ನು ಇಲ್ಲಿ ಹೇಳಿದರೆ ತಪ್ಪಾಗಲಾರದು ಎಂದುಕೊಂಡಿದ್ದೇನೆ. ಮೂವತ್ತು ವರ್ಷಗಳ ಹಿಂದೆ ನಾನು ಎಂ.ಎಸ್.ಸಿ ಭೂವಿಜ್ಞಾನ ಪರೀಕ್ಷೆಯಲ್ಲಿ ಕನ್ನಡದಲ್ಲಿ ಉತ್ತರಿಸಿ, ಮೂರನೇ ರ್‍ಯಾಂಕ್ ಪಡೆದೆ. ಅದು ರಾಜ್ಯದಲ್ಲೇ ವಿಜ್ಞಾನ ವಿಷಯವನ್ನು ಸ್ನಾತಕೋತ್ತರ ಹಂತದಲ್ಲಿ ಉತ್ತರಿಸುವ ಮೊದಲ ಪ್ರಯತ್ನವಾಗಿತ್ತು. ವಿದ್ಯಾರ್ಥಿಗಳಾದ ನಾವೆಲ್ಲ ಮುಖ್ಯ ವಿಷಯಗಳ ಮೇಲೆ ಹದಿನೈದು ಇಪ್ಪತ್ತು ಪುಟಗಳ ಪ್ರಬಂಧವನ್ನು ಸಿದ್ಧಪಡಿಸಿಕೊಂಡು ಓದುತ್ತಿದ್ದೆವು. ನಾನಾಗ ಗಮನಿಸಿದ್ದು : ಉದಾಹರಣೆಗೆ 'ಭೂಕಂಪ' ಕುರಿತ ಪ್ರಬಂಧ. ನಾನು ಅನುವಾದಿತ ಪ್ರಬಂಧವನ್ನು ಹೆಚ್ಚೆಂದರೆ ೨೦ ನಿಮಿಷಗಳಲ್ಲಿ ಓದಿ ಮುಗಿಸುತ್ತಿದ್ದೆ. ನನ್ನ ಗೆಳೆಯರೆಲ್ಲ ಇಂಗ್ಲಿಷ್ ಪ್ರಬಂಧ ಓದಿ ಗ್ರಹಿಸಲು ಕನಿಷ್ಠ ೪೦ ನಿಮಿಷದಿಂದ ಒಂದೂಕಾಲು ಗಂಟೆ ತೆಗೆದುಕೊಳ್ಳುತ್ತಿದ್ದರು. ಹೀಗಾಗಿ ನಾನು ಇಡೀ ಪಠ್ಯಕ್ರಮವನ್ನು ಪರೀಕ್ಷೆಗೆ ಮುಂಚಿತವಾಗಿ ನಾಲ್ಕೈದು ಬಾರಿ ಓದಿ ಮುಗಿಸಿದ್ದೆ. ಆದರೆ ನನ್ನ ಸಹಪಾಠಿಗಳಲ್ಲಿ ಅತಿ ಬುದ್ಧಿವಂತನೂ ಸೇರಿದಂತೆ ಯಾವೊಬ್ಬನೂ ಇಡೀ ಪಠ್ಯಕ್ರಮವನ್ನು ಎರಡು ಬಾರಿ ಓದಿರಲಿಲ್ಲ.

೧೯೩೨-೩೩ರಲ್ಲೇ ಪಂಜಾಬ್ ವಿಶ್ವವಿದ್ಯಾನಿಲಯದ ವಿಚಾರಣಾಸಮಿತಿ ಇದನ್ನೇ ಹೇಳಿದೆ: "ಇಂಗ್ಲಿಷ್ ಮಾಧ್ಯಮದಲ್ಲಿ ಓದುವಾಗ ಪ್ರತಿ ವಿದ್ಯಾರ್ಥಿಗೂ ಕನಿಷ್ಟ ಮೂರನೇ ಒಂದು ಭಾಗದ ಸಮಯ ಭಾಷೆಯನ್ನು ಅರ್ಥಮಾಡಿ ಕೊಳ್ಳುವುದರಲ್ಲೇ ವ್ಯರ್ಥವಾಗುತ್ತಿದೆ."

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣದ ಮಾಧ್ಯಮವೇ ಉನ್ನತ ಶಿಕ್ಷಣದ ಮಾಧ್ಯಮವಾಗಬೇಕೆಂದು ಅರವತ್ತರ ದಶಕದಲ್ಲಿ ಪ್ರತಿಪಾದಿಸಿದ ಕೊಠಾರಿ ಆಯೋಗ ತನ್ನ ವರದಿಯಲ್ಲಿ ರವೀಂದ್ರನಾಥ ಠಾಕೂರರ ಈ ಹೇಳಿಕೆಯನ್ನು ಉಲ್ಲೇಖಿಸಿದೆ:

"ಭಾರತದಲ್ಲಿ ಮಾತ್ರವೇ ವಿದ್ಯಾರ್ಥಿಯ ಭಾಷೆ ಹಾಗೂ ಆತನ ಕಲಿಕೆಯ ಭಾಷೆ ಬೇರೆ ಆಗಿರುವುದು............ ವಿದೇಶಿಭಾಷೆಯ ಮಾಧ್ಯಮದಲ್ಲಿ ಕಲಿಯುವಾಗ ವಿದ್ಯಾರ್ಥಿಯು ವಿಷಯದ ಮೇಲೆ ಪ್ರಭುತ್ವ ಪಡೆಯುವ ಬದಲು ಅನಿವಾರ್ಯವಾಗಿ (ಗಿಳಿಪಾಠದಂತೆ) ಉರು ಹೊಡೆಯುತ್ತಾನೆ"

ಇದೇ ಮಾತನ್ನು ಹಲವಾರು ಶಿಕ್ಷಣತಜ್ಞರು ಹೇಳಿದ್ದಾರೆ.

ಕೊಠಾರಿ ಆಯೋಗ

ಭಾರತದಲ್ಲಿ ಕಾಲೇಜು ಶಿಕ್ಷಣದಲ್ಲಿ ಇಂಗ್ಲಿಷ್ ಮಾಧ್ಯಮದ ಬದಲಿಗೆ ಪ್ರಾದೇಶಿಕ ಭಾಷಾ ಮಾಧ್ಯಮ ಜಾರಿಗೆ ತರುವ ಬಗ್ಗೆ ಹೆಚ್ಚಿನ ಚರ್ಚೆಗೆ ಚಾಲನೆ ಸಿಗಲು ಕೊಠಾರಿ ಆಯೋಗದ ಶಿಫಾರಸುಗಳು ಮುಖ್ಯ ಕಾರಣವಾದವು. ಕೇಂದ್ರ ಸರಕಾರ ಇಡೀ ಕಾಲೇಜು ಶಿಕ್ಷಣದ ಸುಧಾರಣೆಗೆ ಶಿಫಾರಸುಗಳನ್ನು ನೀಡಬೇಕೆಂಬ ಉದ್ದೇಶದಿಂದ ನೇಮಿತವಾದ ಕೊಠಾರಿ ಆಯೋಗ ಇಂಗ್ಲಿಷ್ ಬದಲಿಗೆ ಪ್ರಾದೇಶಿಕ ಭಾಷೆಗಳನ್ನು ಶಿಕ್ಷಣ ಮಾಧ್ಯಮವಾಗಿ ಮಾಡಲು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ತಕ್ಷಣವೇ ತ್ವರಿತವಾದ ಕ್ರಮ ಕೈಗೊಳ್ಳಬೇಕೆಂದೂ, ಇಲ್ಲವಾದರೆ ದಿನಗಳೆದಂತೆ ಭಾಷಾ ಸಮಸ್ಯೆ ಮತ್ತಷ್ಟು ಜಟಿಲವಾಗುತ್ತದೆಂದು ಹೇಳಿತು.

ಆ ವರದಿಯಲ್ಲಿ ಉಲ್ಲೇಖಿತವಾಗಿರುವ ರಾಷ್ಟ್ರೀಯ ಭಾವೈಕ್ಯತಾ ಮಂಡಳಿಯ (೧೯೬೩) ಅಭಿಪ್ರಾಯವೂ ಹೀಗಿದೆ:

"ಶಿಕ್ಷಣ ಮಾಧ್ಯಮದ ಬದಲಾವಣೆಯು ವಿಷಯವನ್ನು ಅರ್ಥ ಮಾಡಿಕೊಂಡು, ಗ್ರಹಿಸುವ ಸೌಲಭ್ಯದ ದೃಷ್ಟಿಯಿಂದ ಅಗತ್ಯವಾಗಿದೆ. ಇಲ್ಲವಾದರೆ ಭಾರತೀಯ ವಿಶ್ವವಿದ್ಯಾನಿಲಯಗಳ ಮಂದಿ ಕಲಿಕೆಯಲ್ಲಿ, ಅದರಲ್ಲೂ ವಿಶೇಷವಾಗಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ, ಉನ್ನತಿಯನ್ನು ಸಾಧಿಸಲಾರರು. ಶಿಕ್ಷಣ ಮಾಧ್ಯಮವನ್ನು ಪ್ರಾದೇಶಿಕ ಭಾಷೆಗಳಿಗೆ ಬದಲಾಯಿಸದಿದ್ದರೆ, ದೇಶದಲ್ಲಿ ಪ್ರತಿಭೆಗಳ ಬೆಳವಣಿಗೆಗೂ ಧಕ್ಕೆಯಾಗುತ್ತದೆ".

ಕೊಠಾರಿ ಆಯೋಗವು ಕೆಳಕಂಡ ಶಿಫಾರಸ್ಸುಗಳನ್ನು ಮಾಡಿದೆ :

೧. "ಪ್ರಾದೇಶಿಕ ಭಾಷೆಗಳ ಮೂಲಕ ಶಿಕ್ಷಣದ ಅನುಕೂಲದ ಬಗ್ಗೆ ನಮಗೆ ಮನವರಿಕೆ ಆಗಿದೆ. ಪ್ರಾದೇಶಿಕ ಭಾಷೆಗಳ ಬೆಳವಣಿಗೆ ದೇಶದ ಸಾಮಾನ್ಯ ಬೆಳವಣಿಗೆಗೆ ಬಲು ಮುಖ್ಯ ಹಾಗೂ ಶಿಕ್ಷಣದಲ್ಲಿ ಗುಣಮಟ್ಟ ಕಾಪಾಡಿಕೊಳ್ಳಲು ಮುಖ್ಯವಾದ ಹೆಜ್ಜೆ. ಇಂಗ್ಲಿಷನ್ನು ಪೂರ್ತಿಯಾಗಿ ತೆಗೆದುಬಿಡಿ ಎಂಬುದು ಇದರ ಅರ್ಥವಲ್ಲ......"

೨. "ಸಮಸ್ಯೆ ಪರಿಹಾರದ ದೃಷ್ಟಿಯಿಂದ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗ ಮತ್ತು ವಿಶ್ವವಿದ್ಯಾನಿಲಯಗಳು ಸೂಕ್ತವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಬದಲಾವಣೆ ಸಾಧ್ಯವಾದಷ್ಟೂ ಬೇಗನೆ, ಅಂದರೆ ಹತ್ತು ವರ್ಷಗಳ ಒಳಗೆ ಆಗಬೇಕು. ಇಲ್ಲವಾದರೆ ದಿನಗಳೆದಂತೆ ಸಮಸ್ಯೆ ಮತ್ತಷ್ಟು ಜಟಿಲವಾಗುತ್ತದೆ. ಭಾರತೀಯಭಾಷೆಗಳಲ್ಲಿ ಅಗತ್ಯವಾಗುವ ಸಾಹಿತ್ಯವನ್ನು ಸಿದ್ಧಪಡಿಸಲು ಬಲು ದೊಡ್ಡ ಕಾರ್ಯಕ್ರಮವನ್ನು ರೂಪಿಸಬೇಕು. ಶಿಕ್ಷಕರ ತರಬೇತಿಗೂ ಸೂಕ್ತ ಕ್ರಮ ಕೈಗೊಳ್ಳಬೇಕು."

೩. ಸ್ಪಷ್ಟವಾದ ನೀತಿಯನ್ನು ರೂಪಿಸಿ, ಅಸ್ಪಷ್ಟವಲ್ಲದ ಶಬ್ದಗಳಲ್ಲಿ ಅದನ್ನು ಪ್ರಕಟಿಸಿ, ದೃಢವಾಗಿ ಅದನ್ನು ಅನುಸರಿಸಬೇಕಾದ್ದು ಅತ್ಯಗತ್ಯ. 'ಬೇಡಿಕೆಯಿಲ್ಲದ್ದರಿಂದ ಉತ್ಪಾದನೆ ಇಲ್ಲ, ಉತ್ಪಾದನೆ ಇಲ್ಲದ್ದರಿಂದ ಬೇಡಿಕೆ ಇಲ್ಲ' ಎಂಬ ವಿಷಚಕ್ರದಲ್ಲಿ ನಾವು ಸಿಲುಕಿಕೊಳ್ಳಬಾರದು.

೪. ಸ್ಥಿತ್ಯಂತರ ಘಟ್ಟದಲ್ಲಿ, ಸಿದ್ಧತೆಯ ಕೊರತೆಯಿಂದಾಗಿ, ಬದಲಾವಣೆಯ ಪ್ರಕ್ರಿಯೆ ಆಗುವಾಗ ಗುಣಮಟ್ಟದಲ್ಲಿ ಇಳಿತವಾಗುವುದನ್ನು ತಪ್ಪಿಸಲು, ಸೂಕ್ತ ರಕ್ಷಣಾಕ್ರಮಗಳನ್ನು ಕೈಗೊಳ್ಳಬೇಕು................

ಕುವೆಂಪು ಅವರು ನಾಡಿಗೆ ಸಂಬಂಧಿಸಿದಂತೆ ಪ್ರತಿಪಾದಿಸಿದ ಬಹುಮುಖ್ಯವಾದ ವಿಷಯ - ದೇಶಭಾಷೆಗಳಲ್ಲಿ ಶಿಕ್ಷಣ ಮಾಧ್ಯಮ. ಇದನ್ನು ಅವರು ಸಾಹಿತ್ಯ ಸಮ್ಮೇಳನಾಧ್ಯಕ್ಷರ ಭಾಷಣವೂ ಸೇರಿದಂತೆ ಹಲವು ಬಾರಿ ಪ್ರತಿಪಾದಿಸಿದ್ದಾರೆ. ಆದರೆ ಅದು ಭಾಷಾಭಿಮಾನದ ಸಂಕೇತ ಎನ್ನುವುದಕ್ಕಿಂತ ಅದೊಂದು ವೈಜ್ಞಾನಿಕ ಸತ್ಯ ಎಂಬುದನ್ನು ಸರಳವಾಗಿ, ನಿಖರವಾಗಿ ಮೊಟ್ಟಮೊದಲಿಗೆ ಡಾಕ್ಟರೇಟ್ ಪ್ರಶಸ್ತಿ ಪಡೆದಾಗ ಹೀಗೆ ನಿರೂಪಿಸಿದ್ದಾರೆ:

"ದೇಶಭಾಷಾ ಮಾಧ್ಯಮದಿಂದ ಶಿಕ್ಷಣ ಸುಲಭವಾಗುತ್ತದೆ. ಸರಳವಾಗುತ್ತದೆ, ಪೂರ್ಣ ಫಲದಾಯಕವಾಗುತ್ತದೆ. ವಿದ್ಯಾರ್ಥಿಯ ಶ್ರಮ ಕಡಿಮೆಯಾಗುತ್ತದೆ".

ಇದನ್ನೇ ರವೀಂದ್ರನಾಥ ಠಾಕೂರರು ಹೀಗೆ ಹೇಳಿದ್ದಾರೆ :

"ತನ್ನ ಹೃದಯಾಂತರಾಳದ ಭಾವನೆಗಳನ್ನು
ಪರಭಾಷೆಯಲ್ಲಿ ತಿಳಿಸಲು ಪ್ರಯತ್ನಿಸುವುದು,
ಪ್ರಿಯತಮೆಗೆ ತನ್ನ ಮುಗುಳ್ನಗೆಯನ್ನು
ವಕೀಲನ ಮೂಲಕ ತಿಳಿಸಲು ಪ್ರಯತ್ನಿಸಿದಂತೆ."

ದಿವಂತಗ ರಾಮ ಮನೋಹರ ಲೋಹಿಯೂ ಸಹ ಹೀಗೆ ಹೇಳುತ್ತಾರೆ:

"ಜ್ಞಾನಾರ್ಜನೆಯೇ ನಿಮ್ಮ ಪರಮಗುರಿಯಾದರೆ, ನಿಮ್ಮ ಶಕ್ತಿಯನ್ನೂ ಕಾಲವನ್ನೂ ಒಂದು ವಿದೇಶೀಯ ಭಾಷೆಯನ್ನು ಕಲಿಯುವುದಕ್ಕಾಗಿ ವ್ಯರ್ಥ ಮಾಡಬೇಡಿ. ಅವುಗಳನ್ನು ಆಳವಾದ ಜ್ಞಾನ ಪಡೆಯುವುದಕ್ಕಾಗಿ ಉಪಯೋಗಿಸಿ"

"ಭಾರತೀಯನು ಹುಟ್ಟಿದಂದಿನಿಂದ ಸಾಯುವತನಕವೂ................. ಪರಭಾಷೆಯೊಂದರ ಜಟಿಲತೆಯನ್ನು ವಶಪಡಿಸಿಕೊಳ್ಳುವ ಈ ನಿರಂತರ ಹೋರಾಟದಲ್ಲಿ ಭೂಗೋಳ, ಚರಿತ್ರೆ, ರಸಾಯನಶಾಸ್ತ್ರ, ಗಣಿತ ಮತ್ತು ಇತರ ಶಾಸ್ತ್ರಗಳ ಅಭ್ಯಾಸಪೂರ್ಣತೆಯನ್ನು ಪಡೆಯುವುದೇ ಇಲ್ಲ. ಅವನ ಇಡೀ ಜೀವನ ಇಂಗ್ಲಿಷ್ ಭಾಷೆಯನ್ನು ಕಲಿಯುವುದರಲ್ಲಿಯೇ ವ್ಯರ್ಥವಾಗುತ್ತದೆ. ಭಾಷೆಯನ್ನು ಸುಧಾರಿಸಿಕೊಳ್ಳುವ ಕೊನೆಯಿಲ್ಲದ ಪ್ರಯತ್ನಗಳಲ್ಲಿ ಆತ ವಿಷಯದ ಆಳವನ್ನು ಕಾಣುವಂತೆಯೇ ಇಲ್ಲ. ಇದರಿಂದಲೇ ನಾವು ಮಾಡುವ ವಿಜ್ಞಾನ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಚರಿತ್ರೆ, ಭೂಗೋಳ – ಮುಂತಾದ ವಿಷಯಗಳ ಅಭ್ಯಾಸ ಕೇವಲ ಅಗ್ಗದ ಅನುಕರಣೆಯಾಗಿದೆ. ಯಾವುದೇ ಸ್ಮರಣೀಯವಾದ ಕೊಡುಗೆಯೂ ಅದರಿಂದ ಸಾಧ್ಯವಾಗಿಲ್ಲ. ಯಾವುದೊಂದು ರಾಷ್ಟ್ರೀಯ ಸಮಸ್ಯೆಯ ಗಹನವಾದ ಪರಿಶೀಲನೆ ಹಾಗೂ ಪರಿಹಾರವನ್ನು ಅದು ಕೊಡಲಾರದು. ಅಲ್ಲದೆ ಆಯಾ ಕ್ಷೇತ್ರದಲ್ಲಿ ಸಮಕಾಲೀನರೊಡನೆ ಸರಿಸಮಾನವಾಗಿ ನಿಲ್ಲಬಲ್ಲ ವಿಜ್ಞಾನಿಯನ್ನಾಗಲಿ, ಸಾಹಿತಿಯನ್ನಾಗಲಿ ಅದು ಸೃಷ್ಟಿಸಿಲ್ಲ. ಭಾರತೀಯ ವಿದ್ಯಾರ್ಥಿಯನ್ನು ಇಂಗ್ಲಿಷಿನ ಶೃಂಖಲೆಗಳು ಬಿಗಿದಿವೆ; ಅವನ ಮನಸ್ಸಿಗೆ ತುಕ್ಕು ಹಿಡಿಯುತ್ತದೆ."

ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಯುವುದರಲ್ಲಿಯೇ ನಮ್ಮ ದೇಶದಲ್ಲಿ ಶೇ. ೫೦ಕ್ಕೂ ಹೆಚ್ಚು ಮಕ್ಕಳು ಎಸೆಸೆಲ್ಸಿ / ಮೆಟ್ರಿಕ್ ಹಂತದಲ್ಲಿ ಅನುತ್ತೀರ್ಣ ರಾಗುತ್ತಿದ್ದಾರೆ. ಅಂದಾಗ ಅವರು ಎಲ್ಲ ವಿಷಯಗಳನ್ನೂ ಇಂಗ್ಲಿಷಿನಲ್ಲಿ ಕಲಿತರೆ ಎಷ್ಟರಮಟ್ಟಿಗೆ ಸಫಲರಾಗುತ್ತಾರೆ ಎಂಬುದು ಯೋಚಿಸಬೇಕಾದ ಸಂಗತಿಯಲ್ಲವೆ?

ಚಿಂತನಶೀಲ ಬೆಳವಣಿಗೆ

ಕಾಲೇಜು ಶಿಕ್ಷಣದ ಗುರಿ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ ಬೆಳೆಸುವುದು ಅಂದರೆ ಚಿಂತನಶೀಲ ಬೆಳವಣಿಗೆಯಲ್ಲಿ ನೆರವಾಗುವುದು. ಈ ದೃಷ್ಟಿಯಿಂದಂತೂ

ವಿದೇಶಿ ಭಾಷಾಮಾಧ್ಯಮ ಒಂದು ದೊಡ್ಡ ತಡೆಗೋಡೆ ಎನ್ನಬಹುದು. ಹಲವಾರು ವಿದ್ಯಾರ್ಥಿಗಳ ಚಿಂತನಶೀಲತೆಯ ಓಟ ಈ ತಡೆಗೋಡೆಯನ್ನು ದಾಟಲಾಗದೆ ನಿಂತ ನೀರಾಗುತ್ತದೆ. ಈ ಮಾತುಗಳಿಗೆ ಕೆಲವು ವಿನಾಯಿತಿಗಳಿರಬಹುದು. ಆದರೆ ಬಹುಸಂಖ್ಯಾತರನ್ನು ಗಮನದಲ್ಲಿಟ್ಟುಕೊಂಡಾಗ ಇದು ಸತ್ಯಸ್ಯಸತ್ಯ. ಮಾತೃಭಾಷಾ ಮಾಧ್ಯಮ ಚಿಂತನಶೀಲತೆಯ ಬೆಳವಣಿಗೆಗೆ ಹೇಗೆ ಸಹಕಾರಿ ಎಂಬ ಬಗ್ಗೆ ಸರ್ ಜಗದೀಶ್ ಚಂದ್ರಬೋಸ್ ೧೯೨೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಭಾಷಣದಲ್ಲಿ ಹೇಳಿರುವ ಕೆಳಕಂಡ ಮಾತುಗಳು ಮನನೀಯ :

"ನನ್ನ ತಂದೆ ನನ್ನನ್ನು ಹೆಚ್ಚು ಷೋಕಿಯಾದ ಇಂಗ್ಲಿಷ್ ಶಾಲೆಗೆ ಬದಲು ಪ್ರಾಂತಭಾಷಾಶಾಲೆಗೆ ಸೇರುವಂತೆ ಒತ್ತಾಯಪಡಿಸಿದರು. ಇದು ನೆಲವನ್ನುತ್ತು ಹಸುರನ್ನರಳಿಸುವ ಕೃಷಿಕ ಮಕ್ಕಳ ಮತ್ತು ಮಹಾನದಿಗಳಲ್ಲಿರುವ ವಿಚಿತ್ರ ಜಂತುಗಳ ಬಗ್ಗೆ ನನಗೆ ತಿಳಿಸಿದ ಮೀನುಗಾರರ ಮಕ್ಕಳ ಸಂಪರ್ಕವನ್ನು ನನಗುಂಟು ಮಾಡಿತು. ಪ್ರಕೃತಿಯನ್ನು ಕುರಿತು ತೀವ್ರ ಪ್ರೇಮ ಅವರಿಂದ ನನಗೆ ಬಂತು. ನನ್ನ ಸ್ವಂತ ಭಾಷೆಯಲ್ಲಿ ಆಲೋಚಿಸುವುದನ್ನು ಮತ್ತು ಭಾರತೀಯ ಮಹಾಕಾವ್ಯಗಳ ಮೂಲಕ ನಮ್ಮ ರಾಷ್ಟ್ರೀಯ ಸಂಸ್ಕೃತಿಯ ಆಸ್ತಿಯನ್ನು ಪಡೆದುಕೊಳ್ಳುವುದನ್ನು ನಾನು ಕಲಿತೆ".

ತಮ್ಮ ಕಾವ್ಯಶಕ್ತಿಗೆ ನೊಬೆಲ್ ಪ್ರಶಸ್ತಿ ಪಡೆದ ರವೀಂದ್ರನಾಥ ಠಾಕೂರರು ಹೇಳಿರುವ ಈ ಮುಂದಿನ ಮಾತುಗಳೂ ಗಮನಾರ್ಹ.

"ನಾನು ಇಂಗ್ಲಿಷ್‌ನಲ್ಲಿ ಶಿಕ್ಷಣ ಪಡೆಯದೆ ನನ್ನ ಮಾತೃಭಾಷೆಯಲ್ಲಿ ಶಿಕ್ಷಣ ಪಡೆದಿದ್ದರೆ ನಾನು ಇನ್ನೂ ಉತ್ತಮ ಕವಿಯಾಗುತ್ತಿದ್ದೆ". ಇದನ್ನು ಹಿಂದೆಯೂ ಉಲ್ಲೇಖಿಸಿದೆ. ಆದರೂ ಮತ್ತೊಮ್ಮೆ ಉಲ್ಲೇಖಿಸಲಾಗುತ್ತಿದೆ.

ವಿಜ್ಞಾನದ ಕಲಿಕೆಗೆ ಸ್ವಂತ ಆಲೋಚನೆ ಮುಖ್ಯ. ನಮ್ಮ ದೇಶದಲ್ಲಿ ಇಂಗ್ಲಿಷ್ ಶಿಕ್ಷಣದ ಮೂಲಕ ಅದು ಸಾಧ್ಯವಾಗದು. ಏಕೆಂದರೆ ನಮ್ಮಲ್ಲಿ ಇಂಗ್ಲಿಷ್ ಬಹುಜನರಿಗೆ ತಿಳಿಯದ ಭಾಷೆ. ಪರಿಸರದ್ದಲ್ಲದ ಭಾಷೆ. ಸ್ವಂತ ಚಿಂತನೆಗೆ ಭಾಷೆಯ ಗಟ್ಟಿ ಅಡಿಪಾಯ ಅಗತ್ಯ. ನಮ್ಮಲ್ಲಿ ಕಲಿಯುವುದಾದರೂ ಹರಕುಮುರುಕು ಇಂಗ್ಲಿಷ್. ಅದರಿಂದ ಬಹಳಷ್ಟು ಜನ ವಿಜ್ಞಾನ ಕಲಿಕೆಗೆ ಅಗತ್ಯವಾದ ಸ್ವಂತ ಚಿಂತನೆ ಮಾಡಲಾರರು. ಆದ್ದರಿಂದ ದೇಶಭಾಷೆಗಳೇ ಶಿಕ್ಷಣ ಮಾಧ್ಯಮವಾಗಬೇಕು ಎಂಬರ್ಥದ ಮಾತುಗಳನ್ನು ಖ್ಯಾತ ವಿಜ್ಞಾನಿ ಎಂ.ಜಿ.ಕೆ. ಮೆನನ್ ಹೇಳಿರುವುದೂ ನಮ್ಮ ಕಣ್ಣು ತೆರೆಸಬೇಕು.

ದೇಶಭಾಷೆಗಳು ಶಿಕ್ಷಣ ಮಾಧ್ಯಮವಾಗಬೇಕು ಎಂದಾಗ ಅದನ್ನು ಪ್ರತಿರೋಧಿಸುವವರು ಮುಂದಿಡುವ ಮೊದಲ ಸಮಸ್ಯೆ ಎಂದರೆ ಪಾರಿಭಾಷಿಕ ಪದಗಳದ್ದು.

ಪಾರಿಭಾಷಿಕ ಪದಗಳ ಸೃಷ್ಟಿ :

ಕನ್ನಡದಲ್ಲಿ ಎಲ್ಲ ಪಾರಿಭಾಷಿಕ ಪದಗಳಿಗೂ ಸಮಾನ ಪದ ಸೃಷ್ಟಿಸಾಧ್ಯವೆ ಎಂದು ಕೆಲವರು ಪ್ರಶ್ನಿಸಿದರೆ, ಇನ್ನು ಕೆಲವರು ಎಲ್ಲ ಪದಗಳಿಗೂ ಸಮಾನ ಪದ ಸೃಷ್ಟಿ ಸಾಧ್ಯವೇ ಇಲ್ಲ ಎಂದು ತೀರ್ಪನ್ನೇ ನೀಡುತ್ತಾರೆ. ಆದರೆ ಇದು ಪ್ರಾರಂಭಿಕ ಸಮಸ್ಯೆಯಾಗಬಹುದೇ ಹೊರತು ದೀರ್ಘಕಾಲೀನ ಸಮಸ್ಯೆಯಾಗುಳಿಯದು. ಅದನ್ನೇ ದೊಡ್ಡ ಸಮಸ್ಯೆಯಾಗಿ ಮುಂದಿಡುವುದು ಅಗತ್ಯವೇನಲ್ಲ. ಅದರ ಬಗ್ಗೆ ಮುಂದೆ ವಿಶ್ಲೇಷಿಸಲಾಗಿದೆ.

■

ಅಧ್ಯಾಯ-೨

ದೇಶಭಾಷಾಮಾಧ್ಯಮಕ್ಕೆ ಆಂಗ್ಲವೇತ್ತರ ಆಗ್ರಹ

ಬ್ರಿಟಿಷರ ಆಳ್ವಿಕೆಯ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟಗಾರರು, ಅದರಲ್ಲೂ ಮಹಾತ್ಮಗಾಂಧಿಯವರು, ದೇಶಭಾಷಾಮಾಧ್ಯಮಕ್ಕೆ ಆಗ್ರಹಿಸಿದರೆಂಬುದು ಬಹುಜನರ ನಂಬಿಕೆ.

ಆದರೆ ಶಿಕ್ಷಣ ಮಾಧ್ಯಮದ ಇತಿಹಾಸದ ಪುಟಗಳನ್ನು ತೆರೆದರೆ ದೇಶಭಾಷಾ ಮಾಧ್ಯಮಕ್ಕೆ ಮೊದಲ ಆಗ್ರಹ ಕೆಲಪು ಬ್ರಿಟಿಷ್ ಅಧಿಕಾರಿಗಳಿಂದ ಹಾಗೂ ಆಂಗ್ಲಶಿಕ್ಷಣವೇತ್ತರಿಂದ ಬಂದಿತೆಂಬ ಸ್ವಾರಸ್ಯಕರ ಸಂಗತಿ ತಿಳಿಯುತ್ತದೆ.

ಸಿಪಾಯಿದಂಗೆ ತರುವಾಯ ಕಲ್ಕತ್ತ ವಿಶ್ವವಿದ್ಯಾನಿಲಯದ ಶಿಕ್ಷಣ ಕ್ರಮವು ೧೮೩೫ರ ಮೆಕಾಲೆ ತತ್ವದ ಪ್ರಕಾರ ಐರೋಪ್ಯಜ್ಞಾನವನ್ನು ಇಂಗ್ಲಿಷ್ ಮೂಲಕ ಉಚ್ಚಮಟ್ಟದಲ್ಲಿ ಪ್ರಸಾರ ಮಾಡಲೆಳಸಿತು.

ಇಂಗ್ಲಿಷ್ ಸಾಹಿತ್ಯದ ವ್ಯಾಸಂಗ ಭಾರತೀಯರಿಗೆ ಹಿತಕರ; ಅದರಿಂದ ಅವರ ಮನಸ್ಸು ವಿಶಾಲವಾಗುತ್ತದೆ. ಭಾವನೆಗಳು ಉದಾತ್ತವಾಗುತ್ತವೆ. ಆಧುನಿಕ ಜಗತ್ತಿನ ದರ್ಶನವಾಗುತ್ತದೆ - ಎಂಬುದು ಆಗ ಇಂಗ್ಲಿಷ್ ಶಿಕ್ಷಣದ ಅಭಿಮಾನಿಗಳ ಅಭಿಮತವಾಗಿತ್ತು.

'ಸಮರ್ಥರಾದ ಅಧಿಕಾರಿಗಳನ್ನು ತಯಾರಿಸುವುದು, ಐರೋಪ್ಯ ಜ್ಞಾನವನ್ನು ಹರಡುವುದು, ಜನತೆಯ ನೈತಿಕ, ಬೌದ್ಧಿಕ ಮಟ್ಟವನ್ನು ಹೆಚ್ಚಿಸುವುದು, – ಈ ಮೂರು ಕಾರ್ಯಗಳು ಇಂಗ್ಲಿಷ್ ಶಿಕ್ಷಣದಿಂದ ಆಗಬೇಕೆಂದು ಬ್ರಿಟಿಷರು ನಿರೀಕ್ಷಿಸಿದ್ದರು. ಇಂಗ್ಲಿಷ್ ಶಿಕ್ಷಣದಿಂದ ಬ್ರಿಟಿಷ್ ಸಾಮ್ರಾಜ್ಯವು ಬಲಗೊಳ್ಳುತ್ತದೆಂದೂ ದೃಢವಾಗುತ್ತದೆಂದೂ ಅವರು ನಂಬಿದ್ದರು.

ಲ್ಯಾಟಿನ್ ಶಾಲೆಗಳು ರೋಮ್ ಸಾಮ್ರಾಜ್ಯದೊಡನೆ ಅದರ ಸಾಮಂತದೇಶಗಳನ್ನು ನಿಕಟಗೊಳಿಸುವ, ಅವಿಭಾಜ್ಯಗೊಳಿಸುವ ಶಕ್ತಿಯುತ ರಜ್ಜು ಬಂಧನಗಳಾಗಿದ್ದುದು ಅವರ ನಂಬಿಕೆಗೆ ಆಧಾರವಾಗಿತ್ತು.

ಸಿಪಾಯಿದಂಗೆಯಾದ ಮೇಲೆ ಶಾಲೆಕಾಲೇಜುಗಳಲ್ಲಿ ಇಂಗ್ಲಿಷನ್ನು ಶಿಕ್ಷಣ ಮಾಧ್ಯಮವಾಗಿ ಮಾಡಿದ್ದರ ವಿರುದ್ಧ ಪ್ರತಿಭಟನೆ ನಡೆಯಿತು. ವಿವೇಕಿಗಳಾದ ಕೆಲವು ಬ್ರಿಟಿಷ್ ಶಿಕ್ಷಣತಜ್ಞರು - ಅದರಲ್ಲೂ ಪಂಜಾಬ್ ಮತ್ತು ವಾಯುವ್ಯ ಪ್ರಾಂತಗಳ ಬ್ರಿಟಿಷ್ ಅಧಿಕಾರಿಗಳು ಅದಕ್ಕೆ ಮುಂದಾಳಾಗಿದ್ದರು. ಪ್ರಾದೇಶಿಕ ಭಾಷೆಗಳ ಬೆಳವಣಿಗೆ ಮತ್ತು ಭಾರತೀಯಕಾವ್ಯಗಳ ವ್ಯಾಸಂಗಕ್ಕೆ ಅವರ ಬೆಂಬಲವಿತ್ತು. ಇಂಗ್ಲೀಷಿನ ಮೂಲಕ ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುವ ಕ್ರಮದಲ್ಲಿದ್ದ ಪ್ರತಿಬಂಧಕಗಳನ್ನು ಅವರು ಚೆನ್ನಾಗಿ ಅರಿತಿದ್ದರು. ತರಗತಿಯ ಕೊಠಡಿಯಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಲಾಗುವ ಸಂಸ್ಕೃತಿಗೂ, ವಾಸ್ತವ ಜೀವನದ ಅವರ ಅನುಭವಗಳಿಗೂ ಯಾವ ಸಂಬಂಧವೂ ಇಲ್ಲವೆಂಬುದು ಆ ತಜ್ಞರಿಗೆ ಮನದಟ್ಟಾಯಿತು.

೧೮೬೭ರ ಆಗಸ್ಟ್ ಒಂದರಂದು ಈ ದಿಕ್ಕಿನಲ್ಲಿ ಮೊದಲ ಹೆಜ್ಜೆ ಇಡಲಾಯಿತು; ವಾಯವ್ಯ ಪ್ರಾಂತಗಳ ಬ್ರಿಟಿಷ್ ಇಂಡಿಯನ್ ಸಂಘವು ಪ್ರಾದೇಶಿಕ ಭಾಷೆಗಳನ್ನು ಶಿಕ್ಷಣ ಮಾಧ್ಯಮ ಮಾಡಬೇಕೆಂದು ವೈಸರಾಯ್‌ಗೆ ಪ್ರಾರ್ಥನಾಪತ್ರ ಕಳುಹಿಸಿತು. ವಿದೇಶಿ ಭಾಷೆಯೊಂದರ ಮೂಲಕ ಜನತೆಗೆ ಶಿಕ್ಷಣ ಕೊಡುವುದು ಎಂದೆಂದಿಗೂ ಅಸಾಧ್ಯವೆಂದು ಆ ಸಂಘ ತಿಳಿಸಿತು. ಈ ಕೋಟ್ಯಂತರ ಮಕ್ಕಳಿಗೆ ಪರಕೀಯವಾದ ಹೊಸದೊಂದು ಭಾಷೆಯ ಮೂಲಕ ಪಾಠ ಹೇಳಲಾರೆವು! ಬೇಬೆಲ್ ಗೋಪುರದ ಪವಾಡವನ್ನು ತಲೆಕೆಳಗು ಮಾಡಲಾರೆವು. ಪ್ರಾದೇಶಿಕ ಭಾಷೆಗಳ ವ್ಯಾಸಂಗಕ್ಕೆ ಅನೇಕ ಅಡ್ಡಿಗಳೇನೋ ಇದ್ದುವು. ಈ ಭಾಷೆಗಳಲ್ಲಿ ಪುಸ್ತಕಗಳಿರಲಿಲ್ಲ. ಆದರೆ ಸರಕಾರದ ನೆರವಿನಿಂದ ಶಾಲಾ ಕಾಲೇಜುಗಳಿಗಾಗುವ ಉತ್ತಮ ಪಠ್ಯಪುಸ್ತಕಗಳು ಪ್ರಾದೇಶಿಕಭಾಷೆಗಳಲ್ಲಿ ಸಿಕ್ಕುವಂತಾಗಬಹುದೆಂದು ಆಶಿಸಲಾಯಿತು. ಸಂಘದ ಸಲಹೆಯನ್ನು ಸರ್ಕಾರ ಒಪ್ಪಲಿಲ್ಲ. ಆದರೂ 'ಈ ದೇಶದ ಜನ ತಮ್ಮ ಭಾಷೆಯ ಮಾಧ್ಯಮದ ಮೂಲಕವೇ ಹೊರತು, ಬೇರೆ ಯಾವ ಮಾಧ್ಯಮದಿಂದಲೂ ಶಿಕ್ಷಣವನ್ನು ಪಡೆಯಲಾರರು' ಎಂಬ ಕಾರಣದಿಂದಾಗಿ ಈ ಸಲಹೆ ಕಾಲಕ್ರಮದಲ್ಲಿ ಕಾರ್ಯರೂಪಕ್ಕೆ ಬರುತ್ತದೆಂದು ಸರ್ಕಾರ ಒಪ್ಪಬೇಕಾಯಿತು.

ಸಂಘವು ಸರ್ಕಾರದ ದೃಷ್ಟಿಯನ್ನು ಪರಿವರ್ತಿಸುವುದರಲ್ಲಿ ವಿಫಲವಾದರೂ ಈ ವಿಷಯ ಅಲ್ಲಿಗೇ ನಿಲ್ಲಲಿಲ್ಲ; ಔಧ್‌ನ ಶಿಕ್ಷಣಶಾಖೆಯ ಮುಖ್ಯಾಧಿಕಾರಿ ಹ್ಯಾಂಡ್‌ಫೋರ್ಡ್ ಮತ್ತೆ ಅದನ್ನು ಎತ್ತಿದನು.

ಪ್ರಪಂಚದ ವಿವಿಧ ಭಾಷೆಗಳ ಬೆಳವಣಿಗೆಯನ್ನು ಅಭ್ಯಾಸ ಮಾಡಿದ್ದ ಅವನ ತೀರ್ಮಾನವೆಂದರೆ; "ಪ್ರಾದೇಶಿಕ ಭಾಷೆಯು ಸುಸಂಸ್ಕೃತವಾದ ಪ್ರಾಚೀನ ಭಾಷೆಯೊಂದರ ಶಾಖೆಯಾಗಿದ್ದರೆ ಈ ಸುಸಂಸ್ಕೃತ ಭಾಷೆಯ ಸಂಪತ್ತು, ಈ ಪ್ರಾದೇಶಿಕ ಭಾಷೆಗೆ ಬರುವಂತೆ ಮಾಡುವುದು ಬಹು ಸುಲಭ. ಆದರೆ ಭಾರತೀಯ

ಭಾಷೆಗಳಿಗಿಂತ ರಚನೆಯಲ್ಲಿ ತೀರ ಭಿನ್ನವಾದ ಇಂಗ್ಲಿಷಿನಿಂದ ಈ ಭಾಷೆಗಳಿಗೆ ಐರೋಪ್ಯ ಸಾಹಿತ್ಯ, ವಿಜ್ಞಾನ, ತತ್ವಶಾಸ್ತ್ರಗಳನ್ನು ತಂದುಕೊಡುವುದು ಹೇಗೆ ಸಾಧ್ಯ? ಪ್ರಾಚೀನ ರೋಮನ್ನರ ಭಾಷೆ ಗ್ರೀಕ್ ಭಾಷೆಗೆ ಹತ್ತಿರವಿದ್ದರೂ, ಲ್ಯಾಟಿನ್ ಸಾಹಿತ್ಯದ ಸೃಷ್ಟಿಕರ್ತರು ತಾವು ಮೆಚ್ಚಿದ ಗ್ರೀಕ್ ತತ್ವಜ್ಞಾನಿಗಳ ವಿಚಾರಗಳನ್ನು ತಮ್ಮ ಭಾಷೆಗೆ ತಂದುಕೊಳ್ಳುವುದು ಬಹಳ ಕಷ್ಟಕರವೆಂದು ಒಪ್ಪಿಕೊಂಡರು. ಅಂತೂ ಆ ಕಾರ್ಯ ನೆರವೇರಿತು. ಭಾಷಾಂತರಗಳಿಂದಲ್ಲ, ಸಂಪೂರ್ಣವಾಗಿ ಗ್ರೀಕ್ ಭಾವನೆಗಳನ್ನುಳ್ಳ ಜನ ಸ್ಫೂರ್ತಿಗೊಂಡು ತಮ್ಮ ಭಾಷೆಯಲ್ಲೇ ಗ್ರಂಥರಚನೆ ಮಾಡಿದುದರಿಂದ”.

ಭಾರತದಲ್ಲೂ ಇದೇ ಕ್ರಮವನ್ನನುಸರಿಸುವಂತೆ ಹ್ಯಾಂಡ್‌ಫೋರ್ಡ್ ಆಗ್ರಹಿಸಿದ 'ಪ್ರಾದೇಶಿಕ ಸಾಹಿತ್ಯಗಳು ಬೆಳೆಯಬೇಕಾದುದು ಆಳವಾದ ಅರ‍್ಯಾಬಿಕ್ ಮತ್ತು ಸಂಸ್ಕೃತ ಪಾಂಡಿತ್ಯದಿಂದಲ್ಲ; ಪಾಶ್ಚಾತ್ಯ ವಿಚಾರಗಳಿಂದ ತುಂಬಿಕೊಂಡು, ರಾಷ್ಟ್ರದ ಮಾತೃಭಾಷೆಗಳ ಪರಿಚಯವನ್ನು ಪಡೆದು, ಶಿಕ್ಷಣ ಮಾಧ್ಯಮವಾದ ಪ್ರಾದೇಶಿಕ ಭಾಷೆಗಳಲ್ಲಿ ಅಗಾಧ ಪರಿಶ್ರಮವನ್ನುಳ್ಳ ಮನಸ್ಸುಗಳಿಂದ' ಎಂದೂ 'ನಮ್ಮ ವಿದ್ಯಾರ್ಥಿಗಳಿಗೆ ಧಾರಾಳವಾಗಿ ಇಂಗ್ಲಿಷನ್ನು ಕಲಿಸಿ ಅವರಿಗೆ ಪ್ರಗತಿಪರವಾದ ಆಧುನಿಕ ವಿಚಾರಗಳ ಸಂಪರ್ಕವನ್ನುಂಟು ಮಾಡಿ; ಆದರೆ ಅವರು ಪ್ರಾದೇಶಿಕ ಭಾಷೆಯಲ್ಲಿ ಸ್ವತಂತ್ರವಾಗಿ ಬರೆಯಲು ಸಾಧ್ಯವಾಗುವಂತೆ ನೋಡಿಕೊಳ್ಳಬೇಕು. ಮಾತೃಭಾಷೆಯ ವ್ಯಾಕರಣಜ್ಞಾನವೂ ಅವರಿಗಿರಲಿ. ಪ್ರೇರಣೆ ಒದಗಿದಾಗ, ಜನತೆಯ ಮೇಲೆ ಪ್ರಭಾವ ಬೀರಬೇಕೆಂಬ ಆಕಾಂಕ್ಷೆಯನ್ನು ಪ್ರಚೋದಿಸುವ ಪರಿಸ್ಥಿತಿಯು ಒತ್ತಡವುಂಟಾದಾಗ ವಿಚಾರಶಾಲಿಗಳು, ತಮ್ಮ ಭಾಷೆಯಲ್ಲಿ ಬರೆದೇ ಬರೆಯುತ್ತಾರೆ' ಎಂದೂ ಹ್ಯಾಂಡ್‌ಫೋರ್ಡ್ ಪ್ರತಿಪಾದಿಸಿದ. ವಾಯವ್ಯ ಪ್ರಾಂತ್ಯಗಳ ಸರ್ಕಾರವು ಭಾರತದ ಸರ್ಕಾರಕ್ಕೆ ಬರೆದ ಪತ್ರದಲ್ಲಿ (೧೮೬೮ ಡಿಸೆಂಬರ್ ೯ ರಂದು ಬರೆದುದು) ಈ ಅಭಿಪ್ರಾಯವನ್ನು ಒಪ್ಪಿಕೊಂಡಿತು.

ಪ್ರಾದೇಶಿಕ ಭಾಷೆಗಳ ಪುಷ್ಟಿಗಾಗಿ ನಡೆದ ಚಳುವಳಿ ೧೮೭೨ರ ಫೆಬ್ರವರಿಯಲ್ಲಿ ಫಲ ಕೊಟ್ಟಿತು. ಇದರಿಂದ ಪ್ರಭಾವಿತವಾದ ಭಾರತ ಸರ್ಕಾರ ದೇಶದಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವ ಭಾಷೆಯಲ್ಲಿ ಪರೀಕ್ಷೆಗಳನ್ನು ನಡೆಸುವಂತೆ ಕಲ್ಕತ್ತ ವಿಶ್ವವಿದ್ಯಾನಿಲಯಕ್ಕೆ ಆದೇಶವಿತ್ತಿತು.

ಇಷ್ಟರಲ್ಲಿ ಲಾಹೋರಿನಲ್ಲೊಂದು ಪ್ರಾಚ್ಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸ ಬೇಕೆಂದು ಚಳುವಳಿ ಪಂಜಾಬಿನಲ್ಲಿ ಆರಂಭವಾಗಿತ್ತು. ಇದಕ್ಕೆ ಪ್ರೇರಕವಾದವನು ಪಂಜಾಬಿನ ಶಿಕ್ಷಣಇಲಾಖೆಯ ಮುಖ್ಯಾಧಿಕಾರಿ ಡಬ್ಲ್ಯು. ಆರ್. ಎಂ. ಹಾಲ್‌ರಾಯ್ಡ್. ಇಂಗ್ಲಿಷನ್ನು ಶಿಕ್ಷಣಮಾಧ್ಯಮವನ್ನಾಗಿ ಮಾಡಿದ ಕ್ರಮವನ್ನು ಟೀಕಿಸಿದವರಲ್ಲಿ ಅವನೊಬ್ಬ. ವಿದೇಶೀಯ ಭಾಷೆಯೊಂದರ ಮೂಲಕ ಜ್ಞಾನಾರ್ಜನೆ ಮಾಡುವುದರಲ್ಲಿ ದುರ್ಲಂಘ್ಯವಾದ ತೊಡಕುಗಳಿವೆ ಎಂಬುದು ಅವನ ಸಿದ್ಧಾಂತ. ವಿದ್ಯಾರ್ಥಿಗಳ

ಇಂಗ್ಲಿಷ್ ಜ್ಞಾನ ಅಪೂರ್ಣವಾಗಿದ್ದರೂ, ಅವರು ಇಂಗ್ಲಿಷ್ ಮಾಧ್ಯಮದಿಂದಲೇ ಚರಿತ್ರೆ, ಭೂಗೋಳ, ಗಣಿತ ಮುಂತಾದವನ್ನು ಕಲಿಯಬೇಕಾಗಿದೆ. ಇದರ ಫಲವೇನೆಂದರೆ 'ಅನಿರ್ದಿಷ್ಟವೂ ಅಸ್ಪಷ್ಟವೂ' ಆದ ವಿದ್ಯಾಭ್ಯಾಸ. ಇಂಗ್ಲಿಷ್ ಭಾಷೆಗೆ ಕಲ್ಪಿಸಿದ ಪ್ರಾಧಾನ್ಯ ಪ್ರಾದೇಶಿಕ ಭಾಷೆಗಳ ಪ್ರಗತಿಗೆ ಕಂಟಕಪ್ರಾಯವೆಂದೇ ಕ್ಯಾಪ್ಟನ್ ಹಾಲ್‌ರಾಯ್ಡ್‌ನ ಭಾವನೆ. 'ಎಲ್ಲಿ ಇಂಗ್ಲಿಷ್ ವ್ಯಾಸಂಗ ಹರಡುತ್ತದೆಯೋ ಅಲ್ಲಿ ಪ್ರಾದೇಶಿಕಭಾಷೆಯ ಪಠ್ಯಪುಸ್ತಕಗಳ ಓದು ಕಡಮೆಯಾಗುತ್ತದೆ. ಇದರಿಂದ ಇಂದಿನ ಕ್ರಮ ಪ್ರಾದೇಶಿಕ ಭಾಷೆಯಲ್ಲಿ ಉಪಯುಕ್ತ ಗ್ರಂಥಗಳ ರಚನೆಯನ್ನು ಪ್ರೋತ್ಸಾಹಿಸುವುದಿಲ್ಲ; ಈಗಾಗಲೇ ಇರುವ ಗ್ರಂಥಗಳನ್ನು ನಿಷ್ಪ್ರಯೋಜಕವನ್ನಾಗಿ ಮಾಡುತ್ತದೆ'.

ಪಂಜಾಬಿನ ಶಿಕ್ಷಣಸುಧಾರಣೆಯ ಈ ಚಳುವಳಿಯಲ್ಲಿ ಗೌರ್ನರ್ ಸರ್ ರೊನಾಲ್ಡ್ ಮೆಕ್ಲಿಯಾಡ್‌ನಿಂದ ಕ್ಯಾಪ್ಟನ್ ಹಾಲ್‌ರಾಯ್ಡ್‌ನ ಈ ಶ್ರದ್ಧೆಗೆ ಬಹಳ ಸಹಾಯ ಸಿಕ್ಕಿತು. 'ಇಂಗ್ಲಿಷ್ ಶಿಕ್ಷಣ, ಜನತೆಯ ದೃಷ್ಟಿಯಿಂದ ಬಹಳ ಭಿನ್ನವಾದ ವಿದ್ಯಾವಂತರ ಒಂದು ವಿಶಿಷ್ಟ ತರಗತಿಯನ್ನು ನಿರ್ಮಿಸುತ್ತದೆ' ಎಂಬುದು ಈ ಗೌರ್ನರನ ಅಭಿಪ್ರಾಯ. 'ನಮ್ಮಿಂದ ಶಿಕ್ಷಣ ಪಡೆದಿರುವವರಲ್ಲಿ ಬಹುಮಂದಿ ಆ ಶಿಕ್ಷಣದ ಫಲವಾಗಿ ತಮ್ಮ ಜನತೆಯಿಂದ ದೂರವಾಗಿ, ಪರಕೀಯರಾಗಿ ನಿಂತಿದ್ದಾರೆ - ನಮ್ಮಂತೆಯೇ'. ಪಂಜಾಬ್ ಸರ್ಕಾರದ ಸಲಹೆಗಳನ್ನು ಒಪ್ಪಿ ಭಾರತ ಸರ್ಕಾರ 'ಲಾಹೋರಿನ ಯೂನಿವರ್ಸಿಟಿ ಕಾಲೇಜು' ಸ್ಥಾಪಿತವಾಗಲು ಅನುಮತಿ ಕೊಟ್ಟಿತು.

೯೦ ವರ್ಷಗಳ ಹಿಂದೆಯೇ ಆಂಗ್ಲರ ಭಾರತ ಸರ್ಕಾರ ಶಿಕ್ಷಣಮಾಧ್ಯಮದ ದೃಷ್ಟಿಯಿಂದ ಪಾದೇಶಿಕ ಭಾಷೆಗಳಿಗೆ ಪ್ರಾಮುಖ್ಯ ಕಲ್ಪಿಸಿದ್ದು ಗಮನಾರ್ಹ ವಾಗಿದ್ದು, ಸ್ವತಂತ್ರ ಭಾರತಕ್ಕೆ ೫೦ ವರ್ಷಗಳಾಗಿದ್ದರೂ ಪ್ರಾಥಮಿಕ ಶಾಲೆಯಿಂದ ಕಾಲೇಜಿನವರೆಗೂ ಇನ್ನೂ ಇಂಗ್ಲಿಷ್ ಮಾಧ್ಯಮ ಮುಂದುವರೆದಿರುವುದು ಒಂದು ವಿಪರ್ಯಾಸ.

■

ಅಧ್ಯಾಯ-೩

ಸಮ್ಮೇಳನಾಧ್ಯಕ್ಷರ ಅನಿಸಿಕೆಗಳು

೧೯೧೫ರಿಂದ ನಡೆದು ಬಂದಿರುವ ಸಾಹಿತ್ಯ ಸಮ್ಮೇಳನಗಳಲ್ಲಿ ಬಹುತೇಕ ಅಧ್ಯಕ್ಷರು ದೇಶಭಾಷೆಯಲ್ಲಿ ಶಿಕ್ಷಣ ಮಾಧ್ಯಮದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅವರು ಬೇರೆ ಬೇರೆ ಮಾತುಗಳಲ್ಲಿ ಆ ಬಗ್ಗೆ ಪ್ರಸ್ತಾಪಿಸಿದ್ದಾರಾದರೂ ಅವರ ಆಶಯ ಒಂದೇ ಆಗಿದೆ. ದೇಶಭಾಷೆಯೇ ಶಿಕ್ಷಣ ಮಾಧ್ಯಮ ಆಗಬೇಕು ಎಂಬುದೇ ಅದು. ಕೆಳಗಿನ ಉಲ್ಲೇಖಗಳು ಅದಕ್ಕೆ ಸಾಕ್ಷೀಭೂತವಾಗಿವೆ :

ಜನರಿಗೆಲ್ಲಾ ಸಾಮಾನ್ಯವಾಗಿ, ಅತಿಪ್ರೌಢವಾದ ವಿದ್ಯಾಭ್ಯಾಸವನ್ನು ಮಾಡಿಸದೇ ಹೋದರೂ ತಕ್ಕಮಟ್ಟಿಗೆ ಪ್ರೌಢವೂ ಸರ್ವತೋಮುಖವೂ ಆದ ವಿದ್ಯಾಭ್ಯಾಸವನ್ನಾದರೂ ಮಾಡಿಸುವುದಕ್ಕೆ ಯತ್ನಿಸುವುದು ಪರಮಾವಶ್ಯಕ; ಇಂತಹ ವಿದ್ಯಾಭ್ಯಾಸವಂತೂ ದೇಶಭಾಷೆಯ ಮೂಲಕವೇ ನಡೆಯಬೇಕು.

ಎಚ್. ವಿ. ನಂಜುಂಡಯ್ಯನವರು, ೧ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು

ಜ್ಞಾನವನ್ನೂ ಪಾಂಡಿತ್ಯವನ್ನೂ ಸಂಪಾದಿಸುವುದಕ್ಕೆ ಭಾಷೆಯು ಒಂದು ಸಾಧಕ ಸಾಮಗ್ರಿಯಾಗಿದೆ; ಭಾಷೆಯು ಎಷ್ಟೆಷ್ಟು ಅನುಕೂಲ ಸ್ಥಿತಿಗೆ ಬರುವುದೋ ಅಷ್ಟಷ್ಟೂ ಉದ್ದೇಶ ಸಾಧನವು ಸುಲಭವಾಗುತ್ತಾ ಬರುವುದು. ಇಂಗ್ಲಿಷನ್ನೋ ಮತ್ತೊಂದು ಅನ್ಯಭಾಷೆಯನ್ನೋ ಉಪಯೋಗಿಸುವುದಕ್ಕೆ ಬದಲಾಗಿ ಕನ್ನಡವನ್ನೇ ಪಾಠಪ್ರವಚನಗಳಿಗೆ ಉಪಯೋಗಿಸುವುದರಿಂದ ವಿದ್ಯಾರ್ಥಿಗಳ ಕಷ್ಟಗಳು ಕಡಿಮೆಯಾಗುವುವು. ಇಂಗ್ಲಿಷನ್ನೇ ಉಪಯೋಗಿಸುವ ಈಗಿನ ಪದ್ಧತಿಯಿಂದ ವಿದ್ಯಾರ್ಥಿಗಳಿಗೆ ಅನಾವಶ್ಯಕ ಶಕ್ತಿ ವ್ಯಯ ಉಂಟಾಗುತ್ತಿದೆ.

ಎಚ್. ವಿ. ನಂಜುಂಡಯ್ಯನವರು, ೨ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು

ಪಾಶ್ಚಾತ್ಯ ದೇಶಗಳಲ್ಲಿ ಪ್ರಚಾರವಾಗಿರುವ ಆಧುನಿಕಶಾಸ್ತ್ರಗಳ ಗಂಧವನ್ನು ಕೂಡ ನಮ್ಮಲ್ಲಿ ಸಾಮಾನ್ಯರು ಅರಿಯರು. ಈ ಶಾಸ್ತ್ರಗಳೇ ಅವರ ನಾಗರಿಕತೆಗೆ ಬೆಂಬಲ.

ಈ ಶಾಸ್ತ್ರ ವ್ಯಾಸಂಗಕ್ಕೆ ನಮ್ಮ ದೇಶಭಾಷೆಗಳಲ್ಲಿ ಪುಸ್ತಕಗಳಿಲ್ಲ. ಆದುದರಿಂದ ಆಧುನಿಕಶಾಸ್ತ್ರಗಳ ವಿಷಯವಾಗಿ ಪುಸ್ತಕಗಳನ್ನು ಬರೆಯಿಸಿ ಅವುಗಳನ್ನು ಪ್ರಚಾರ ಮಾಡುವುದರಲ್ಲಿ ನಾವೆಲ್ಲರೂ ಮೊದಲು ಉದ್ಯುಕ್ತರಾಗಬೇಕು.

ಕರ್ಪೂರ ಶ್ರೀನಿವಾಸರಾಯರು, ೫ನೇ ಸಾಹಿತ್ಯ ಸಮ್ಮೇಳನ, ಹಾಸನ.

ಆಂಗ್ಲಭಾಷೆಯ ಮಹತ್ವವೆಷ್ಟೇ ಆಗಲಿ ಅದು ನಮ್ಮ ಭಾರತವರ್ಷದ ಭಾಷೆಗಳನ್ನು ಒತ್ತರಿಸಲಾರದು. ನಮ್ಮ ದೇಶೋನ್ನತಿಯೂ ನಮ್ಮ ಮೋಕ್ಷವೂ ದೇಶಭಾಷೆಗಳ ಮೂಲಕವಾಗಿಯೇ ಬರಬೇಕು. ತೆಲುಗುನಾಡಿನವರಿಗೆ ತೆಲುಗಿನ ಮೂಲಕವೂ ತಮಿಳುನಾಡಿನವರಿಗೆ ತಮಿಳಿನ ಮೂಲಕವೂ ವಂಗದೇಶದವರಿಗೆ ವಂಗಭಾಷೆಯ ಮೂಲಕವೂ ಕನ್ನಡಿಗರಾದ ನಮಗೆ ಕನ್ನಡದ ಮೂಲಕವೂ ಬರಬೇಕು. ಆಂಗ್ಲಭಾಷೆಯಿಂದಲ್ಲವಷ್ಟೆ!.......

.....ವಿಜ್ಞಾನ ವಿಷಯವಾದ ಗ್ರಂಥಗಳನ್ನು ಬಲ್ಲವರು ಬರೆಯುವುದಾದರೆ ಕನ್ನಡನಾಡಿಗೂ ಕನ್ನಡ ನುಡಿಗೂ ಅವರು ಮಾಡುವ ಉಪಕಾರವು ಶಾಶ್ವತವಾಗಿ ನಿಲ್ಲುವುದು. ಪಾಶ್ಚಾತ್ಯರ ಆಧುನಿಕ ನಾಗರಿಕತೆಗೆ ವಿಜ್ಞಾನವೇ ಮೂಲ. ಅವರು ಪ್ರಕೃತಿಯನ್ನು ಪ್ರಯೋಗಗಳ ಮೂಲಕ ಪ್ರಶ್ನೆ ಮಾಡಿ ಅದರ ವ್ಯಾಪಾರ ಒಳಗುಟ್ಟುಗಳನ್ನೆಲ್ಲಾ ಕಸಿದುಕೊಂಡು ಲೋಕಕ್ಕೆಲ್ಲಾ ತಾವೇ ಒಡೆಯರೆಂದು ಮೆರೆಯುವರು........ ವಿಜ್ಞಾನ ವಿಷಯದಲ್ಲಿ ಅಜ್ಞಾನವೇ, ಭಾರತೀಯರು ಇಷ್ಟು ಹಿಂದುಳಿದಿರುವುದಕ್ಕೆ ಮುಖ್ಯ ಕಾರಣವು. ವೈಜ್ಞಾನಿಕ ಪುಸ್ತಕಗಳು ಕನ್ನಡದಲ್ಲಿ ಇಲ್ಲವೇ ಇಲ್ಲವೆಂದು ಹೇಳಬಹುದು. ವಿಜ್ಞಾನವು ಮೌಢ್ಯಕ್ಕೆ ಮೃತ್ಯು. ನಮ್ಮಲ್ಲಿರುವ ಮೌಢ್ಯವನ್ನು ಚದುರಿಸುವುದಕ್ಕೂ ದೇಶೋನ್ನತಿಗೂ ವಿಜ್ಞಾನವು ಅತ್ಯಾವಶ್ಯಕವು. ವಿಜ್ಞಾನ ವಿಷಯವಾದ ಪುಸ್ತಕಗಳ ರಚನೆಗೆ ಭಾಷಾಭಿಮಾನಿಗಳು ಎಷ್ಟು ಪ್ರೋತ್ಸಾಹ ಕೊಟ್ಟರೂ ಸಾಲದು.

ಕೆ. ಪಿ. ಪುಟ್ಟಣ್ಣಶೆಟ್ಟಿ, ೭ನೇ ಸಾಹಿತ್ಯ ಸಮ್ಮೇಳನ, ಚಿಕ್ಕಮಗಳೂರು

.....ಲೌಕಿಕ ವಿಷಯಜ್ಞಾನವನ್ನುಂಟುಮಾಡಿಕೊಡುವ ಗ್ರಂಥಗಳನ್ನು ನಾವು ಪಾಶ್ಚಾತ್ಯ ಭಾಷೆಗಳಿಂದ ತೆಗೆದುಕೊಳ್ಳಬೇಕು. ಹಿಂದೆ ಜಪಾನ್ ದೇಶವು ಹೀನದಶೆಯಲ್ಲಿದ್ದ ಕಾಲದಲ್ಲಿ ಆ ದೇಶದ ಮಾರ್ಕ್ವಿಸ್ ಆಫ್ ಐಟೋ ಎಂಬ ದೊಡ್ಡ ಮನುಷ್ಯ ತನ್ನ ಜನರ ದಾರಿದ್ರ್ಯ ವಿಚ್ಛಿತ್ತಿಗೆ ಪಾಶ್ಚಾತ್ಯ ದೇಶಗಳಿಗೆ ಹೋಗಿ ಅಲ್ಲಿಯ ವಿದ್ಯಮಾನಗಳನ್ನೆಲ್ಲ ಸ್ವಾನುಭವದಿಂದ ತಿಳಿದುಕೊಂಡು ತನ್ನ ದೇಶಕ್ಕೆ ಹಿಂದಿರುಗಿ ಬಂದು ವಿವಿಧ ಶಾಸ್ತ್ರ ಗ್ರಂಥಗಳನ್ನೆಲ್ಲ ಸ್ವಭಾಷೆಯಲ್ಲಿ ಬರೆಯಿಸಿದನು. ಇದರಿಂದ ಜಪಾನಿನವರ ವಿಜ್ಞಾನ ಕೌಶಲವು ಅದ್ಭುತವಾಗಿ ಬೆಳೆದು ಅವರು ಯುರೋಪಿನವರನ್ನೇ ಎಲ್ಲ ಭಾಗಗಳಲ್ಲಿಯೂ ಜಯಿಸುವಂತಾಯಿತು.

ಎಂ. ವೆಂಕಟಕೃಷ್ಣಯ್ಯ, ೮ನೇ ಸಾಹಿತ್ಯ ಸಮ್ಮೇಳನ, ದಾವಣಗೆರೆ

ಸಾಹಿತ್ಯ ಪರಿಷತ್ತಿನವರು ಕೈಗೊಳ್ಳಬಹುದಾದ ಅನೇಕ ಕಾರ್ಯಗಳಲ್ಲಿ ಯೋಗ್ಯ ಪಠ್ಯಪುಸ್ತಕಗಳನ್ನು ನಿರ್ಮಿಸುವ ಕಾರ್ಯಕ್ಕೆ ನಾನು ಅಗ್ರಸ್ಥಾನವನ್ನು ಕೊಡುತ್ತೇನೆ......

.... ರಸಾಯನಶಾಸ್ತ್ರ, ಉದ್ಭಿಜ್ಜಶಾಸ್ತ್ರ ಮೊದಲಾದ ವಿಷಯಗಳಲ್ಲಿ ಮೇಲಿಂದ ಮೇಲೆ ಬರುವ ಇಂಥ ಶಬ್ದಗಳ ಬಗ್ಗೆ ಕನ್ನಡದಲ್ಲಿ ಯಾವ ಪ್ರತಿಶಬ್ದಗಳನ್ನು ಉಪಯೋಗಿಸಬೇಕೆಂಬದನ್ನು ನಾವು ನಿಶ್ಚಯಿಸತಕ್ಕದ್ದು. ಈಗಿನ ಕಾಲಕ್ಕೆ ವೈಜ್ಞಾನಿಕ ವಿಷಯಗಳ ಜ್ಞಾನವನ್ನು ಜನಸಮುದಾಯದಲ್ಲಿ ಪಸರಿಸುವುದು ಅವಶ್ಯವಾಗಿರುತ್ತದೆ.

ಫ. ಗು. ಹಳಕಟ್ಟಿ, ೧೨ನೆಯ ಸಾಹಿತ್ಯ ಸಮ್ಮೇಳನ, ಬಳ್ಳಾರಿ

ಪ್ರಸ್ತುತದಲ್ಲಿ ಕನ್ನಡಕ್ಕೆ ನಿಘಂಟೆಂದರೆ ಒಂದು ಪಾರಿಭಾಷಿಕ ನಿಘಂಟು (Scientific glossary) ಅತ್ಯಾವಶ್ಯಕವಾಗಿ ತೋರುವುದು. ಈ ಕೆಲಸವನ್ನು ಪ್ರಾಜ್ಞರಿಂದ ಮಾಡಿಸಬೇಕಾಗಿರುವುದು.

ಆರ್. ತಾತಾಚಾರ್ಯ, ೧೩ನೆಯ ಸಾಹಿತ್ಯ ಸಮ್ಮೇಳನ, ಮಂಗಳೂರು

ಹಿಂದಣ ಶತಮಾನದ ಮಧ್ಯಕಾಲದಲ್ಲಿ ನಮ್ಮ ಜನರ ವಿದ್ಯೆ ಇಂಗ್ಲಿಷಿನಲ್ಲಿ ನಡೆಯಬೇಕೆ ದೇಶಭಾಷೆಗಳಲ್ಲಿ ನಡೆಯಬೇಕೆ ಎಂಬ ಚರ್ಚೆ ಬಂದಾಗ ಇಂಗ್ಲಿಷಿನ ಪರವಾಗಿ ಮಾತನಾಡಿದ ಲಾರ್ಡ್ ಮೆಕಾಲೇ ಮೊದಲಾದವರು ಇಂಗ್ಲಿಷ್ ಕಲಿತ ದೇಶಿಯರು ತಮ್ಮ ದೇಶಭಾಷೆಗಳಲ್ಲಿ ಇಂಗ್ಲಿಷಿನಲ್ಲಿರುವಂತಹ ಗ್ರಂಥಗಳನ್ನು ಬರೆಯುವರೆಂದು ನಿರೀಕ್ಷಿಸಿದರು. ೧೮೫೪ನೆಯ ವರ್ಷದ ಆಡಳಿತದ ಪತ್ರದ ಈ ಮಾತುಗಳನ್ನು ಕೇಳಿರಿ :

"ಈ ದೇಶದ ಭಾಷೆಗಳಿಗೆ ಪ್ರತಿಯಾಗಿ ಇಂಗ್ಲಿಷ್ ಭಾಷೆಯನ್ನು ವಾಡಿಕೆಗೆ ತರಬೇಕೆಂಬುದು ನಮ್ಮ ಉದ್ದೇಶವಲ್ಲ; ಇದು ನಮಗೆ ಇಷ್ಟವೂ ಇಲ್ಲ. ಪ್ರಜಾವರ್ಗದ ಬಹುಮಂದಿಗೆ ತಿಳಿದಿರುವ ಭಾಷೆಗಳನ್ನು ಉಪಯೋಗಿಸುವುದು ಅವಶ್ಯಕವೆಂದು ನಾವು ಚೆನ್ನಾಗಿ ಬಲ್ಲೆವು. ....ನಮ್ಮ ವಿದ್ಯಾಭ್ಯಾಸದ ಕ್ರಮದಲ್ಲಿ ಇಂಗ್ಲಿಷು ಬೇಕೆನ್ನುವ ಕಡೆ ಇಂಗ್ಲಿಷನ್ನು ಚೆನ್ನಾಗಿ ಹೇಳಿಕೊಡಬೇಕು. ಆದರೆ ಇಂಗ್ಲಿಷನ್ನು ಹೇಳಿಕೊಡುವುದರಲ್ಲಿ ಆಯಾ ಪ್ರಾಂತದ ದೇಶಭಾಷೆಯನ್ನು ಚೆನ್ನಾಗಿ ಹೇಳಿಕೊಡಬೇಕು; ಮತ್ತು ಸಾಧ್ಯವಾದರೆ ಅದರಲ್ಲಿಯೇ ಇತರ ವಿದ್ಯೆಯನ್ನು ಕಲಿಸಬೇಕು. ಇಂಗ್ಲಿಷು ಭಾಷೆಯೇನೋ ವಿಷಯಗಳನ್ನು ತಿಳಿಸಿ ಜನರಿಗೆ ಪಾಠ ಹೇಳುವುದಕ್ಕೆ ಅನುಕೂಲವಾದ ಭಾಷೆ. ಸಾಕಾದಷ್ಟು ಇಂಗ್ಲೀಷು ಬಲ್ಲವರಿಗೆ ಆ ಭಾಷೆಯಿಂದಲೇ ಪಾಠ ಹೇಳಬೇಕು. ಆದರೆ ಇವರಿಗಿಂತ ಬಹುಸಂಖ್ಯೆಯ ಜನಕ್ಕೆ ಇಂಗ್ಲೀಷು ಬಂದೇ ಇರುವುದಿಲ್ಲ; ಅಥವಾ, ಅಲ್ಪ ಸ್ವಲ್ಪ ಬಂದಿರುತ್ತದೆ. ಇಂಥವರಿಗೆ ದೇಶಭಾಷೆಗಳಲ್ಲಿಯೇ ಪಾಠ ಹೇಳಬೇಕು. ಈ ಕೆಲಸವನ್ನು ಸಮರ್ಪಕವಾಗಿ ಮಾಡಬೇಕಾದರೆ ದೇಶೀಯರಲ್ಲಿ ಇಂಗ್ಲೀಷನ್ನು ಕಲಿತು ಪಾಶ್ಚಾತ್ಯ ವಿಜ್ಞಾನವನ್ನು ಚೆನ್ನಾಗಿ ಬಲ್ಲವರಾಗಿ ತಮ್ಮ ಕಲಿವನ್ನು ತಮ್ಮ

ಜನರಿಗೆ ದೇಶಭಾಷೆಗಳ ಮೂಲಕ ಹೇಳಬಲ್ಲ ಉಪಾಧ್ಯಾಯರ ಮೂಲಕ ಮಾತ್ರ ಸಾಧ್ಯ. ಇದೇ ಅಲ್ಲದೆ ದೇಶಭಾಷೆಗಳ ಬೆಲೆಯು ತಿಳಿದುಬಂದ ಹಾಗೆ ಇಂಡಿಯಾ ದೇಶದ ದೇಶಭಾಷೆಗಳ ವಾಙ್ಮಯಗಳು ಪಾಶ್ಚಾತ್ಯ ಗ್ರಂಥಗಳ ಭಾಷಾಂತರಗಳಿಂದಲೂ ಪಾಶ್ಚಾತ್ಯ ಪುರೋಗಮನದ ಭಾವಗಳಿಂದ ಉದ್ರಿಕ್ತವಾಗಿ ಬೆಳೆದ ಸ್ವಂತ ಕೃತಿಗಳಿಂದಲೂ ತುಂಬುತ್ತವೆ. ಈ ರೀತಿಯಲ್ಲಿ ಜನಸಾಮಾನ್ಯಕ್ಕೆ ಪಾಶ್ಚಾತ್ಯ ವಿಜ್ಞಾನವು ಜನರಲ್ಲಿ ಹರಡಬೇಕಾದರೆ ಇಂಗ್ಲಿಷೇ ಅಲ್ಲದೆ ದೇಶಭಾಷೆಗಳೂ ಸಾಧನಗಳೆಂದು ನಾವು ಅಭಿಪ್ರಾಯಪಡುತ್ತೇವೆ.........." ವಿದ್ಯೆಯಿಂದ ಮುಖ್ಯವಾಗಿ ಭಾವ ವಿಕಾಸವಾಗಬೇಕು. ಇದು ಮಾತೃಭಾಷೆಯಿಂದ ಆಗುವಂತೆ ಇನ್ನು ಯಾವ ಭಾಷೆಯಿಂದಲೂ ಆಗಲಾರದು.

ಮಾಸ್ತಿ ವೆಂಕಟೇಶ ಅಯ್ಯಂಗಾರ್, ೧೫ನೇ ಸಾಹಿತ್ಯ ಸಮ್ಮೇಳನ, ಬೆಳಗಾವಿ

ಭೌತಶಾಸ್ತ್ರ, ರಸಾಯನಶಾಸ್ತ್ರ, ಭೂಗರ್ಭಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಖಗೋಳಶಾಸ್ತ್ರ, ವಾತಾವರಣಶಾಸ್ತ್ರ, ವಾಸ್ತುಶಿಲ್ಪ, ಜಲಶಿಲ್ಪ, ಯಂತ್ರಶಿಲ್ಪ, ವಿದುಚ್ಛಿಲ್ಪ ಇವುಗಳೂ, ದೇಶವಿದೇಶ ಚರಿತ್ರೆ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ವ್ಯವಹಾರಶಾಸ್ತ್ರ, ಕುಲಾಚಾರಶಾಸ್ತ್ರ, ಇವುಗಳೂ, ಇವುಗಳ ಅಂಗೋಪಾಂಗಗಳು ಸೇರಿದ ವೈಜ್ಞಾನಿಕ ಸಾಹಿತ್ಯವು ಇಂಗ್ಲಿಷಿನಲ್ಲಿ ಹೇರಳವಾಗಿದೆ. ಅದು ಸಾಲದೆಂದು ಇಂಗ್ಲಿಷ್ ವೈಜ್ಞಾನಿಕರು ಈ ಉದ್ಗ್ರಂಥಗಳನ್ನು ಜರ್ಮನ್, ಫ್ರೆಂಚ್ ಮೊದಲಾದ ಭಾಷೆಗಳಲ್ಲಿ ಓದುತ್ತಾರೆ. ಈ ಶಾಸ್ತ್ರಗಳ ಪ್ರತಿ ದಿನೋಪಯೋಗವನ್ನು ಎಂದರೆ, ಬಗೆಬಗೆಯ ಕಸುಬು ಕಾರ್ಖಾನೆಗಳಿಗೆ ಸಂಬಂಧಪಟ್ಟ ಯಂತ್ರಸಂಧಾನಗಳನ್ನು ಕುರಿತ ದೊಡ್ಡ ಸಣ್ಣ ಪ್ರಕರಣಗಳಿಗಂತೂ ಇಂಗ್ಲಿಷಿನಲ್ಲಿ ಲೆಕ್ಕವೇ ಇಲ್ಲ. ಈ ಬಗೆಯ ಗ್ರಂಥಗಳು ಜನರ ಲೌಕಿಕ ಜ್ಞಾನಕ್ಕೂ ಅವರ ಜೀವನ ವೃತ್ತಿಗೂ ಸಹ ಸಾಧಕಗಳಾಗಿರುತ್ತವೆ. ಇಂಥಾ ಗ್ರಂಥಗಳು ಕನ್ನಡದಲ್ಲಿ ತೀರಾ ಸ್ವಲ್ಪವಾಗಿವೆ. ಈ ಬಡತನವನ್ನು ನೀಗುವುದು ಇಂಗ್ಲಿಷ್ ಕಲಿತವರ ಅದರಲ್ಲಿಯೂ ವಿಜ್ಞಾನಾಭ್ಯಾಸ ಮಾಡಿದವರ - ಮೊದಲನೆಯ ಕರ್ತವ್ಯ. ಈ ಕಾರ್ಯದಲ್ಲಿ ಪಾರಿಭಾಷಿಕ ಪದಗಳನ್ನು ಸಂಪಾದಿಸುವುದು ಈಗ ಇರುವ ವಿಶೇಷ ಕಷ್ಟ. ಆದರೆ, ಪದಗಳು ದೊರೆಯುವ ತನಕ ಲೇಖಣಿ ಹಿಡಿಯುವುದಿಲ್ಲವೆಂದು ಕಾದಿರುವವನ ಮಶೀಪಾತ್ರೆ ಎಂದಿಗೂ ತುಂಬಿಕೊಂಡೇ ಇದ್ದುಬಿಡುವುದು. ಧೈರ್ಯ ಮಾಡಿ, ದೃಢಪ್ರತಿಜ್ಞೆ ಮಾಡಿ, ಲೇಖನಿಯನ್ನು ನುಗ್ಗಿಸುತ್ತ ಹೋದರೆ ಪದಗಳು ತಾವಾಗಿಯೇ ಬರುವುದು.

ಡಿ.ವಿ. ಗುಂಡಪ್ಪ, ೧೮ನೇ ಸಾಹಿತ್ಯ ಸಮ್ಮೇಳನ, ಮಡಿಕೇರಿ

"ನೀವು ಈ ವಿಶ್ವವಿದ್ಯಾನಿಲಯದಿಂದ ಪಡೆದ ಜ್ಞಾನದಿಂದ ನಿಮ್ಮ ದೇಶೀಯ ಭಾಷೆಯನ್ನು ಪುಷ್ಟಿಗೊಳಿಸುವುದೇ ನಿಮ್ಮ ಮುಖ್ಯ ಗುರಿಯಾಗಿರಬೇಕು. ಇಲ್ಲಿ ನೀವು ಪಡೆದ ಶಿಕ್ಷಣವು ಪವಿತ್ರ ನಿಧಿ ಮತ್ತು ನಿಮ್ಮ ದೇಶಬಂಧುಗಳ ಹಿತಕ್ಕೆ

ಉಪಯೋಗಿಸಲು ಅದನ್ನು ನಿಮ್ಮ ವಶಕ್ಕೆ ಒಪ್ಪಿಸಲಾಗಿದೆ ಎಂಬುದನ್ನು ನೀವು ಮರೆಯಕೂಡದು. ಕೆಲವು ನೂರು ಜನರಿಗೆ ಅಥವಾ ಕೆಲವು ಸಾವಿರ ಜನರಿಗೆ ಇಲ್ಲಿ ದೊರೆಯಬಹುದಾದ ಪಾಂಡಿತ್ಯವನ್ನು ನೀವು ಹಿಂದೂಸ್ಥಾನದ ಮಿಲಿಯಗಟ್ಟಲೆ ಜನರಿಗೆ ದೇಶಭಾಷೆಯ ಮೂಲಕ ಕಲಿಸಬೇಕು. ನಿಮ್ಮ ದೇಶದಲ್ಲಿ ಅನೇಕರು ಮಾತೃಭಾಷೆಯ ಮೂಲಕ ಮಾತ್ರವೇ ಶಿಕ್ಷಣ ಹೊಂದಬಲ್ಲರು. ಆದ್ದರಿಂದ ಯೂರೋಪಿನ ವಿದ್ಯೆ ಮತ್ತು ವಿಜ್ಞಾನವನ್ನು ನೀವು ಅವರಿಗೆ ಆ ಭಾಷೆಯ ಮೂಲಕವೇ ಕಲಿಸಬೇಕು" ಎಂದು ಸರ್ ಪ್ಲಾಟಫೇರ್ ಉಪದೇಶ ಮಾಡಿದ್ದಾನೆ.

ಎನ್. ಎಸ್. ಸುಬ್ಬರಾಯರು, ೨೧ನೇ ಸಾಹಿತ್ಯ ಸಮ್ಮೇಳನ, ಬೊಂಬಾಯಿ

ಪ್ರಾಥಮಿಕ ಶಿಕ್ಷಣವು ಮಕ್ಕಳ ಮಾತೃಭಾಷೆಯಲ್ಲೇ ಆಗಬೇಕೆಂಬುದಕ್ಕೆ ಯಾರೂ ಪ್ರತಿ ಹೇಳುವಂತಿಲ್ಲ. ೧೪ ವರ್ಷ ವಯಸ್ಸಾಗುವವರೆಗೂ ಮಕ್ಕಳಿಗೆ ಮತ್ತಾವ ಭಾಷೆಯನ್ನೂ ಕಲಿಸಲು ಯತ್ನಿಸದೆ ಮಾತೃಭಾಷೆಯಲ್ಲಿಯೇ ಶಿಕ್ಷಣ ಕೊಟ್ಟಲ್ಲಿ ಅವರು ಕಲಿತ ವಿದ್ಯೆಯು ಸಾರ್ಥಕವಾಗುವುದು.

ಬೆಳ್ಳಾವೆ ವೆಂಕಟನಾರಣಪ್ಪ, ೨೨ನೇ ಸಾಹಿತ್ಯ ಸಮ್ಮೇಳನ, ಜಮಖಂಡಿ

ಮಾತೃಭಾಷೆಯ ಮೂಲಕ ಕಲಿತದ್ದೇ ಮೈಹತ್ತುವುದು. ಮಾತೃಭಾಷೆಯಲ್ಲಿ ಬರದದ್ದೇ ನಿಲ್ಲುವುದು. ಪರಭಾಷೆಯಲ್ಲಿ ಯಾರು ಎಷ್ಟು ಪಂಡಿತರಾಗಿ ಏನೇ ಬರೆಯಲಿ, ಅದು ಆ ಸಾಹಿತ್ಯಕ್ಕೆ ಸೇರಿ ಗಣ್ಯವಾದ ಸ್ಥಾನ ಪಡೆಯುತ್ತದೆಯೇ ಎಂಬುದು ಸಂದೇಹ .... ಪ್ರತಿಯೊಂದು ದೇಶದ ಸಮಸ್ಯೆಯನ್ನೂ ಆಯಾ ದೇಶದ ಸನ್ನಿವೇಶ ಸಂದರ್ಭ ಸಂಬಂಧವಾಗಿ ತಾನೇ ವಿಚಾರಮಾಡಬೇಕು? ಇನ್ನಾವ ದೇಶದಲ್ಲಿ ಭರತಖಂಡದ ವಿಚಿತ್ರ ಪರಿಸ್ಥಿತಿಯಿದೆ? ಇನ್ನಾವ ದೇಶದಲ್ಲಿ ಪರಭಾಷೆಯ ಮೂಲಕ ಪಾಠಪ್ರವಚನ ಪರೀಕ್ಷೆಗಳು ನಡೆಯುತ್ತವೆ?......

.... ಕೆಲವು ದಿನ ಇಂಗ್ಲಿಷ್ ಗ್ರಂಥಗಳು ಸಹಾಯಕ್ಕಿರಲಿ, ಕನ್ನಡ ಅಲಂಕಾರ ಛಂದಸ್ಸುಗಳನ್ನು ಪಾಠ ಹೇಳುವಾಗ ಸಂಸ್ಕೃತ ಗ್ರಂಥಗಳನ್ನು ನಾವು ಉಪಯೋಗಿಸಿಕೊಳ್ಳುವುದಿಲ್ಲವೇ? ಪುಸ್ತಕಗಳು ದೇಶಭಾಷೆಯಲ್ಲಿ ಆಗುವುದು ಅಸಾಧ್ಯವಾದುದರಿಂದ, ಅದು ಬೋಧನಾಭಾಷೆಯಾಗುವುದು ಅಸಾಧ್ಯ ಎಂಬ ತರ್ಕದ ಪೊಳ್ಳುತನವನ್ನು, ಉಸ್ಮಾನಿಯಾ ವಿಶ್ವವಿದ್ಯಾನಿಲಯವು ಬೆಳ್ಳಂಬೆಳಕಾಗುವಂತೆ ತೋರಿಸಿಬಿಟ್ಟಿದೆ. ಕನ್ನಡವು ಸಾರ್ವತ್ರಿಕವಾದರೆ ಜನರಿಗೆ ಕನ್ನಡದಲ್ಲಿ ಯೋಚಿಸುವ ಶಕ್ತಿ ತಾನೇ ಬರುತ್ತದೆ.

ಎ. ಆರ್. ಕೃಷ್ಣಶಾಸ್ತ್ರಿ, ೨೬ನೇ ಕನ್ನಡ ಸಾಹಿತ್ಯ ಸಮ್ಮೇಳನ, ಹೈದರಾಬಾದ್

ಆಧುನಿಕ ವೈಜ್ಞಾನಿಕ ಹಾಗೂ ಇನ್ನಿತರ ಶಾಸ್ತ್ರಗಳಲ್ಲಿ ಪ್ರಯೋಗವಾಗುವ ಪಾರಿಭಾಷಿಕ (ಹಾಗೂ ಸಾಂಕೇತಿಕ) ಪದಗಳಿಗೆ ಖಚಿತವಾದ ಒಂದೇ ಅರ್ಥವನ್ನು

ಕೊಡುವ ಪ್ರತಿಪದಗಳು ಕನ್ನಡ ಭಾಷೆಗೆ ಅವಶ್ಯವಾಗಿ ಬೇಕಾಗಿವೆ...... ವೈಜ್ಞಾನಿಕ ಅಥವಾ ಬೇರೆ ಶಾಸ್ತ್ರೀಯ ವಿಷಯಗಳನ್ನು ಖಚಿತವಾಗಿ ಕನ್ನಡದಲ್ಲಿ ಪ್ರತಿಪಾದಿಸಲು ಬರುವಂತೆ ನಮ್ಮ ಭಾಷೆ ಪ್ರೌಢಾವಸ್ಥೆಯನ್ನು ಹೊಂದಬೇಕಾದರೆ ಸುಲಭಗ್ರಾಹ್ಯವಾದ, ನಿಷ್ಕೃಷ್ಟಾರ್ಥವುಳ್ಳ, ಸುಶ್ರಾವ್ಯವಾದ ಪಾರಿಭಾಷಿಕಪದಗಳ ಯೋಜನೆ ತೀವ್ರವೆ ಉಂಟಾಗಬೇಕು.

ಶಿ. ಶಿ. ಬಸವನಾಳರು, ೨೮ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ರಬಕವಿ

ಪ್ರಾಣಿಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಭೂಶಾಸ್ತ್ರ ಮುಂತಾದ ಶಾಸ್ತ್ರಗ್ರಂಥಗಳನ್ನು ರಚಿಸುವಲ್ಲಿ ಅನೇಕ ಪಾರಿಭಾಷಿಕ ಶಬ್ದಗಳನ್ನು ಉಪಯೋಗಿಸಬೇಕಾಗುತ್ತದೆ. ಹೀಗೆ ಉಪಯೋಗಿಸತಕ್ಕ ಪಾರಿಭಾಷಿಕ ಶಬ್ದಗಳು ಒಂದೊಂದು ಭಾಷೆಯಲ್ಲಿ ಒಂದೊಂದು ಬಗೆಯಾಗಿರುವುದು ತಪ್ಪಿ ಅವೆಲ್ಲ ಏಕರೂಪದಲ್ಲಿರುವಂತೆ ಮಾಡುವುದಕ್ಕಾಗಿ ಅವುಗಳ ಏಕೀಕರಣಪ್ರಯತ್ನವು ನಡೆಯುವುದು ಉತ್ತಮ.......

ಇಂಗ್ಲಿಷ್ ಭಾಷೆಯಲ್ಲಿ ವಿಜ್ಞಾನಕ್ಕೆ ಸಂಬಂಧಪಟ್ಟ ಪ್ರತಿಯೊಂದು ವಿಚಾರದಲ್ಲಿಯೂ ರಾಶಿರಾಶಿ ಗ್ರಂಥಗಳೇ ರಚಿತವಾಗಿವೆ. ಅತ್ಯಂತ ಜಟಿಲವಾದ ಪಾರಿಭಾಷಿಕ ವಿಷಯಗಳನ್ನೂ, ಕ್ಲಿಷ್ಟವಾದ ವಿಜ್ಞಾನಶಾಸ್ತ್ರ ಸಂಬಂಧವಾದ ವಿಷಯಗಳನ್ನೂ, ಸಾಮಾನ್ಯರೂ ಗ್ರಹಿಸಲು ಶಕ್ಯವಾಗುವಂತೆ ನೂರಾರು ಸಾವಿರಾರು ಗ್ರಂಥಗಳನ್ನು ಪಾಶ್ಚಾತ್ಯರು ತಮ್ಮ ತಮ್ಮ ಭಾಷೆಗಳಲ್ಲಿ ರಚಿಸುತ್ತಿದ್ದಾರೆ. ನಾವು ಸ್ವತಂತ್ರವಾಗಿ ರಚಿಸುವ ಗ್ರಂಥಗಳ ಜತೆಗೆ ಅವುಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಗ್ರಂಥರಾಶಿಯನ್ನು ಬೆಳೆಯಿಸಬೇಕು. ಭಾಷಾಂತರ ಮಾಡುವಲ್ಲಿ ನಮ್ಮ ಜನರಿಗೆ ಅರ್ಥವಾಗುವಂತೆ ನಮ್ಮ ನಾಡಿನ ಜಾಯಮಾನವೆನಿಸಿರುವ ನುಡಿಗಟ್ಟಿನಿಂದ ಆ ಕೆಲಸವನ್ನು ನಿರ್ವಹಿಸಬೇಕು.

ಸಿ. ಕೆ. ವೆಂಕಟರಾಮಯ್ಯ, ೩೦ನೆಯ ಸಾಹಿತ್ಯ ಸಮ್ಮೇಳನ, ಹರಪನಹಳ್ಳಿ

ಐರೋಪ್ಯ ನಾಗರಿಕತೆ, ಸಂಸ್ಕೃತಿಯ ಸಂಪರ್ಕವಾಗುವ ಮೊದಲು ಜಪಾನು ತೀರ ರೂಕ್ಷಾವಸ್ಥೆಯಲ್ಲಿದ್ದಿತು. ಅದರ ಭಾಷೆ, ಸಾಹಿತ್ಯ ಬಹಳ ಪ್ರಾಥಮಿಕ ಅವಸ್ಥೆಯಲ್ಲಿತ್ತು. ಭಾರತದ ದೇಶಭಾಷೆಗಳ ದುರವಸ್ಥೆಯೇ ಅದರದೂ. ಜಪಾನ್ ಎಚ್ಚರಗೊಂಡಿತು. ಜಪಾನ್ ದೇಶಭಕ್ತರೂ, ದೂರದೃಷ್ಟಿಯುತರೂ "ಜಪಾನ್ ಭಾಷೆಯ ಮೂಲಕವೇ ಜಪಾನಿನ ಉದ್ಧಾರ"ವೆಂದರಿತರು.......

ವಿಶ್ವವಿದ್ಯಾನಿಲಯಗಳಲ್ಲಿ ಮಾತ್ರವಲ್ಲ, ಕನ್ನಡನಾಡಿನ ಎಲ್ಲ ಶಿಕ್ಷಣಸಂಸ್ಥೆಗಳಲ್ಲು ಶಿಕ್ಷಣಮಾಧ್ಯಮವು ಕನ್ನಡವೇ ಆಗಿರಬೇಕು...........

ಇದು ವಿಜ್ಞಾನಯುಗ, ವಿಚಾರಯುಗ ಇವುಗಳಿಗೆ ಸಂಬಂಧಪಟ್ಟ ಅಂಶಗಳ ವಿಮರ್ಶೆ, ವರ್ಣನೆ, ಪರಿಣಾಮಕಾರಿಯಾದ ನಿರೂಪಣ ಇವುಗಳೆಲ್ಲ ಬಳಸುವ ಮಾತುಗಳಿಂದ ಲಭ್ಯವಾಗಬೇಕು. ಅಂದರೆ ನಮ್ಮಲ್ಲಿ ಪಾರಿಭಾಷಿಕ ಶಬ್ದಸಂಪತ್ತು ವೃದ್ಧಿಯಾಗಬೇಕು......

ಸ್ವಭಾಷಾಭಿಮಾನ ಹೆಚ್ಚಿದಂತೆಲ್ಲ ಸ್ವಾತಂತ್ರ್ಯ ಹಂತಹಂತವಾಗಿ ಲಭ್ಯವಾದಂತೆಲ್ಲ ಶಿಕ್ಷಣವು ಈ ದೇಶಭಾಷೆಯ ಮೂಲಕವೇ ನಡೆಯತಕ್ಕದ್ದು ಎಂಬುದು ನಿಸರ್ಗ ನ್ಯಾಯವಾದ ಗೋಚರವಾಗಿದೆ.

ತಿ. ತಾ. ಶರ್ಮ, ೩೧ನೆಯ ಸಾಹಿತ್ಯ ಸಮ್ಮೇಳನ, ಕಾಸರಗೋಡು

ಇನ್ನು ಮುಂದೆ ಕನ್ನಡವು ಶಿಕ್ಷಣಭಾಷೆಯಾಗಬೇಕಾಗಿರುವುದರಿಂದ ಅದಕ್ಕೊಂದು ಹೊಸ ಯುಗವೆ ಈಗ ಆರಂಭವಾಗಿದೆ. ಇಂತಹ ಕಾಲದಲ್ಲಿ ಹೃದಯದ ಭಾಷೆಯಾದ ಕನ್ನಡವನ್ನು ಹೊಸದೃಷ್ಟಿಯಿಂದ ವಿಚಾರಿಸಿ, ವಿವೇಚಿಸಿ, ಸಂಶೋಧಿಸಿ, ಸಂಸ್ಕರಿಸಿ ಅದು ಶಾಸ್ತ್ರೀಯವಾದ ಹೊಸ ತಳಹದಿಯ ಮೇಲೆ ಕಟ್ಟಲ್ಪಡುವಂತೆ ಮುಂದಣ ಪೀಳಿಗೆಯನ್ನು ಪ್ರೇರಿಸುವುದೂ ಈ ಭಾಷಣದ ಒಂದು ಉದ್ದೇಶವಾಗಿದೆ. ಇಂದಿನ ಸ್ವಾತಂತ್ರ್ಯಯುಗಾಕಾಶದಲ್ಲಿ ನಾನು ಮುಳುಗುವ ನಕ್ಷತ್ರದಂತೆ; ನೀವು ಮೂಡುವ ಸೂರ್ಯನಂತೆ. ನಿಮ್ಮಲ್ಲಿ ಯಾರಾದರೂ ಈ ಕೆಲಸದಲ್ಲಿ ನೂರರಲ್ಲಿ ಒಂಗಂಶವನ್ನು ಕಾರ್ಯರಂಗಕ್ಕಿಳಿಸಿದರೆ ನಾನು ಕೃತಜ್ಞನು.

ಉತ್ತಂಗಿ ಚೆನ್ನಬಸಪ್ಪ, ೩೨ನೆಯ ಸಾಹಿತ್ಯ ಸಮ್ಮೇಳನ, ಕಲಬುರ್ಗಿ

ನಮ್ಮ ಶಿಕ್ಷಣ ಪದ್ಧತಿಯಲ್ಲಿ ಕನ್ನಡವೇ ಎಲ್ಲ ದರ್ಜೆಗಳಲ್ಲಿಯೂ ಪ್ರಥಮ ಭಾಷೆಯಾಗಿರುವಂತೆಯೂ ಕನ್ನಡವೇ ಬೋಧಕ ಭಾಷೆಯಾಗಿರುವಂತೆಯೂ ಸುಧಾರಣೆಯಾಗಬೇಕು......... ವಿಶ್ವವಿದ್ಯಾನಿಲಯಗಳಲ್ಲಿ ಸಹ ಕನ್ನಡವೇ ಜ್ಞಾನ ಸಾಹಿತ್ಯ ಬೋಧೆಗೆ ವಾಹಕವಾಗಬೇಕು.

ಎಂ. ಆರ್. ಶ್ರೀನಿವಾಸಮೂರ್ತಿ, ೩೩ನೆಯ ಸಾಹಿತ್ಯ ಸಮ್ಮೇಳನ, ಸೊಲ್ಲಾಪುರ

ಬೇರೆ ಯಾವ ಭಾಷೆಗಳ ಮೂಲಕವೂ ಈ ಪ್ರದೇಶದ ಜನರ ವಿದ್ಯಾಬುದ್ಧಿ ಸಂಸ್ಕಾರ ಬೆಳೆಯಲಾರವು..... ಕನ್ನಡನಾಡಿನಲ್ಲಿ ಕನ್ನಡಕ್ಕೆ ಪ್ರಾಧಾನ್ಯ, ಕನ್ನಡ ಸಾಹಿತ್ಯ ನಿರ್ಮಾಣವಾಗಬೇಕಾದರೆ ಕನ್ನಡದ ಮೂಲಕ ಆಗಬಲ್ಲುದು ಎಂದಾಗ ಅದನ್ನು ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಅದೇ ಮಾಧ್ಯಮವಾಗಬೇಕು ಎಂದಂತೆಯೇ...... ಇನ್ನು ಪರಿಭಾಷೆಯಿಲ್ಲವೆಂಬ ಮೂದಲೆ: ಅದು ಅಂತರರಾಷ್ಟ್ರೀಯವಾಗಿಯೇ ಉಳಿಯಲಿ. ಮತ್ತೊಂದು ಸಂಕೇತ. ಸಂಕೇತ ಖಚಿತವಾಗಿ ವಸ್ತು, ಸಂಬಂಧ, ಕ್ರಿಯಾ ನಿರ್ದೇಶಕವಾಗಿದ್ರೆ ಸಾಕು. ಈಗಿನ ಸಂಕೇತಗಳು ಇಂಗ್ಲಿಷಿನವಲ್ಲ; ಜರ್ಮನಿಯವಲ್ಲ;

ಲ್ಯಾಟಿನ್ ಗ್ರೀಕ್ ಮಾತುಗಳು. ಎಲ್ಲರಿಗೂ ಪರಕೀಯವೇ. ಅವೆಲ್ಲ ಇರುವ ಹಾಗೆಯೇ ಇರಲಿ. ಬೇಕೆನ್ನಿಸಿದರೆ ಬಳಕೆಯಲ್ಲಿರುವ ಆಯಾ ನುಡಿಯ ಸಮಾನ ಪದಗಳನ್ನು ಬಳಸೋಣ.

ವಿ. ಸೀತಾರಾಮಯ್ಯ, ೩೬ನೆಯ ಸಾಹಿತ್ಯ ಸಮ್ಮೇಳನ, ಕುಮಟ

ಇಂದಿನ ಬಲವು ವಿಜ್ಞಾನಬಲದಿಂದ, ವಿಚಿತ್ರ ವೇಗದಿಂದ ಸಾಗುತ್ತಿದೆ. ಹಳೆಯ ಕಾಲದ ಮೌಲ್ಯಗಳೆಷ್ಟೋ ದಿನದಿನಕ್ಕೆ ಬದಲಿಸುತ್ತಿವೆ. ಪ್ರಪಂಚದ ಪ್ರವಾಹದ ಸುಳಿಯಲ್ಲಿರುವ ತನಕ ನಾವು, ಅದರೊಡನೆ ಹರಿಯುವುದಕ್ಕೋ, ನಮಗೆ ಒಪ್ಪಿಗೆಯಿಲ್ಲದಿದ್ದಲ್ಲಿ, ಅದಕ್ಕೆ ಪ್ರತಿಯಾಗಿ ಈಜುವುದಕ್ಕೋ -- ಯಾವುದಕ್ಕೇ ಆಗಲಿ ಬದುಕನ್ನು ವಿವಿಧ ರೀತಿಯಲ್ಲಿ ಮಾರ್ಪಡಿಸುತ್ತಿರುವ ಈ ಜ್ಞಾನ ವಿಜ್ಞಾನಗಳ ಅರಿವುಳ್ಳವರಾಗಿರಬೇಕು. ವಿಜ್ಞಾನ ಇಂದು ನಮ್ಮ ಕೃಷಿ, ಉತ್ಪನ್ನಶಾಸ್ತ್ರ ಅದರಿಂದಾಗಿ ಅರ್ಥವಿತರಣಶಾಸ್ತ್ರ ಎಲ್ಲವನ್ನೂ ಬದಲಿಸುತ್ತಲಿದೆ. ಜನಕ್ಕೆ ಇದನ್ನು ತಿಳಿಸಿಕೊಡುವ ಹೊಣೆ ಯಾರದು? ಕನ್ನಡದಲ್ಲಿ ಬರೆಯಬಲ್ಲ ನಮ್ಮದಲ್ಲವೆ? ...... ವಿಜ್ಞಾನದ ಮಾತನ್ನಾಡಿದೆ. ಈ ಹೊತ್ತು ನಮಗೆ ಅದರ ಅರಿವಿಗೆ ಇಂಗ್ಲಿಷಿನಂಥ ಭಾಷೆಯು ತುಂಭಾ ಸಹಾಯ ಮಾಡಿದೆ, ಅದರಿಂದಾಗಿ ವಿಜ್ಞಾನದ ಶಿಕ್ಷಣ, ಪ್ರಚಾರಗಳೆಲ್ಲವೂ ಇಂಗ್ಲಿಷಿನಿಂದಾಗಬೇಕೆಂದು ನಾವೆಂದೂ ತಿಳಿಯಬಾರದು........... ಇಂಗ್ಲಿಷ್ ಸ್ವತಂತ್ರ ಭಾಷೆಯಲ್ಲದ ಯಾವ ಸ್ವತಂತ್ರ ರಾಷ್ಟ್ರವೂ ಹಾಗೆ ಮಾಡುವುದಕ್ಕೆ ಸಿದ್ಧವಿಲ್ಲ; ಮಾಡಬೇಕಾಗಿಯೂ ಇಲ್ಲ. ನಮ್ಮ ವಿಶ್ವವಿದ್ಯಾನಿಲಯಗಳ ಶಿಕ್ಷಣಮಾಧ್ಯಮ, ನಮ್ಮ ಯಾಪತ್ತು ಶಿಕ್ಷಣ ಮಾಧ್ಯಮ ಕನ್ನಡವೇ ಆಗಿರಬೇಕು.

ಶಿವರಾಮ ಕಾರಂತ, ೩೭ನೆಯ ಸಾಹಿತ್ಯ ಸಮ್ಮೆಳನ, ಮೈಸೂರು.

ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಇಂಗ್ಲಿಷಿಗಿರುವ ಕೃತಕ ಪ್ರಾಮುಖ್ಯವನ್ನಂತೂ ಸ್ವದೇಶೀಯ ವಿದೇಶೀಯರಾದಿಯಾಗಿ ವಿದ್ಯಾಶಾಸ್ತ್ರಜ್ಞರೂ ಮನಃಶಾಸ್ತ್ರಜ್ಞರೂ ದೇಶಭಕ್ತರೂ ರಾಷ್ಟ್ರನಿರ್ಮಾಣಕರೂ ಪ್ರವೀಣರೂ ಪ್ರಾಧ್ಯಾಪಕರೂ ಎಲ್ಲರೂ ಖಂಡಿಸಿದ್ದಾರೆ. ಖಂಡಿಸುತ್ತಲೂ ಇದ್ದಾರೆ. ಆದರೆ ಈ ಸಂಕೋಲೆಯಿಂದ ನಾವಿನ್ನೂ ಬಿಡುಗಡೆ ಹೊಂದಲು ಸಾಧ್ಯವಾಗಿಲ್ಲ. ಸಂಕೋಲೆಯ ಭಾರವೇ ಅಭ್ಯಾಸವಾಗಿ ನಡೆ ಕಲಿತ ಕೆಲವರಿಗೆ ಅದರಿಂದ ಬಿಡುಗಡೆ ಹೊಂದುವ ಇಷ್ಟವೂ ಇಲ್ಲ. ಅಷ್ಟೇ ಅಲ್ಲ, ಹಾಗೆ ಸಂಕೋಲೆ ಹಾಕಿಕೊಳ್ಳದೆ ಕಲಿತ ನಡೆ ಶಿಷ್ಟಾಚಾರ ಸಮ್ಮತವಾಗುವುದಿಲ್ಲ ಎಂಬ ಹಾಸ್ಯಾಸ್ಪದ ಅಭಿಪ್ರಾಯವನ್ನುಳ್ಳವರಾಗಿದ್ದಾರೆ. **ಹೊರಗಣ ಸಂಕೋಲೆಯಿಂದ ಬಿಡುಗಡೆ ಹೊಂದುವಷ್ಟು ಸುಲಭವಾದುದಲ್ಲ ಅಂತರ್ದಾಸ್ಯವಿಮೋಚನೆ.**

ಆದರೂ ಈ ಇಂಗ್ಲಿಷ್ ಚಪ್ಪಡಿಯ ಭಾರಾಘಾತದಿಂದ ಜನಸಾಮಾನ್ಯರ ಬಹುಸಂಖ್ಯಾತ ಮಕ್ಕಳನ್ನು ಪಾರು ಮಾಡಿ ರಕ್ಷಿಸದಿದ್ದರೆ ನಾವು ವಿದ್ಯಾಭ್ಯಾಸಕ್ಕಾಗಿ ವ್ಯಯ ಮಾಡುತ್ತಿರುವ ಕೋಟ್ಯಂತರರೂಪಾಯಿ ನೀರಿನಲ್ಲಿ ಮಾಡಿದ

ಹೋಮವಾಗುತ್ತದೆ. ಸ್ವಾತಂತ್ರ್ಯ ಪೂರ್ವಕಾಲದಲ್ಲಿಯೇ ಗಾಂಧೀಜಿ ಹೀಗೆ ಹೇಳಿದ್ದರು: "ಪರಭಾಷೆಯ ಮೂಲಕದ ಶಿಕ್ಷಣ ನಮ್ಮ ಮಕ್ಕಳ ಬುದ್ಧಿಶಕ್ತಿಯನ್ನು ಬೆಂಡುಮಾಡಿದೆ; ಅವರ ನರಗಳನ್ನು ದುರ್ಬಲಗೊಳಿಸಿದೆ. ಅವರನ್ನು ಬಾಯಿಪಾಠ ಮಾಡುವ ಗಿಳಿಗಳನ್ನಾಗಿ ಮಾಡಿದೆ; ಪ್ರತಿಭಾನ್ವಿತವಾದ ಸೃಷ್ಟಿಕಾರ್ಯಕ್ಕೆ ಅನರ್ಹರನ್ನಾಗಿ ಮಾಡಿದೆ...... ಈ ದೇಶ ಸ್ವತಂತ್ರವಾದ ಕೂಡಲೆ ಶಿಕ್ಷಣಮಾಧ್ಯಮದ ಪ್ರಶ್ನೆ ಪ್ರಶ್ನೆಯಾಗುಳಿಯುವುದಿಲ್ಲ.....".

ಅವರು ಎಂತಹ ಅತಿ ಆಶಾವಾದಿ! ದೇಶ ಸ್ವತಂತ್ರವಾದ ಕೂಡಲೆ ಈ ಪ್ರಶ್ನೆ ಪ್ರಶ್ನೆಯಾಗುಳಿಯುವುದಿಲ್ಲ ಎಂದರು, ಸುಮಾರು ಇಪ್ಪತ್ತು ವರ್ಷಗಳ ಹಿಂದೆಯೇ! ದೇಶ ಸ್ವತಂತ್ರವಾಗಿ ಹತ್ತು ವರ್ಷ ಕಳೆದುದಾಗಿದೆ. ಅವರ ಭಾಷಾನುಗುಣ ಪ್ರಾಂತರಚನೆಯ ಬುದ್ಧಿವಾದವನ್ನೇ ತಲೆಕೆಳಗುಮಾಡಲೆಳಸಿ ಚಿತ್ರವಿಚಿತ್ರವಾಗಿ ವಾದಿಸಿದೆವು ನಾವು. ಆದರೂ ಅವರ ಆಶೀರ್ವಾದದಿಂದ ಅವರು ಹೇಳಿದಂತೆಯೇ ಕಡೆಗೂ ಆಗಿ, ರಾಷ್ಟ್ರಕ್ಷೇಮ ಭದ್ರವಾಯಿತು. ಹಾಗೆಯೆ 'ದೇಶಭಾಷೆಗೆ ಪ್ರಥಮಸ್ಥಾನ ದೊರೆಯಬೇಕು; ದೇಶಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು' ಎಂದ ಅವರ ಹಿತಬೋಧೆಯನ್ನು ನಮ್ಮಲ್ಲಿ ಕೆಲವರು ಇಂದು ಪ್ರಶ್ನಿಸಿ, ಅಲಕ್ಷಿಸಿ, ಅವರು ಮಹಾತ್ಮರಾದರೂ ವಿದ್ಯಾಭ್ಯಾಸಶಾಸ್ತ್ರಜ್ಞರಲ್ಲದ ಅವರ ಅಭಿಪ್ರಾಯ ಬರಿಯ ಭಾವೋಲ್ಲಾಸವೇ ಹೊರತು ಅನುಸರಣಯೋಗ್ಯವಾಗಲಾರದೆಂದು ವಾದಿಸುತ್ತಿದ್ದಾರೆ. ಭಾಷಾಪ್ರಾಂತ ರಚನೆಯ ವಿಷಯದಲ್ಲಿ ಆದಂತೆಯೇ ಈ ವಿಷಯದಲ್ಲಿಯೂ ಕೊನೆಗೆ ಅವರು ಹಾಕಿರುವ ಗೆರೆಯ ಮೇಲೆಯೇ ನಾವು ನಡೆಯಬೇಕಾಗುತ್ತದೆ, ನಡೆದೂ ನಡೆಯುತ್ತೇವೆ ಎನ್ನುವುದರಲ್ಲಿ ನನಗೆ ಸಂದೇಹವಿಲ್ಲ.......... ಕೋಟಿಕೋಟಿ ಭಾರತೀಯ ಮಕ್ಕಳ ಮನಶ್ಶಕ್ತಿಯ ವೃಥಾವ್ಯಯದಿಂದ ರಾಷ್ಟ್ರಕ್ಕೆ ವರ್ಷವರ್ಷವೂ ಒದಗುತ್ತಿರುವ ಅಪಾರ ಧನ ಬುದ್ಧಿ ಧೈರ್ಯ ನಷ್ಟಗಳಿಂದಾಗುವ ಚೈತನ್ಯ ಹಾನಿಯನ್ನು ತಪ್ಪಿಸಬೇಕೆಂದು ಪ್ರಾರ್ಥಿಸುತ್ತೇನೆ.

ದೇಶಭಾಷೆಗಳ ಮೇಲೆ ಗಾಂಧೀಜಿ ಆ ಮಾತುಗಳನ್ನು ಹೇಳಿ ಇಪ್ಪತ್ತು ವರ್ಷಗಳ ಮೇಲಾಯಿತು. ಈ ಇಪ್ಪತ್ತು ವರ್ಷಗಳಲ್ಲಿ ಸೇತುವೆಯ ಕೆಳಗೆ ಎಷ್ಟೋ ನೀರು ಹರಿದು ಹೋಗಿದೆ. ನಮ್ಮ ದೇಶಭಾಷೆಗಳ ಸ್ಥಿತಿ ಅಂದು ಇದ್ದಂತೆ ಇಲ್ಲ. ಬುದ್ಧಿಸಾಹಿತ್ಯ, ಭಾವಸಾಹಿತ್ಯ, ವಿಜ್ಞಾನಸಾಹಿತ್ಯಾದಿ ನಾನಾ ಪ್ರಕಾರಗಳಲ್ಲಿ ಅವು ಅದ್ಭುತವಾಗಿ ಮುಂದುವರಿದಿವೆ....................

ಇತರ ದೇಶಭಾಷಾ ಸಾಹಿತ್ಯಗಳ ನೇರ ಪರಿಚಯವಿಲ್ಲದ ನಾನು ಇದುವರೆಗೆ ಆಂಗ್ಲಭಾಷೆ ಆಕ್ರಮಿಸಿದ್ದ ಸಿಂಹಾಸನಕ್ಕೆ ಏರಲು ಅವು ಎಷ್ಟರಮಟ್ಟಿಗೆ ಅರ್ಹವಾಗಿವೆ ಅಥವಾ ಸಿದ್ಧವಾಗಿವೆ ಎಂಬುದನ್ನು ಆಯಾ ಭಾಷೆಗಳವರು ಹೇಳುವಷ್ಟು ಧೈರ್ಯವಾಗಿ ವಾಸ್ತವಿಕ ಜ್ಞಾನದಿಂದ ಹೇಳಲಾರೆ.......... ಆದರೆ ಕನ್ನಡದ ಸಾಮರ್ಥ್ಯದ ಮತ್ತು ಅರ್ಹತೆಯ ವಿಚಾರವಾಗಿ ನಾನು ಸಿದ್ಧವಾಣಿಯಿಂದ ನುಡಿಯಬಲ್ಲೆನೆಂಬ ಧೈರ್ಯವಿದೆ.

ಅಧಿಕಾರವೂ ಇದೆ ಎಂಬುದನ್ನು ತಾವು ನನ್ನನ್ನು ಈ ಅಧ್ಯಕ್ಷಸ್ಥಾನಕ್ಕೆ ಆರಿಸಿರುವುದರಿಂದಲೇ ಸದ್ಯಕ್ಕಾದರೂ ಸಿದ್ಧಾಂತಪಡಿಸಿದ್ದೀರಿ.

ಲೋಕಸಾಹಿತ್ಯಸೃಷ್ಟಿಯಲ್ಲಿಯೂ ಭಾವಸಾಹಿತ್ಯಸೃಷ್ಟಿಯಲ್ಲಿಯೂ ಕನ್ನಡ ಇಪ್ಪತ್ತು ಮೂವತ್ತು ವರ್ಷಗಳಿಂದ ಯಾವ ಭಾಷೆಯಾದರೂ ಹೆಮ್ಮೆಪಟ್ಟುಕೊಳ್ಳುವಷ್ಟರ ಮಟ್ಟಿಗೆ ಬೆಳೆದಿದೆ ಮತ್ತು ಬೆಳೆಯುತ್ತಿದೆ.

......ಅತಿಯಾದ ಆತ್ಮಶ್ಲಾಘನೆ ಸುಸಂಸ್ಕೃತಿಗೆ ಸಲ್ಲದೆಂದು ಒಪ್ಪಿಕೊಂಡರೂ ಆತ್ಮತಿರಸ್ಕಾರ ಆತ್ಮತೇಜೋವಧೆಗಳು ಅದಕ್ಕಿಂತಲೂ ಹೆಚ್ಚಿನ ಅಪಾಯಕ್ಕೆ ನಮ್ಮನ್ನು ಗುರಿ ಮಾಡುತ್ತವೆ..... ವಿಜ್ಞಾನ, ಯಂತ್ರವಿದ್ಯೆ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಸಂಶೋಧನಾತ್ಮಕವಾದ ಪ್ರೌಢಗ್ರಂಥಗಳೂ ಪ್ರಸಾರಾತ್ಮಕವಾದ ಜನಪ್ರಿಯ ಪುಸ್ತಕಗಳೂ ಹೇರಳವಾಗಿ ರಚಿತವಾಗಬೇಕು........ ಮಾಡಿರುವ ಕೆಲಸಕ್ಕೆ ಸಾವಿರ ಮಡಿಯಿದೆ ಮಾಡಬೇಕಾಗಿರುವ ಕೆಲಸ. ಆದರೆ ನಾವು ಸಾಧಿಸಿರುವ ಕಾರ್ಯದಿಂದ ಒಂದು ವಿಷಯ ಗೊತ್ತಾಗುತ್ತದೆ: ನಮ್ಮ ಭಾಷೆ ವೈಜ್ಞಾನಿಕವಾದ ಯಾವ ಹಳೆಯ ಅಥವಾ ಹೊಸ ವಿಷಯವನ್ನೇ ಆಗಲಿ, ಶಾಸ್ತ್ರೀಯವಾದ ಎಂತಹ ಗಹನ ಅಥವಾ ಸೂಕ್ಷ್ಮ ವಿಚಾರವನ್ನೇ ಆಗಲಿ ಅಭಿವ್ಯಕ್ತಪಡಿಸಲು ಸಂಪೂರ್ಣ ಸಮರ್ಥವಾಗಿದೆ ಎಂದು.

ವಿದ್ಯಾರ್ಥಿಗಳಾಗುವ ನಮ್ಮ ಮಕ್ಕಳ ಮೇಲೆ ನಮಗೇನಾದರೂ ಕರುಣೆಯಿದ್ದರೆ ಮೊದಲು ಅವರ ಎದೆಯ ಮೇಲೆ ಪರಕೀಯರು ಹೇರಿಟ್ಟು ಹೋಗಿರುವ ಹೆಣಭಾರದ ಹೊರಭಾಷೆಯ ಚಪ್ಪಡಿಯನ್ನು ಕಿತ್ತೊಗೆಯಬೇಕು....... ಭಾರತದ ವಿವಿಧ ಪ್ರದೇಶಗಳಲ್ಲಿ ಪ್ರತಿವರ್ಷವು ಪ್ರೌಢಪರೀಕ್ಷೆಗಳಿಗೆ ಕೂರುವ ಲಕ್ಷಾಂತರ ವಿದ್ಯಾರ್ಥಿಗಳಲ್ಲಿ ನೂರಕ್ಕೆ ಐದರಿಂದ ಹತ್ತರವರೆಗೆ ತೇರ್ಗಡೆಹೊಂದುವುದೂ ಕಷ್ಟವಾಗಿದೆ. ಹೀಗೆ ಅನುತ್ತೀರ್ಣರಾಗುವುದಕ್ಕೆ ಹಲವಾರು ಕಾರಣಗಳಿರಬಹುದು. ಆದರೆ ಬಹುಮುಖ್ಯವಾದ ಮತ್ತು ಮೂಲಭೂತವಾಗಿರುವ ಕಾರಣ ಶಿಕ್ಷಣ ಮಾಧ್ಯಮದಿಂದ ಸಂಭವಿಸುತ್ತಿದೆ............

ವಿದ್ಯಾಭ್ಯಾಸದ ಉನ್ನತಮಟ್ಟದಲ್ಲಿ ಬೋಧಕಭಾಷೆಯಾಗುವಷ್ಟು ಸಿದ್ಧವಾಗಿದೆಯೆ ನಮ್ಮ ಭಾಷೆ? ವಿಜ್ಞಾನಶಾಸ್ತ್ರಗಳಲ್ಲಿ ಉಪಯೋಗಿಸುವ ಪರಿಭಾಷೆಯ ಪದಗಳಿಗೆ ಸಮಾನ ಪದಗಳಿವೆಯೆ? ಕನ್ನಡ ಮಾಧ್ಯಮದಲ್ಲಿ ಪಾಠ ಹೇಳುವ ಅಧ್ಯಾಪಕರಿದ್ದಾರೆಯೆ? ಸ್ನಾತಕೋತ್ತರ ವಿಶೇಷ ವ್ಯಾಸಂಗಕ್ಕೂ ಸಂಶೋಧನೆಗೂ ಇಂಗ್ಲಿಷ್ ಭಾಷೆಯಿಲ್ಲದೆ ಸಾಧ್ಯವಾಗುತ್ತದೆಯೆ? ಉನ್ನತ ಸಂಶೋಧನೆಯ ಮಟ್ಟದಲ್ಲಿ ಭಾರತೀಯ ವಿವಿಧ ವಿಶ್ವವಿದ್ಯಾನಿಲಯಗಳ ನಡುವೆ ಪರಸ್ಪರ ಸಂಪರ್ಕಕ್ಕಾಗಿ ಇಂಗ್ಲಿಷ್ ಅಲ್ಲದೆ ಇನ್ನಾವುದರಲ್ಲಿ ವ್ಯವಹರಿಸಲು ಸಾಧ್ಯ? ಬೇರೆ ಬೇರೆ ಪ್ರದೇಶಗಳ

ವಿಶ್ವವಿದ್ಯಾನಿಲಯಗಳು ಉನ್ನತ ಜ್ಞಾನ ಪ್ರಸಾರ ಮತ್ತು ವಿನಿಮಯಕ್ಕಾಗಿ ಪ್ರಾಧ್ಯಾಪಕರನ್ನು ವಿನಿಮಯ ಮಾಡಿಕೊಳ್ಳುವುದಕ್ಕಾಗಿ ಯಾವುದಾದರೊಂದು ಸಾಮಾನ್ಯ ಭಾಷೆ ಬೇಡವೆ? ಜ್ಞಾನ ವಿಜ್ಞಾನ ವಿಷಯಗಳಲ್ಲಿ ಅತ್ಯಂತ ಶ್ರೀಮಂತವಾಗಿರುವ ಇಂಗ್ಲಿಷನ್ನು ಬಿಟ್ಟರೆ ನಮಗೆ ನಷ್ಟವಲ್ಲವೆ? ನಮ್ಮ ಮಕ್ಕಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟಗಳಲ್ಲಿ ಪ್ರಕಾಶಕ್ಕೆ ಬರಲು ಅನುಕೂಲವಾಗುವಂತೆ ಅವರಿಗೆ ಇಂಗ್ಲಿಷ್ ಭಾಷೆಯನ್ನು ಕಲಿಸದಿದ್ದರೆ ಅನ್ಯಾಯ ಮಾಡಿದಂತಾಗುವುದಿಲ್ಲವೆ?

ಈ ಪ್ರಶ್ನೆಗಳೆಲ್ಲ ಒಂದೆ ಜಾತಿಯವೂ ಅಲ್ಲ; ಒಂದೆ ಭೂಮಿಕೆಗೆ ಸೇರಿದವೂ ಅಲ್ಲ. ಇಲ್ಲಿ ಯಾವುದಾದರೂ ಒಂದು ಪ್ರಶ್ನೆಗೆ ನಾವು ಕೊಡಬಹುದಾದ ಉತ್ತರವನ್ನು ಎಲ್ಲ ಸಮಸ್ಯೆಗಳಿಗೂ ಅನ್ವಯಿಸಲಾಗುವುದಿಲ್ಲ. ಉದಾಹರಣೆಗೆ : ಅಂತರರಾಷ್ಟ್ರೀಯ ರಂಗಗಳಲ್ಲಿ ಪ್ರಕಾಶಕ್ಕೆ ಬರಲು ಇಂಗ್ಲಿಷ್ ಅತ್ಯಾವಶ್ಯಕ ಎಂದು ನಾವು ಒಪ್ಪಿಕೊಂಡ ಮಾತ್ರಕ್ಕೆ ಇಂಗ್ಲಿಷ್ ಅವಶ್ಯಕ, ಆದ್ದರಿಂದ ಎಲ್ಲರೂ ಇಂಗ್ಲಿಷ್ ಕಲಿಯಬೇಕು ಎಂದು ಊಹಿಸುವುದು ಅವಿವೇಕದ ಪರಮಾವಧಿಯಾದೀತು. ಒಂದು ದೇಶ ತನ್ನ ಮಕ್ಕಳಿಗೆ ಭಾಷೆಗಳನ್ನು ಕಲಿಸುವಾಗ ಯಾವ ಯಾವ ಭಾಷೆ ಯಾರು ಯಾರಿಗೆ ಎಷ್ಟೆಷ್ಟು ಪ್ರಮಾಣದಲ್ಲಿ ಏತಕ್ಕಾಗಿ ಬೇಕಾಗುತ್ತದೆ ಎಂಬುದನ್ನು ಗೊತ್ತುಮಾಡಿಕೊಳ್ಳಬೇಕು. ಇಂಗ್ಲಿಷ್ ಆಗಲಿ ಹಿಂದಿಯಾಗಲೀ ನಮ್ಮ ಮಕ್ಕಳಿಗೆ ಬೇಕು ಎಂದ ಮಾತ್ರಕ್ಕೆ ಯಾರಿಗೆ? ಎಷ್ಟು? ಏಕೆ? ಎಂಬುದಾವುದನ್ನೂ ಪರಿಗಣಿಸದೆ ವರ್ತಿಸಿದರೆ, ತೇನ್ಸಿಂಗ್ ಹಿಮಾಲಯದ ಉನ್ನತ ಶಿಖರಕ್ಕೆ ಏರಿ ತಾವೂ ಪ್ರಖ್ಯಾತರಾಗಿ ಭಾರತಕ್ಕೂ ಗೌರವ ತಂದರು; ನಮ್ಮ ಮಕ್ಕಳಿಗೂ ಅಂತಹ ಸದಾವಕಾಶ ಕಲ್ಪಿಸಿಕೊಡಬೇಕು; ಆದ್ದರಿಂದ ಎಲ್ಲ ಮಕ್ಕಳಿಗೂ ಪರ್ವತಾರೋಹಣವನ್ನು ಕಡ್ಡಾಯದ ಶಿಕ್ಷಣದ ವಿಷಯವನ್ನಾಗಿ ಕಲಿಸಬೇಕು ಎಂದಷ್ಟೇ ಮೂರ್ಖತನವಾಗುತ್ತದೆ. ಎಲ್ಲ ಮಕ್ಕಳ ಸಾಮರ್ಥ್ಯವೂ ಸಮಾನವಾದುದಲ್ಲ. ಎಲ್ಲ ಮಕ್ಕಳ ಜೀವಿತೋದ್ದೇಶವೂ ಒಂದೇ ತೆರನಾದುದಲ್ಲ. ಸಂಸ್ಕಾರದಲ್ಲಿ ಶಕ್ತಿಯಲ್ಲಿ ಜೀವಿತೋದ್ದೇಶದಲ್ಲಿ ರುಚಿ ಅಭಿರುಚಿಗಳಲ್ಲಿ ದೇಹಬಲ ಮೇಧಾಶಕ್ತಿಗಳಲ್ಲಿ ಅನುಕೂಲ ಅವಕಾಶಗಳಲ್ಲಿ ಮಕ್ಕಳು ಭಿನ್ನಭಿನ್ನ ವರ್ಗ ಸನ್ನಿವೇಶಗಳಿಗೆ ಸೇರಿದವರಾಗಿರುತ್ತಾರೆ. ಜೊತೆಗೆ ಸಮಾಜದ ಮತ್ತು ದೇಶದ ಅವಶ್ಯಕತೆಗಳ ದೃಷ್ಟಿಯಿಂದಲೂ ಸಾಧನ ಸಿದ್ಧತೆಗಳ ದೃಷ್ಟಿಯಿಂದಲೂ ನಮ್ಮಲ್ಲಿರುವ ಅಲ್ಪಸ್ವಲ್ಪದರಿಂದಲೇ ಪರಮಾವಧಿ ಪ್ರಯೋಜನವನ್ನು ಸಾಧಿಸುವ ಯೋಜನೆಯನ್ನು ಕೈಗೊಳ್ಳಬೇಕಾಗಿದೆ........ ವಿವಿಧ ವಿಜ್ಞಾನಶಾಸ್ತ್ರಗಳಲ್ಲಿರುವ ಸಾವಿರಾರು ಪಾರಿಭಾಷಿಕ ಪದಗಳನ್ನು ನಾವು ಹಾಗೆ ಹಾಗೆಯೇ ನಮ್ಮ ಲಿಪಿಗಳಲ್ಲಿ ಬರೆದು ವ್ಯವಹರಿಸಿದ್ದೇ ಆದರೆ ವಿಜ್ಞಾನವಿದ್ಯೆಗೂ ಕಾರ್ಯರಂಗದಲ್ಲಿ ಅದರ ಪ್ರಯೋಗಕ್ಕೂ, ಸೌಲಭ್ಯವುಂಟಾಗುತ್ತದೆ..............

ಕೆ. ವಿ. ಪುಟ್ಟಪ್ಪ, ೩೯ನೆಯ ಸಾಹಿತ್ಯ ಸಮ್ಮೇಳನ, ಧಾರವಾಡ

ಶಿಕ್ಷಣ ಮಾಧ್ಯಮದ ವಿಷಯವನ್ನು ಇಷ್ಟೊಂದು ದೀರ್ಘವಾಗಿ ಪ್ರಸ್ತಾಪಿಸುವ ಅಗತ್ಯವಿತ್ತೇ ಎಂದು ಯಾರಿಗಾದರೂ ಅನಿಸಬಹುದಲ್ಲವೆ?

ಆ ಪ್ರಶ್ನೆಯನ್ನು ಅವರೇ ಭಾಷಣದಲ್ಲಿ ಎತ್ತಿ ಉತ್ತರಿಸಿದ್ದಾರೆ:

ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಈ ವಿಷಯವಾಗಿ ಇಷ್ಟು ದೀರ್ಘವಾಗಿ ಸಮಾಲೋಚನೆ ಮಾಡಿದುದರ ಅರ್ಥವೇನು? ಉದ್ದೇಶವೇನು?........... ಶಿಕ್ಷಣ ಮಾಧ್ಯಮ, ಪಾರಿಭಾಷಿಕ ಪದಸಮಸ್ಯೆ ಇತ್ಯಾದಿ ಶಿಕ್ಷಣಶಾಸ್ತ್ರ ಸಮ್ಮೇಲನೋಚಿತ ಎನಿಸಬಹುದಾದ ವಿಷಯಗಳ ಪ್ರವೇಶಕ್ಕೆ ಇಲ್ಲಿ ಅಗತ್ಯವೇನಿತ್ತು?

ಯಾರ ಮನಸ್ಸಿನಲ್ಲಾದರೂ ಅಂತಹ ಪ್ರಶ್ನಾರ್ಥಕ ಚಿಹ್ನೆ ಹೆಡೆಯೆತ್ತಿದ್ದರೆ ಅಥವಾ ಆಶ್ಚರ್ಯ ಚಿಹ್ನೆ ನಿಮಿರಿ ನಿಂತಿದ್ದರೆ ಅದಕ್ಕೆ ಉತ್ತರ ಇಷ್ಟೆ! .... ಕರ್ನಾಟಕದಲ್ಲಿ ಕನ್ನಡ ಪ್ರಥಮ ಭಾಷೆಯಾಗದಿದ್ದರೆ ಕನ್ನಡವೆ ಶಿಕ್ಷಣ ಮಾಧ್ಯಮವಾಗದಿದ್ದರೆ ಕನ್ನಡಿಗರ ಬಾಳು ಕುಂಠಿತವಾಗುತ್ತದೆ; ಕನ್ನಡಿಗರ ಏಳಿಗೆಗೆ ಧಕ್ಕೆ ಬರುತ್ತದೆ; ಕರ್ನಾಟಕದ ರಚನೆ ಅರ್ಥಹೀನವಾಗುತ್ತದೆ.

ಕೆ. ವಿ. ಪುಟ್ಟಪ್ಪ (ಕುವೆಂಪು), ೩೯ನೆಯ ಸಾಹಿತ್ಯ ಸಮ್ಮೇಳನ, ಧಾರವಾಡ

ಕನ್ನಡ ಶಿಕ್ಷಣ ಮಾಧ್ಯಮವಾಗಬೇಕಾದುದು ಅಗತ್ಯ. ಎಲ್ಲ ಪ್ರಾಂತಗಳಲ್ಲಿಯ ಪರಿಸ್ಥಿತಿಯನ್ನು ಗಮನಿಸಿ ನಮ್ಮ ಎಳೆಯರಿಗೆ ಯಾವ ವ್ಯಾವಹಾರಿಕ ತೊಂದರೆಯುಂಟಾಗದಂತೆ ಮಾತ್ರ ಈ ಮಾರ್ಪಾಟನ್ನು ನಾವು ಮಾಡಬೇಕು.

ವಿನಾಯಕ ಕೃಷ್ಣ ಗೋಕಾಕ, ೪೦ನೆಯ ಸಾಹಿತ್ಯ ಸಮ್ಮೇಳನ, ಬಳ್ಳಾರಿ

ನಮ್ಮಲ್ಲಿ ವೈಜ್ಞಾನಿಕ ವಿಚಾರವನ್ನು ಮಾಡುವ ಬುದ್ಧಿಮತ್ತೆ ಬೆಳೆಯಬೇಕು. ವೈಜ್ಞಾನಿಕ ಸಂಶೋಧಕರ ಸಂಖ್ಯೆ ಹೆಚ್ಚಾಗಿ, ಅವರು ಕನ್ನಡದಲ್ಲಿಯೇ ವಿಚಾರಿಸಲು ಪ್ರಯತ್ನ ಮಾಡಬೇಕು. ಈ ಹಿನ್ನೆಲೆಯಲ್ಲಿ ನೋಡಿದಾಗ ಒಂದು ಮಾತು ಸ್ಪಷ್ಟವಾಗುತ್ತದೆ. ನಮ್ಮಲ್ಲಿ ಈಗ ನಾಡಿನ ಬಗೆಗೆ ಅಭಿಮಾನವೇನೋ ಜಾಗೃತವಾಗಿದೆ. ಆದರೆ ನುಡಿಯ ಬಗೆಗೂ ಅಭಿಮಾನ ಇನ್ನೂ ಜಾಗೃತವಾದಂತೆ ಕಂಡುಬರುವುದಿಲ್ಲ. ಪರಕೀಯ ಭಾಷೆಗಳಲ್ಲಿ ಮಾತನಾಡಿದರೆ, ಪರಕೀಯರ ಮಾತಿನಲ್ಲಿ ವಿಚಾರ ಮಾಡಿದರೆ, ತಮ್ಮ ಘನತೆ ಗೌರವಗಳು ಹೆಚ್ಚುತ್ತಿವೆಯೆಂದೂ, ಕನ್ನಡವು ತೀರಾ ಕ್ಷುಲ್ಲಕ ಭಾಷೆಯೆಂದೂ ಅನೇಕ ಜನರ ಅಭಿಪ್ರಾಯವಿದ್ದಂತೆ ತೋರುತ್ತದೆ. ಎಷ್ಟೇ ಹರಕುಮುರುಕಾಗಿಯಾದರೂ ಚಿಂತೆಯಿಲ್ಲ, ಆಂಗ್ಲಭಾಷೆಯ ಕಡೆಗೆ ಶರಣು ಹೋಗುವ

ಪ್ರವೃತ್ತಿ ಇನ್ನೂ ನಮ್ಮಲ್ಲಿದೆ. ಆದರೆ ನಿಜವಾಗಿಯೂ ವಿಚಾರ ಮಾಡಿದರೆ ಜಗತ್ತಿನಲ್ಲಿ ಒಂದು ಭಾಷೆ ಕ್ಷುಲ್ಲಕವಾದುದೆಂದೂ, ಇನ್ನೊಂದು ಭಾಷೆ ಹಿರಿದಾದುದೆಂದೂ ಹೇಳಲು ಬರುವಂತಿಲ್ಲ. ಹಲವು ಶತಮಾನಗಳ ಹಿಂದೆ ಆಂಗ್ಲಭಾಷೆಯೂ ಕನ್ನಡ ಮೊದಲಾದ ಭಾರತೀಯ ಭಾಷೆಗಳ ಸ್ಥಿತಿಯಲ್ಲಿಯೇ ಇದ್ದಿತು. ಆಂಗ್ಲ ಸಾಮ್ರಾಜ್ಯದೊಡನೆ ಆ ಭಾಷೆ ಸುತ್ತಲೆಲ್ಲ ಪಸರಿಸಿತು. ಎಲ್ಲಕ್ಕೂ ಮೇಲಾಗಿ ಆಂಗ್ಲರು ಪ್ರಾಂಜಲ ಮನಸ್ಸಿನಿಂದ ತಮ್ಮ ಭಾಷೆಗೆ ಅನ್ಯಭಾಷೆಯ ಶಬ್ದ, ಪ್ರಯೋಗ ವಿಚಾರಗಳಿಗೆ ಆಸ್ಪದ ಮಾಡಿಕೊಟ್ಟರು. ಹೀಗಾಗಿ ಅವರ ಭಾಷೆ ಬೆಳೆಯಿತು. ಭಾರತೀಯ ಭಾಷೆಗಳು ಹಾಗೆ ಧೈರ್ಯಮಾಡಿ ದೇಶವಿದೇಶಗಳ ಪಾರಿಭಾಷಿಕಗಳನ್ನೂ ಶಬ್ದಗಳನ್ನೂ ಸ್ವೀಕರಿಸಿ ನಮ್ಮ ಭಾಷೆಗಳನ್ನು ಹದಗೊಳಿಸಿದರೆ, ಅವು ಸಹ ಹಿರಿದಾಗುವುದರಲ್ಲಿ ಸಂದೇಹವಿಲ್ಲ. ಮುಖ್ಯತಃ ಅಂತಹ ಮನಸ್ಸು ಬೇಕು.......... ಕನ್ನಡ ಇಂಗ್ಲಿಷ್ ಈ ಭಾಷೆಗಳು ಒಂದಕ್ಕೊಂದು ಪೂರಕವಾಗುವಂತೆ ನಮ್ಮ ನಾಡಿನಲ್ಲಿ ನೆಲೆಗೊಳ್ಳಬೇಕು. ವ್ಯಕ್ತಿತ್ವದ ಪೂರ್ಣ ವಿಕಾಸ, ರಾಷ್ಟ್ರೀಯ ಐಕ್ಯತೆ ಇಂತಹ ಮಹತ್ವ ಸೂತ್ರಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ಜೀವನದಲ್ಲಿ ಆಯಾ ಭಾಷೆಗಳ ಸ್ಥಾನಮಾನವೇನೆಂಬುದನ್ನು ಸರಿಯಾಗಿ ತಿಳಿದುಕೊಂಡು ಮುಂದೆ ಸಾಗುವುದು ವಿಹಿತ.

ಕೆ. ಜಿ. ಕುಂದಣಗಾರರು, ೪೩ನೆಯ ಸಾಹಿತ್ಯ ಸಮ್ಮೇಳನ, ಗದಗ

ಕರ್ನಾಟಕ ಪ್ರಾಂತರಚನೆಯಲ್ಲಿ ಅಡಕವಾದ ಇನ್ನೊಂದು ತತ್ವವೆಂದರೆ ಹೆಚ್ಚು ಹೆಚ್ಚಾದ ಕನ್ನಡ ಜನ ಉಚ್ಚವಾದ ಜ್ಞಾನವನ್ನೂ ತಿಳಿವಳಿಕೆಯನ್ನೂ ಪಡೆಯಬೇಕೆಂಬುದು. ಶಿಕ್ಷಣ ಮಾಧ್ಯಮವು ಕನ್ನಡವಾಗದೆ ಇದು ಸಾಧ್ಯವಿಲ್ಲ. ಈವೊತ್ತು ಮಾಧ್ಯಮಿಕ ಶಿಕ್ಷಣದ ಕೊನೆಯವರೆಗೆ ಕನ್ನಡ, ಆಮೇಲೆ ಇಂಗ್ಲಿಷು ಈ ತ್ರಿಶಂಕು ಪರಿಸ್ಥಿತಿಯಲ್ಲಿ ಯಾವ ಭಾಷೆಯೂ ಚೆನ್ನಾಗಿ ಬರುವಂತಿಲ್ಲ, ಯಾವ ಜ್ಞಾನವೂ ಆಳವಾಗಿ ದೊರೆಯುವಂತಿಲ್ಲ. ಒಂದೊಂದು ವಿಷಯದಲ್ಲಿ ಒಂದಾದರೂ ಪ್ರಮಾಣಭೂತವಾದ ಪಠ್ಯಪುಸ್ತಕವನ್ನು ಬರೆಯಿಸಿ ಧೈರ್ಯವಾಗಿ ಮಾಧ್ಯಮವನ್ನು ಪ್ರಾರಂಭಿಸಬೇಕು. ಇತರ ಪುಸ್ತಕಗಳು ಕ್ರಮೇಣ ಬರುತ್ತವೆ. ಕಲಿಸುವಾಗ ಕೆಲವು ಕಾಲ ಕನ್ನಡ, ಇಂಗ್ಲಿಷು ಎರಡನ್ನೂ ಬಳಸಬಹುದು. ಕನ್ನಡ ಮಾಧ್ಯಮಕ್ಕೆ ವಿರೋಧವೇಕಿದೆ, ನಿಜವಾದ ತೊಂದರೆಗಳು ಯಾವುವು ಇವನ್ನು ನಾನು ಬಲ್ಲೆ. ಆದರೆ ಕೊನೆಯವರೆಗೆ ಈ ಪರಿಸ್ಥಿತಿ ಉಳಿಯಲಾರದು, ಉಳಿಯಬಾರದು. ನಾಡಿನ ಸ್ವಾಭಿಮಾನಕ್ಕೆ, ಸಂಸ್ಕೃತಿಗೆ, ಉತ್ಕರ್ಷ ಪ್ರಯತ್ನಕ್ಕೆ ಇದು ಅವಮಾನ. ಸರಕಾರದವರೂ ವಿಶ್ವವಿದ್ಯಾನಿಲಯಗಳ ಅಧಿಕಾರಿಗಳೂ ಈ ದಾರಿಯಲ್ಲಿ ದಿಟ್ಟ ಹೆಜ್ಜೆಯನ್ನಿಡುವರೆಂದು ಆಶಿಸುತ್ತೇನೆ.

ರಂ. ಶ್ರೀ. ಮುಗಳಿ, ೪೪ನೆಯ ಸಾಹಿತ್ಯ ಸಮ್ಮೇಳನ, ಸಿದ್ಧಗಂಗಾ ಕ್ಷೇತ್ರ, ತುಮಕೂರು

ವಿದ್ಯಾಂಗಗಳಲ್ಲಿ ಆಮೂಲಾಗ್ರವಾಗಿ ಕನ್ನಡವೆ ಬೋಧಭಾಷೆಯಾಗಬೇಕು...... ಆಧುನಿಕ ವಿಚಾರ -- ವಿಜ್ಞಾನ -- ಶಾಸ್ತ್ರ ಸಂಬಂಧವಾದ ಉತ್ತಮ ಗ್ರಂಥಗಳು ಯಾವ ಭಾಷೆಯಲ್ಲಿದ್ದರೂ ಅವುಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆ ಬೇಕು.

ಕಡೆಂಗೋಡ್ಲು ಶಂಕರಭಟ್ಟರು, ೪೫ನೆಯ ಸಾಹಿತ್ಯ ಸಮ್ಮೇಳನ, ಕಾರವಾರ

ಮೊನ್ನೆ ಮೊನ್ನೆ ಕನ್ನಡ ನಾಡಿನ ಮೂರೂ ವಿಶ್ವವಿದ್ಯಾನಿಲಯಗಳು ಕನ್ನಡ ಮಾಧ್ಯಮವನ್ನು ಉಚ್ಚಶಿಕ್ಷಣದ ಹಂತಕ್ಕೂ ಒಯ್ದು, ನಿಲ್ಲಿಸುವ ಕಡೆಗೆ ಒಲಿದಿವೆ. ಅದರಿಂದ ನಮಗೆ ಬೇಕಾದ ವೈಜ್ಞಾನಿಕ ಗ್ರಂಥಗಳ, ಪಠ್ಯಪುಸ್ತಕಗಳ ನಿರ್ಮಿತಿಯೂ ಜ್ಞಾನ ವಿಜ್ಞಾನ ವಿಷಯದ ಗ್ರಂಥರಚನೆಯೂ ವಿಪುಲವಾಗಿ ಆಗಬೇಕಾಗಿವೆ. ಇವೆಲ್ಲವುಗಳನ್ನು ನಮ್ಮ ವಿದ್ವಾಂಸರು ಕಷ್ಟಪಟ್ಟು, ನಾಡಿಗೂ ನುಡಿಗೂ ಪೂರೈಸಿ ಕೊಡುವ ಅವಶ್ಯಕತೆಯು ಎಂದಿಗಿಂತ ಇಂದು ಹೆಚ್ಚಾಗಿದೆ.

ಆ. ನೇ. ಉಪಾಧ್ಯೆ, ೪೬ನೆಯ ಸಾಹಿತ್ಯ ಸಮ್ಮೇಳನ, ಶ್ರವಣಬೆಳಗೊಳ

ಕನ್ನಡದಲ್ಲಿ ವೈಜ್ಞಾನಿಕಗ್ರಂಥಗಳಿಲ್ಲ, ಅದು ವಿಜ್ಞಾನ ಭಾಷೆಯಾಗಿ ಬೆಳೆದಿಲ್ಲವೆಂದರೆ ಅದಕ್ಕೆ ದಾಸ್ಯಸ್ಥಿತಿ ಹೇಗೆ ಕಾರಣವೋ, ನೂರೈವತ್ತು ವರ್ಷಗಳಿಂದ ವಿಜ್ಞಾನವನ್ನು ಬೋಧಿಸುತ್ತ ಈ ಕಡೆಗೆ ಗಮನ ಹರಿಸದ ನಮ್ಮ ಪಂಡಿತರೂ ಕಾರಣವೆಂದು ಹೇಳಬೇಕಾಗಿದೆ---. ಕನ್ನಡದಲ್ಲಿ ಆಲೋಚನೆ ಮಾಡಿ, ಕನ್ನಡದಲ್ಲಿ ಪಾಠ ಹೇಳಿದಾಗ ವಿಜ್ಞಾನ ಭಾಷೆ ತಾನಾಗಿಯೇ ಹದಗೊಳ್ಳುತ್ತದೆ; ಬೇಡವೆಂದರೂ ಅಪಾರ ಸಂಖ್ಯೆಯಲ್ಲಿ ಗ್ರಂಥಗಳು ಹೊರಬೀಳುತ್ತವೆ-----. ಆ ಮಹಾವಿದ್ಯಾಲಯಗಳ ಆಸರೆಯಲ್ಲಿ ನಡೆಯುತ್ತಿರುವ ಭಾಷಣಮಾಲೆಗಳೂ ವೈಜ್ಞಾನಿಕಭಾಷೆಯನ್ನು ಶ್ರೀಮಂತ ಗೊಳಿಸಿರುವುದಲ್ಲದೆ, ಅದನ್ನು ನಿರಂತರವಾಗಿ ರೂಪಿಸುತ್ತಿವೆ. 'ಪ್ರಬುದ್ಧ ಕರ್ಣಾಟಕ'ದ ಸುವರ್ಣ ಮಹೋತ್ಸವದ ಸಮಯದಲ್ಲಿ ಪ್ರಕಟವಾದ ವಿಶೇಷ ವಿಜ್ಞಾನ ಸಂಪುಟ ಎಂಥ ಅಳ್ಳೆದೆಯವರಿಗಾದರೂ ಧೈರ್ಯ ಮೂಡಿಸುವಂತಿದೆ. ಅಸಹಾಯ ಶೂರರಾಗಿ ಆ ಸಾಹಿತ್ಯ ಬ್ರಹ್ಮ ಕಾರಂತರು ರಚಿಸಿದ ವಿಜ್ಞಾನ ಪ್ರಪಂಚವಂತೂ ಕನ್ನಡ ವಿರೋಧಿಗಳಿಗೆ ಉಸಿರು ಕಟ್ಟಿಸುವಂತಿದೆ. ರಾಜ್ಯದ ಮೂರೂ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯುದ್ವೇಗದಿಂದ ನಡೆಯುತ್ತಿರುವ ಪಠ್ಯಪುಸ್ತಕ ನಿರ್ಮಾಣ ಕಾರ್ಯ ಇನ್ನೆರಡು ಮೂರು ವರ್ಷಗಳಲ್ಲಿಯೇ ವಿಜ್ಞಾನ ಪಠ್ಯಗ್ರಂಥಗಳ ಕೊರತೆಯನ್ನು ನೀಗುವುದರಲ್ಲಿದೆ. ಈ ಎಲ್ಲ ಪ್ರಯತ್ನಗಳಿಗೆ ಶಿಖರಪ್ರಾಯವಾಗಿ ಕನ್ನಡ ವಿಶ್ವಕೋಶದ ಸಂಪುಟಗಳು ಮೇಲಿಂದ ಮೇಲೆ ಹೊರಬರುತ್ತಿವೆ. ಈ ಎಲ್ಲ ಪ್ರಯತ್ನಗಳ ಫಲವಾಗಿ ವೈಜ್ಞಾನಿಕ ವಿಷಯಗಳ ಅಧ್ಯಯನ -- ಅಧ್ಯಾಪನ -- ಸಂಶೋಧನೆಗಳಿಗೆ ಅತ್ಯಗತ್ಯವಾಗಿ ಬೇಕಾಗಿದ್ದ ಪಠ್ಯಪುಸ್ತಕಗಳು, ಸಹಾಯಕ ಸಾಹಿತ್ಯ, ಆಕರ ಗ್ರಂಥ ಹಾಗೂ ನಿಯತಕಾಲಿಕೆಗಳು ತೃಪ್ತಿಕರವಾಗಿ ಪ್ರಕಟಗೊಂಡು, ಕನ್ನಡ ಗದ್ಯದ ಸಾಮರ್ಥ್ಯವನ್ನು

ಹೆಚ್ಚಿಸಿ, ಅದು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಶಿಕ್ಷಣ ಮಾಧ್ಯಮವಾಗಬಲ್ಲುದೆಂದು ಘೋಷಿಸುತ್ತಿವೆ----- ಕನ್ನಡದಲ್ಲಿ ಮುದ್ರಿತವಾಗಿರುವ ವೈಜ್ಞಾನಿಕ ಗ್ರಂಥಗಳ ಸಂಖ್ಯೆ ೨೫೦೦ ಎಂದು ಪ್ರಸಾರಾಂಗ ತಯಾರಿಸುತ್ತಿರುವ ವಿವರಣಾತ್ಮಕ ಗ್ರಂಥಸೂಚಿಯಿಂದ ವ್ಯಕ್ತವಾಗುತ್ತದೆ. ಈವರೆಗಿನ ಲೇಖಕರ ಸಂಖ್ಯೆ ೧೮೫೭ ಇರಬೇಕೆಂದು ಶ್ರೀ ಜಿ.ಟಿ. ನಾರಾಯಣರಾಯರು ನಿರ್ಧರಿಸಿದ್ದಾರೆ. ಇವರಲ್ಲಿ ಸುಮಾರು ೧೫೦೦ ಮಂದಿ ಜೀವಂತವಾಗಿದ್ದಾರೆ. ಕನ್ನಡ ಶಿಕ್ಷಣ ಮಾಧ್ಯಮವಾದದ್ದಾದರೆ ಆ ಸಂಖ್ಯೆ ಐದು ಸಾವಿರಕ್ಕೇರಿದರೆ ಆಶ್ಚರ್ಯವಿಲ್ಲ. ಆಗ ಕನ್ನಡ ಜಗತ್ತಿನ ಅದ್ಭುತ ಭಾಷೆಗಳಲ್ಲೊಂದಾಗುತ್ತದೆ. ಅಧ್ಯಯನ ಸಂಸ್ಥೆ ಪಾರಿಭಾಷಿಕ ಕೋಶಗಳನ್ನು ಜತೆಜತೆಯಲ್ಲಿ ಪ್ರಕಟಿಸುತ್ತಿದೆ. ಭಾಷೆಯ ಬೆಳವಣಿಗೆಯಲ್ಲಿ ಭಾಷಾಂತರ ಮಹತ್ವವನ್ನು ಗಮನಿಸಿ ಅಲ್ಲಿಯ ಭಾಷಾಂತರದ ವಿಭಾಗ ಭಾಷಾಂತರಕಾರರನ್ನು ತಯಾರು ಮಾಡುವ ಮೂಲಕ ಆ ಕಲೆಯನ್ನು ಬೆಳೆಸುತ್ತಿದೆ. ಕರ್ನಾಟಕ ವಿಶ್ವವಿದ್ಯಾನಿಲಯವೂ ಇದೇ ನಿಟ್ಟಿನಲ್ಲಿ ಸಾಧನಾನಿರತವಾಗಿದೆ. ರಾಜ್ಯದ ಮೂರೂ ವಿಶ್ವವಿದ್ಯಾನಿಲಯಗಳೂ ಕನ್ನಡ ಮಾಧ್ಯಮದ ಕಡೆಗೆ ಆದ್ಯ ಗಮನ ನೀಡುವುದಾದರೆ ಭಾಷಾ ಸಮಸ್ಯೆ ಬಗೆಹರಿಯುವುದಲ್ಲದೆ, ಕನ್ನಡ ಸಬಲ ವೈಜ್ಞಾನಿಕ ಭಾಷೆಯಾಗಿ ಮೆರೆಯುವುದರಲ್ಲಿ ಸಂದೇಹವಿಲ್ಲ.

ದೇ. ಜವರೇಗೌಡ, ೪೭ನೆಯ ಸಾಹಿತ್ಯ ಸಮ್ಮೇಳನ, ಬೆಂಗಳೂರು

ಅಪಾರವಾಗಿ ಬೆಳೆಯುತ್ತಿರುವ ವೈಜ್ಞಾನಿಕ, ತಾಂತ್ರಿಕ, ಕೃಷಿಕ, ವೈದ್ಯಕೀಯ ವಿಜ್ಞಾನವನ್ನು ಅಳವಡಿಸಿಕೊಂಡು, ಕನ್ನಡದಲ್ಲಿ ಗ್ರಂಥರಚನೆ ಮಾಡಿ, ನಮ್ಮ ಭಾಷೆ ಯಾವುದೇ ವಿಧದ ಜ್ಞಾನವನ್ನು ವ್ಯಕ್ತಗೊಳಿಸುವ ಕಸುವನ್ನು ಪಡೆದಿದೆ ಎನ್ನುವುದನ್ನು ತೋರಿಸಿಕೊಡಬೇಕಾಗಿದೆ. ------- ಈ ದಿಸೆಯಲ್ಲಿ ಈಗಾಗಲೇ ಕೇಂದ್ರ ಸರಕಾರ, ರಾಜ್ಯ ಸರಕಾರ ಮತ್ತು ವಿಶ್ವವಿದ್ಯಾನಿಲಯಗಳು ಕಾರ್ಯಪ್ರವೃತ್ತವಾಗಿವೆ. ಇದು ಸಂತೋಷದ ವಿಷಯ. ಕನ್ನಡ ಭಾಷೆಯ ಮೇಲೆ ಯಾವುದೇ ರೀತಿಯ ಕಾರ್ಯಭಾರವನ್ನು ಹಾಕಿದರೂ ಅದನ್ನು ನಿತ್ತರಿಸಿಕೊಳ್ಳಬಲ್ಲದು ಎನ್ನುವ ಭರವಸೆ ನನಗಿದೆ. ಅದನ್ನು ಕಾರ್ಯಸಿದ್ಧಿ ಮಾಡಿ ತೋರಿಸುವ ಹೊಣೆಯೂ ನಮ್ಮ ಮೇಲಿದೆ.

ಶ್ರೀಮತಿ ಜಯಾದೇವಿ ತಾಯಿ ಲಿಗಾಡೆ, ೪೮ನೆಯ ಸಾಹಿತ್ಯ ಸಮ್ಮೇಳನ, ಮಂಡ್ಯ

ಟೀ ಸೇವನೆಯ ಬಿಡುವಿನಲ್ಲಿ ಚರ್ಚಿಲ್ "ನಾನು ಇಂಗ್ಲಿಷಿನವನಾಗಿ ಹುಟ್ಟದೆ ಇದ್ದಿದ್ದರೆ ಅಮೆರಿಕದವನಾಗಿ ಹುಟ್ಟಬಯಸುತ್ತಿದ್ದೆ" ಎಂದು ನುಡಿದ. ರೂಸ್ವೆಲ್ಟ್ "ನಾನು ಅಮೆರಿಕದವನಾಗಿ ಹುಟ್ಟದೆ ಇದ್ದಿದ್ದರೆ ಇಂಗ್ಲಿಷಿನವನಾಗಿ ಹುಟ್ಟಬಯಸುತ್ತಿದ್ದೆ" ಎಂದು ನುಡಿದ. ಈರ್ವರೂ ಸ್ಟಾಲಿನ್ ಏನು ಹೇಳುತ್ತಾನೋ ಎಂದು ಕಾದರು. ಆತ ಹುಸಿನಗು ಚೆಲ್ಲುತ್ತ ಹೇಳಿದನಂತೆ: "ನಾನು ರಷ್ಯನ್ನನಾಗಿ ಹುಟ್ಟದೇ ಇದ್ದಿದ್ದರೆ

ನನಗೆ ನಾನೇ ನಾಚಿಕೊಳ್ಳುತ್ತಿದ್ದೆ." ಇದು ತಾಯ್ನಾಡಿನ ಮೇಲಣ ಕಟ್ಟಭಿಮಾನ, ವೀರಾಭಿಮಾನ, ಉದಾತ್ತಾಭಿಮಾನ....... ಕನ್ನಡ ಭಾಷೆ ಸಾಕಾದಷ್ಟು ಶ್ರೀಮಂತಿಕೆಯನ್ನು ಇನ್ನೂ ಹೊಂದಿಲ್ಲ ಎಂದು ಕೆಲವರಿಗೆ ತೋರಿಬಂದರೆ ನಾವು ಸಿಟ್ಟೇಳಬೇಕಾದ್ದಿಲ್ಲ; ಅವರಿಗೆ ಈ ಜವಾಬು ಈಯೋಣ : ಪಾರಿಭಾಷಿಕ ಶಬ್ದಗಳಾಗಲಿ, ಇತರ ಅವಶ್ಯಕ ಸಮಾನಪದಗಳಾಗಲಿ ಪಠ್ಯಪುಸ್ತಕಗಳಾಗಲಿ ಆಧಾರಗ್ರಂಥಗಳಾಗಲಿ ಮೇಲಿನಿಂದ ದೈವಿಕವಾಗಿ ಉದುರುವುದಿಲ್ಲ, ಆಕಸ್ಮಿಕವಾಗಿ ಮಣ್ಣಿನಿಂದ ಚಿಗುರುವುದಿಲ್ಲ; ಪುರುಷಪ್ರಯತ್ನದಿಂದಲೇ ಅವು ಉತ್ಪತ್ತಿಗೊಳ್ಳುತ್ತವೆ.

ಎಸ್. ವಿ. ರಂಗಣ್ಣ, ೪೯ನೆಯ ಸಾಹಿತ್ಯ ಸಮ್ಮೇಳನ, ಶಿವಮೊಗ್ಗ

ನಾವು ಕೆಲವರು ಯಾವ ಯಾವ ಭಾಷೆಗಳನ್ನು ಕಲಿತರೂ ಅಲ್ಲಲ್ಲಿ ಕಲಿತಿದ್ದನ್ನು ನಮ್ಮ ಜನರಿಗೆ ಸುಲಭವಾಗಿ ಅರ್ಥವಾಗುವ ಕನ್ನಡದಲ್ಲಿ ತಿಳಿಸೋಣ.

ಜಿ. ಪಿ. ರಾಜರತ್ನಂ, ೫೦ನೆಯ ಸಾಹಿತ್ಯ ಸಮ್ಮೇಳನ, ದೆಹಲಿ

ಎರಡನೆಯದಾಗಿ ಇರುವ ಇನ್ನೊಂದು ಮುಖ್ಯ ದೋಷ ನಮ್ಮ ಶಿಕ್ಷಣ ಪದ್ಧತಿಯ ಜೊತೆಗೇ ಅನೇಕ ಶತಮಾನಗಳಿಂದ ಬೆಳೆದು ಬೇರು ಬಿಟ್ಟುಕೊಂಡಿರುವ ಗಿಳಿಪಾಠದ, ಉರುಹೊಡೆಯುವ ಇನ್ನೊಬ್ಬರು ಹೇಳಿದ್ದನ್ನು ಬಾಯಿಪಾಠ ಮಾಡಿ ಪಂಡಿತನೆನ್ನಿಸಿಕೊಳ್ಳುವ ಪದ್ಧತಿ.

ಎಂ. ಗೋಪಾಲಕೃಷ್ಣ ಅಡಿಗ, ೫೧ನೆಯ ಸಾಹಿತ್ಯ ಸಮ್ಮೇಳನ, ಧರ್ಮಸ್ಥಳ

ಜನಸಮುದಾಯವನ್ನು ತೆಗೆದುಕೊಂಡರೆ ಇಂಗ್ಲಿಷ್ ಎಂದಿಗೂ ಸಾಮಾನ್ಯ ಭಾಷೆಯಾಗಲಾರದು. ಈ ರೀತಿಯಲ್ಲಿ ಅನ್ಯಭಾಷೆಗೆ ಸರ್ವಜನಸೇವ್ಯವಾದ ದೇಶಭಾಷೆಗಳು ತಮಗಿರುವ ತ್ರಾಣದಿಂದ ಅವಕಾಶವನ್ನು ಕೊಡದೆ ಇರುವಾಗ, ಅವುಗಳನ್ನೇ ಅಭಿವೃದ್ಧಿಪಡಿಸಿ ಈ ಕಾಲದ ಅಭಿಪ್ರಾಯಗಳಿಗೆ ತಕ್ಕಂತೆ ಉದ್ಧಾರವಾದ ದೇಶಾಭಿಮಾನ ಹುಟ್ಟಿ ವೃದ್ಧಿಹೊಂದುವುದಕ್ಕೆ ಬೇಕಾದ ನಾನಾ ವಿಷಯ ಜ್ಞಾನಾರ್ಜನೆಗೆ ಸಾಧಕವಾಗುವಷ್ಟು ಯೋಗ್ಯವಾಗಿ ಮಾಡುವುದು ಅವಶ್ಯಕವಲ್ಲವೆ?".........

ಇಂಗ್ಲಿಷ್ ಭಾಷೆ ಮತ್ತು ವಿದ್ಯಾಭ್ಯಾಸ ಕ್ರಮ ಭಾರತಕ್ಕೊದಗಿರುವ ದೊಡ್ಡ ಪೀಡೆಯೆಂದೂ ಶಾಪವೆಂದೂ ಅದರಿಂದ ಭಾರತೀಯ ತರುಣರು ದುರ್ಬಲರೂ ನಿಷ್ಪ್ರಯೋಜಕರೂ ನಾಡಿಗೆ ಪರಕೀಯರೂ ಆಗುತ್ತಿದ್ದಾರೆಂದೂ ಗಾಂಧೀಜಿಯವರು ಒತ್ತಿ ಒತ್ತಿ ಹೇಳಿದ್ದಾರೆ. ಇಂಗ್ಲಿಷ್ ಭಾಷೆ ಅಂತರರಾಷ್ಟ್ರೀಯ ಮಾಧ್ಯಮ ವಾಗುತ್ತದೆಂಬುದು ಕೇವಲ ಕಟ್ಟುಕತೆ ಎಂದು ಲೋಹಿಯಾ ಅವರು ಕೈ ಎತ್ತಿ ಕೂಗಿದ್ದಾರೆ..... ನಾವು ಪರಭಾಷೆಯನ್ನು ನಮ್ಮ ಶಾಲಾಕಾಲೇಜುಗಳ ಹುಡುಗರ ಮೇಲೆ ಹೇರುವುದರಿಂದ ಅವರಲ್ಲಿರುವ ನೈಜ ಶಕ್ತಿಗಳು ವಿಕಾಸಹೊಂದದೆ

ಕಮರಿಹೋಗಿ ವಿಕಲರಾಗುತ್ತಾರೆ ಎನ್ನುವುದು ಎಲ್ಲ ದೇಶಭಕ್ತರ ಮತ್ತು ದೇಶಭಕ್ತಿಯುಳ್ಳ ವಿದ್ವಾಂಸರ ಮತವಾಗಿದೆ........

ವೈಜ್ಞಾನಿಕ ಜ್ಞಾನ ಬೆಳೆದಂತೆಲ್ಲ ಬಾಹ್ಯ ಜಗತ್ತಿಗೂ ಮಾನವ ಜೀವಿತಕ್ಕೂ ಇರುವ ಅನಿವಾರ್ಯ ಸಂಬಂಧಗಳಲ್ಲಿ ಅಂಧಶ್ರದ್ಧೆ ಕಡಿಮೆಯಾಗಿ ಅಂತರಾತ್ಮೋಪಾಸನೆ ಬೆಳೆಯುತ್ತದೆ ನಮ್ಮ ಜನರಲ್ಲಿ. ಈ ವೈಜ್ಞಾನಿಕ ಜ್ಞಾನವನ್ನು ಕನ್ನಡನುಡಿಗೆ ತುಂಬಿ ಜನರ ಇಂಗ್ಲಿಷ್ ವ್ಯಾಮೋಹವನ್ನು ತಪ್ಪಿಸುವಲ್ಲಿ ನಮ್ಮ ವಿದ್ವಾಂಸರು ಪ್ರವೃತ್ತರಾಗಿರುವುದು ತುಂಬಾ ನೆಮ್ಮದಿಯ ಸಂಗತಿ.

ಪು. ತಿ. ನರಸಿಂಹಚಾರ್, ೫೩ನೆಯ ಸಾಹಿತ್ಯ ಸಮ್ಮೇಳನ, ಚಿಕ್ಕಮಗಳೂರು

ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಕನ್ನಡ ಮಾಧ್ಯಮವಿರಬೇಕೆಂಬುದು ಒಪ್ಪಿತ ತತ್ವ. ಆದರೆ ಕಾರ್ಯಾಚರಣೆಯಲ್ಲಿ ವೇಗವಿಲ್ಲದಿರುವುದು ಕಂಡುಬರುತ್ತದೆ. ಶಿಕ್ಷಣ ಮಾಧ್ಯಮದ ಯಶಸ್ಸಿಗೆ ಬೇಕಾದ ಎಲ್ಲ ಅನುಕೂಲತೆ ಒದಗಿಸುವುದು; ವಾತಾವರಣ ನಿರ್ಮಿಸುವುದು ಮುಂತಾದ ಕಾರ್ಯಗಳು ಸರಕಾರವನ್ನೇ ಹೆಚ್ಚು ಅವಲಂಬಿಸಿದೆ ಯೆಂದು ಮತ್ತೆ ಹೇಳಬೇಕಾಗುವುದು.

ಇಂಗ್ಲಿಷ್ ಮಾಧ್ಯಮದ ಶಾಲೆಗಳ ಸಂಖ್ಯೆ ದಿನದಿನಕ್ಕೆ ಹೆಚ್ಚು ಪ್ರಭಾವಶಾಲಿಯಾಗಿ ಬೆಳೆಯುತ್ತಲಿವೆ. ನಮ್ಮ ಜನರಿಗೆ ಇಂಥ ಶಾಲೆಗಳ ಬಗ್ಗೆ ಅಂಧ ವ್ಯಾಮೋಹ ಹೆಚ್ಚುತ್ತಲಿದೆ. ಕನ್ನಡವನ್ನು ಕೀಳರಿಮೆಯಿಂದ ಕಾಣುವ ಪ್ರವೃತ್ತಿ ಇದಕ್ಕೆ ಕಾರಣ. ಕನ್ನಡದಲ್ಲಿ ನಮ್ಮ ಜೀವನಾಡಿ ಇದೆ; ಇದರ ಬಲವೇ ನಮ್ಮ ಬಲ ಎಂದು ಅಭಿಮಾನ ತಾಳಬೇಕಾದುದು ಇಂದಿನ ಅವಶ್ಯಕತೆ. ಜನತೆ, ಸರಕಾರ ಈ ದಿಶೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಡಾ. ಶಂಬಾ ಜೊಶಿ, ೫೪ನೆಯ ಸಾಹಿತ್ಯ ಸಮ್ಮೇಳನ, ಮಡಿಕೇರಿ

ಗ್ರಾಮಾಂತರಗಳಲ್ಲಿ ಇಂಗ್ಲಿಷ್ ವ್ಯಾಮೋಹ ಇನ್ನೂ ಹೆಚ್ಚಾಗಿದೆ. ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ. ಅದಕ್ಕೆ ಕಾರಣ ಪಟ್ಟಣಗಳವರ ಇಂಗ್ಲಿಷ್ ಪ್ರೇಮ. ಪಟ್ಟಣಗಳವರು ಸ್ತ್ರೀ ಪುರುಷರು ಇಂಗ್ಲಿಷನ್ನು ಕಲಿತು ಎಲ್ಲರೂ ಅಧಿಕಾರ, ಸಂಬಳ, ದೊಡ್ಡ ನೌಕರಿಗಳನ್ನು ಮಾಡುತ್ತಿರುವುದನ್ನು ನೋಡಿ ಹಳ್ಳಿಗಳವರೂ ಹಾಗೆಯೇ ಇರಲು ಬಯಸುತ್ತಾರೆ. ಇದಕ್ಕಾಗಿ ಇವರು ಹಳ್ಳಿಗಳಲ್ಲಿ ಸಹ ಇಂಗ್ಲಿಷ್ ಶಾಲೆಗಳನ್ನು ಸ್ಥಾಪಿಸುವವರಿಗೆ ಸಾವಿರಾರು ರೂಪಾಯಿ ಡೊನೇಷನ್ ಕೊಟ್ಟು ಮಕ್ಕಳನ್ನು ಎ ಬಿ ಸಿ ಡಿ ಕಲಿಯಲು ಕಳಿಸುತ್ತಾರೆ....... ಅವರು 'ಸಮಾಜದಲ್ಲಿ ಪ್ರತಿಷ್ಠಿತರಾದವರು ಮೇಲುದರ್ಜೆಯವರು ತಾವು ಮಾತ್ರ ಇಂಗ್ಲಿಷ್ ಕಲಿತು ಸುಖವಾಗಿರುತ್ತ, ಹಳ್ಳಿಗರಿಗೆ ಬೇಡವೆಂದು ಹೇಳಿ ಅವರನ್ನು ಅಜ್ಞಾನ ಕೂಪದಲ್ಲಿ, ಬಡತನದಲ್ಲಿ ಕೆಡಹುತ್ತಾರೆಂದು' ಆಕ್ಷೇಪಿಸುತ್ತಾರೆ. ಇಂಗ್ಲಿಷ್ ಶಾಲೆಗಳನ್ನು ಎಲ್ಲಿಯೂ ಮಂಜೂರು ಮಾಡಕೂಡದು....

ತನ್ನ ದೇಶಭಾಷೆಯಲ್ಲಿ ಆಲೋಚನೆ ಮಾಡುವುದು ಎಷ್ಟೇ ದಕ್ಷವಾದ ಅನ್ಯಭಾಷಾ ಅಧ್ಯಯನದಿಂದ ಮಾಡುವುದಕ್ಕಿಂತ ಹೆಚ್ಚು ಪೂರ್ಣವಾಗುತ್ತದೆ. ತಾಯಿನುಡಿಯಲ್ಲಿ ಆಲೋಚನೆ ಮಾಡುವುದರಿಂದ ಅತ್ಯಂತ ಸೂಕ್ಷ್ಮವಾದ ಸಂವೇದನಾಶೀಲ ಅನುಭವಗಳು ಸ್ಫುರಿಸುತ್ತವೆಂಬುದಕ್ಕೆ ಹನ್ನೆರಡನೆ ಶತಮಾನದ ವೀರಶೈವ ವಚನಗಳೇ ಸಾಕ್ಷಿ.

ಗೊರೂರು ರಾಮಸ್ವಾಮಿ ಅಯ್ಯಂಗಾರ್, ೫೫ನೆಯ ಸಾಹಿತ್ಯ ಸಮ್ಮೇಳನ, ಶಿರಸಿ

೧೯ನೆಯ ಶತಮಾನದ ಯುರೋಪಿನಲ್ಲಿ ಬೆಳೆದು ಪುಷ್ಟವಾದ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಮಾನವಶಾಸ್ತ್ರ, ಸಮಾಜಶಾಸ್ತ್ರ, ಭೌತವಿಜ್ಞಾನಶಾಸ್ತ್ರಗಳು ನಮ್ಮಲ್ಲಿದ್ದವೆ? ಇಂಗ್ಲಿಷ್ ವಿದ್ಯಾಭ್ಯಾಸದಿಂದಾಗಿ ಇವೆಲ್ಲ ನಮಗೆ ದೊರಕಿದವು.

ಇಂಗ್ಲಿಷ್ ವಿದ್ಯಾಭ್ಯಾಸವಿಲ್ಲದಿದ್ದರೆ ಇವೆಲ್ಲ ನಮ್ಮಲ್ಲಿ ಬೆಳೆಯುತ್ತಲೇ ಇರಲಿಲ್ಲವೆ? ಬ್ರಿಟಿಷರು ಇಲ್ಲಿಗೆ ಬರದಿದ್ದರೂ ಅವನ್ನು ನಮ್ಮ ಮೇಲೆ ಹೇರದಿದ್ದರೂ ನಾವಾಗಿಯೇ ಬಹುಶಃ ಬೆಳೆಸಿಕೊಳ್ಳುತ್ತಿದ್ದೆವು. ಆದರೆ ಅದು ತಡವಾಗುತ್ತಿತ್ತು.

ಎ. ಎನ್. ಮೂರ್ತಿರಾವ್, ೫೬ನೆಯ ಸಾಹಿತ್ಯ ಸಮ್ಮೇಳನ, ಕೈವಾರ

ಇಂಗ್ಲಿಷ್ ನಮಗೆ ಪ್ರಪಂಚಕ್ಕಿರುವ ಕಿಟಕಿ ಎಂಬುದರಲ್ಲಿ ಸಂದೇಹವಿಲ್ಲ. ಹಾಗೆಂದು ಅದನ್ನು ತಲೆಯ ಮೇಲೆ ಹೇರಿಕೊಳ್ಳಲಾಗುವುದಿಲ್ಲ. ಇಂಗ್ಲಿಷಿನ ದುರ್ದೈವವೆಂದರೆ ಅದರ ನಿಜವಾದ ಸಾರ್ಥಕವಾದ ಬಳಕೆಯಾಗದೆ ಕೇವಲ ಒಂದು ಪ್ರತಿಷ್ಠೆಯ ವಿಷಯವಾಗಿರುವುದು. ಕಾನ್ವೆಂಟುಗಳ ಶಿಕ್ಷಣದಲ್ಲಿ ಅದು ಗಿಳಿಪಾಠವಾಗಿ ನಮ್ಮ ಬಾಲಕ ಬಾಲಕಿಯರಲ್ಲಿ ಒಂದು ಕೃತಕವಾದ ವ್ಯಕ್ತಿತ್ವವನ್ನು ಮೂಡಿಸುತ್ತಿದೆ. ಈ ಬಗೆಯ ಶಿಕ್ಷಣವೇ ಪರಮ ಶ್ರೇಷ್ಠವಾದುದೆಂದು ನಮ್ಮಲ್ಲಿ ಅನೇಕರು ಭ್ರಮಿಸಿದ್ದಾರೆ. ಇಂಗ್ಲಿಷ್ ನಮಗೆ ಬೇಕು ನಿಜ. ಆದರೆ ಎಷ್ಟು ಬೇಕು, ಹೇಗೆ ಬೇಕು ಎನ್ನುವುದನ್ನು ಮಾತ್ರ ಯಾರೂ ಯೋಚಿಸಿಲ್ಲ. ನಮ್ಮ ಶಿಕ್ಷಣ ವ್ಯವಸ್ಥೆ ಸಿದ್ಧಾಂತವನ್ನು ಅವಲಂಬಿಸಿದ್ದು; ವಾಸ್ತವಿಕತೆಯನ್ನು ಆಧರಿಸಿದ್ದಲ್ಲ. ಇಂಗ್ಲಿಷಿಗಾಗಿ ಕೋಟಿ ಕೋಟಿ ರೂಪಾಯಿಗಳನ್ನು ನೂರಾರು ವರ್ಷಗಳ ಅವಧಿಯಲ್ಲಿ ವ್ಯಯ ಮಾಡಿದ್ದರೂ ಅದು ಜನರ ಹತ್ತಿರ ಬರಲು ಸಾಧ್ಯವಾಗಿಲ್ಲ. ಅದು ಜನಭಾಷೆಯಲ್ಲ. ಶಾಲಾ ಶಿಕ್ಷಣದ ಕೊನೆಯಲ್ಲಿ ಎಷ್ಟೊಂದು ಜನ ಶಿಕ್ಷಣವನ್ನು ಮುಂದುವರಿಸದೆ ಹೋಗುತ್ತಾರೆಂಬುದನ್ನು ಗಮನಿಸಿದರೆ ಇಂಗ್ಲಿಷ್ ಶಿಕ್ಷಣದ ಅಪವ್ಯಯ ನಮಗೆ ತಿಳಿಯುತ್ತದೆ. ಕಲಿಸುವ ಇಂಗ್ಲಿಷನ್ನು ಕೇವಲ ಭಾಷೆಯನ್ನಾಗಿ ಚೆನ್ನಾಗಿ ಕಲಿಸಬೇಕು. ಅದು ವ್ಯವಹಾರಕ್ಕೆ ಬರುವಂತೆ ಚೆನ್ನಾಗಿ ಕಲಿಸಬೇಕು.... ಇದು ಕನ್ನಡ ಕಲಿಕೆಗೂ ಅನ್ವಯವಾಗುತ್ತದೆ, ಆ ಮಾತು ಬೇರೆ. ಇಂಗ್ಲಿಷ್ ಬೋಧನೆ ಎನ್ನುವುದು ಈಗ ನಮ್ಮ ದೇಶದಲ್ಲಿ ಒಂದು ದೊಡ್ಡ ಉದ್ಯಮ ಎನಿಸಿಬಿಟ್ಟಿದೆ. ಇಂಗ್ಲಿಷನ್ನು

ಪರಿಣಾಮಕಾರಿಯಾಗಿ ಕಲಿಸುವ ಕಡೆ ಯಾರೂ ಗಮನ ಕೊಟ್ಟಿಲ್ಲ. ಅಗತ್ಯವಾದವರಿಗೆ ಕೇವಲ ಭಾಷೆಯನ್ನು ಕಲಿಸಬೇಕು. ಆಯ್ದುಕೊಳ್ಳುವವರಿಗೆ ಸಾಹಿತ್ಯವನ್ನು ಬೋಧಿಸಬೇಕು.

ಇಂಗ್ಲಿಷನ್ನು ಭಾಷೆಯನ್ನಾಗಿ ಕಲಿಸಿ, ವಿಷಯುಗಳನ್ನು ನಮ್ಮ ನಮ್ಮ ಭಾಷೆಗಳಲ್ಲಿಯೇ ಕಲಿಸಬೇಕು. ಮಾಧ್ಯಮದ ಪ್ರಶ್ನೆ ನಮ್ಮಲ್ಲಿ ಬಗೆಹರಿಯಲಾರದ ಸಮಸ್ಯೆಯಾಗಿದೆ. ಶಿಕ್ಷಣತಜ್ಞರೆನಿಸಿಕೊಂಡವರಿಗೂ ಅನೇಕ ಸಲ ಭಾಷೆಯನ್ನು ಕಲಿಸುವುದು, ಭಾಷೆಯ ಮೂಲಕ ಕಲಿಸುವುದು ಇವುಗಳ ನಡುವಿನ ಅಂತರ ತಿಳಿದಿರುವುದಿಲ್ಲ. ಕನ್ನಡ ಮಾಧ್ಯಮವಾಗಬೇಕು ಎಂದರೆ ಇಂಗ್ಲಿಷನ್ನು ಕಲಿಸಬಾರದು ಎಂದಲ್ಲ. ನಮ್ಮ ಭಾಷೆಯಲ್ಲಿ ಓದಿದ್ದೇ ಮೈಗೆ ಹತ್ತುವುದು. ಆಧುನಿಕ ವಿಜ್ಞಾನವನ್ನು ಕಲಿಯುವುದು ಕಲಿಸುವುದು ನಮ್ಮ ಭಾಷೆಗಳ ಮೂಲಕ ಸಾಧ್ಯವಾಗುವುದಿಲ್ಲ ಎನ್ನುವುದು ಒಂದು ಮೂಢನಂಬಿಕೆ. ಕನ್ನಡದ ಮೂಲಕ ಕಲಿತೂ ಶ್ರೇಷ್ಠ ವಿಜ್ಞಾನಿಯಾಗಬಹುದು ಎನ್ನುವುದಕ್ಕೆ ನಮ್ಮವರೇ ಆದ ಡಾ. ಸಿ. ಎನ್. ಆರ್. ರಾವ್ ಅತ್ಯುತ್ತಮ ಉದಾಹರಣೆಯಾಗಿದ್ದಾರೆ. ಉನ್ನತ ಶಿಕ್ಷಣವನ್ನು ಕನ್ನಡದ ಮೂಲಕ ಕಲಿಯುವುದು ಸಾಧ್ಯವಿಲ್ಲವೆಂದು ಕನ್ನಡಕ್ಕೆ ಹೋರಾಡುವವರೂ ಆಗಾಗ ಹೇಳುವುದನ್ನು ಕೇಳಿ ನನಗೆ ಆಶ್ಚರ್ಯವೆನಿಸಿದೆ. ಜನರಿಗೆ ಇಂಗ್ಲಿಷಿನ ಮೇಲೆ ಮೋಹ ಬೆಳೆಯಲು ಪ್ರತಿಷ್ಠೆಯೇ ಕಾರಣ.

ನಮ್ಮ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯ ಅವ್ಯವಸ್ಥೆ ಇದಕ್ಕೆ ಮತ್ತೊಂದು ಕಾರಣವೆಂದು ನಾನು ಭಾವಿಸುತ್ತೇನೆ. ಪ್ರತಿಯೊಬ್ಬ ತಂದೆತಾಯಿಗಳೂ ತಮ್ಮ ಮಕ್ಕಳು ಒಳ್ಳೆಯ ಶಾಲೆಯಲ್ಲಿ ಓದಬೇಕು, ಒಳ್ಳೆಯ ಶಿಕ್ಷಣ ಪಡೆಯಬೇಕು, ಅವರ ಭವಿಷ್ಯ ಉಜ್ವಲವಾಗಿರಬೇಕು ಎಂದು ಆಶಿಸುತ್ತಾರೆ. ಅವರು ನ್ಯಾಯವಾಗಿಯೇ ಅಸಹ್ಯ ಎನಿಸುವ ನಮ್ಮ ಸಾರ್ವಜನಿಕ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸಲು ಇಷ್ಟಪಡುವುದಿಲ್ಲ. ಕುಸಿದು ಬೀಳುತ್ತಿರುವ ಕಟ್ಟಡಗಳು, ದೊಡ್ಡಿಯಾದ ತರಗತಿಗಳು, ಅಧ್ಯಾಪಕರಿಲ್ಲದ ಶಾಲೆಗಳು, ಪಾಠ ಹೇಳದ ಅನರ್ಹ ಅಧ್ಯಾಪಕರು, ದಿನ ಬೆಳಗಾದರೆ ರಜ, ಶಿಸ್ತಿಲ್ಲದ ವ್ಯವಸ್ಥೆ, ಮೂತ್ರದ ವಾಸನೆಯ ಪರಿಸರ,– ಇದು ನಮ್ಮ ಸಾರ್ವಜನಿಕ ಶಾಲೆಗಳ ಸ್ಥಿತಿ. ಆದ್ದರಿಂದ ಸಾರ್ವಜನಿಕರು ಅನಿವಾರ್ಯವಾಗಿ ಖಾಸಗಿ ಉದ್ಯಮವಾದ ಇಂಗ್ಲಿಷ್ ಶಾಲೆಗಳ ಕಡೆ ಹೋಗುತ್ತಾರೆ. ಎಲ್ಲಿಯವರೆಗೆ ನಮ್ಮ ಸಾರ್ವಜನಿಕ ಶಾಲೆಗಳ ಸ್ಥಿತಿಗತಿಗಳು ಉತ್ತಮವಾಗುವುದಿಲ್ಲವೋ ಅಲ್ಲಿಯವರೆಗೆ ಶಿಕ್ಷಣದಲ್ಲಿ ಕನ್ನಡ ಆಕರ್ಷಕವೆನ್ನಿಸುವುದಿಲ್ಲ. ಹಿಂದೆ ಶಿಕ್ಷಣ ಸಚಿವರಾಗಿದ್ದ ಬಿ.ರಾಚಯ್ಯನವರ ಸಮ್ಮುಖದಲ್ಲೊಮ್ಮೆ ಈ ವಿಷಯವನ್ನು ನಿವೇದಿಸಿಕೊಂಡಿದ್ದೆ. ಮುಂದೆ ಅವರು ಪ್ರತಿ ತಾಲ್ಲೂಕಿನಲ್ಲಿಯೂ ಒಂದೊಂದು ಮಾದರಿ ಶಾಲೆಯನ್ನು ಸ್ಥಾಪಿಸುವುದಾಗಿ ಘೋಷಿಸಿದರು. ಮಂತ್ರಿಗಳ ಘೋಷಣೆಗಳೆಲ್ಲ

ಕಾರ್ಯರೂಪಕ್ಕೆ ಬಂದಿದ್ದರೆ ನಮ್ಮ ನಾಡು ಸ್ವರ್ಗವಾಗುತ್ತಿತ್ತು! ಇಂಗ್ಲಿಷ್ ಮಾಧ್ಯಮ ಹೆಚ್ಚುತ್ತಿದ್ದರೂ ಮೇಲಿನ ತರಗತಿಗಳಲ್ಲಿ ಕನ್ನಡವನ್ನು ಪರೀಕ್ಷಾ ಮಾಧ್ಯಮವನ್ನಾಗಿ ಆಯ್ದುಕೊಳ್ಳುವ ಪ್ರವೃತ್ತಿ ಬೆಳೆಯುತ್ತಿದೆ. ಅಂದರೆ ಪ್ರತಿಷ್ಠೆಗೆ ಇಂಗ್ಲಿಷ್ ಬೇಕು: ಪರೀಕ್ಷೆ ಪಾಸು ಮಾಡಲು ಕನ್ನಡ ಸಾಕು. ಸಮಾಜವಿಜ್ಞಾನ, ಮಾನವಿಕಗಳಲ್ಲಿ ಓದುವವರ ಸಂಖ್ಯೆಯೂ ಹೆಚ್ಚುತ್ತಿದೆ. ಆದರೆ ಅದು ನಮ್ಮ ನೆರೆಯ ಮಹಾರಾಷ್ಟ್ರದ ಪ್ರಮಾಣದಲ್ಲಿ ಇಲ್ಲ. ಈಚೆಗೆ ಮಹಾರಾಷ್ಟ್ರದ ಒಬ್ಬ ಕುಲಪತಿಗಳು ತಮ್ಮಲ್ಲಿ ನೂರಕ್ಕೆ ತೊಂಬತ್ತೆಂಟು ವಿದ್ಯಾರ್ಥಿಗಳು ಈ ವಿಷಯಗಳನ್ನು ಮರಾಠಿಯಲ್ಲೇ ಓದುತ್ತಿದ್ದಾರೆಂದು ಹೇಳಿದರು. ಪೋಷಕರ ಮೌಢ್ಯ, ಅಧ್ಯಾಪಕರ ಕೀಳರಿಮೆ, ಸರ್ಕಾರದ ತಾತ್ಸಾರ, ಇಂಗ್ಲಿಷಿನ ಪಟ್ಟಭದ್ರತೆ – ..... ಇವು ಹೋದಾಗ ಮಾತ್ರ ಕನ್ನಡ ಮಾಧ್ಯಮ ಯಶಸ್ವಿಯಾಗುತ್ತದೆ.......

ಇಂಗ್ಲಿಷ್ ನಮಗೆ ಬೇಕು. ಆದರೆ ನಮ್ಮ ಭಾಷೆಯ ಬದಲಿಗೆ ಅಲ್ಲ. ಇಂಗ್ಲಿಷ್ ಒಂದೇ ಅಲ್ಲ, ಇನ್ನೂ ಹಲವು ಭಾಷೆಗಳು ನಮಗೆ ಬೇಕು. ಒಂದೊಂದು ಭಾಷೆಯೂ ಒಂದೊಂದು ವರ; ಒಂದೊಂದು ಜಗತ್ತು. ಆದರೆ ಯಾವ ಭಾಷೆ ಬೇಕು ಎನ್ನುವುದು ಅಗತ್ಯವನ್ನು ಅನುಸರಿಸಿದ್ದು, ಆಯ್ಕೆಯನ್ನು ಅವಲಂಬಿಸಿದ್ದು. ಹೊರ ಜಗತ್ತಿನ ಸಂಪರ್ಕಕ್ಕಾಗಿ ನಮಗೆ ಇಂಗ್ಲಿಷ್ ಬೇಕು. ಆದರೆ ಅದೇ ಸರ್ವಸ್ವವಾಗಿ ಅಲ್ಲ. ಇಂಗ್ಲಿಷ್ ಮೂಲಕವಾದ ಶಿಕ್ಷಣ ಕುಂಡದಲ್ಲಿ ನೆಟ್ಟ ಗಿಡದಂತೆ. ಬೇರು ನೆಲಕ್ಕಿಳಿಯುವುದಿಲ್ಲ. ಭೂಮಿ ಸಾರವನ್ನು ಅವು ಗ್ರಹಿಸುವುದಿಲ್ಲ. ಹಾಕಿದ ಹಿಡಿ ಗೊಬ್ಬರದಲ್ಲೇ ಅದು ಜೀವಮಾನವನ್ನು ಕಳೆಯಬೇಕು. ಇದರಿಂದಾಗಿ ಅತ್ತಲೂ ಇಲ್ಲದ, ಇತ್ತಲೂ ಸಲ್ಲದ ತ್ರಿಶಂಕುಗಳನ್ನು ನಮ್ಮ ಈ ಶಿಕ್ಷಣ ನಿರ್ಮಿಸುತ್ತಿದೆ. ಇಂಗ್ಲಿಷ್ ಬೋಧನೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಧೋರಣೆ ಸಿದ್ಧಗೊಳ್ಳಬೇಕು. ಓದಲು, ಬರೆಯಲು, ಗ್ರಹಿಸಲು ಬರುವಂಥ ಇಂಗ್ಲಿಷ್ ಬೋಧನೆ ನಮ್ಮ ಅಗತ್ಯವಾಗಿದೆ. ಇದಾದರೂ ದೇಶಭಾಷೆಗಳಿಗೆ ಅಡ್ಡಿಯಾಗದಂತೆ ರೂಪಗೊಳ್ಳಬೇಕು.

ಹಾ. ಮಾ. ನಾಯಕ, ೫೭ನೆಯ ಸಾಹಿತ್ಯ ಸಮ್ಮೇಳನ, ಬೀದರ್

ಮನುಷ್ಯನಿಂದ ಹುಟ್ಟಿದುದು ಮಾತು; ಆದರೆ ನರನನ್ನು ಮಾನವನನ್ನಾಗಿ ಮಾಡಿದುದು ಮಾತು. ಯಾಕೆಂದರೆ ಮಾನವ ಸಂಸ್ಕೃತಿಯನ್ನು ರೂಪಿಸುವ ಜ್ಞಾನ - ವಿಜ್ಞಾನ ಕಲೆಗಳೆಲ್ಲ ಮಾತಿನಲ್ಲಿಯೇ ಮೈದಾಳಬೇಕು. ಮಾತುಗಳಲ್ಲೆಲ್ಲ ಮಾತೆ ಕಲಿಸಿದ ಮಾತೇ ಅವರವರಿಗೆ ಜೀವಾತು. ಅಂತೆಯೇ ಮಾತೃಭಾಷೆ ಅವರವರ ಶಕ್ತಿ ವಿಕಾಸಕ್ಕೆ, ಅಂತರಂಗ ಪ್ರಕಾಶಕ್ಕೆ ಮಾತೃಕೆ. ಆದ್ದರಿಂದ ನಮ್ಮ ಮಾತೃಭಾಷೆಯಾದ ಕನ್ನಡ ನಮ್ಮೆಲ್ಲರ ಪೂರ್ಣಾಭ್ಯುದಯಕ್ಕೆ, ಸರ್ವಾಂಗೀಣ ಪ್ರಗತಿಗೆ ಮೂಲಾಧಾರ. ಪ್ರಯತ್ನ ಬಲದಿಂದ ಮಾನವನ ಬುದ್ಧಿಯ ಭಾಷೆ ಯಾವುದಾದರೂ ಆಗಬಹುದು,

ಅದೂ, ಅಪೂರ್ಣವಾಗಿ! ಆದರೆ ಅವನ ಹೃದಯದ ಭಾಷೆಯಾಗಬಲ್ಲದು ಒಂದೇ ಒಂದು; ಅದೇ ಮಾನವ ಮಾತೃಭಾಷೆ. ಇಷ್ಟೇ ಅಲ್ಲ, ಬೇರೆ ಭಾಷೆಯನ್ನು ಕಲಿಯಲು ಪಡಬೇಕಾದ ಕಷ್ಟದ ನೂರರಲ್ಲೊಂದು ಪಾಲು ಕಷ್ಟಪಟ್ಟರೂ ಅದು ಹೃದಯದ ಭಾಷೆ ಜೊತೆಗೆ ಬುದ್ಧಿಯ ಭಾಷೆಯೂ ಆಗುವುದು.

ಸಿದ್ದಯ್ಯ ಪುರಾಣಿಕ, ೫೮ನೆಯ ಸಾಹಿತ್ಯ ಸಮ್ಮೇಳನ, ಕಲಬುರ್ಗಿ

ವಿಶ್ವವಿದ್ಯಾಲಯದ ಪದವಿ ಪರೀಕ್ಷೆಗಳಲ್ಲಿ ವಿವಿಧ ವಿಷಯಗಳ ಉತ್ತರ ಪತ್ರಿಕೆಗಳನ್ನು ಕನ್ನಡದಲ್ಲಿ ಬರೆಯುವ ವಿದ್ಯಾರ್ಥಿಗಳ ಸಂಖ್ಯೆ ವರುಷದಿಂದ ವರುಷಕ್ಕೆ ಹೆಚ್ಚಾಗುತ್ತಲಿದೆ. ಆಂಗ್ಲಭಾಷೆಯಲ್ಲಿ ಉತ್ತರ ಬರೆದ ಬಹುಸಂಖ್ಯಾತ ವಿದ್ಯಾರ್ಥಿಗಳ ಇಂಗ್ಲಿಷು ತೀರ ಅಶುದ್ಧ ಹಾಗೂ ಅಸಮರ್ಪಕವಾಗಿರುತ್ತದೆ. ಅಶುದ್ಧವಾದ ಇಂಗ್ಲಿಷಿನಲ್ಲಿ ಉತ್ತರ ಬರೆಯುವುದಕ್ಕಿಂತ ಶುದ್ಧವಾದ ಕನ್ನಡದಲ್ಲಿ ಉತ್ತರ ಬರೆಯುವುದು ಲೇಸೆಂಬುದನ್ನು ನಮ್ಮ ವಿದ್ಯಾರ್ಥಿಗಳು ಕಂಡುಕೊಳ್ಳಬೇಕು......... ಕನ್ನಡ ಭಾಷೆ ಸಮೃದ್ಧವಾಗಬೇಕಾದರೆ ನಮ್ಮ ಅಧ್ಯಾಪಕರು ಕನ್ನಡದಲ್ಲಿ ವಿಷಯ ಚಿಂತನೆ ಮಾಡಬೇಕು, ಕನ್ನಡದಲ್ಲಿ ಬೋಧನೆ ಮಾಡಬೇಕು. ಆಂಗ್ಲ ಭಾಷೆಯ ಗ್ರಂಥಗಳನ್ನು ಓದಿಯೂ ಕನ್ನಡವಲ್ಲಿ ಚಿಂತನೆ ಮಾಡಬಹುದಲ್ಲವೆ?

ಈಗ ನಮ್ಮ ದೇಶದಲ್ಲಿ ಇಂಗ್ಲಿಷ್ ಭಾಷೆಯ ಮೂಲಕವೇ ಚಿಂತನೆ, ಅಭಿವ್ಯಕ್ತಿ ನಡೆಯುತ್ತಿದೆ. ಪರಕೀಯ ಭಾಷೆಯಲ್ಲಿ ಚಿಂತನೆ ಮಾಡುವುದು ಬೌದ್ಧಿಕ ಶಕ್ತಿಯನ್ನು ಕುಂಠಿತಗೊಳಿಸುತ್ತದೆ. ಇದರಿಂದ ಜಗತ್ತಿನ ಜ್ಞಾನಭಂಡಾರಕ್ಕೆ ನಮ್ಮ ಕಾಣಿಕೆ ತೀರ ಕಡಮೆಯಾಗುತ್ತಿದೆ. ಯುರೋಪಖಂಡದ ಸಣ್ಣ ಸಣ್ಣ ರಾಷ್ಟ್ರಗಳು ತಮ್ಮ ತಮ್ಮ ಭಾಷೆಗಳಲ್ಲಿ ಚಿಂತನೆ ಮಾಡಿ, ವರುವರುಷ ಅಧಿಕ ಪ್ರಮಾಣದಲ್ಲಿ ನೋಬೆಲ್ ಮೊದಲಾದ ಬಹುಮಾನ ಪಡೆಯುತ್ತಿವೆ. ಭಾರತದಂತಹ ವಿಸ್ತಾರವಾದ ದೇಶದಲ್ಲಿ ವಿಶ್ವವಿದ್ಯಾನಿಲಯ ಹಾಗೂ ರಾಷ್ಟ್ರೀಯ ಪ್ರಯೋಗಶಾಲೆಗಳು ವಿಪುಲವಾಗಿದ್ದರೂ ನೋಬೆಲ್ ಮೊದಲಾದ ಬಹುಮಾನ ಪಡೆದ ಭಾರತೀಯರ ಸಂಖ್ಯೆಯನ್ನು ಗಮನಿಸಿದರೆ ಜಾಗತಿಕ ಜ್ಞಾನಭಂಡಾರಕ್ಕೆ ನಮ್ಮ ಕಾಣಿಕೆ ಅತ್ಯಲ್ಪವೆಂದೇ ಹೇಳಬೇಕು. ಹೀಗಾಗಿ ಉಚ್ಚಶಿಕ್ಷಣದಲ್ಲಿ, ಉನ್ನತ ಸಂಶೋಧನೆಯಲ್ಲಿ ನಿರತರಾದ ಕರ್ನಾಟಕದ ಪ್ರಾಧ್ಯಾಪಕರು ಕನ್ನಡದಲ್ಲಿ ವಿಚಾರ ಮಾಡುವ ಶಕ್ತಿಯನ್ನು ಬೆಳೆಸಿಕೊಳ್ಳುವುದು ಅವಶ್ಯವೆನಿಸಿದೆ.......

ರಾಜ್ಯದಲ್ಲಿ ಜನತೆಯ ಮಾತೃಭಾಷೆಯ ಅಭಿವೃದ್ಧಿಗೆ ಮಾರಕವೆನಿಸುವಂತೆ ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುಮತಿ ದೊರೆಯುತ್ತ ನಡೆದಿದೆ. ಸ್ವಾತಂತ್ರ್ಯ ಪ್ರಾಪ್ತವಾಗಿ ನಾಲ್ಕು ದಶಕಗಳುರುಳಿವೆ. ಕರ್ನಾಟಕ ರಾಜ್ಯೋದಯವಾಗಿ ೩೪ ವರ್ಷಗಳು ಸಂದಿವೆ. ಈ ಅವಧಿಯಲ್ಲಿ ಕನ್ನಡ ಪ್ರಾಥಮಿಕ ಶಾಲೆಗಳ ಸ್ಥಿತಿ ತೀರ

ಚಿಂತಾಜನಕವಾಗಿದೆ. ಇಂಗ್ಲಿಷ್ ಮಾಧ್ಯಮ ಶಾಲೆಗಳು ನಾಯಿಕೊಡೆಗಳಂತೆ ಬೆಳೆಯುತ್ತಿವೆ. ಇಂತಹ ಶಾಲೆಗಳನ್ನು ನಡೆಸುವ ಸಂಸ್ಥೆಗಳಿಗೆ ಪ್ರಾಥಮಿಕ ಶಿಕ್ಷಣದ ಮೂಲತತ್ವಗಳ ಅರಿವಿರುವುದಿಲ್ಲ. ಇಂತಹ ಶಾಲೆಗಳನ್ನು ನಡೆಸುವುದು ಅವರ ಪಾಲಿಗೆ ಒಂದು ಉದ್ಯಮವಾಗಿಬಿಟ್ಟಿದೆ............ ಕನ್ನಡ ಕಾವಲು ಸಮಿತಿ ಅಸ್ತಿತ್ವದಲ್ಲಿರುವವರೆಗೆ ಸರಕಾರ ಅನುಮತಿಯನ್ನು ನಿರಾಕರಿಸುತ್ತಾ ಬಂದಿದ್ದಿತು. ಇನ್ನು ಮುಂದೆ ಆಂಗ್ಲ ಮಾಧ್ಯಮ ಶಾಲೆಗಳನ್ನು ಕೊಡಲಾಗದು ಎಂದು ಆಗಿನ ಸರಕಾರ ನಿರ್ಣಯವನ್ನು ಕೈಕೊಂಡು ಅದಕ್ಕೆ ಬದ್ಧವಾಗಿದ್ದಿತು. ಸರಕಾರ ಉರುಳಿತು, ಕಾವಲು ಸಮಿತಿ ಹೋಯಿತು. ಮರುದಿನ ರಾಜ್ಯಪಾಲರ ಆಡಳಿತ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಅನುಮತಿ ಕೊಡತೊಡಗಿತು. ಅದುವರೆಗೆ ಮಾಡಿದ ಪ್ರಯತ್ನವೆಲ್ಲ ಹೊಳೆಯಲ್ಲಿ ಹುಣಿಸಿಹಣ್ಣು ತೊಳೆದಂತಾಯಿತು. ಈಗ ಮತ್ತೆ ಇಂತಹ ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುಮತಿ ಕೊಡುವುದನ್ನು ಕೂಡಲೆ ನಿಲ್ಲಿಸಬೇಕೆಂದು ಆಗ್ರಹಪಡಿಸಬೇಕಾಗುತ್ತದೆ. ಆಂಗ್ಲ ಮಾಧ್ಯಮ ಶಾಲೆಗಳಿಂದ ಎಳೆಯ ಮಕ್ಕಳ ವಿಚಾರಶಕ್ತಿ ಕುಂಠಿತವಾಗುತ್ತದೆ. ಸಾಂಸ್ಕೃತಿಕವಾಗಿ ಅವರು ಮಿಕ್ಕ ಪರಿಸರದಿಂದ ಪ್ರತ್ಯೇಕಿತರಾಗುತ್ತಾರೆ. ಹೀಗಾಗುವುದರಿಂದ ಮಕ್ಕಳ ವ್ಯಕ್ತಿತ್ವ ವಿಕಸನವಾಗುವುದಿಲ್ಲ. ಮೂಲ ಸಾಂಸ್ಕೃತಿಕ ಪ್ರಭಾವದಿಂದ ಅವರು ಪರಿತ್ಯಕ್ತರಾಗುತ್ತಾರೆ. ಸ್ವತಂತ್ರ ವಿಚಾರಶಕ್ತಿಯಂತೂ ಶೂನ್ಯವಾಗುತ್ತದೆ. ಸಾರ್ವಜನಿಕರಿಗೆ ಈ ಬಗೆಯ ತಿಳಿವಳಿಕೆ ಇಲ್ಲದಿರುವುದರಿಂದಲೂ ಇಂಗ್ಲಿಷ್ ಕಲಿತರೆ ತಮ್ಮ ಮಕ್ಕಳು ಜಾಣರಾಗುವರೆಂಬ ಭಾವನೆಯಿರುವುದರಿಂದಲೂ ಆಂಗ್ಲಭಾಷಾ ವ್ಯಾಮೋಹಕ್ಕೆ ಕಲಿಯದ ಹಳ್ಳಿಗರೂ ಪಕ್ಕಾಗುತ್ತಾರೆ. ಪಟ್ಟಣಗಳಲ್ಲಿರುವ ಜನರಿಗಂತೂ ಆಂಗ್ಲಭಾಷೆಯ ಹುಚ್ಚು ಹಿಡಿದಂತಿದೆ. ಇಂತಹ ಸಮಯದಲ್ಲಿ ಸರಕಾರ ಜನತೆಗೆ ಸರಿಯಾದ ಹಾದಿಯನ್ನು ತೋರಿಸಬೇಕಾದರೆ ಇನ್ನು ಮುಂದೆ ಆಂಗ್ಲಭಾಷೆಯ ಮಾಧ್ಯಮದ ಶಾಲೆಗಳಿಗೆ ಮನ್ನಣೆ ಕೊಡಕೂಡದೆಂಬ ಹಿಂದಿನ ನಿರ್ಣಯವನ್ನು ಊರ್ಜಿತಗೊಳಿಸಿ ಅದಕ್ಕೆ ಗಟ್ಟಿಯಾಗಿ ಅಂಟಿಕೊಳ್ಳಬೇಕು.

ಆರ್. ಸಿ. ಹಿರೇಮಠ, ೫೯ನೆಯ ಸಾಹಿತ್ಯ ಸಮ್ಮೇಳನ, ಹುಬ್ಬಳ್ಳಿ

ಇನ್ನು ಇತ್ತೀಚೆಗಂತೂ ಸರ್ಕಾರದ ಅದೂರದೃಷ್ಟಿಯ ಪರಿಣಾಮದಿಂದ ಹಳ್ಳಿಹಳ್ಳಿಗಳಲ್ಲಿ ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ತೆರೆಯುವ ಅವಕಾಶವನ್ನು ವ್ಯಾಪಾರೀಮನೋಧರ್ಮದ ಖಾಸಗಿ ಸಂಸ್ಥೆಯವರಿಗೆ ವಹಿಸಿಕೊಟ್ಟು, ಬಹುಸಂಖ್ಯಾತ ಮಕ್ಕಳು ಕಲಿಯುತ್ತಿದ್ದ ಕನ್ನಡಕ್ಕೆ ದೊಡ್ಡ ವಿಪತ್ತು ಪ್ರಾಪ್ತವಾಗಿದೆ. ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಅನುಮತಿ ಕೊಡಬೇಕೆ ಬೇಡವೆ, ಎಂಬ ವಿಚಾರದಲ್ಲಿ ನಿರ್ಧಾರ ತೆಗೆದುಕೊಳ್ಳದ ಸರ್ಕಾರ, ಅದಕ್ಕೊಂದು ಸಮಿತಿಯನ್ನು ರಚಿಸಿ, ಅದರ ಶಿಫಾರಸುಗಳನ್ನು ಜಾರಿಗೆ ತರುವುದರಲ್ಲಿ ವಿಳಂಬ ಮಾಡುತ್ತಿರುವುದು ಆಶ್ಚರ್ಯದ ಹಾಗೂ ವಿಷಾದದ ಸಂಗತಿಯಾಗಿದೆ. ನಮಗೆ ಬೇಕಾದುದು ಸಮಾನ ಸೌಲಭ್ಯವುಳ್ಳ

ಶಾಲೆಗಳ ಏಕರೂಪ ಶಿಕ್ಷಣ. ಅದರ ಬದಲು ಇಂಗ್ಲಿಷ್ ಮಾಧ್ಯಮದ ಶಾಲೆಗಳು, ಕನ್ನಡ ಮಾಧ್ಯಮದ ಶಾಲೆಗಳು ಎಂದು ಎರಡನ್ನೂ ಉಳಿಸಿಕೊಂಡು ಸಮಾಜವನ್ನು ಶಿಕ್ಷಣ ಮಾಧ್ಯಮದ ಮೂಲಕ ವಿಭಜಿಸುವುದು ಉಚಿತವಾದ ಕ್ರಮವಲ್ಲ. ಭಾಷೆ ಕೂಡ ಜಾತಿಗಳ ಹಾಗೆ ವರ್ಗಭೇದವನ್ನು ಉಳಿಸಿಕೊಳ್ಳುತ್ತಿರುವ ತಂತ್ರವಾಗುತ್ತಿರುವುದು ನಮ್ಮ ಶಿಕ್ಷಣ ಕ್ರಮದೊಳಗಿನ ಅಪಾಯಗಳಲ್ಲಿ ಒಂದಾಗಿದೆ.

ಜಿ.ಎಸ್. ಶಿವರುದ್ರಪ್ಪ, ೬೧ನೆಯ ಸಾಹಿತ್ಯ ಸಮ್ಮೇಳನ, ದಾವಣಗೆರೆ

.... ಶಾಲೆಕಾಲೇಜುಗಳಲ್ಲಿ ಕನ್ನಡ ಮಾಧ್ಯಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ಇನ್ನೂ ದೊರೆತಿಲ್ಲ. ಸರಕಾರಕ್ಕೊಂದು ದೃಢವಾದ ಬಿಗುವಿನ ನೀತಿಯಿರದ್ದರಿಂದ ಇಂಗ್ಲಿಷ್ ಮಾಧ್ಯಮದ ಶಾಲೆಗಳು ನಾಯಿಕೊಡೆಗಳಂತೆ ಬೆಳೆಯುತ್ತಿವೆ...........

ಸಿಂಪಿ ಲಿಂಗಣ್ಣ, ೬೨ನೆಯ ಸಾಹಿತ್ಯ ಸಮ್ಮೇಳನ, ಕೊಪ್ಪಳ

ಇತ್ತೀಚೆಗೆ ಭಾಷೆ ಕುರಿತಂತೆ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯ ಒಂದು ಐತಿಹಾಸಿಕ ತೀರ್ಪನ್ನು ನೀಡಿದೆ. ಪ್ರಾಥಮಿಕ ಒಂದರಿಂದ ನಾಲ್ಕನೇ ತರಗತಿವರೆಗೆ ಮಾತೃಭಾಷೆಯಲ್ಲಿಯೇ ಶಿಕ್ಷಣ ನೀಡಬೇಕು. ಕನ್ನಡ, ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಹಿಂದಿ, ಬಂಗಾಲೀ, ಉರ್ದು, ಇಂಗ್ಲಿಷ್‌ಗಳಲ್ಲಿ ಒಂದು ಭಾಷೆ ಮಾತ್ರ ಕಡ್ಡಾಯ.........

ಐದನೇ ತರಗತಿಯಿಂದ ಕನ್ನಡ ಕಲಿಯದವರಿಗೆ ದ್ವಿತೀಯ ಭಾಷೆಯಾಗಿ ಕನ್ನಡ ಕಡ್ಡಾಯ.

ಕರ್ನಾಟಕದಲ್ಲಿ ವಿದ್ಯಾಭ್ಯಾಸ ಮಾಡುವವರಿಗೆ ಕನ್ನಡ ಜ್ಞಾನ ಅಗತ್ಯ ಎನ್ನುವುದೇ ಈ ತೀರ್ಪಿನ ಸಾರಾಂಶ. ಈ ಮಹತ್ವದ ತೀರ್ಪಿಗೆ ಕಾರಣರಾದ ಗೋಕಾಕ್ ಚಳುವಳಿಯಲ್ಲಿ ಭಾಗವಹಿಸಿದ ಹೋರಾಟಗಾರರನ್ನೂ ಇದರ ಪರವಾಗಿ ತೀರ್ಪನ್ನು ತೆಗೆದುಕೊಂಡ ರಾಜ್ಯದ ಉಚ್ಚ ನ್ಯಾಯಾಲಯ ಮತ್ತು ಕರ್ನಾಟಕ ರಾಜ್ಯದ ಸರಕಾರವನ್ನೂ ನಾವೆಲ್ಲರೂ ಮನಸಾರೆ ಅಭಿನಂದಿಸಬೇಕಾಗಿದೆ. ಈ ದೆಸೆಯಲ್ಲಿ ಸುಪ್ರೀಂಕೋರ್ಟು ನೀಡಿರುವ ತೀರ್ಪಿನ ಅನುಗುಣವಾಗಿ ೧೯೯೪-೯೫ರ ಶೈಕ್ಷಣಿಕ ವರ್ಷ ಆರಂಭವಾಗುವುದರೊಳಗೆ ಅಗತ್ಯವಾದ ಆಡಳಿತಾತ್ಮಕ ಕ್ರಮಗಳನ್ನು ಕೂಡಲೇ ಕೈಗೊಳ್ಳುವಂತೆ ಸಂಬಂಧಪಟ್ಟ ಇಲಾಖೆಗೆ ಮಾನ್ಯ ಮುಖ್ಯಮಂತ್ರಿಗಳು ಆಜ್ಞೆ ಮಾಡಬೇಕಾದುದು ಅತ್ಯಗತ್ಯವಾಗಿದೆ. ಎಲ್ಲಾ ಇಂಗ್ಲಿಷ್ ಮಾಧ್ಯಮ ಪ್ರಾಥಮಿಕ ಶಾಲೆಗಳನ್ನು ಮಾತೃಭಾಷಾ ಶಾಲೆ ಅಥವಾ ಪ್ರದೇಶಭಾಷಾ ಶಾಲೆಗಳಾಗಿ ಪರಿವರ್ತಿಸುವಂತೆ ನಮ್ಮ ಸರಕಾರ ಕೂಡಲೇ ಆಜ್ಞೆ ಹೊರಡಿಸಬೇಕಾಗಿದೆ.

ಚದುರಂಗ, ೬೩ನೆಯ ಸಾಹಿತ್ಯ ಸಮ್ಮೇಳನ, ಮಂಡ್ಯ

ರಾಜಕೀಯವಾಗಿ ನಾವು ಸ್ವತಂತ್ರ ಭಾರತದ ಏಕೀಕೃತ ಕರ್ನಾಟಕದ ಪ್ರಜೆಗಳೆನಿಸಿದರೂ ಮಾನಸಿಕವಾಗಿ ಹಿಂದಿನ ಗುಲಾಮಗಿರಿಯ ಕೊಳೆಯನ್ನು ಸಂಪೂರ್ಣವಾಗಿ ತೊಳೆದಿಲ್ಲ. ಈಗಲೂ ಆಂಗ್ಲಭಾಷಾ ವ್ಯಾಮೋಹವಿದೆ; ಆಂಗ್ಲಭಾಷಾ ಮಾಧ್ಯಮದ ಶಾಲೆಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಎಳೆಯ ಮಕ್ಕಳನ್ನು ಅಂತಹ ಶಾಲೆಗಳಿಗೇ ಕಳಿಸಲು ಅನೇಕರು ಉತ್ಸುಕರಾಗಿರುವರು..... ಹೊರಲಾರದ ಹೊರೆಯನ್ನು ಹೊರಿಸಿದರೆ, ಕುಸಿದು ಬೀಳುವಂತೆ ಈ ಬೌದ್ಧಿಕ ಕಷ್ಟವನ್ನು ಎಳೆಯ ಮಕ್ಕಳಿಗೆ ನೀಡಿದಲ್ಲಿ ಮುಂದಿನ ಸಮಾಜ ಮಾನಸಿಕವಾಗಿ ದುರ್ಬಲ ಗೊಳ್ಳುವುದೆಂಬುದನ್ನು ಅರ್ಥಮಾಡಿಕೊಳ್ಳಬೇಕು. ಅದರ ಬದಲು ಅವರವರ ಮಾತೃಭಾಷೆಯಲ್ಲಿಯೇ ವಸ್ತುವಿಷಯಗಳ ಪರಿಚಯವಾದಲ್ಲಿ ಬುದ್ಧಿಯ ಬೆಳವಣಿಗೆ ಸಹಜವೂ ಸತ್ವಪೂರ್ಣವೂ ಆಗುವುದರಲ್ಲಿ ಸಂಶಯವಿಲ್ಲ. ಐದನೆಯ ತರಗತಿವರೆಗೆ ಅವರವರ ಮಾತೃಭಾಷೆಯಲ್ಲಿ, ಹತ್ತನೆಯ ತರಗತಿ ತನಕ ಮಾತೃಭಾಷೆ ಮತ್ತು ರಾಜ್ಯಭಾಷೆಯಲ್ಲಿ ಮಕ್ಕಳಿಗೆ ಶಿಕ್ಷಣವಿತ್ತು, ಆಮೇಲೆ ಅವರು ಇಷ್ಟಪಡುವ ಯಾವುದೇ ಭಾಷೆಯನ್ನಾದರೂ, ಸಂಸ್ಕೃತವೋ, ಹಿಂದಿಯೋ, ಇಂಗ್ಲಿಷೋ ಕಲಿಸುವುದು ಮಕ್ಕಳ ಮಾನಸಿಕ, ದೈಹಿಕ ಪರಿಸ್ಥಿತಿಗೆ ಅನುಕೂಲವೂ ದೇಶದ ರಾಜ್ಯದ ಸಮುನ್ನತಿಗೆ ಯೋಗ್ಯವೂ ಆಗಿದೆ. ಈ ವಿಚಾರದಲ್ಲಿ ಜನಾಭಿಪ್ರಾಯವನ್ನು ಜಾಗೃತಗೊಳಿಸಿ, ಸರಕಾರ ಕಟ್ಟುನಿಟ್ಟಾದ ಕ್ರಮಕೈಗೊಳ್ಳುವಂತೆ ಮಾಡಿದಲ್ಲಿ ಮಾತೃಭಾಷೆ ರಾಜ್ಯಭಾಷೆಗಳ ಅಭಿವೃದ್ಧಿಯೂ ಸಮೃದ್ಧವಾಗಿ ಆಗುವುದು........ ನಾವು ಇನ್ನೂ ಇಂಗ್ಲಿಷ್ ಭಾಷೆಯ ವ್ಯಾಮೋಹದ ಮಾನಸಿಕ ಗುಲಾಮಗಿರಿಯಲ್ಲಿರುವುದು ತೀರಾ ಅಪಹಾಸ್ಯಕರ.

ಕಯ್ಯಾರ ಕಿಞ್ಞಣ್ಣ ರೈ, ೬೬ನೆಯ ಸಾಹಿತ್ಯ ಸಮ್ಮೇಳನ, ಮಂಗಳೂರು.

ಕರ್ನಾಟಕದ ಎಲ್ಲಾ ನಗರಗಳಲ್ಲೂ ಪಟ್ಟಣಗಳಲ್ಲೂ ಆಂಗ್ಲಮಾಧ್ಯಮ ಶಾಲೆಗಳು ನಾಯಿಕೊಡೆಗಳಂತೆ ಬೆಳೆದಿವೆ. ಬೆಳೆಯುತ್ತಿವೆ....... ಇಂಥ ಶಾಲೆಗಳಲ್ಲಿ ಕಲಿಯುವ ಯಾವ ಹುಡುಗ ಹುಡುಗಿಯೂ ಕನ್ನಡ ಪುಸ್ತಕಗಳನ್ನು ಓದುವುದಿಲ್ಲ. ಮೂರನೆಯ ಅಥವಾ ಐದನೆಯ ತರಗತಿಯಿಂದ ಕನ್ನಡವನ್ನು ಒಂದು ಭಾಷೆಯನ್ನಾಗಿ ಓದಿದರೂ, ಅದೊಂದು ಅನಿವಾರ್ಯ ಅನಿಷ್ಟವೆಂಬಂತೆ ಓದಿ ಮುಗಿಸುತ್ತಾರೆ. ಪರಭಾಷೆಯಲ್ಲಿ ಶಿಕ್ಷಣ ಪಡೆಯುವ ಜನಾಂಗವು ಸಾಂಸ್ಕೃತಿಕವಾಗಿ ಬೌದ್ಧಿಕವಾಗಿ ಪರಾವಲಂಬಿಯಾಗುತ್ತದೆಂಬ ಎಚ್ಚರವನ್ನು ಶಿಕ್ಷಣತಜ್ಞರೆಲ್ಲ ಕೊಡುತ್ತಲೇ ಬಂದಿದ್ದಾರೆ.......

"ಇಂಗ್ಲಿಷ್ ಮೀಡಿಯಂನಲ್ಲಿ ಓದಿಸದಿದ್ದರೆ ನಮ್ಮ ಮಕ್ಕಳಿಗೆ ಹೊರಗಡೆ ಕೆಲಸ ಸಿಕ್ಕುವುದಿಲ್ಲವಲ್ಲ" ಎಂಬ ಮಾತನ್ನು ಹೆತ್ತವರು ಮಾತ್ರವಲ್ಲ, ಕರ್ನಾಟಕದ ರಾಜಕಾರಿಣಿಗಳೂ ಹೇಳುತ್ತಾರೆ. ಕರ್ನಾಟಕದ ಮಕ್ಕಳ ಉದ್ಯೋಗದ ಸಮಸ್ಯೆಯನ್ನು

ನಿರ್ವಹಿಸಲು ತಾವು ಅಸಮರ್ಥರು ಎಂದು ಅವರು ಈ ಮೂಲಕ ಒಪ್ಪಿಕೊಳ್ಳುತ್ತಾರೆ.....

ಇಂಗ್ಲಿಷಿನಲ್ಲಿ ಓದುವ ನಮ್ಮ ಮಕ್ಕಳು ಮೊಮ್ಮಕ್ಕಳಲ್ಲಿ ಯಾರಿಗಾದರೂ ಸಾಹಿತ್ಯ ಸೃಷ್ಟಿಯ ಶಕ್ತಿ ಇದ್ದರೆ ಅವರು ಮುಂದೆ ಕನ್ನಡದಲ್ಲಿ ಬರೆಯಲು ಸಾಧ್ಯವಿಲ್ಲ. ಹೀಗಾಗಿ ಸಾವಿರದ ಐನೂರು ವರ್ಷಗಳ ಲಿಖಿತ ಇತಿಹಾಸವುಳ್ಳ ಕನ್ನಡ ಸಾಹಿತ್ಯದ ಸೃಜನಶೀಲತೆಯು ಇನ್ನು ಕೆಲವು ದಶಕಗಳಲ್ಲಿ ನಿಂತುಹೋಗುವ ಸಂಭವವಿದೆ. ಈ ಮುಂದಿನ ತಲೆಮಾರು ಇಂಗ್ಲಿಷಿನಲ್ಲಾದರೂ ಸಾಹಿತ್ಯ ಸೃಷ್ಟಿಸುವುದು ಸಾಧ್ಯವಿಲ್ಲ. ಏಕೆಂದರೆ ಅದು ಅವರ ಇಡೀ ಜನಾಂಗದ ಸಂಸ್ಕೃತಿಯನ್ನು ಅಭಿವ್ಯಕ್ತಿಸಿರುವ ಭಾಷೆಯಲ್ಲ.

ಎಸ್. ಎಲ್. ಭೈರಪ್ಪ, ೬೭ನೆಯ ಸಾಹಿತ್ಯ ಸಮ್ಮೇಳನ, ಕನಕಪುರ

ಬ್ರಿಟಿಷರು ಭಾರತವನ್ನು ಬಿಟ್ಟು ಹೋಗಿ ಅರ್ಧ ಶತಮಾನ ಕಳೆದರೂ ಮಾನಸಿಕ ದಾಸ್ಯ ನಮ್ಮನ್ನು ಬಿಟ್ಟುಹೋಗಿಲ್ಲ. ಇಂಗ್ಲಿಷ್ ವ್ಯಾಮೋಹ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದುವರೆಗೆ ನಗರ ಪ್ರದೇಶವನ್ನು ಮಾತ್ರ ಆವರಿಸಿದ್ದ ಈ ಇಂಗ್ಲಿಷ್ ವ್ಯಾಮೋಹ ಇಂದು ಗ್ರಾಮಾಂತರ ಪ್ರದೇಶಕ್ಕೂ ದಾಳಿ ಇಟ್ಟಿದೆ. ಇಂಗ್ಲಿಷ್ ಶಾಲೆಗಳ ಹಾವಳಿ ಹೆಚ್ಚಾಗಿದೆ. ಇಂಗ್ಲಿಷ್ ಶಾಲೆಗಳನ್ನು ಕನ್ನಡ ಶಾಲೆಗಳನ್ನಾಗಿ ಮಾರ್ಪಡಿಸುವ ಅಗತ್ಯವಿದೆ.

ಶ್ರೀಮತಿ ಶಾಂತಾದೇವಿ ಮಾಳವಾಡ, ೬೮ನೆಯ ಸಾಹಿತ್ಯ ಸಮ್ಮೇಳನ, ಬಾಗಲಕೋಟೆ

ಶಿಕ್ಷಣ ಮಾಧ್ಯಮದ ಬಗ್ಗೆ ಒಂದು ಮಾತು: ಎಲ್ಲರೂ ಕನ್ನಡದಲ್ಲಿ ವಿಷಯಗಳನ್ನು ಕಲಿಯಬೇಕು. ಹಾಗೆಯೇ ಎಲ್ಲರೂ ಇಂಗ್ಲಿಷನ್ನು ಒಂದು ಸಂಪರ್ಕ ಭಾಷೆಯಾಗಿಯೂ, ಜ್ಞಾನಾರ್ಜನೆಯ ಭಾಷೆಯಾಗಿಯೂ ಕಲಿಯಬೇಕು. "ಕನ್ನಡದಲ್ಲಿ ಕಲಿ : ಇಂಗ್ಲಿಷನ್ನು ಕಲಿ" ಎಂಬುದು ನಮ್ಮ ಸೂತ್ರವಾಗಬೇಕೇ ಹೊರತಾಗಿ "ಕನ್ನಡವನ್ನು ಕಲಿ : ಇಂಗ್ಲಿಷ್‌ನಲ್ಲಿ ಕಲಿ" ಎಂಬುದಲ್ಲ........ ಎಲ್ಲ ಮಾನವಿಕ ಶಾಸ್ತ್ರಗಳನ್ನಂತೂ ನಮ್ಮ ಎಲ್ಲ ವಿದ್ಯಾರ್ಥಿಗಳೂ ದೇಶದ ಪರಿಸರದ ಭಾಷೆಯಲ್ಲಿ ಕಲಿತದ್ದೇ ಆದರೆ ಸ್ವತಂತ್ರವಾಗಿ ವಿಚಾರಮಾಡಬಲ್ಲವರಾಗಿ ಬೆಳೆಯುತ್ತಾರೆ.

ಯು. ಆರ್. ಅನಂತಮೂರ್ತಿ, ೬೯ನೆಯ ಸಾಹಿತ್ಯ ಸಮ್ಮೇಳನ, ತುಮಕೂರು

ಕನ್ನಡ ಭಾಷೆಗೆ ಈ ರಾಜ್ಯದ ಶಿಕ್ಷಣ ಹಾಗೂ ಆಡಳಿತ ಎರಡರಲ್ಲಿ ಸಿಂಹಾಸನ ಸ್ಥಾನ ಇರಬೇಕು..... ಇಂಗ್ಲಿಷ್ ಶಾಲೆಗಳಲ್ಲಿ ಕನ್ನಡವನ್ನು ತರಬೇಕೆನ್ನುವ ಶಿಫಾರಸಿನ ಬಗೆಗೆ ಸರಕಾರ ಕುರುಡು ತೋರಿದೆ...... ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷನ್ನು ದ್ವಿತೀಯ ಭಾಷೆಯೆಂದು ಕಲಿಸಬೇಕೆನ್ನುವ ತೀರ್ಮಾನವನ್ನು ಸರಕಾರ ಕೈಗೊಂಡ

ಮೇಲೆ ಈ ರಾಜ್ಯದಲ್ಲಿ ಪ್ರತ್ಯೇಕ ಇಂಗ್ಲಿಷ್ ಶಾಲೆಗಳು ಇರಬೇಕಾದ ಅವಶ್ಯಕತೆ ಏನಿದೆ?

ಪಾಟೀಲ ಪುಟ್ಟಪ್ಪ, ೭೦ನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಬೆಳಗಾವಿ

ವಿದ್ಯೆ ಇಂದು ವಾಣಿಜ್ಯವಾಗಿದೆ..... ಇಂಗ್ಲಿಷ್ ಮಾಧ್ಯಮ ಶಾಲೆ ತೆರೆಯುವುದು ದಿಢೀರ್ ಧನಾಢ್ಯತೆಗೆ ರಾಜಮಾರ್ಗ.....

ಬಾಲವಾಡಿಯಿಂದ ಹಿಡಿದು ಸ್ನಾತಕೋತ್ತರದವರೆಗೆ, ಅಡಿಯಿಂದ ಹಿಡಿದು ಮುಡಿಯತನಕ ಇಂಗ್ಲಿಷ್ ಮಾಧ್ಯಮದ್ದೇ ದರಬಾರು. 'ತುರ್ತು ನಿಗಾ ಕೊಡಬೇಕಾದ ಆಲಯ'ದೊಳಗೆ ದೂಡಿರುವ ಕನ್ನಡ ಮಾಧ್ಯಮಕ್ಕೆ ಆಮ್ಲಜನಕವಿತ್ತು ಉಳಿಸಬೇಕಾಗಿ ಬಂದಿದೆ. ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷರು ಆಳುತ್ತಿದ್ದಾಗ ಕನ್ನಡಕ್ಕೆ ಇದ್ದ ಸ್ಥಾನ, ಮನ್ನಣೆ, ನಮ್ಮವರೇ ಆಳುವ ಸಂದರ್ಭದಲ್ಲಿ ತಪ್ಪಿಹೋಗಿರುವುದು ವಿಪರ್ಯಾಸ.

ಕಮಲಾ ಹಂಪನಾ, ೭೧ನೆಯ ಸಾಹಿತ್ಯ ಸಮ್ಮೇಳನ, ಮೂಡಬಿದಿರೆ

ಈ ಶತಮಾನದ ಆರಂಭದಿಂದ ಈವರೆಗೆ ಶಿಕ್ಷಣ ಮಾಧ್ಯಮದ ಬಗ್ಗೆ ಸಮ್ಮೇಳನಾಧ್ಯಕ್ಷರ ಅನಿಸಿಕೆಗಳನ್ನು ಗಮನಿಸಿದಾಗ ಅದರ ದುರಂತ ಕತೆ ವ್ಯಕ್ತವಾಗುತ್ತದೆ. ಮೊದಮೊದಲಿಗೆ ಸಮ್ಮೇಳನಾಧ್ಯಕ್ಷರು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಕನ್ನಡ ಮಾಧ್ಯಮ ಜಾರಿಗೆ ಆಗ್ರಹಿಸಿದ್ದರೆ ಎಪ್ಪತ್ತರ ದಶಕದಿಂದೀಚೆಗೆ ಪ್ರಾಥಮಿಕ ಶಾಲಾ ಹಂತದಲ್ಲಿ ಇಂಗ್ಲಿಷ್ ಮಾಧ್ಯಮ ತೊಡೆದುಹಾಕಲು ಆಗ್ರಹ ಕಂಡುಬರುತ್ತದೆ.

■

ಅಧ್ಯಾಯ-೪

ಕನ್ನಡ ನೆಲದಲ್ಲಿ ಕನ್ನಡ ಮಾಧ್ಯಮ

ಹತ್ತೊಂಬತ್ತನೆಯ ಶತಮಾನದ ಮುವತ್ತರ ದಶಕದವರೆಗೆ ಕನ್ನಡನಾಡಿನಲ್ಲಿ ಕೇವಲ ೫ನೇ ತರಗತಿಯವರೆಗೆ ಮಾತ್ರ ಕನ್ನಡ ಮಾಧ್ಯಮವಿತ್ತು. ಅಲ್ಲಿಂದ ಮುಂದಕ್ಕೆ ಇದ್ದದ್ದು ಇಂಗ್ಲಿಷ್ ಮಾಧ್ಯಮ ಮಾತ್ರ. ದೇಜಗೌ ಅವರಂಥವರೂ ತಮ್ಮ ಪ್ರೌಢಶಾಲಾ ಶಿಕ್ಷಣವನ್ನು ಇಂಗ್ಲಿಷ್ ಮಾಧ್ಯಮದಲ್ಲೇ ಪಡೆಯಬೇಕಾದ ಅನಿವಾರ್ಯತೆ ಇತ್ತು.

೧೯೧೫ರಿಂದಲೇ ವಿಶ್ವವಿದ್ಯಾನಿಲಯಗಳವರೆಗೂ ಕನ್ನಡವೇ ಶಿಕ್ಷಣ ಮಾಧ್ಯಮವಾಗಿರಬೇಕು ಎಂಬ ಒತ್ತಾಯ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರಿಂದ ಆರಂಭವಾಗಿದ್ದರೂ, ೧೯೩೯ರವರೆಗೆ ಐದನೇ ತರಗತಿಯಿಂದ ಮುಂದಕ್ಕೆ ಇಂಗ್ಲಿಷೇ ಶಿಕ್ಷಣ ಮಾಧ್ಯಮವಾಗಿತ್ತು.

ಪ್ರೌಢಶಾಲೆಯಲ್ಲಿ ಕನ್ನಡ ಮಾಧ್ಯಮ

೧೯೩೯ನೇ ಇಸವಿಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದ ಶ್ರೀ ಎನ್. ಎಸ್. ಸುಬ್ಬರಾಯರು ಎಷ್ಟೇ ವಿರೋಧವಿದ್ದರೂ ಲೆಕ್ಕಿಸದೆ ಮೆಟ್ರಿಕ್‌ವರೆಗೆ ಕನ್ನಡ ಮಾಧ್ಯಮವನ್ನು ವಿಸ್ತರಿಸಿದ್ದು ಒಂದು ಐತಿಹಾಸಿಕ ಮಹತ್ವದ ಘಟ್ಟ.

ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡ ಮಾಧ್ಯಮ

ಐವತ್ತರ ದಶಕದಲ್ಲಿ ಕುವೆಂಪು ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾದರು. ಅವರ ಕಾಲದಲ್ಲಿ ಇಂಟರ್‌ಮೀಡಿಯಟ್ / ಪಿಯುಸಿ ತರಗತಿಯಲ್ಲಿ ವಿಜ್ಞಾನ ವಿಷಯಗಳೂ ಸೇರಿದಂತೆ ಅನೇಕ ವಿಷಯಗಳಲ್ಲಿ ಕನ್ನಡ ಮಾಧ್ಯಮ ತರಗತಿಗಳನ್ನು ತೆರೆದರು. ಅಷ್ಟೇ ಅಲ್ಲ, ವಿವಿಧ ವಿಷಯಗಳಲ್ಲಿ ಪಠ್ಯಪುಸ್ತಕಗಳನ್ನೂ ಬರೆಸಿ, ಪ್ರಸಾರಾಂಗದ ಮೂಲಕ ಪ್ರಕಟಿಸಿದರು. ಬಿ.ಎ. ಹಾಗೂ ಬಿ.ಎಸ್‌ಸಿ.ಗಳಲ್ಲೂ ಕನ್ನಡ ಮಾಧ್ಯಮ ತರಗತಿಗಳನ್ನು ತೆರೆಯಲು ಅವರ ಕಾಲದಲ್ಲಿ ಶೈಕ್ಷಣಿಕ ಮಂಡಲಿಯಲ್ಲೂ ನಿರ್ಣಯವಾಗಿತ್ತು. ಆದರೆ ಅವರ ಅವಧಿ ಮುಗಿದು ನಿರ್ಗಮಿಸಿದ ನಂತರ ಆ ನಿರ್ಣಯ ಕಾರ್ಯರೂಪಕ್ಕೆ ಇಳಿಯಲಿಲ್ಲ.

ದೇಜಗೌ ಅವರು ಅರವತ್ತರ ದಶಕದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾದ ನಂತರ ಶಿಕ್ಷಣ ಮಾಧ್ಯಮಕ್ಕೆ ಸಂಬಂಧಿಸಿದಂತೆ ಮತ್ತೊಂದು ಮಹತ್ವದ ಘಟನೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜರುಗಿತು. ವಿದ್ಯಾರ್ಥಿ ಇಂಗ್ಲಿಷ್ ಮಾಧ್ಯಮದಲ್ಲೇ ಓದುತ್ತಿದ್ದರೂ ಪರೀಕ್ಷೆಯಲ್ಲಿ ಕನ್ನಡದಲ್ಲಿ ಉತ್ತರಿಸ ಬಹುದೆಂಬ ಅವಕಾಶವನ್ನು ದೇಜಗೌ ಕಲ್ಪಿಸಿದರು. ಇದೊಂದು ಕ್ರಾಂತಿಕಾರಕ ನಿರ್ಣಯ. ಅದರ ಪರಿಣಾಮವಾಗಿ ಮಾನವಿಕ ವಿಷಯಗಳಲ್ಲಂತೂ ಕನ್ನಡ ಮಾಧ್ಯಮ ಜನಪ್ರಿಯವಾಯಿತು. ದಿನದಿಂದ ದಿನಕ್ಕೆ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಉತ್ತರಿಸುವವರ ಸಂಖ್ಯೆ ಬೆಳೆಯುತ್ತಾ ಹೋಯಿತು. ಅದರಿಂದಾಗಿ ಅನೇಕ ಕಡೆ ಮಾನವಿಕ ವಿಷಯಗಳಲ್ಲಿ ಕನ್ನಡ ಮಾಧ್ಯಮದ ತರಗತಿಗಳೂ ಅಧಿಕೃತವಾಗಿ ತೆರೆಯಲ್ಪಟ್ಟವು.

ದೇಜಗೌ ಅವರು ಕಲ್ಪಿಸಿದ ನಿರ್ಣಯದ ಅವಕಾಶವನ್ನು ಕಲ್ಪಿಸಿಕೊಂಡು ಈ ಲೇಖಕ ಸಹ ಬಿ.ಎಸ್‌ಸಿ. ಪದವಿಯಲ್ಲಿ ಭೌತಶಾಸ್ತ್ರ ಹಾಗೂ ಭೂವಿಜ್ಞಾನಗಳನ್ನೂ ಎಂ.ಎಸ್‌ಸಿ. ಯಲ್ಲಿ ಭೂವಿಜ್ಞಾನ ವಿಷಯವನ್ನು ಕನ್ನಡದಲ್ಲಿ ಉತ್ತರಿಸಿ, ರ‍್ಯಾಂಕನ್ನೂ ಪಡೆದು ಪ್ರಥಮವನ್ನು ದಾಖಲಿಸಲು ಸಾಧ್ಯವಾಯಿತು.

ಶ್ರೀ ಕೇಶವ ಹೆಗ್ಡೆಯವರು ಪ್ರಾಂಶುಪಾಲರಾಗಿದ್ದ ಮೈಸೂರಿನ ಯುವರಾಜ ಕಾಲೇಜಿನಲ್ಲಿ ೧೯೬೦-೬೧ರಲ್ಲಿ ಬಿ.ಎಸ್‌ಸಿ.ಯಲ್ಲೂ ಕರ್ನಾಟಕದಲ್ಲೇ ಮೊದಲ ಕನ್ನಡ ಮಾಧ್ಯಮ ತರಗತಿ ಆರಂಭವಾಯಿತು. ಹದಿನೆಂಟು ಜನ ವಿದ್ಯಾರ್ಥಿಗಳು ಈ ತರಗತಿಗೆ ಪ್ರವೇಶ ಪಡೆದಿದ್ದರು. ತೇರ್ಗಡೆಯಾದವರಲ್ಲಿ ಇಬ್ಬರು ಎಂ.ಎಸ್‌ಸಿ. ಮಾಡಿದರಂತೆ. ಇನ್ನೊಬ್ಬ ವಿದ್ಯಾರ್ಥಿ ಶ್ರೀ ಎಂ. ಬಿ. ವಿಶ್ವನಾಥ್ ಅವರು ಕನ್ನಡ ಹೋರಾಟದಲ್ಲಿ ಈಗಲೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರು ಬ್ಯಾಂಕಿನ ಮ್ಯಾನೇಜರಾಗಿ ನಿವೃತ್ತರಾಗಿದ್ದಾರೆ. ಆದರೆ ಇದೇ ಮೊದಲ ಹಾಗೂ ಕೊನೆಯ ತಂಡವಾಯಿತು.

ದೇಜಗೌ ಅವರು ಮೈಸೂರು ವಿ. ವಿ. ಕುಲಪತಿಯಾಗಿದ್ದಾಗಲೇ ಪಿ.ಎಚ್‌ಡಿ. ಪ್ರಬಂಧಗಳನ್ನು ಕನ್ನಡದಲ್ಲಿ ಬರೆಯಲಾಯಿತು. ಮೊದಲ ಕನ್ನಡದ ಪಿ.ಎಚ್‌ಡಿ. ಪ್ರಬಂಧ ಹಿಂದಿ ಸಾಹಿತ್ಯ ಕುರಿತಾಗಿತ್ತು. ಪರೀಕ್ಷೆಯಲ್ಲಿ ಕನ್ನಡದಲ್ಲಿ ಉತ್ತರಿಸುವ ಅವಕಾಶ ಎಲ್ಲ ವಿ.ವಿ.ಗಳಲ್ಲೂ ಲಭ್ಯವಾಯಿತು.

ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಹಂತದವರೆಗೂ ಕನ್ನಡ ಮಾಧ್ಯಮ ತರಗತಿಗಳು ಆರಂಭವಾದವು. ಆದರೆ ಅವು ಈಗ ಮುಂದುವರೆಯದೆ ಇರುವುದು ವಿಷಾದನೀಯ.

ಲೋಕಸೇವಾ ಆಯೋಗದಲ್ಲಿ ಕನ್ನಡ ಮಾಧ್ಯಮ

ಕನ್ನಡನಾಡಿನಲ್ಲಿ ಕನ್ನಡ ಮಾಧ್ಯಮಕ್ಕೆ ಸಂಬಂಧಪಟ್ಟ ಇತಿಹಾಸದಲ್ಲಿ ಮತ್ತೊಂದು ಮುಖ್ಯ ಘಟನೆ – ದೇಜಗೌ ಅವರ ಉಪವಾಸ ಮುಷ್ಕರದಿಂದಾಗಿ

ರಾಜ್ಯ ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಕನ್ನಡದಲ್ಲಿ ಉತ್ತರಿಸಲು ದೊರೆತ ಅವಕಾಶ.

ರಾಜ್ಯಕ್ಕೆ 'ಕರ್ನಾಟಕ' ಎಂದು ಹೆಸರಿಟ್ಟ ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ಕಾಲ. ಆಗ ರಾಜ್ಯದ ಲೋಕಸೇವಾ ಆಯೋಗದ ಪರೀಕ್ಷೆಗಳಲ್ಲಿ ಇಂಗ್ಲಿಷ್‌ನಲ್ಲೇ ಉತ್ತರಿಸಬೇಕಿತ್ತು. ಇದನ್ನು ಪ್ರತಿಭಟಿಸಿ, ಕನ್ನಡದಲ್ಲಿ ಉತ್ತರಿಸಲು ಅವಕಾಶ ನೀಡಬೇಕೆಂಬ ಹಕ್ಕೊತ್ತಾಯವನ್ನು ಮುಂದಿಟ್ಟು ದೇಜಗೌ ಅವರು ಲೋಕಸೇವಾ ಆಯೋಗದ ಕಚೇರಿ ಮುಂದೆ ೨೦-೧೧-೧೯೭೯ರಂದು ಅನಿರ್ದಿಷ್ಟ ಉಪವಾಸವನ್ನು ಕೈಗೊಂಡರು. ಅವರ ಜತೆ ಸಿದ್ದಯ್ಯ ಪುರಾಣಿಕರೂ ಉಪವಾಸಕ್ಕೆ ಕುಳಿತರು. ಅವರಿಗೆ ಬೆಂಗಳೂರು ನಗರದ ವಿದ್ಯಾರ್ಥಿ ವೃಂದ ಸಹಸ್ರಗಟ್ಟಲೆ ಸಂಖ್ಯೆಯಲ್ಲಿ ಬಂದು ಬೆಂಬಲ ನೀಡಿತು.

ಇದಕ್ಕೆ ಸ್ಪಂದಿಸಿದ ಆಗಿನ ಮುಖ್ಯಮಂತ್ರಿ ಡಿ. ದೇವರಾಜ ಅರಸು ಲೋಕಸೇವಾ ಆಯೋಗದ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಉತ್ತರಿಸಲು ಅವಕಾಶ ನೀಡಲಾಗಿದೆ ಎಂದು ಪ್ರಕಟಿಸಿ ನಿರಶನ ಅಂತ್ಯಗೊಳಿಸಲು ದೇಜಗೌ ಅವರನ್ನು ಕೋರಿದರು.

ಅಂದಿನ ನಿರ್ಧಾರ ಇಂದು ಫಲ ಕೊಟ್ಟಿದೆ. ಕ್ರಮೇಣ ಈ ಪರೀಕ್ಷೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಉತ್ತರಿಸುವವರ ಸಂಖ್ಯೆ ಹೆಚ್ಚುತ್ತಾ ಹೋಗಿ ಪ್ರಸ್ತುತ ಶೇಕಡಾ ಎಪ್ಪತ್ತನ್ನು ಮೀರಿದೆ.

ಇನ್ನು ಪಠ್ಯಪುಸ್ತಕಗಳ ನಿರ್ಮಾಣದ ಬಗ್ಗೆ ಹೇಳುವುದಾದರೆ ಕುವೆಂಪು ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದಾಗ ಪ್ರಸಾರಾಂಗದ ಮೂಲಕ ಪದವಿಪೂರ್ವ ಹಂತಕ್ಕೆ ಬೇಕಾಗುವ ಪುಸ್ತಕಗಳು ಪ್ರಕಟವಾದದ್ದನ್ನು ಈ ಮೊದಲೇ ಉಲ್ಲೇಖಿಸಲಾಗಿದೆ.

ಪಠ್ಯಪುಸ್ತಕಗಳ ನಿರ್ಮಾಣ

ಮತ್ತೆ ಕನ್ನಡ ಮಾಧ್ಯಮ ಪಠ್ಯಪುಸ್ತಕಗಳ ನಿರ್ಮಾಣದ ಗತಿ ಬಿರುಸಾಗಿದ್ದು ಅರವತ್ತರ ದಶಕದಲ್ಲಿ. ಈ ಚಳುವಳಿಯು ಒಂದು ವಿಶ್ವವಿದ್ಯಾನಿಲಯಕ್ಕೆ ಸೀಮಿತವಾಗದೆ, ರಾಜ್ಯದ ಎಲ್ಲ ವಿಶ್ವವಿದ್ಯಾನಿಲಯಗಳಲ್ಲೂ ಅಷ್ಟೇ ಬಿರುಸಿನಿಂದ ಸಾಗಿದ್ದು ಇನ್ನೊಂದು ವೈಶಿಷ್ಟ್ಯ.

ಕೊಠಾರಿ ಆಯೋಗದ ಶಿಫಾರಸಿನಂತೆ ಕಾಲೇಜು ಶಿಕ್ಷಣದಲ್ಲಿ ದೇಶಭಾಷಾ ಮಾಧ್ಯಮಗಳ ಚಾಲನೆಗೆ ಮುಂದಾದ ಕೇಂದ್ರ ಸರ್ಕಾರ ರಾಜ್ಯಕ್ಕೆ ಪಠ್ಯಪುಸ್ತಕಗಳ ನಿರ್ಮಾಣಕ್ಕೆಂದು ಒಂದು ಕೋಟಿ ರೂಪಾಯಿಗಳ ನೆರವನ್ನು ನೀಡಿತು. ಅದನ್ನು ರಾಜ್ಯ ಸರ್ಕಾರ ಆಗಿನ ಮೈಸೂರು, ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳ ಜತೆಗೆ ಕೃಷಿ ವಿಶ್ವವಿದ್ಯಾನಿಲಯಕ್ಕೂ ಹಣವನ್ನು ಹಂಚಿದ್ದರ

ಪರಿಣಾಮವಾಗಿ ಎಲ್ಲ ವಿಶ್ವವಿದ್ಯಾನಿಲಯಗಳಲ್ಲೂ ಪಠ್ಯಕ್ರಮಕ್ಕನುಸಾರವಾದ ಪುಸ್ತಕಗಳು, ಪರಾಮರ್ಶೆಯ ಗ್ರಂಥಗಳು, ಪಾರಿಭಾಷಿಕ ಶಬ್ದಕೋಶಗಳು ಬೆರಗಾಗುವಷ್ಟು ಪ್ರಮಾಣದಲ್ಲಿ ಬಿರುಸಿನಲ್ಲಿ ಪ್ರಕಟಗೊಂಡವು. ಮೈಸೂರಿನಲ್ಲಿ ದೇಜಗೌ ನಂತರ ದಿವಂಗತ ಹಾ.ಮಾ. ನಾಯಕರ ನಿರ್ದೇಶಕತ್ವದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯಿಂದ ಕನ್ನಡ ಮಾಧ್ಯಮಕ್ಕೆ ಅತಿ ಹೆಚ್ಚು ಪುಸ್ತಕಗಳು ಪ್ರಕಟವಾದವು. ವಿವಿಧ ವಿಶ್ವವಿದ್ಯಾನಿಲಯಗಳ ಪ್ರಸಾರಾಂಗ ಹಾಗೂ ಕನ್ನಡ ಅಧ್ಯಯನ ಸಂಸ್ಥೆಗಳಲ್ಲಿ ಕನ್ನಡ ಮಾಧ್ಯಮ ಪುಸ್ತಕಗಳಿಗೆ ಚಾಲನೆ ಕೊಟ್ಟವರಲ್ಲಿ ಪ್ರಭುಶಂಕರ, ದಾಸೇಗೌಡ, ಚನ್ನವೀರ ಕಣವಿ, ವಿ. ಚ. ಹಿತ್ತಿಲಮನಿ, ಕೆ. ಸಿ. ಶಿವಪ್ಪ ಇನ್ನೂ ಮುಂತಾದವರನ್ನು ಹೆಸರಿಸಬಹುದು.

ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಮೊದಲಿಗೆ ಕುಲಪತಿಗಳಾಗಿದ್ದ ಚಂದ್ರಶೇಖರ ಕಂಬಾರ ಅವರ ಕಾಲದಲ್ಲಿ ಕನ್ನಡ ಮಾಧ್ಯಮಕ್ಕೆ ಸಂಬಂಧಿಸಿದ ಪುಸ್ತಕಗಳು ಹೆಚ್ಚಿನ ಪ್ರಮಾಣದಲ್ಲಿ ಹೊರಬಂದವು.

ಇದೀಗ ಎಲ್ಲ ವಿ.ವಿ.ಗಳಲ್ಲೂ ಅದು ಕುಂಠಿತಗೊಂಡಿದೆ. ಸರ್ಕಾರದಿಂದಲೂ ಹಣದ ನೆರವು ಬಹುಮಟ್ಟಿಗೆ ನಿಂತಿದೆ.

ಪಾರಿಭಾಷಿಕ ಪದಗಳ ಸೃಷ್ಟಿ ಬಗ್ಗೆ ಚರ್ಚೆ

ಈ ಪಠ್ಯಪುಸ್ತಕಗಳ ನಿರ್ಮಾಣದ ಸಮಯದಲ್ಲಿ ಪಾರಿಭಾಷಿಕ ಪದಗಳ ಬಗ್ಗೆ ಸಾಕಷ್ಟು ಚರ್ಚೆ ನಡೆಯಿತು. ಆ ಸಂದರ್ಭದಲ್ಲಿ 'ಪಾರಿಭಾಷಿಕ ಪದಗಳ ಸಮಸ್ಯೆ' ಎಂಬ ಲೇಖನವನ್ನು ೧೯೭೨ರಲ್ಲಿ ಬರೆದ ರಸಾಯನವಿಜ್ಞಾನ ಪ್ರಾಧ್ಯಾಪಕ ಮತ್ತು ಜನಪ್ರಿಯ ಲೇಖಕ ಜೆ. ಆರ್. ಲಕ್ಷ್ಮಣರಾವ್ ಹೇಳಿರುವುದನ್ನು ಮುಂದೆ ಯಥಾವತ್ತಾಗಿ ಕೊಡಲಾಗಿದೆ :

"ಒಂದು ಪದದ ಅರ್ಥವನ್ನು ಗ್ರಹಿಸಲು ಯಾವುದೇ ಶಾಸ್ತ್ರದಲ್ಲಿ ಪ್ರವೇಶ ಮಾಡುವುದು, ಆ ಶಾಸ್ತ್ರದ ತಕ್ಕಮಟ್ಟಿನ ಪರಿಚಯ ಪಡೆಯುವುದು ಅವಶ್ಯವಾದರೆ, ಅಂತಹ ಪದವನ್ನು 'ಪಾರಿಭಾಷಿಕ ಪದ' ಎಂದು ಕರೆಯುತ್ತೇವೆ. Geodesic ಎಂಬ ಪದದ ಅರ್ಥವನ್ನು ಗ್ರಹಿಸಲು ಗಣಿತಶಾಸ್ತ್ರದ ಪರಿಚಯ ಅಗತ್ಯ. ಭೌತಶಾಸ್ತ್ರದ ಪರಿಚಯವಿಲ್ಲದಿದ್ದರೆ entropy ಎಂಬ ಪದದ ಅರ್ಥವನ್ನು ಗ್ರಹಿಸುವುದು ಸಾಧ್ಯವಿಲ್ಲ.....

"ಪಾರಿಭಾಷಿಕ ಪದಗಳ ಒಂದು ಮುಖ್ಯ ಲಕ್ಷಣವೆಂದರೆ, ಅವುಗಳ ಅರ್ಥಗಳ ನಿಷ್ಕೃಷ್ಟತೆ.....

"ಕನ್ನಡದಲ್ಲಿ ಈ ಪಾರಿಭಾಷಿಕ ಪದಗಳು ಇಲ್ಲ. ಅದಕ್ಕೆ ಕಾರಣವೂ ಕಂಡಂತೆಯೇ ಇದೆ. ಜನಜೀವನದ ಯಾವ ಯಾವ ಮುಖಗಳು ಬೆಳೆಯುತ್ತಾ ಹೋಗುವವೋ

ಆ ಮುಖಗಳಿಗೆ ಸಂಬಂಧಿಸಿದ ಪದಗಳು ಸೃಷ್ಟಿಯಾಗುತ್ತಾ ಹೋಗುವುವು. ಜನಜೀವನಕ್ಕೆ ಅಗತ್ಯವಿಲ್ಲದ ಪದಗಳು ಸೃಷ್ಟಿಯಾಗುವುದು ಹೇಗೆ ಸಾಧ್ಯ? oats, bread, cheese, coat, hat - ಈ ಪದಗಳಿಗೆ ಸಮಾನ ಕನ್ನಡ ಪದಗಳಿಲ್ಲದಿರುವುದೂ ನವಣೆ, ಸಜ್ಜೆ, ಪಲ್ಯ, ಗೊಜ್ಜು, ಸೀರೆ, ಪಂಚೆ - ಈ ಪದಗಳಿಗೆ ಇಂಗ್ಲಿಷ್ ಸಮಾನ ಪದಗಳಿಲ್ಲದಿರುವುದೂ ಸಹಜವಾಗಿಯೇ ಇದೆ...... ಸೂಕ್ಷ್ಮ ವ್ಯತ್ಯಾಸಗಳನ್ನು ಸೂಚಿಸುವ ಪದಗಳನ್ನು ಸೃಷ್ಟಿಸುವುದರಲ್ಲಿ ಎಷ್ಟೋ ವೇಳೆ ಇಂಗ್ಲಿಷ್ ಭಾಷೆಗಿಂತ ಕನ್ನಡವೇ ಹೆಚ್ಚು ಯಶಸ್ವಿಯಾಗಿದೆ.

"ಮಾಗುವುದಕ್ಕೆ ಮುಂಚೆಯ ಹಣ್ಣಿನ ಸ್ಥಿತಿಯನ್ನು ಸೂಚಿಸಲು ಇಂಗ್ಲಿಷ್ ಭಾಷೆಯಲ್ಲಿ ಪದವಿಲ್ಲ. unripe fruit ಎಂದು ಅದನ್ನು ವರ್ಣಿಸಬೇಕಾಗುವುದು. ನಮ್ಮಲ್ಲಿ ಅದಕ್ಕೆ ಕಾಯಿ ಎಂಬ ಒಂದು ಪ್ರತ್ಯೇಕ ಪದವಿರುವುದು ಮಾತ್ರವಲ್ಲದೆ ಅದರ ವಿವಿಧ ಹಂತಗಳನ್ನೂ ಸೂಚಿಸಬಲ್ಲ ಹೀಚು, ಕಸುಗಾಯಿ, ದೋರೆಗಾಯಿ. ಎಂಬ ಪದಗಳೂ ಇವೆ. ಇಂತಹ ಅನೇಕ ನಿದರ್ಶನಗಳನ್ನೂ ಕೊಡಬಹುದು. ನಮ್ಮ ಸಾಹಿತ್ಯಕ್ಕೆ ಒಂದು ಸಹಸ್ರಮಾನಕ್ಕಿಂತ ನಿಡಿದಾದ ಇತಿಹಾಸವಿರುವುದೇ ಭಾಷೆಯ ಶ್ರೀಮಂತಿಕೆಗೆ ಸಾಕ್ಷಿ. ಆದರೆ ಶಾಸ್ತ್ರಗಳಿಗೆ ಅಗತ್ಯವಾದ ಪಾರಿಭಾಷಿಕ ಕೊರತೆ ಇರುವುದು ನಿಜ. ವಿಜ್ಞಾನದ ಬೋಧನೆಗೆ, ಚಿಂತನೆಗೆ, ವೈಜ್ಞಾನಿಕ ವ್ಯವಹಾರಕ್ಕೆ ಕನ್ನಡ ಭಾಷೆಯನ್ನು ಇದುವರೆಗೆ ಬಳಸದಿರುವುದೇ ಆ ಕೊರತೆಗೆ ಕಾರಣವಾಗಿರುವುದರಿಂದ ಇನ್ನು ಮುಂದೆ ಈ ಕೆಲಸಗಳಿಗೆ ಕನ್ನಡ ಭಾಷೆಯನ್ನು ಬಳಸದಿರುವುದಕ್ಕೆ ಆ ಕೊರತೆಯನ್ನೇ ಒಂದು ನೆಪವಾಗಿ ಒಡ್ಡುವುದರಲ್ಲಿ ಅರ್ಥವಿಲ್ಲ. ಅಗತ್ಯವಾದ ಪರಿಭಾಷೆಯನ್ನು ಸೃಷ್ಟಿಸುವುದು, ಕನ್ನಡವನ್ನು ವಿದ್ವತ್ ವ್ಯವಹಾರದ ಮಾಧ್ಯಮವಾಗಿ ಬಳಸುವುದು - ಇವೆರಡೂ ಒಟ್ಟಿಗೆ ಆಗಬೇಕಾದ ಕೆಲಸಗಳು.

".....ವಿಜ್ಞಾನ ಬೆಳೆಯುತ್ತಾ ಹೋದಂತೆ, ಹೊಸ ಹೊಸ ಭಾವನೆಗಳು ಅಪಾರ ಸಂಖ್ಯೆಯಲ್ಲಿ ರೂಪುಗೊಂಡಾಗ, ಅವಕ್ಕೆಲ್ಲ ಇಂಗ್ಲಿಷ್ ಪದಗಳು ಸಿಕ್ಕದೆ ಹೋದುದರಿಂದ ಮತ್ತು ಇಂಗ್ಲಿಷ್ ಪದಗಳಿಗೆಲ್ಲ ದಿನಬಳಕೆಯ ಒಂದು ಅರ್ಥವಿದ್ದು, ಅದರಿಂದ ಗೊಂದಲ ಉಂಟಾಗುವ ಸಂಭವವಿದ್ದುದರಿಂದ ಅವರು ಕ್ರಮೇಣ ಅನ್ಯಭಾಷೆಯ ಪದಗಳನ್ನು ಎರವಲು ಪಡೆಯಲು ಪ್ರಾರಂಭಿಸಿದರು. ವಿದ್ವಜ್ಜನರಿಗೆ ಚೆನ್ನಾಗಿ ಪರಿಚಯವಿದ್ದ ಲ್ಯಾಟಿನ್ ಭಾಷೆಯಿಂದ ಅನೇಕ ಪದಗಳನ್ನು ಆಯ್ದುಕೊಂಡುದು ಸಹಜವಾಗಿಯೇ ಇತ್ತು. ಅನೇಕ ವೇಳೆ ಆಯ್ದುಕೊಂಡ ಪದದ ಅರ್ಥವನ್ನು ವಿಸ್ತರಿಸಿ, ಇಲ್ಲವೇ ಸೀಮಿತಗೊಳಿಸಿ, ಅದಕ್ಕೆ ನಿರ್ದಿಷ್ಟ ಅರ್ಥ ಕೊಟ್ಟು ಉಪಯೋಗಿಸಿಕೊಂಡರು. ಪ್ರಾಚೀನ ಗ್ರೀಕರು ವಿಜ್ಞಾನ ಮತ್ತು ತತ್ವಶಾಸ್ತ್ರಗಳಲ್ಲಿ ವಿಶೇಷ ಕೃಷಿ ಮಾಡಿ, ಗ್ರೀಕ್ ಭಾಷೆಯನ್ನು ನಿಕೃಷ್ಟ ವಿಷಯ ನಿರೂಪಣೆಗೆ ಯೋಗ್ಯ

ಮಾಧ್ಯಮವಾಗಿ ಬಳಸಿದ್ದುದರಿಂದ ಗ್ರೀಕ್ ಭಾಷೆಯಿಂದಲೂ ಅನೇಕ ಪದಗಳನ್ನು ಆಯ್ದುಕೊಂಡರು. ಪಾರಿಭಾಷಿಕ ಪದಗಳ ಅವಶ್ಯಕತೆ ಇನ್ನೂ ಹೆಚ್ಚಿದಾಗ ಗ್ರೀಕ್ ಮತ್ತು ಲ್ಯಾಟಿನ್ ಶಬ್ದಕಾಂಡಗಳನ್ನು, ಪ್ರತ್ಯಯಗಳನ್ನೂ ಉಪಯೋಗಿಸಿಕೊಂಡು ಹೊಸಪದಗಳನ್ನು ಸೃಷ್ಟಿಮಾಡಿದರು.

"ಪಾರಿಭಾಷಿಕ ಪದಗಳಲ್ಲಿ ಬಹುತೇಕ ಉದ್ದೇಶಪೂರ್ವಕವಾಗಿ ಸೃಷ್ಟಿಸಿದಂಥವು. ಕಳೆದ ಎರಡು ಮೂರು ಶತಮಾನಗಳಲ್ಲಿ ವಿಜ್ಞಾನವು ಅತ್ಯಧಿಕ ವೇಗದಲ್ಲಿ ಬೆಳೆಯುತ್ತಿರುವುದರಿಂದ ಅದಕ್ಕೆ ಅಗತ್ಯವಾಗುವ ಹೊಸ ಹೊಸ ಪದಗಳನ್ನೆಲ್ಲ ಯಾವ ಒಂದು ಭಾಷೆಯೂ ಒದಗಿಸಲಾರದು. ಹೊಸ ಪದಗಳು ಸೃಷ್ಟಿಯಾಗಲೇಬೇಕು. ಅಂದ ಮಾತ್ರಕ್ಕೆ ಯಾವ ಆಧಾರವೂ ಇಲ್ಲದೆ, ಯಾವ ಕ್ರಮವನ್ನೂ ಅನುಸರಿಸದೆ ವಿಜ್ಞಾನಿಗಳು ಈ ಪದಗಳನ್ನು ಸೃಷ್ಟಿಸಿದರು ಎಂದರ್ಥವಲ್ಲ. ರಸಾಯನ ವಿಜ್ಞಾನಿಗಳು ಬಳಸುವ ester ಎಂಬ ಪದದ ಉತ್ಪತ್ತಿ ಹೇಗಾಯಿತು ಎಂಬುದು ತಿಳಿದಿಲ್ಲ. ಚರ್ಚೆಯಲ್ಲಿ ಭಾಗವಹಿಸಿದ್ದ ಐದು ಜನ ವಿಜ್ಞಾನಿಗಳು ತಮ್ಮ ತಮ್ಮ ಹೆಸರುಗಳ ಮೊದಲಕ್ಷರವನ್ನು ಸೇರಿಸಿ ಈ ಪದವನ್ನು ಸೃಷ್ಟಿಸಿದರು ಎಂದು ಒಂದು ಕಥೆ ಇದೆ. ಈ ಕಥೆ ನಿಜವೇ ಆಗಿದ್ದರೆ, ಯಾವ ಅರ್ಥಯುಕ್ತ ಆಧಾರವೂ ಇಲ್ಲದೆ ಹುಟ್ಟಿದ ಪಾರಿಭಾಷಿಕ ಪದ ಇದೊಂದೇ ಎಂಬಂತೆ ಕಾಣುತ್ತದೆ. ಉಳಿದ ಎಲ್ಲವೂ ಲ್ಯಾಟಿನ್ ಮತ್ತು ಗ್ರೀಕ್ ಮೂಲದಿಂದ ಬಂದ ಅರ್ಥಯುಕ್ತ ತುಂಡುಪದಗಳನ್ನು ಸೇರಿಸಿ ಮಾಡಿದಂಥವು. ಗ್ರೀಕ್ ಮೂಲದಿಂದ ಬಂದ gastro (ಹೊಟ್ಟೆ) ಮತ್ತು pod (ಪಾದ) ಸೇರಿ gastropod ಎಂಬ ಪದ ಸೃಷ್ಟಿಯಾಯಿತು. ಹೊಟ್ಟೆಯ ಮೇಲೆ ತೆವಳಿಕೊಂಡು ಚಲಿಸುವ ಪ್ರಾಣಿಗಳಿಗೆ ಈ ಹೆಸರು. ಲ್ಯಾಟಿನ್ ಮೂಲದಿಂದ ಬಂದ super (ಮೇಲೆ, ಮೀರಿ) ಮತ್ತು son (ಶಬ್ದ) ಸೇರಿ supersonic ಎಂಬ ಪದ ಸೃಷ್ಟಿಯಾಯಿತು. 'ಶಬ್ದದ ವೇಗವನ್ನು ಮೀರಿದ' ಎಂಬುದು ಇದರ ಅರ್ಥ. ಹೀಗೆ ಹೊಸ ಪದಗಳನ್ನು ಸೃಷ್ಟಿಸುವಾಗ ವಿಜ್ಞಾನಿಗಳು ಮಡಿವಂತಿಕೆಗೆ ಕಟ್ಟುಬಿದ್ದಿಲ್ಲ. ಗ್ರೀಕ್ ಮೂಲದ tele (ದೂರದಿಂದ) ಎಂಬುದಕ್ಕೆ ಲ್ಯಾಟಿನ್ ಮೂಲದ vis (ನೋಡುವುದು) ಎಂಬುದನ್ನು ಸೇರಿಸಿ television ಪದವನ್ನು ಸೃಷ್ಟಿಸಿದ್ದಾರೆ.... ಬರ್ಮಿಂಗ್‌ಹ್ಯಾಮ್ ವಿಶ್ವವಿದ್ಯಾನಿಲಯದ ಡಾ. ಫ್ಲಡ್ ಎಂಬುವರು ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಿಂದ ಪಡೆದ ಇಂತಹ ೧೧೫೦ ತುಂಡುಪದಗಳನ್ನು ಸಂಗ್ರಹಿಸಿ, ಪಟ್ಟಿ ಮಾಡಿದ್ದಾರೆ. ವಿವಿಧ ವಿಜ್ಞಾನ ಶಾಖೆಗಳಲ್ಲಿ ಬಳಸುತ್ತಿರುವ ಲಕ್ಷಾಂತರ ಪಾರಿಭಾಷಿಕ ಪದಗಳೆಲ್ಲ ಈ ೧೧೫೦ ತುಂಡು ಪದಗಳಿಂದ ಸೃಷ್ಟಿಯಾದುವೆಂದು ಅವರು ತೋರಿಸಿದ್ದಾರೆ.

".....ಶತಮಾನಗಳ ಕಾಲ ಶ್ರಮದ ದುಡಿಮೆ ಮಾಡಿ ಆಂಗ್ಲರು, ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳ ಸಹಾಯದಿಂದ ಸಿದ್ಧಪಡಿಸಿರುವ ಶಬ್ದ ಭಂಡಾರವನ್ನು ಹಾಗೆಯೇ

ಉಪಯೋಗಿಸಿಕೊಂಡುಬಿಟ್ಟರಾಯಿತು ಅನಿಸುವುದು ಸಹಜ. ಮೇಲುನೋಟಕ್ಕೆ ಈ ಮಾತು ಸಮಂಜಸವಾಗಿ ಕಾಣುತ್ತದೆ. ಆದರೆ ಕಾರ್ಯತಃ ಈ ನೀತಿಯನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಿದಾಗ ಕೆಲವು ತೊಂದರೆಗಳು ಉದ್ಭವಿಸುತ್ತವೆ. ಲ್ಯಾಟಿನ್ ಮತ್ತು ಗ್ರೀಕ್ ಮೂಲಗಳಿಂದ ಬಂದ ಪದಗಳು ಅನೇಕ ವೇಳೆ ಕನ್ನಡ ಭಾಷೆಗೆ ಹೊಂದಿಕೊಳ್ಳುವುದಿಲ್ಲ. ಒಂದು ವೇಳೆ ಭಾಷಾ ಸೌಂದರ್ಯವನ್ನು ಕಡೆಗಣಿಸಲು ನಾವು ಸಿದ್ಧರಿದ್ದರೂ ಭಾಷೆಯ ಓಟವಾದರೂ ಸುಗಮವಾಗಿರುವುದು ಅಗತ್ಯವಷ್ಟೆ? ನಮ್ಮ ಭಾಷೆಯ ಜಾಯಮಾನಕ್ಕೆ ಅತ್ಯಂತ ವಿಜಾತೀಯವಾಗಿ ಕಾಣಿಸುವ ಪದಗಳನ್ನು ನಮ್ಮ ಭಾಷೆಗೆ ಅಳವಡಿಸಿಕೊಳ್ಳುವುದು ಕಷ್ಟವಾಗುತ್ತದೆ. ಪದ ಅತ್ಯಂತ ಪಾರಿಭಾಷಿಕವಾಗಿದ್ದು, ಕೇವಲ ಶಾಸ್ತ್ರ ಸಾಹಿತ್ಯದಲ್ಲಿ ಮಾತ್ರ ಕಾಣಿಸಿಕೊಳ್ಳುವುದಾಗಿದ್ದರೆ ಚಿಂತೆಯಿಲ್ಲ; ಅದು ಎಷ್ಟೇ ವಿಜಾತೀಯವಾಗಿರಲಿ, ಅದನ್ನು ಅಂಗೀಕರಿಸಲು ನಮ್ಮ ಮನಸ್ಸು ಒಪ್ಪೀತು. ಪದ ಅಷ್ಟು ಪಾರಿಭಾಷಿಕವಾಗಿ ಇರದೆ ನಮ್ಮ ಭಾಷೆಯ ಸಾಮಾನ್ಯ ಸಾಹಿತ್ಯವನ್ನು ಪ್ರವೇಶಿಸುವಂಥಾದರೆ ಅದರಿಂದ ಜನ್ಯಪದಗಳನ್ನು ವ್ಯುತ್ಪತ್ತಿ ಮಾಡುವುದು ಅಗತ್ಯವಾದರೆ, ಅದು ಕ್ರಿಯಾಪದವಾಗಿದ್ದು ಭೂತ ಭವಿಷ್ಯದ ವರ್ತಮಾನ ರೂಪಗಳಲ್ಲಿ ಅದನ್ನು ಬಳಸಿಕೊಳ್ಳಲು ಆಗುವುದಿಲ್ಲ. ಕನ್ನಡ ಭಾಷೆಗೆ ಹೊಂದಿಕೊಳ್ಳಬಲ್ಲ ಬೇರೊಂದು ಸಮಾನ ಪದವನ್ನು ಸೃಷ್ಟಿಸುವುದು ಆಗ ಅಗತ್ಯವಾಗುತ್ತದೆ. ಆ ಸಂದರ್ಭದಲ್ಲಿ ನಮಗಿರುವುದು ಒಂದೇ ಮಾರ್ಗ. ಯೂರೋಪಿಯನ್ನರು ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳ ಮರೆಹೊಕ್ಕಂತೆ ನಾವು ಸಂಸ್ಕೃತದ ಮೊರೆ ಹೋಗಬೇಕಾಗುವುದು.

"......ಯಾವುದಾದರೊಂದು ಪಾರಿಭಾಷಿಕ ಪದವನ್ನು ನಾವು ಸಂಧಿಸಿದಾಗ ಮೊತ್ತಮೊದಲು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ ಎಂದರೆ, ಈ ಪದವನ್ನು ಹಾಗೆಯೇ ಕನ್ನಡದಲ್ಲಿ ಬಳಸಿಕೊಳ್ಳಬಹುದೇ, ಇಲ್ಲವೇ ಸಂಸ್ಕೃತದ ನೆರವು ಪಡೆದು ಬೇರೊಂದು ಸಮಾನಪದವನ್ನು ಸೃಷ್ಟಿಸಲೇಬೇಕೇ ಎಂಬುದು.

"ಪದವು ಅತ್ಯಂತ ಪಾರಿಭಾಷಿಕವಾಗಿದ್ದು ಕೇವಲ ಶಾಸ್ತ್ರಸಾಹಿತ್ಯದಲ್ಲಿ ಮಾತ್ರ ಬಳಸುವಂತಹುದಾದರೆ ಅದು ವಿಜಾತೀಯವಾಗಿ ಕಂಡರೂ ಚಿಂತೆಯಿಲ್ಲ. ಅದನ್ನು ಹಾಗೆಯೇ ಉಳಿಸಿಕೊಳ್ಳಬಹುದು".

"ಪದವು ಪಾರಿಭಾಷಿಕವಾದರೂ ದಿನಬಳಕೆಯ ಭಾಷೆಗೆ ನುಸುಳಿ ಬರುವ ಸಂಭವವಿದ್ದರೆ, ಅದು ಕನ್ನಡ ಭಾಷೆಗೆ ಹೊಂದಿಕೊಳ್ಳಬಲ್ಲುದೇ ಎಂಬ ಪ್ರಶ್ನೆ ಬಹುಮುಖ್ಯವಾಗುತ್ತದೆ. 'ಅಲರ್ಜಿ' ಪದ ದಿನಬಳಕೆಯ ಭಾಷೆಯನ್ನು ಪ್ರವೇಶಿಸಿದೆ. ಅದನ್ನು ಹಾಗೆಯೇ ಉಳಿಸಿಕೊಳ್ಳುವುದರಲ್ಲಿ ತಪ್ಪಿಲ್ಲ. ಏಕೆಂದರೆ ಅದನ್ನು ಉಪಯೋಗಿಸಿ ಕನ್ನಡ ವಾಕ್ಯವನ್ನು ಹೆಣೆದರೆ ವಾಕ್ಯದ ಸೌಂದರ್ಯಕ್ಕಾಗಲಿ, ಓಟಕ್ಕಾಗಲಿ ಅದರಿಂದ ತೊಂದರೆಯಾಗದು. ಅದೇ equilibrium ಅಥವಾ acceleration

ಗಳ ವಿಷಯ ಹಾಗಲ್ಲ. ಇವು ಕನ್ನಡ ಭಾಷೆಗೆ ಹೊಂದಿಕೊಳ್ಳುವುದಿಲ್ಲ....." ಆದುದರಿಂದ ಅವುಗಳಿಗೆ ಸಮಾನಪದಗಳನ್ನು ಸೃಷ್ಟಿಸುವುದು ಒಳಿತು.

"ಯಾವುದೇ ಪಾರಿಭಾಷಿಕ ಪದದ ಮೂಲರೂಪ ಮಾತ್ರವಲ್ಲದೆ ಅದರ ಜನ್ಯಪದಗಳೂ ವಿಶೇಷವಾಗಿ ಬಳಕೆಯಲ್ಲಿದ್ದರೆ ಅದರ ಎಲ್ಲ ರೂಪಗಳನ್ನೂ ಕನ್ನಡದಲ್ಲಿ ಹಾಗೆಯೇ ಉಳಿಸಿಕೊಳ್ಳುವುದು ಹಿತವೆನಿಸುವುದಿಲ್ಲ. ಸಂಸ್ಕೃತ ಪ್ರತ್ಯಯಗಳನ್ನು ಹಚ್ಚಿ ಜನ್ಯಪದಗಳನ್ನು ವ್ಯುತ್ಪತ್ತಿ ಮಾಡುವಂತಿದ್ದರೆ ಇಟ್ಟುಕೊಳ್ಳಬಹುದು. ಉದಾಹರಣೆಗೆ - ಅಯಾನು ಎಂಬ ಪದ (ion) ಸರಳವಾಗಿದ್ದು ಕನ್ನಡಕ್ಕೆ ಹೊಂದಿಕೊಳ್ಳುವುದಲ್ಲದೆ, ಅದಕ್ಕೆ ಸಂಸ್ಕೃತ ಪ್ರತ್ಯಯಗಳನ್ನು ಹಚ್ಚಿ ಪಡೆದ ಜನ್ಯ ರೂಪಗಳೂ ಕನ್ನಡ ಭಾಷೆಗೆ ಹೊಂದಿಕೊಳ್ಳುತ್ತವೆ. ಉದಾಹರಣೆಗೆ - ಅಯಾನೀಕರಿಸು ಈ ರೀತಿ ಉತ್ಪತ್ತಿ ಮಾಡಿದ ಜನ್ಯಪದಗಳು ವಿಜಾತೀಯವಾಗಿದ್ದರೆ ಮೂಲಪದಕ್ಕೂ ಅದರ ಜನ್ಯಪದಗಳಿಗೂ ಸಮಾನ ಪದಗಳನ್ನು ಸೃಷ್ಟಿಸುವುದೇ ಮೇಲು."

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಮಾಜಿ ನಿರ್ದೇಶಕ ಪ್ರಭುಶಂಕರ ಅವರು ಪಾರಿಭಾಷಿಕ ಶಬ್ದಗಳ ಬಗ್ಗೆ ಕುವೆಂಪು ಅವರು ಹೇಳಿದ ಮಾತನ್ನು ಉಲ್ಲೇಖಿಸಿದರು : "ಒಂದು ಟೆಸ್ಟ್‌ಟ್ಯೂಬ್ ತೆಗೆದುಕೊಂಡು ಅದಕ್ಕೆ ಆ್ಯಸಿಡ್ ಸುರಿಯಿರಿ ಎಂದು ಬೇಕಾದರೂ ಅಧ್ಯಾಪಕರು ಹೇಳಲಿ. ಆದರೆ ಮೊದಲು ಕನ್ನಡ ಮಾಧ್ಯಮ ಜಾರಿಗೆ ಬರಲಿ".

ಈ ಮಾತುಗಳ ಅರ್ಥವನ್ನು ಯಾವುದೇ ವಿಶ್ಲೇಷಣೆ ಅಥವಾ ವಿವರಣೆ ಇಲ್ಲದೆ ಯಾರಾದರೂ ಅರಿಯಬಹುದು.

■

ಅಧ್ಯಾಯ-೫

ಶಿಕ್ಷಣ ಮಾಧ್ಯಮ - ವರದಿಗಳು

ದೇಶದಲ್ಲಿ ೧೯೩೦ರವರೆಗೆ ನೇಮಕಗೊಂಡ ಎಲ್ಲ ಸಮಿತಿಗಳೂ ಮತ್ತು ಆಯೋಗಗಳೂ ಪ್ರಾದೇಶಿಕ ಭಾಷೆಗಳೇ ಶಿಕ್ಷಣ ಮಾಧ್ಯಮ ಆಗಬೇಕೆಂದು ಏಕಾಭಿಪ್ರಾಯ ಸೂಚಿಸುತ್ತ ಬಂದಿದ್ದವು. ಈ ಸಲಹೆಯ ಪರಿಣಾಮವಾಗಿ ಮೈಸೂರು ರಾಜ್ಯದಲ್ಲೂ ಸಹ ಪ್ರೌಢಶಾಲೆ ಹಂತದಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮ ಆಗಬೇಕೆಂಬ ಬೇಡಿಕೆ ಬಲವಾಯಿತು. ಆಗ ಕನ್ನಡದಲ್ಲಿ ಪಠ್ಯಪುಸ್ತಕಗಳು ಲಭ್ಯವಿಲ್ಲದಿದ್ದರೂ ಎನ್. ಎಸ್. ಸುಬ್ಬರಾಯರು ಪ್ರೌಢಶಾಲಾ ಹಂತದಲ್ಲಿ ಕನ್ನಡ ಮಾಧ್ಯಮ ಪ್ರಾರಂಭಿಸಿ ಪಠ್ಯಪುಸ್ತಕಗಳನ್ನು ರಚಿಸಲು ಶಿಕ್ಷಕರನ್ನು ಪ್ರೋತ್ಸಾಹಿಸಿದರು. ಇದೊಂದು ಮಹಾಸಾಧನೆಯೇ ಸರಿ. ದೇಶ ಸ್ವತಂತ್ರವಾದ ಮೇಲೂ ಹಲವು ವರದಿಗಳು ಶಾಲಾಶಿಕ್ಷಣದಲ್ಲಿ ದೇಶಭಾಷಾ ಮಾಧ್ಯಮವನ್ನು ಪ್ರತಿಪಾದಿಸಿದವು.

ಜೆ. ಬಿ. ಮಲ್ಲಾರಾಧ್ಯ ವರದಿ

ಶ್ರೀ ಜೆ. ಬಿ. ಮಲ್ಲಾರಾಧ್ಯ ಅವರು ೧೯೫೨ರಿಂದ ೧೯೫೫ರವರೆಗೆ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದರು.

ಮುಂದಿನ ಸುಮಾರು ೧೦ ವರ್ಷಗಳ ಅವಧಿಯಲ್ಲಿ, ರಾಜ್ಯದ ಆರ್ಥಿಕ ಸ್ಥಿತಿಯ ಇತಿಮಿತಿಗಳಲ್ಲಿ, ಪ್ರಾದೇಶಿಕ ಅಗತ್ಯ ಹಾಗೂ ಆಶೋತ್ತರಗಳಿಗೆ ಅನುಗುಣವಾಗಿ, ಸಾಧಿಸಲು ಸಾಧ್ಯವಾಗುವಂತಹ ಶಿಕ್ಷಣ ಇಲಾಖೆಯ ಕಾರ್ಯಕ್ರಮಗಳನ್ನು ರೂಪಿಸುವಂತೆ ಆಗಿನ ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯನವರ ಘನ ಅಧ್ಯಕ್ಷತೆಯಲ್ಲಿ, ಶಿಕ್ಷಣ ಇಲಾಖೆಯ ನಿರ್ದೇಶಕರಾಗಿದ್ದ ಜೆ. ಬಿ. ಮಲ್ಲಾರಾಧ್ಯ ಅವರನ್ನು ಕಾರ್ಯದರ್ಶಿಗಳಾಗಿ ಮಾಡಿ ಸಮಿತಿಯನ್ನು ೧೯೫೨ರಲ್ಲಿ ರಚಿಸಲಾಯಿತು. ಶಿಕ್ಷಣ ಸಚಿವರಾದ ಎ. ಜಿ. ರಾಮಚಂದ್ರರಾಯರು ಉಪಾಧ್ಯಕ್ಷರಾಗಿದ್ದರು. ಈ ಸಮಿತಿ ಫೆಬ್ರವರಿ ೨೬, ೧೯೫೩ರಲ್ಲಿ ಒಂದು ವರದಿಯನ್ನು ಸಿದ್ಧಪಡಿಸಿತು.

ಈ ಸಮಿತಿ ಶಿಕ್ಷಣಕ್ಕೆ ಸಂಬಂಧಿಸಿದ ಹಲವು ಶಿಫಾರಸುಗಳನ್ನು ಮಾಡಿತು. ಅದರಲ್ಲಿ ಭಾಷೆಗೆ ಸಂಬಂಧಿಸಿದ ಶಿಫಾರಸುಗಳಿವು :

೧. ಪ್ರಾಥಮಿಕ ಶಿಕ್ಷಣವು ಮಾತೃಭಾಷೆಯಲ್ಲಿಯೇ ನಡೆಯಬೇಕು.

೨. ಪ್ರಾಥಮಿಕ ಶಾಲೆಗಳಿಗೆ ಶೈಕ್ಷಣಿಕ ಬೋಧಕ ವಿಷಯಗಳು ಈ ಕೆಳಕಂಡವುಗಳನ್ನು ಒಳಗೊಂಡಿರಬೇಕು:

ಅ) ಭಾಷೆ

ಆ) ಸಂಸ್ಕೃತ ಭಾಷೆಗೆ ಒಂದು ಪರಿಚಯಾತ್ಮಕ ಪ್ರವೇಶಿಕೆ

ಇ) ಕನ್ನಡಿಗರಲ್ಲದ ವಿದ್ಯಾರ್ಥಿಗಳಿಗೆ ಮೂರನೆಯ ತರಗತಿಯಿಂದಲೇ ಕನ್ನಡ ಭಾಷೆಯ ಕಲಿಕೆ ಪ್ರಾರಂಭ

ಈ) ಇಂಗ್ಲಿಷ್ ಭಾಷೆಯನ್ನು ೫ನೆಯ ತರಗತಿಯಿಂದ ಪ್ರಾರಂಭಿಸಬೇಕು.

ಇದಾದ ನಂತರ ಶಿಕ್ಷಣ ಮಾಧ್ಯಮ ಹಾಗೂ ಭಾಷಾ ಕಲಿಕೆ ಬಗ್ಗೆ ಬಂದ ಪ್ರಮುಖ ವರದಿ-ಗೋಕಾಕ್ ವರದಿ.

ಗೋಕಾಕ್ ವರದಿ

ಗೋಕಾಕ್ ವರದಿ ವಾಸ್ತವವಾಗಿ ನೇರವಾಗಿ ಕನ್ನಡ ಮಾಧ್ಯಮಕ್ಕೆ ಸಂಬಂಧಿಸಿದ್ದಲ್ಲ. ಆದರೆ ಕರ್ನಾಟಕದಲ್ಲಿ ಅಭೂತಪೂರ್ವವಾದ ಕನ್ನಡಪ್ರಜ್ಞೆ ಉದಯವಾಗಿ, ಕಾಡ್ಗಿಚ್ಚಿನಂತೆ ಹಚ್ಚಲು ನೂಕುಬಲವನ್ನು ಒದಗಿಸಿದ್ದೇ ಗೋಕಾಕ್ ವರದಿ. ಮುಂದೊಂದು ದಿನ ಇಡೀ ಕರ್ನಾಟಕದಲ್ಲಿ ಕನ್ನಡವೇ ಶಿಕ್ಷಣ ಮಾಧ್ಯಮವಾಗುತ್ತದೆ. ಅದಕ್ಕೆ ಪೂರಕವಾಗಿ ಮೊದಲೇ ಕನ್ನಡದಲ್ಲಿ ಮಕ್ಕಳ ಭಾಷಾ ಸಾಮರ್ಥ್ಯವನ್ನು ಬೆಳೆಸಬೇಕು ಎಂಬ ಆಶಯದಿಂದ ಈ ಸಮಿತಿ ಪ್ರೌಢಶಾಲೆಯಲ್ಲಿ ಕನ್ನಡವೇ ಪ್ರಥಮ ಭಾಷೆ ಆಗಬೇಕು ಎಂಬ ಮುಖ್ಯ ಶಿಫಾರಸನ್ನು ತನ್ನ ವರದಿಯಲ್ಲಿ ಮಾಡಿತ್ತು. ಅದು ಮುಂದೆ ನ್ಯಾಯಾಲಯದಲ್ಲಿ ಬಿದ್ದುಹೋಯಿತು ಎಂಬ ಅಂಶ ಪ್ರತ್ಯೇಕವಾದುದು. ಆದರೆ ಅದೂ ಐದನೆಯ ತರಗತಿಯಿಂದ ಹತ್ತನೆಯ ತರಗತಿಯವರೆಗೆ ಕನ್ನಡ ಕಡ್ಡಾಯವಾಗಿ ಕಲಿಸಲು ಕಾರಣವಾಯಿತು. ಅಷ್ಟೇ ಅಲ್ಲ, ಒಂದರಿಂದ ನಾಲ್ಕನೇ ತರಗತಿಯವರೆಗೆ ಮಾತೃಭಾಷೆಯಲ್ಲೇ ಶಿಕ್ಷಣ ನೀಡಬೇಕೆಂಬ ವಿಚಾರಕ್ಕೆ ಸರ್ಕಾರ ಬದ್ಧವಾಗುವಂತೆ ಮಾಡುವ ಬೀಜಾಂಕುರವನ್ನು ಮಾಡಿತು.

ಮೊದಲೇ ಹೇಳಿದಂತೆ ಗೋಕಾಕ್ ವರದಿಗೆ ಕಾರಣವಾದ ಪರಿಸ್ಥಿತಿಯೇ ಬೇರೆ. ಕರ್ನಾಟಕದ ಪ್ರೌಢಶಾಲೆಗಳಲ್ಲಿ ಕಲಿಸುತ್ತಿದ್ದ ವಿವಿಧ ಭಾಷೆಗಳ ವಿಷಯದಲ್ಲಿ ಒಂದು ವಿವಾದವೆದ್ದಿತು. ವಿವಿಧ ಭಾಷಾ ಮಾಧ್ಯಮದ ಪ್ರೌಢಶಾಲೆಗಳಲ್ಲಿ ಕನ್ನಡ, ಇಂಗ್ಲಿಷ್, ತಮಿಳು, ತೆಲುಗು, ಮರಾಠಿ ಮುಂತಾದ ಭಾಷೆಗಳ ಜೊತೆಗೆ ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ಕಲಿಸಲು ಅವಕಾಶ ಇತ್ತು. ಆದರೆ ಸಂಸ್ಕೃತವನ್ನು ಪ್ರಾಥಮಿಕ

ಶಾಲೆಯಲ್ಲಿ ಕಲಿಸುವ ಅವಕಾಶ ಇರಲಿಲ್ಲ. ಇದರಿಂದ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳು ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ತೆಗೆದುಕೊಂಡರೂ, ಅದರ ಅಧ್ಯಯನ ಅಕ್ಷರಾಭ್ಯಾಸದಿಂದ ಪ್ರಾರಂಭವಾಗುತ್ತಿತ್ತು. ಅದರಿಂದಾಗಿ ಸಂಸ್ಕೃತವನ್ನು ಪ್ರಥಮಭಾಷೆಯಾಗಿ ತೆಗೆದುಕೊಂಡವರು ಎಸ್‌ಎಸ್‌ಎಲ್‌ಸಿಯಲ್ಲಿ ಇತರ ಭಾಷೆಗಳನ್ನು ಕಲಿಯುವವರಿಗಿಂತ ಹೆಚ್ಚು ಅಂಕಗಳನ್ನು ಸುಲಭವಾಗಿ ಪಡೆಯತೊಡಗಿದರು. ರ್‍ಯಾಂಕುಗಳೂ ಅವರ ಪಾಲಾಗತೊಡಗಿದವು. ಅಂಕಗಳಿಕೆಯ ಆಸೆಯಿಂದ ಹೆಚ್ಚೆಚ್ಚು ವಿದ್ಯಾರ್ಥಿಗಳು ಕನ್ನಡದ ಬದಲಿಗೆ ಸಂಸ್ಕೃತವನ್ನು ಆರಿಸತೊಡಗಿದರು. ಕನ್ನಡ ಕಲಿಯುವವರ (ಪ್ರಥಮ ಭಾಷೆಯಾಗಿ) ಸಂಖ್ಯೆಯೂ ಕ್ಷೀಣಿಸತೊಡಗಿತು. ಹೆಚ್ಚೆಚ್ಚು ಕನ್ನಡ ಮಾತೃಭಾಷೆಯವರೂ ಸಂಸ್ಕೃತವನ್ನು ಪ್ರಥಮ ಭಾಷೆಯಾಗಿಯೂ, ಇಂಗ್ಲಿಷನ್ನು ದ್ವಿತೀಯ ಭಾಷೆಯಾಗಿಯೂ, ಹಿಂದಿಯನ್ನು ತೃತೀಯ ಭಾಷೆಯಾಗಿಯೂ ಕಲಿಯತೊಡಗಿದರು. ಕನ್ನಡ ಕಲಿಕೆ ಕಡ್ಡಾಯವಾಗಿಲ್ಲದ್ದರಿಂದ ಕನ್ನಡವನ್ನು ಕಲಿಯದೆ ಕರ್ನಾಟಕದಲ್ಲಿ ಪ್ರೌಢಶಾಲಾ ಶಿಕ್ಷಣ ಪೂರೈಸುವವರ ಸಂಖ್ಯೆ ಅಪಾರವಾಗಿ ವೃದ್ಧಿಸತೊಡಗಿತು.

ಇದರಿಂದ ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲಿ ಕನ್ನಡಕ್ಕೆ ಒದಗಲಿರುವ ದುರ್ಗತಿಯನ್ನು ಮನಗಂಡ ಕೆಲವರು ಸಂಸ್ಕೃತ ಯಾರ ಮಾತೃಭಾಷೆಯೂ ಅಲ್ಲದ್ದರಿಂದ ಅದನ್ನು ಮಾತೃಭಾಷಾ ಪಟ್ಟಿಯಿಂದ ತೆಗೆಯಬೇಕೆಂಬ ಒತ್ತಾಯವನ್ನು ಮಾಡತೊಡಗಿದರು.

ಈ ಒತ್ತಾಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಿರ್ಣಯ ರೂಪದಲ್ಲಿ ವ್ಯಕ್ತವಾಯಿತು.

ಈ ವಿಷಯದಲ್ಲಿ ಕನ್ನಡಪರವಾದವರ ಒತ್ತಾಯ ಹೆಚ್ಚಾಯಿತು. ಅದೇ ಸಮಯದಲ್ಲಿ ಸಂಸ್ಕೃತಪರವಾದವರು ಯಥಾಸ್ಥಿತಿ ಮುಂದುವರೆಯಬೇಕೆಂದು ವಾದಿಸತೊಡಗಿದರು. ಈ ಚರ್ಚೆ ಮುಂದುವರೆಯಿತು. ಕೊನೆಗೆ, ಕೇವಲ ಗ್ರಾಂಥಿಕ ಭಾಷೆಯಾದ ಸಂಸ್ಕೃತವು ಜನಭಾಷೆಗಳೊಡನೆ ಪ್ರಥಮ ಭಾಷೆಯಾಗಲು ಅರ್ಹವಲ್ಲವೆಂಬುದನ್ನು ಮನಗಂಡ ಕರ್ನಾಟಕ ಸರಕಾರವು ೧೯೭೯ರ ಅಕ್ಟೋಬರ್ ತಿಂಗಳಲ್ಲಿ ಒಂದು ಆದೇಶವನ್ನು ಹೊರಡಿಸಿ, ಸಂಸ್ಕೃತವನ್ನು ತೃತೀಯ ಭಾಷೆಯಾಗಿ ಮಾತ್ರ ಓದಲು ಅವಕಾಶ ಕಲ್ಪಿಸಿಕೊಟ್ಟಿತು. ಆದರೆ ಇದರಿಂದ ವಿವಾದ ಮತ್ತಷ್ಟು ಜೋರಾಯಿತು. ಈ ಕೆಲವರು ಈ ವಿಷಯವನ್ನು ಉಚ್ಚನ್ಯಾಯಾಲಯಕ್ಕೆ ಒಯ್ದರು. ಕರ್ನಾಟಕ ವಿಧಾನಸಭೆಯಲ್ಲೂ ಚರ್ಚೆಯಾಯಿತು. ಈ ವಿಚಾರವನ್ನು ಕೂಲಂಕಷವಾಗಿ ವಿಶ್ಲೇಷಿಸಿ ಒಂದು ತೀರ್ಮಾನಕ್ಕೆ ಬರಲು ಅನುಕೂಲವಾಗುವಂತೆ ತಜ್ಞರ ಒಂದು ಸಮಿತಿಯನ್ನು ನೇಮಿಸಲು ಸರ್ಕಾರವು ನಿರ್ಧರಿಸಿತು. ಈ ಅಭಿಪ್ರಾಯವನ್ನು ಎರಡೂ ಸದನಗಳ ಸದಸ್ಯರೂ ಅನುಮೋದಿಸಿದರು.

ಅದರಂತೆ ಕರ್ನಾಟಕ ಸರಕಾರವು ದಿನಾಂಕ ೫ನೇ ಜುಲೈ ೧೯೮೦ರಂದು ಕ್ರಮಾಂಕ ಇಡಿ/೧೧೩/ಎಸ್‌ಒಎಚ್/೭೯ ಆಜ್ಞೆಯ ಮೂಲಕ ಒಂದು ತಜ್ಞರ ಸಮಿತಿಯನ್ನು ನೇಮಿಸಿತು. ಅದರ ಅಧ್ಯಕ್ಷತೆಯನ್ನು ಡಾ. ವಿ. ಕೆ. ಗೋಕಾಕರಿಗೆ ನೀಡಲಾಯಿತು. ಜಿ. ನಾರಾಯಣ, ಪ್ರೊ. ಎಸ್. ಕೆ. ರಾಮಚಂದ್ರರಾವ್, ಪ್ರೊ. ತ. ಸು. ಶಾಮರಾವ್, ಡಾ. ಕೆ. ಕೃಷ್ಣಮೂರ್ತಿ ಹಾಗೂ ಪ್ರೊ. ಮಲ್ಲೆದೇವರು ಸದಸ್ಯರಾಗಿ ನೇಮಕಗೊಂಡರು. ಡಾ. ಪಿ. ವಿ. ನಾರಾಯಣ ಹೇಳಿರುವಂತೆ ಭಾಷಿಕ ಪ್ರಾತಿನಿಧ್ಯದ ದೃಷ್ಟಿಯಿಂದ ಈ ಸಮಿತಿ ಸಮತೋಲನದ್ದಾಗಿತ್ತು.

ಈ ಸಮಿತಿಗೆ ಸರ್ಕಾರ ಪರಾಮರ್ಶನೆಗಾಗಿ ಮೂರು ಅಂಶಗಳನ್ನು ನೀಡಿತ್ತು. ಅವುಗಳೆಂದರೆ :

೧. ಸಂಸ್ಕೃತವು ಶಾಲಾ ಪಠ್ಯವಿಷಯಗಳಲ್ಲಿ ಅಭ್ಯಾಸದ ಒಂದು ವಿಷಯವಾಗಿ ಉಳಿಯಬೇಕೆ?

೨. ಹಾಗೆ ಉಳಿಯಬೇಕಾದರೆ ಕನ್ನಡಕ್ಕೆ ಪರ್ಯಾಯವಾಗದಂತೆ ಅದನ್ನು ಉಳಿಸಿಕೊಳ್ಳುವುದು ಹೇಗೆ?

೩. ತ್ರಿಭಾಷಾ ಸೂತ್ರದಂತೆ ಕನ್ನಡವನ್ನು ಕಡ್ಡಾಯ ಮಾಡಿ, ಮಿಕ್ಕ ಭಾಷೆಗಳಲ್ಲಿ ಯಾವುದಾದರೂ ಎರಡನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೇ ಬಿಡುವುದು ಸೂಕ್ತವೇ?

ಸಮಿತಿಯು ತಾನೇ ತೀರ್ಮಾನ ಕೈಗೊಳ್ಳಲಿಲ್ಲ. ರಾಜ್ಯಾದ್ಯಂತ ಸಂಚರಿಸಿ, ಸರ್ಕಾಥ ಮಂಡಿಸಿದ್ದ ಅಂಶಗಳ ಬಗ್ಗೆ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಿತು. ಸಾಹಿತಿಗಳು, ಅಧ್ಯಾಪಕರು, ಇತರ ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಆದರೆ ಕೆಲವೆಡೆ ಈ ಸಮಿತಿಯ ವರದಿ ಕನ್ನಡಕ್ಕೆ ಮಾರಕವಾಗಬಹುದೆಂಬ ತಮ್ಮ ಶಂಕೆಯಿಂದ ಪ್ರತಿಭಟನೆಗಳೂ ನಡೆದವು.

೧೯೭೮ರವರೆಗೆ ಹಿಂದಿಯನ್ನು ಎಲ್ಲರೂ ಮೂರನೆಯ ಭಾಷೆಯಾಗಿ ಕಲಿಯಬೇಕೆಂಬ ನಿಯಮವಿತ್ತು. ಕೆಲಕಾಲಾನಂತರ ಕನ್ನಡವನ್ನು ಮೊದಲ ಅಥವಾ ಎರಡನೇ ಭಾಷೆಯಾಗಿ ಕಲಿಯದವರು ಮೂರನೆಯ ಭಾಷೆಯಾಗಿ ಕನ್ನಡವನ್ನು ಕಲಿಯಬೇಕೆಂಬ ನಿಯಮವನ್ನು ಮಾಡಲಾಗಿತ್ತು. ಆದರೆ ಮೂರನೇ ಭಾಷೆಯಲ್ಲಿ ಪಾಸಾಗಲೇಬೇಕೆಂಬ ನಿಯಮವಿರಲಿಲ್ಲ. ಇದರಿಂದ ಕನ್ನಡೇತರರಿಗೆ ಕನ್ನಡ ಕಲಿಕೆ ಎಂಬುದು 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎಂಬಂತಾಗಿತ್ತು. ಆದ್ದರಿಂದ ಗೋಕಾಕ್ ಸಮಿತಿಯು ಮೂರು ಭಾಷೆಗಳನ್ನೂ ಪರೀಕ್ಷೆಗೆ ಕಡ್ಡಾಯ ಮಾಡಬೇಕೆಂದು ಶಿಫಾರಸ್ಸು ಮಾಡಿತು.

ಗೋಕಾಕ್ ವರದಿಯ ಮುಖ್ಯಾಂಶಗಳನ್ನು ಹೀಗೆ ಉಲ್ಲೇಖಿಸಬಹುದು :

೧. ಅ) ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಯು ಯಾವುದೇ ಪ್ರಥಮ ಭಾಷೆಯನ್ನು ಅಭ್ಯಾಸ ಮಾಡಿರಲಿ ಮತ್ತು ಯಾವುದೇ ಮಾಧ್ಯಮದಲ್ಲಿ ಕಲಿತಿರಲಿ, ಪ್ರೌಢಶಾಲೆಯ ತರಗತಿಗಳಲ್ಲಿ (ಅಂದರೆ ೮, ೯ ಮತ್ತು ೧೦ನೇ ತರಗತಿಗಳಲ್ಲಿ) ೧೫೦ ಅಂಕಗಳ ಪ್ರಥಮ ಭಾಷೆಯಾಗಿ ಕನ್ನಡವನ್ನು ಕಡ್ಡಾಯವಾಗಿ ಆರಿಸಿಕೊಳ್ಳತಕ್ಕದ್ದು.

ಆ) ಇಲ್ಲಿ ಕಲಿಯಲು ಅವಕಾಶವಿರದ ಆಧುನಿಕ ಭಾರತೀಯ ಭಾಷೆಗಳು ಮತ್ತು ಇಂಗ್ಲಿಷ್, ಅರೇಬಿಕ್ ಮತ್ತು ಸಂಸ್ಕೃತ ಭಾಷೆಗಳಂತಹ ಪ್ರಾಚೀನ ಭಾಷೆಗಳು - ಇವುಗಳಲ್ಲಿ ಒಂದನ್ನು ೧೦೦ ಅಂಕಗಳಿಗಾಗಿ ದ್ವಿತೀಯ ಭಾಷೆಯಾಗಿ ಅಭ್ಯಸಿಸತಕ್ಕದ್ದು.

ಇ) ಮೇಲೆ (ಆ)ದಲ್ಲಿ ಹೇಳಿದ ಭಾಷೆಗಳಲ್ಲಿ ಮತ್ತೊಂದನ್ನು ಎಂದರೆ ದ್ವಿತೀಯ ಭಾಷೆಯಾಗಿ ಓದಿದ್ದನ್ನು ಬಿಟ್ಟು, ೫೦ ಅಂಕಗಳಿಗಾಗಿ ತೃತೀಯ ಭಾಷೆಯನ್ನಾಗಿ ಆರಿಸಿಕೊಳ್ಳತಕ್ಕದ್ದು.

೨. ಈ ವ್ಯವಸ್ಥೆಯು ಕನ್ನಡ ವಿದ್ಯಾರ್ಥಿಗಳಿಗೆ ೧೯೮೧-೮೨ನೇ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ಬರತಕ್ಕದ್ದು (ಏಕೆಂದರೆ, ಆವರೆಗೆ ಪ್ರಥಮ ಭಾಷೆಯಾಗಿ ಕನ್ನಡವನ್ನು ಆರಿಸಿಕೊಂಡ ವಿದ್ಯಾರ್ಥಿಯೂ ಪೂರ್ತಿ ಅದನ್ನು ಓದದೆ ೧೦೦ ಅಂಕಗಳಿಗೆ ಕನ್ನಡವನ್ನು, ಮಿಕ್ಕ ೫೦ ಅಂಕಗಳಿಗೆ ಬೇರೊಂದು ಭಾಷೆಯನ್ನು ಆರಿಸಿಕೊಳ್ಳುವ ಅವಕಾಶವಿತ್ತು). ಮಿಕ್ಕವರಿಗೆ ೧೯೮೬-೮೭ರಿಂದ ಪ್ರೌಢಶಾಲೆಗಳಲ್ಲಿ ಈ ವ್ಯವಸ್ಥೆಯು ಜಾರಿಗೆ ಬರತಕ್ಕದ್ದು.

೩. ತತ್‌ಕ್ಷಣದಿಂದಲೇ ೧೯೮೬-೮೭ರವರೆಗೆ ಸಂಸ್ಕೃತವನ್ನು ತೃತೀಯ ಭಾಷೆಯಾಗಿ ಮಾತ್ರ ಆರಿಸಿಕೊಳ್ಳುವ ಅವಕಾಶವಿರಬೇಕು.

೪. ೧೯೮೬-೮೭ರಲ್ಲಿ ಸಮಿತಿಯ ಶಿಫಾರಸುಗಳನ್ನು ಎಲ್ಲರಿಗೂ ಅನ್ವಯಿಸಲು ಸಾಧ್ಯವಾಗುವಂತೆ, ೧೯೮೧-೮೨ರಿಂದಲೇ ಪ್ರಾಥಮಿಕ ಮೂರನೇ ತರಗತಿಯಿಂದ ಕನ್ನಡೇತರ ಮಕ್ಕಳಿಗೆ ಕನ್ನಡವನ್ನು ಕಡ್ಡಾಯ ಮಾಡಬೇಕು.

ಗೋಕಾಕ್ ಸಮಿತಿ ತನ್ನ ವರದಿಯನ್ನು ಸಲ್ಲಿಸಿ ಹಲವು ತಿಂಗಳಾದರೂ ಸರಕಾರ ಆ ಬಗ್ಗೆ ಯಾವುದೇ ತೀರ್ಮಾನವನ್ನು ಕೈಗೊಳ್ಳಲಿಲ್ಲ. ಆದರೆ ಅದರ ಅನುಷ್ಠಾನಕ್ಕಾಗಿ ಒತ್ತಾಯಗಳು ಬರುತ್ತಲೇ ಇದ್ದವು.

ಯಾವುದೋ ಒಂದು ಸಭೆಯಲ್ಲಿ ಆಗಿನ ಮುಖ್ಯಮಂತ್ರಿಗಳಾಗಿದ್ದ ಆರ್. ಗುಂಡೂರಾವ್ ಅವರು ಗೋಕಾಕ್ ವರದಿಯನ್ನು ಯಥಾವತ್ತಾಗಿ ಜಾರಿಗೆ ತರುವುದಾಗಿ ತಿಳಿಸಿದರು. ಆದರೆ ಅಲ್ಪಸಂಖ್ಯಾತ ಕಾಂಗ್ರೆಸ್ ನಾಯಕರೊಬ್ಬರು ಕನ್ನಡವನ್ನು ಏಕೈಕ ಪ್ರಥಮ ಭಾಷೆ ಮಾಡುವುದರಿಂದ ಉರ್ದು ಭಾಷಿಕರಿಗೆ ಅನ್ಯಾಯವಾಗುತ್ತದೆಂದು ವಿಧಾನಸೌಧಕ್ಕೆ ಜನರನ್ನು ಕರೆತಂದು ಪ್ರತಿಭಟಿಸಿದರು.

ಇದರಿಂದ ಅಂಜಿದ ಆಗಿನ ಮುಖ್ಯಮಂತ್ರಿಗಳು ಗೋಕಾಕ್ ವರದಿ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಳ್ಳದೇ ಕಾಲಹರಣ ಮಾಡುತ್ತಾ ಬಂದರು.

ಸರ್ಕಾರದ ಜಡತ್ವವನ್ನು ವಿರೋಧಿಸಿ ಪ್ರತಿಭಟನೆಗಳು ಆರಂಭವಾದವು. ಗೋಕಾಕ್ ವರದಿ ಜಾರಿಗೆ ಬರಲಿ ಎಂದು ಕನ್ನಡ ಪರವಾದವರು ಒತ್ತಾಯಿಸ ತೊಡಗಿದರೆ ಅಲ್ಪಸಂಖ್ಯಾತರು ವರದಿಯನ್ನು ವಿರೋಧಿಸತೊಡಗಿದರು. ಇದರಿಂದ ಪರ-ವಿರೋಧದ ಕಾವು ಏರತೊಡಗಿತು.

ಖ್ಯಾತ ಸಂಶೋಧಕ ಡಾ. ಶಂ. ಬಾ. ಜೋಶಿಯವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಕನ್ನಡ ಕ್ರಿಯಾಸಮಿತಿ, ಡಾ. ಆರ್. ಸಿ. ಹಿರೇಮಠ, ಬಸವರಾಜ ಕಟ್ಟೀಮನಿ, ಪಾಟೀಲ ಪುಟ್ಟಪ್ಪ, ಚೆನ್ನವೀರ ಕಣವಿ, ರಾ. ಯ. ದಾರವಾಡಕರ್ ಮುಂತಾದ ಗಣ್ಯರ ಸಮರ್ಥ ಮಾರ್ಗದರ್ಶನದಲ್ಲಿ ಎಪ್ರಿಲ್ ೯, ೧೯೮೨ ರಂದು ಧರಣಿ ಸತ್ಯಾಗ್ರಹ ಪ್ರಾರಂಭಿಸಿತು. ಈಗಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವ ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ) ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ (ಸದ್ಯದ ವಿಶ್ರಾಂತ) ಕುಲಪತಿಗಳಾಗಿರುವ ಡಾ. ಎಂ. ಎಂ. ಕಲಬುರ್ಗಿ ಕನ್ನಡ ಕ್ರಿಯಾಸಮಿತಿಯ ಪ್ರಧಾನ ಕಾರ್ಯದರ್ಶಿಗಳಾಗಿದ್ದರು.

ಮೈಸೂರಿನಲ್ಲಿ ಅದೇ ಸಮಯದಲ್ಲಿ ಕನ್ನಡ ಮಾಧ್ಯಮ ಹೋರಾಟ ಸಮಿತಿ ಹೆಸರಿನಲ್ಲಿ ಕನ್ನಡ ಮಾಧ್ಯಮ ಹಾಗೂ ಗೋಕಾಕ್ ವರದಿ ಜಾರಿಗೆ ಸರದಿ ಸತ್ಯಾಗ್ರಹವನ್ನು ಒಂದು ವಾರಕಾಲ ಆಚರಿಸಲಾಗಿತ್ತು. ತದನಂತರ ಜಿಲ್ಲಾ ಸಾಹಿತ್ಯ ಪರಿಷತ್ತು ಇತರ ಕನ್ನಡ ಸಂಘಟನೆಗಳೊಡಗೂಡಿ ಏಪ್ರಿಲ್ ೬ ರಿಂದ ೨೪ ಗಂಟೆಗಳ ಉಪವಾಸ ಸತ್ಯಾಗ್ರಹ ಆರಂಭಿಸಿತು. ರಾಷ್ಟ್ರಕವಿ ಕುವೆಂಪು ಅವರು ಅದನ್ನು ಉದ್ಘಾಟಿಸಿದರು. 'ಕನ್ನಡ ಕಲಿಯಿರಿ, ಇಲ್ಲವೇ ಕನ್ನಡ ನಾಡನ್ನು ಬಿಟ್ಟು ತೊಲಗಿ' ಎಂಬ ಘೋಷಣೆಯನ್ನು ಮಾಡಿದರು.

ಏಪ್ರಿಲ್ ೯ರಂದು ಬೆಂಗಳೂರಿನಲ್ಲಿ ನಡೆದ ಜಾಗೃತಿ ಸಮಾವೇಶದಲ್ಲಿ 'ಸಾಹಿತಿ ಕಲಾವಿದರ ಬಳಗ' ಅಸ್ತಿತ್ವಕ್ಕೆ ಬಂದು, ಏಪ್ರಿಲ್ ೧೩ರಿಂದ ಹೋರಾಟವನ್ನು ಆರಂಭಿಸಿತು. ವಿಧಾನಸೌಧದ ಕಬ್ಬನ್ ಪಾರ್ಕಿನ ಮೂಲೆಯಲ್ಲಿ ಧರಣಿ ಆರಂಭವಾಯಿತು. ನಗರದ ಕಾರ್ಮಿಕ ಸಂಘಗಳು ಮತ್ತು ಕನ್ನಡ ಸಂಘಟನೆಗಳು ಉತ್ಸಾಹದಿಂದ ಭಾಗವಹಿಸತೊಡಗಿದವು. ಗೊತ್ತಾದ ಒಂದು ದಿನ ಶ್ರೀರಂಗ, ರಂ. ಶ್ರೀ. ಮುಗಳಿ, ಎಂ. ವಿ. ಸೀ. ಮುಂತಾದ ಹಿರಿಯ ಸಾಹಿತಿಗಳ ಬಂಧನವೂ ಆಯಿತು.

ಅದೇ ದಿನ ಮೈಸೂರಿನಲ್ಲಿ ಆಗಿನ ಮುಖ್ಯಮಂತ್ರಿಯಾಗಿದ್ದ ಆರ್. ಗುಂಡೂರಾವ್‌ರನ್ನು ಮಾನಸಗಂಗೋತ್ರಿಯಲ್ಲಿ ನಡೆದ ಸಮಾರಂಭದಲ್ಲಿ ಸಾಹಿತಿಗಳು, ವಿದ್ಯಾರ್ಥಿಗಳು, ಅಧ್ಯಾಪಕರು ನೂರಾರು ಸಂಖ್ಯೆಯಲ್ಲಿ ಮುತ್ತಿಗೆ ಹಾಕಿದರು.

ಖ್ಯಾತ ಪತ್ರಕರ್ತ ಖಾದ್ರಿ ಶಾಮಣ್ಣ ಅವರ ಸಂಪಾದಕತ್ವದಲ್ಲಿ ಬರುತ್ತಿದ್ದ ಕನ್ನಡ ಪ್ರಭ ದಿನಪತ್ರಿಕೆ ಅಂದಿನ ವರದಿಗೆ ನೀಡಿದ್ದ ಶೀರ್ಷಿಕೆ - **'ಕುಪಿತ ಕನ್ನಡನಾಡು, ಮುಖ್ಯಮಂತ್ರಿಗಳಿಗೆ ಮುತ್ತಿಗೆ'.**

ಬಿಜಾಪುರದಲ್ಲಿ ಗಂಗಾಧರ ಕೊರಳ್ಳಿಯವರು ೫೬ ದಿನಗಳ ಉಪವಾಸ ಕೈಗೊಂಡರು. ಇಳಕಲ್ಲಿನಲ್ಲಿ ಚನವೀರಪ್ಪ ಜುಂಜಾ ೨೧ ದಿನ ಉಪವಾಸ ಮಾಡಿದರು.

ಗಂಗೂಬಾಯಿ ಹಾನಗಲ್ ಅವರೂ ಸೇರಿದಂತೆ ಅನೇಕ ಸಾಹಿತಿಗಳು ಅಕಾಡೆಮಿಗಳು, ಸರ್ಕಾರದಿಂದ ತಮಗೆ ದತ್ತವಾಗಿದ್ದ ಪ್ರಶಸ್ತಿಗಳನ್ನು ಹಿಂತಿರುಗಿಸ ತೊಡಗಿದರು. ವಿಶ್ವಕನ್ನಡ ಸಮ್ಮೇಳನ ನಡೆಸಿದರೆ ಅದರಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಘೋಷಿಸತೊಡಗಿದರು.

ಮೈಸೂರು, ಬೆಂಗಳೂರು, ಧಾರವಾಡಗಳಲ್ಲಿ ನಿತ್ಯಬಂಧನಕ್ಕೆ ಒಳಗಾಗುತ್ತಿದ್ದವರ ಸಂಖ್ಯೆ ನೂರಾರನ್ನು ಮುಟ್ಟತೊಡಗಿತು. ಜನರ ಒತ್ತಾಯಕ್ಕೆ ಮಣಿದು ನಟಸಾರ್ವಭೌಮ ಡಾ. ರಾಜ್‌ಕುಮಾರ್ ಅವರೂ ಚಳುವಳಿಗೆ ಧುಮುಕಿದರು.

ದಿಗಿಲುಗೊಂಡ ಸರಕಾರ, ಕನ್ನಡವನ್ನು ಪ್ರಥಮ ಭಾಷೆ ಮಾಡದಿದ್ದರೂ, ಕಲಿಕೆಯನ್ನು ಕಡ್ಡಾಯಗೊಳಿಸಿತು. ಸಂಸ್ಕೃತವನ್ನು ಪ್ರಥಮ ಭಾಷೆಯ ಸ್ಥಾನದಿಂದ ತೆಗೆದುಹಾಕಿತು. ಅದು ಗೋಕಾಕ್ ವರದಿಯ ಅನುಷ್ಠಾನವಾಗಿರದೆ ತಿರುಚಿದ ಶಿಫಾರಸುಗಳ ಜಾರಿಯಾಗಿತ್ತು.

ಕನ್ನಡವನ್ನು ಕಡ್ಡಾಯ ಮಾಡಿದ್ದಕ್ಕಷ್ಟೇ ತೃಪ್ತರಾಗಿ, ಸರಕಾರದ ನಿರ್ಣಯವನ್ನು ಕೆಲವು ಸಾಹಿತಿಗಳು ಸ್ವಾಗತಿಸಿದರು. ಸ್ವಲ್ಪಕಾಲ ಗೊಂದಲದ ವಾತಾವರಣ ನಿರ್ಮಿತವಾಗಿತ್ತು. ಆದರೆ ಧಾರವಾಡದ ಕ್ರಿಯಾಸಮಿತಿ ಹೋರಾಟ ಮುಂದುವರೆಸಿತು. ಮೈಸೂರಿನಲ್ಲಿ ಕನ್ನಡ ಕ್ರಿಯಾಸಮಿತಿ ಆಶ್ರಯದಲ್ಲಿ ಧರಣಿ ಸತ್ಯಾಗ್ರಹವನ್ನು ತಿಂಗಳಿಗೂ ಹೆಚ್ಚುಕಾಲ ನಡೆಸಲಾಯಿತು. ಪ. ಮಲ್ಲೇಶ್ ಕ್ರಿಯಾಸಮಿತಿಯ ಅಧ್ಯಕ್ಷರಾಗಿದ್ದರು. ಸ. ರ. ಸುದರ್ಶನ, ಸ. ರಮೇಶ್ ಮತ್ತು ಮಳಲಿ ವಸಂತಕುಮಾರ್ ಕಾರ್ಯದರ್ಶಿಗಳಾಗಿದ್ದರು.

ಬೆಂಗಳೂರಿನಲ್ಲಿ ಸಾಹಿತಿ ಕಲಾವಿದರ ಬಳಗವು ಚಳುವಳಿಯ ಕಾವು ಆರದಂತೆ ಹೋರಾಟವನ್ನು ಮುಂದುವರೆಸಿತು. ಸಾಹಿತಿ ಸಂಶೋಧಕ ಡಾ. ಎಂ. ಚಿದಾನಂದ ಮೂರ್ತಿ ಪ್ರಧಾನ ಸಂಚಾಲಕರಾಗಿದ್ದರು. ಜಿ. ಕೆ. ಸತ್ಯ, ಪಿ. ವಿ. ನಾರಾಯಣ ಮತ್ತಿತರರು ಸಂಚಾಲಕರಾಗಿ ಕಾವನ್ನು ಉಳಿಸಿಕೊಂಡು ಹೋದರು.

ಕೇಂದ್ರ ಕನ್ನಡ ಕ್ರಿಯಾಸಮಿತಿಯ ಆಶ್ರಯದಲ್ಲಿ ವರನಟ ರಾಜ್‌ಕುಮಾರ್ ನಾಡಿನಾದ್ಯಂತ ಸಂಚರಿಸಿ, ಚಳುವಳಿಗೆ ನವಚೇತನ ನೀಡಿದರು.

ಈ ಹೋರಾಟದಲ್ಲಿ ನಾಡಿನ ಸಾಹಿತಿಗಳು, ನೂರಾರು ಅಧ್ಯಾಪಕರು, ವಿದ್ಯಾರ್ಥಿಗಳು, ವಕೀಲರೂ ಸೇರಿದಂತೆ ನೂರಾರು ವೃತ್ತಿಪರರೂ, ಜನಸಾಮಾನ್ಯರೂ ಭಾಗವಹಿಸಿದರು (ಎಲ್ಲರ ಹೆಸರನ್ನೂ ಉಲ್ಲೇಖಿಸಲಾಗದ್ದಕ್ಕೆ ಕ್ಷಮೆ ಇರಲಿ).

ಸರ್ಕಾರ ಮತ್ತೊಮ್ಮೆ ಹೋರಾಟಗಾರರನ್ನು ಮಾತುಕತೆಗೆ ಕರೆಸಿತು. ವಿಧಾನಮಂಡಲದಲ್ಲಿ ಚರ್ಚಿಸಿ, ಅನುಕೂಲಕರವಾದ ನಿಲುವು ತೆಗೆದುಕೊಳ್ಳುವುದಾಗಿ ತಿಳಿಸಿತು. ಅಖಿಲ ಕನ್ನಡ ಕೇಂದ್ರ ಕ್ರಿಯಾಸಮಿತಿ ಇದಕ್ಕೆ ಒಪ್ಪಿ ಚಳುವಳಿಯ ಭರಾಟೆಯನ್ನು ತಗ್ಗಿಸಿತು.

ನಂತರ ವಿಧಾನಮಂಡಲದಲ್ಲಿ ನಡೆದ ಚರ್ಚೆಯನ್ನು ಆಧರಿಸಿ, ದಿನಾಂಕ ೨೦/೦೭/೧೯೮೨ರ ಸಂಖ್ಯೆ ಇಡಿ/೧೧೩/ಎಸ್‌ಓಹೆಚ್/೧೯೯೮ರಲ್ಲಿ ಮಾರ್ಪಡಿಸಿದ ಆದೇಶವನ್ನು ಸರಕಾರ ಹೊರಡಿಸಿತು. ಅದರ ಪ್ರಕಾರ :

ಪ್ರೌಢಶಿಕ್ಷಣ ಹಂತದಲ್ಲಿ ೧೨೫ ಅಂಕಗಳುಳ್ಳ ಕನ್ನಡವನ್ನು ಏಕೈಕ ಪ್ರಥಮ ಭಾಷೆಯಾಗಿ ಮತ್ತು ಇತರ ನಿಗದಿತ ಭಾಷೆಗಳ ಪೈಕಿ ೨ ಭಾಷೆಗಳನ್ನು ತಲಾ ೧೦೦ ಅಂಕಗಳಿಗೆ ಹೆಚ್ಚುವರಿಯಾಗಿ ವಿದ್ಯಾರ್ಥಿಗಳು ಕಲಿಯಬೇಕಾಯಿತು. ಹೆಚ್ಚುವರಿಯಾದ ೨ ಭಾಷೆಗಳಲ್ಲಿ ಕನ್ನಡ ಮಾತೃಭಾಷೆಯಲ್ಲದ ವಿದ್ಯಾರ್ಥಿಗಳಿಗೆ ಕಡ್ಡಾಯ ಕನ್ನಡ ಪರೀಕ್ಷೆಯಲ್ಲೂ, ಹಿಂದಿಯೇತರ ವಿದ್ಯಾರ್ಥಿಗಳಿಗೆ ಹಿಂದಿ ಪರೀಕ್ಷೆಯಲ್ಲೂ ೧೫ ಕೃಪಾಂಕಗಳನ್ನು ಹತ್ತು ವರ್ಷಗಳ ಕಾಲ ನೀಡಲು ನಿರ್ಧರಿಸಲಾಯಿತು.

ಪ್ರೌಢಶಾಲೆಯಲ್ಲಿ ಕನ್ನಡ ಏಕೈಕ ಪ್ರಥಮ ಭಾಷೆ ಆಗುವುದರಿಂದ ಭಾಷಾ ಅಲ್ಪಸಂಖ್ಯಾತರಿಗೆ ತೊಂದರೆಯಾಗದಿರಲಿ ಎಂಬ ಕಾರಣದಿಂದ ಗೋಕಾಕ್ ಸಮಿತಿಯು ಮೂರನೇ ತರಗತಿಯಿಂದ ಕನ್ನಡವನ್ನು ಕಲಿಸಬೇಕೆಂದು ಶಿಫಾರಸು ಮಾಡಿತ್ತು. ಆದರೆ ಅಲ್ಪಸಂಖ್ಯಾತರ ಪ್ರತಿನಿಧಿಗಳೂ ಸೇರಿದಂತೆ ಹಲವರ ಒತ್ತಾಯವನ್ನು ಮನ್ನಿಸಿ, ಸರಕಾರದ ಪರವಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ೧/೮/೧೯೮೨ರಂದು ಸುತ್ತೋಲೆಯೊಂದನ್ನು ಹೊರಡಿಸಿ, ಕನ್ನಡೇತರ ಶಾಲೆಗಳಲ್ಲಿ ೧೯೮೨-೮೩ನೇ ಸಾಲಿನಿಂದ ಮೊದಲನೆಯ ತರಗತಿಯಿಂದ ಕನ್ನಡ ಭಾಷೆಯನ್ನು ಕಲಿಸಲು ಸೂಚಿಸಿದರು.

ಸರ್ಕಾರದ ಈ ಭಾಷಾ ನೀತಿಯಿಂದ ಬಾಧಿತರಾದ ಶಿಕ್ಷಣ ಸಂಸ್ಥೆಗಳು ೨೦/೭/೧೯೮೨ರ ಆದೇಶವನ್ನು ಪ್ರಶ್ನಿಸಿ ಉಚ್ಚನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದರು. ಇದಕ್ಕೆ ಮೊದಲೇ ಸಂಸ್ಕೃತವನ್ನು ಪ್ರಥಮ ಭಾಷೆಗಳ ಪಟ್ಟಿಯಿಂದ ತೆಗೆದದ್ದನ್ನು ಪ್ರಶ್ನಿಸಿ, ದಾವೆ ಹೂಡಲಾಗಿತ್ತು. ನ್ಯಾಯಾಲಯ ಅದಕ್ಕೆ ತಡೆ ಆಜ್ಞೆಯನ್ನು ನೀಡಿತ್ತು. ಅನಂತರ ಪ್ರಾಥಮಿಕ ಹಂತದಲ್ಲಿ ಕನ್ನಡ ಭಾಷೆಯ ಕಡ್ಡಾಯವನ್ನು ಮತ್ತು ಪ್ರೌಢಶಾಲಾ ಹಂತದಲ್ಲಿ ಕನ್ನಡವನ್ನು ಪ್ರಥಮ ಭಾಷೆಯಾಗಿ ಕಲಿಸುವುದನ್ನು ಹೊಡೆದು ಹಾಕಿತು. ಆದರೆ ಕಡ್ಡಾಯ ಕನ್ನಡ ಕಲಿಕೆಗೆ ಹಸಿರು ನಿಶಾನೆ ತೋರಿತು. ಅವರೆಗೆ ಶಾಲಾ ಶಿಕ್ಷಣದಲ್ಲಿ ಇರದೇ ಇದ್ದ ಕನ್ನಡ ಕಡ್ಡಾಯ ಕಲಿಕೆಗೆ ಗೋಕಾಕ್ ವರದಿ ನೆಲೆ ಒದಗಿಸಿತು ಎಂಬುದು ಬಹುಮುಖ್ಯವಾದ ಅಂಶ.

■

ಅಧ್ಯಾಯ-೬

ಉಚ್ಚನ್ಯಾಯಾಲಯದ ತೀರ್ಪು – ಪೂರ್ಣಪಾಠ

ನ್ಯಾಯಮೂರ್ತಿಗಳಾದ ಶ್ರೀ ರಾಮಾ ಜೋಯಿಸ್ ಮತ್ತು ಶ್ರೀ ರಾಜೇಂದ್ರ ಬಾಬು

ಪ್ರಧಾನ ಕಾರ್ಯದರ್ಶಿ, ಭಾಷಾ ಅಲ್ಪಸಂಖ್ಯಾತರ ರಕ್ಷಣಾ ಸಮಿತಿ - ವಿರುದ್ಧ- ಕರ್ನಾಟಕ ರಾಜ್ಯ*

(ಎ) **ಪ್ರಾಥಮಿಕ ಶಾಲೆಗಳ ಸಹಾಯಾನುದಾನ ಸಂಹಿತೆ, ೧೯೬೯**-ನಿಯಮ ೧೨(i) ಹಾಗೂ (ii) - ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕೊಡುವುದು ಹಿತಕರ, ಅದು ಶಿಕ್ಷಣದಲ್ಲಿ ಉನ್ನತಮಟ್ಟ ಹಾಗೂ ಅಲ್ಪಸಂಖ್ಯಾತರ ಹಿತದೃಷ್ಟಿಯಿಂದ ಸಮಂಜಸ ಆಧಾರವನ್ನು ಹೊಂದಿರುತ್ತದೆ, ಸೂಕ್ತ ನಿಯಂತ್ರಣವೂ ಆಗಿದೆ - ಶಾಲೆಗಳಲ್ಲಿ ೪ನೇ ತರಗತಿಯವರೆಗೆ ಮಾತೃಭಾಷೆಯಲ್ಲಿ ಶಿಕ್ಷಣ ಕೊಡುವುದಕ್ಕೆ ಅನುಮತಿ ನೀಡುವ ಕಾರ್ಯನೀತಿಯನ್ನು ಏಕರೂಪವಾಗಿ ಹಾಗೂ ತಾರತಮ್ಯ ತೋರದೆ ಕಾರ್ಯಗತಗೊಳಿಸಲು ರಾಜ್ಯಸರ್ಕಾರಕ್ಕೆ ಅವಕಾಶವಿದೆ.

ತೀರ್ಪು :

ಮಾತೃಭಾಷೆಯಲ್ಲಿ ಪ್ರಾಥಮಿಕಶಿಕ್ಷಣವನ್ನು ಕೊಡಲು ಕಲ್ಪಿಸಿರುವ ಸಹಾಯಾನುದಾನ ಸಂಹಿತೆಯ ೧೨(i) ಮತ್ತು (ii)ನೇ ನಿಯಮವು ಹಿತಕರವಾದುದಾಗಿದೆ ಮತ್ತು ಅದಕ್ಕೆ ತತ್ವಾಧಾರವಿದೆ....... ಪ್ರಾಥಮಿಕ ಶಿಕ್ಷಣವು ಮಾತೃಭಾಷೆಯಲ್ಲಿ ಆಗಬೇಕೆಂದು ಅವಕಾಶ ಕಲ್ಪಿಸಿ ಭಾಷಾ ಅಲ್ಪಸಂಖ್ಯಾತರ ಭಾಷೆಯ ಬೆಳವಣಿಗೆಯನ್ನು ನಿಯಮ ೧೨(i) ಮತ್ತು (ii) ಸುನಿಶ್ಚಿತಗೊಳಿಸುತ್ತದೆ.... ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಿಕ್ಷಣವನ್ನು ೪ನೇ ತರಗತಿಯವರೆಗೆ ಮಾತೃಭಾಷೆಯಲ್ಲೇ ಕೊಡುವಂತೆ ಅಗತ್ಯಪಡಿಸುವ ಒಂದು ನಿಬಂಧನೆಯು, ಶಿಕ್ಷಣದಲ್ಲಿ ಉನ್ನತಮಟ್ಟ ಇರಬೇಕೆನ್ನುವ ಹಿತದೃಷ್ಟಿಯಿಂದ ಮತ್ತು ಅಲ್ಪಸಂಖ್ಯಾತರ ಹಿತದೃಷ್ಟಿಯನ್ನು

* ರಿಟ್ ಅರ್ಜಿ ಸಂಖ್ಯೆಗಳು ೨೮೫೬೬, ೨೮೫೬೭, ೩೨೬೫೪, ೩೩೭೯೦, ೩೬೬೩೦, ೩೬೬೩೦ಎ/೧೯೮೨, ೧೩೯೦೭ ಮತ್ತು ೧೦೦೬/೧೯೮೩ ದಿನಾಂಕ ೨೯ನೇ ಏಪ್ರಿಲ್ ೧೯೮೯

ಕಾಪಾಡಬೇಕೆನ್ನುವ ದೃಷ್ಟಿಯಿಂದ ಒಂದು ಸಮಂಜಸವಾದ ನಿಬಂಧನೆಯಾಗುತ್ತದೆ... ಏಕರೂಪವಾಗಿ ಮತ್ತು ಯಾವುದೇ ತಾರತಮ್ಯ ತೋರದೆಯೆ ಪ್ರಾಥಮಿಕ ಶಾಲೆಗಳಲ್ಲಿ ನಾಲ್ಕನೆಯ ತರಗತಿಯವರೆಗೆ ಮಾತೃಭಾಷೆಯಲ್ಲಿಯೇ ಶಿಕ್ಷಣ ಕೊಡುವ ಸಲುವಾಗಿ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಅನುಮತಿ ಕೊಡುವ ತನ್ನ ನೀತಿಯನ್ನು ಕಾರ್ಯಗತಗೊಳಿಸಲು ರಾಜ್ಯ ಸರ್ಕಾರಕ್ಕೆ ಅವಕಾಶವಿದೆ.

(ಪ್ಯಾರಾಗಳು - ೮ ಮತ್ತು ೧೧)

ದಿನಾಂಕ ೨೦-೭-೧೯೮೨ರ ಸರ್ಕಾರಿ ಆದೇಶ ಮತ್ತು ದಿನಾಂಕ ೧೧-೮-೧೯೮೨ರ ಸುತ್ತೋಲೆ ಭಾರತ ಸಂವಿಧಾನದ ೧೪, ೨೯(೧) ಹಾಗೂ ೩೦ನೇ ಅನುಚ್ಛೇದಗಳನ್ನು ಉಲ್ಲಂಘಿಸುವುದರಿಂದ ಅನೂರ್ಜಿತವೆಂದು ಘೋಷಿಸಲಾಗಿದೆ.

(ಬಿ) ಸರ್ಕಾರಿ ಆದೇಶ ಸಂಖ್ಯೆ ಇಡಿ ೧೧೩ ಎಸ್‌ಓಎಚ್ ೭೯ ದಿನಾಂಕ ೨೦ನೇ ಜುಲೈ ೧೯೮೨ : ಸುತ್ತೋಲೆ ದಿನಾಂಕ ೧೧ನೇ ಆಗಸ್ಟ್ ೧೯೮೨ - ಪ್ರಾಥಮಿಕಶಾಲೆಯ ಮೊದಲ ವರ್ಷದಿಂದ ಕನ್ನಡದ ವ್ಯಾಸಂಗವನ್ನು ಕಡ್ಡಾಯ ಮಾಡಿರುವುದು ಭಾರತ ಸಂವಿಧಾನದ ೧೪, ೨೯ ಹಾಗೂ ೩೦ನೆಯ ಅನುಚ್ಛೇದಗಳನ್ನು ಉಲ್ಲಂಘಿಸುತ್ತದೆ - IVನೇ ತರಗತಿಯವರೆಗೆ ಪ್ರಾಥಮಿಕಶಿಕ್ಷಣವು ಮಾತೃಭಾಷೆಯಲ್ಲಿರಬೇಕು - ಪ್ರಾಥಮಿಕ ಶಿಕ್ಷಣವು ಇಂಗ್ಲಿಷ್‌ನಲ್ಲಿರಬೇಕೆಂಬ ಮನವಿ ಅಸಂಗತ - ೪ನೇ ತರಗತಿಯವರೆಗೆ ಶಿಕ್ಷಣದ ಮಾಧ್ಯಮವು ಮಾತೃಭಾಷೆಯಲ್ಲೇ ಇರಬೇಕೆಂದು ಷರತ್ತು ಹಾಕಿ ರಾಜ್ಯ ಸರ್ಕಾರವು ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ಕೊಡಬಹುದು.

ತೀರ್ಪು :

ಮಾತೃಭಾಷೆಯಲ್ಲೇ IVನೇ ತರಗತಿಯುವರೆಗೆ ಪ್ರಾಥಮಿಕ ಶಿಕ್ಷಣ ಇರಬೇಕೆಂಬುದು ಎಲ್ಲಾ ಶೈಕ್ಷಣಿಕ ತಜ್ಞರ ಒಮ್ಮತದ ಅಭಿಪ್ರಾಯವಾಗಿರುವುದರಿಂದ ಹಾಗೂ ಅದು ರಾಜ್ಯ ಸರ್ಕಾರವು ಅಂಗೀಕರಿಸಿರುವ ಹಿತಕರವಾದ ಸಮಂಜಸ ಕಾರ್ಯನೀತಿಯಾಗಿರುವುದರಿಂದ ಭಾಷಾ ಅಲ್ಪಸಂಖ್ಯಾತರು ಮಂಡಿಸಿದ ಮನವಿಯನ್ನು ಒಪ್ಪಿಕೊಳ್ಳುತ್ತಾ, ಪ್ರಾಥಮಿಕಶಾಲೆಯ ಮೊದಲ ವರ್ಷದಿಂದಲೇ ಕನ್ನಡದ ವ್ಯಾಸಂಗವನ್ನು ಅಗತ್ಯಪಡಿಸುವ ಆಕ್ಷೇಪಿತ ಸರ್ಕಾರಿ ಆದೇಶವು ಸಂವಿಧಾನದ ೧೪, ೨೯ ಹಾಗೂ ೩೦ನೆಯ ಅನುಚ್ಛೇದಗಳನ್ನು ಉಲ್ಲಂಘಿಸುತ್ತದೆಂದು ಪೂರ್ಣ ನ್ಯಾಯಪೀಠವು ತೀರ್ಪಿತ್ತಿದೆ (ನೋಡಿ : ಐಎಲ್‌ಆರ್ ೧೯೮೯ ಕರ್ನಾ ೪೫೭, ಪುಟ ೫೮೪ರಲ್ಲಿ = ೧೯೮೯ ಕತೀವ ೩೧೨). ಆದ್ದರಿಂದ ಪ್ರಾಥಮಿಕ ಶಿಕ್ಷಣವು ಇಂಗ್ಲಿಷ್‌ನಲ್ಲಿರಬೇಕೆಂಬ ಯಾವುದೇ ವಾದವು, ಯಾವ ಆಧಾರದ ಮೇಲೆ ಪೂರ್ಣ ನ್ಯಾಯಪೀಠವು ಆಕ್ಷೇಪಿತ ಆದೇಶವು ಅಸಂವಿಧಾನಾತ್ಮಕವೆಂದು ತೀರ್ಪಿತ್ತಿದೆಯೋ

ಆ ಆಧಾರಕ್ಕೆ ಅಸಂಗತವಾದುದಾಗುತ್ತದೆ. ಏಕೆಂದರೆ, ಇದರಿಂದ, ಪ್ರಾಥಮಿಕ ಶಾಲೆಯ ಮೊದಲ ನಾಲ್ಕು ವರ್ಷಗಳಲ್ಲಿ ಮಾತೃಭಾಷೆಯ ಜಾಗದಲ್ಲಿ ಇಂಗ್ಲಿಷನ್ನು ತರಬೇಕೆಂದು ಕೇಳಿದಂತಾಗುತ್ತದೆ ಮತ್ತು ಮಾತೃಭಾಷೆಯಲ್ಲೇ IVನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕೆನ್ನುವ ಸಮಂಜಸ ಕಾರ್ಯನೀತಿಗೆ ಹಾಗೂ ಈ ಅರ್ಜಿಗಳಲ್ಲಿರುವ ಭಾಷಾ ಅಲ್ಪಸಂಖ್ಯಾತರ ವಾದಕ್ಕೂ ಸಂಪೂರ್ಣವಾಗಿ ಅಸಂಗತವಾದುದಾಗುತ್ತದೆ........ ಒಂದೇ ಮಾತೃಭಾಷೆಯ ಮಕ್ಕಳು ನಿರ್ದಿಷ್ಟ ಸಂಖ್ಯೆಯಲ್ಲಿ ಯಾವುದೇ ಶಾಲೆಗಳಲ್ಲಿ ಪ್ರವೇಶ ಪಡೆದುಕೊಂಡಾಗ ಅಂಥ ಪ್ರಾಥಮಿಕ ಶಾಲೆಗಳಲ್ಲಿ ನಾಲ್ಕನೆಯ ತರಗತಿಯವರೆಗೆ ಅವರವರ ಮಾತೃ ಭಾಷೆಯಲ್ಲಿಯೇ ಶಿಕ್ಷಣ ಕೊಡಬೇಕೆಂಬ ಷರತ್ತಿಗೆ ಒಳಪಟ್ಟು ಪ್ರಾಥಮಿಕ ಶಾಲೆಗಳನ್ನು ತೆರೆಯುವುದಕ್ಕೆ ಅನುಮತಿ ಕೊಡುವ ಕಾರ್ಯನೀತಿಯನ್ನು ರಾಜ್ಯ ಸರ್ಕಾರವು ಏಕರೂಪವಾಗಿ ಜಾರಿಗೊಳಿಸುವುದಕ್ಕೆ ಐಎಲ್‌ಆರ್ ೧೯೮೮ ಕರ್ನಾ ೨೧೮೮ರಲ್ಲಿ ವರದಿಯಾಗಿರುವ ತೀರ್ಪು ಅಡ್ಡಿಯಾಗುವುದಿಲ್ಲ.

(ಪ್ಯಾರಾಗಳು - ೭ ಮತ್ತು ೯)

ದಿನಾಂಕ ೨೦-೭-೧೯೮೨ರ ಸರ್ಕಾರಿ ಆದೇಶ ಮತ್ತು ದಿನಾಂಕ ೧೧-೮-೧೯೮೨ರ ಸುತ್ತೋಲೆ ಭಾರತ ಸಂವಿಧಾನದ ೧೪, ೨೯(೧) ಹಾಗೂ ೩೦ನೇ ಅನುಚ್ಛೇದಗಳನ್ನು ಉಲ್ಲಂಘಿಸುವುದರಿಂದ ಅನೂರ್ಜಿತವೆಂದು ಘೋಷಿಸಲಾಗಿದೆ.

ಉಲ್ಲೇಖಿಸಿರುವ ಮೊಕದ್ದಮೆಗಳು :

೧. ಐ ಎಲ್ ಆರ್ ೧೯೮೯ ಕರ್ನಾ. ೪೫೭ - ಪ್ರಧಾನ ಕಾರ್ಯದರ್ಶಿ ಭಾಆರಸ್ - ವಿರುದ್ಧ - ಕರ್ನಾಟಕ ರಾಜ್ಯ. (ಅನುಸರಿಸಲಾಗಿದೆ)

೨. ಐಎಲ್‌ಆರ್ ೧೯೮೮ ಕರ್ನಾ. ೨೧೮೮ - ಸಹ್ಯಾದ್ರಿ ಎಜ್ಯುಕೇಷನ್ ಟ್ರಸ್ಟ್ - ವಿರುದ್ಧ - ಕರ್ನಾಟಕ ರಾಜ್ಯ (ವಿವರಿಸಲಾಗಿದೆ ಹಾಗೂ ಭಿನ್ನವಾಗಿ ವಿಶೇಷಿಸಲಾಗಿದೆ)

೩. ಎಐಆರ್ ೧೯೫೫ ಸರ್ವೋನ್ಯಾ ೫೪೯ - ರಾಯ್ ಸಾಹೇಬ್ ರಾಮ್ ಜವಯ - ವಿರುದ್ಧ - ಪಂಜಾಬ್ ರಾಜ್ಯ. (ಅನುಸರಿಸಲಾಗಿದೆ)

೪. ಎಐಆರ್ ೧೯೮೧ ಸರ್ವೋನ್ಯಾ ೨೦೪೫ - ಮ.ಪ್ರ. ರಾಜ್ಯ - ವಿರುದ್ಧ - ಕುಮಾರಿ ನಿವೇದಿತಾ ಜೈನ್. (ಅನುಸರಿಸಲಾಗಿದೆ)

೫. ಐಎಲ್‌ಆರ್ ೧೯೮೯ ಕರ್ನಾ ೬೧೫ - ಮುನಿಯಪ್ಪ - ವಿರುದ್ಧ - ಕರ್ನಾಟಕ ರಾಜ್ಯ. (ಉಲ್ಲೇಖಿಸಲಾಗಿದೆ)

ಶ್ರೀ ಎ. ಕೆ. ಸುಬ್ಬಯ್ಯ; ಶ್ರೀ ಮಹಮ್ಮದ್ ಫರೂಕ್; ಶ್ರೀ ವಿ. ಕೆ. ವರದಾಚಾರಿ; ಶ್ರೀ. ಪಿ. ವಿಶ್ವನಾಥ ಶೆಟ್ಟಿ; ಶ್ರೀ ಸಿ. ಎಚ್. ಜಾಧವ್ ಪರ ಶ್ರೀ ಶಿವಯೋಗಿಮಠ; ಶ್ರೀ ಬಷೀರ್ ಹುಸೇನ್; ಶ್ರೀ ಎ. ಆರ್. ಕೌಜಲಗಿ-ಅರ್ಜಿದಾರರುಗಳ ಪರ ವಕೀಲರು; ಶ್ರೀ ಎನ್. ಸಂತೋಷ್ ಹೆಗ್ಡೆ, ಅಡ್ವೋಕೇಟ್ ಜನರಲ್; ಶ್ರೀ ಎಂ. ಆರ್. ಆಚಾರ್; ಶ್ರೀ ಎನ್. ದೇವದಾಸ್, ಸರ್ಕಾರಿ ವಕೀಲರು-ರಾಜ್ಯದ ಪರ ನ್ಯಾಯವಾದಿಗಳು.

ಟಿಪ್ಪಣಿ : ಐ ಎಲ್ ಆರ್ ೧೯೮೮ ಕರ್ನಾ ೨೧೮೮ರಲ್ಲಿ ವರದಿಯಾಗಿರುವ ಆಜ್ಞೆಯನ್ನು ವಿವರಿಸಲಾಗಿದೆ ಮತ್ತು ಭಿನ್ನವಾಗಿ ವಿಶೇಷಿಸಲಾಗಿದೆ.

ಆಜ್ಞೆ

ನ್ಯಾಯಮೂರ್ತಿ ರಾಮಾಜೋಯಿಸ್

ಮೊದಲು ಏಳು ಅರ್ಜಿಗಳಲ್ಲಿ, ಪ್ರಾಥಮಿಕಶಾಲೆಯ ಮೊದಲ ವರ್ಷದಿಂದ ಮಾತೃಭಾಷೆಯಲ್ಲಿ ತಮ್ಮ ಪ್ರಾಥಮಿಕ ಶಿಕ್ಷಣವನ್ನು ಪಡೆಯುತ್ತಿರುವ, ರಾಜ್ಯದಲ್ಲಿರುವ ಉರ್ದು, ಮರಾಠಿ, ತೆಲುಗು ಮತ್ತು ತಮಿಳು ಭಾಷಾ ಅಲ್ಪಸಂಖ್ಯಾತರನ್ನು ಪ್ರತಿನಿಧಿಸಿರುವ ಅರ್ಜಿದಾರರುಗಳು ಆಯಾಯ ಭಾಷಾ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಮಕ್ಕಳು ಕನ್ನಡವನ್ನು ಒಂದು ಕಡ್ಡಾಯದ ಹೆಚ್ಚಿನ ವಿಷಯವನ್ನಾಗಿ ಹಾಗೂ ಪ್ರೌಢಶಾಲೆಗಳಲ್ಲಿ ಓದಬೇಕಾದ ಮೂರು ಭಾಷೆಗಳ ಪೈಕಿ ಏಕೈಕ ಪ್ರಥಮ ಭಾಷೆಯನ್ನಾಗಿ ವ್ಯಾಸಂಗ ಮಾಡಬೇಕೆಂದು ದಿನಾಂಕ ೨೦ನೇ ಜುಲೈ ೧೯೮೨ರಂದು ಹೊರಟಿರುವ ರಾಜ್ಯ ಸರ್ಕಾರದ ಆದೇಶದ ಸಂವಿಧಾನಾತ್ಮಕ ಸಿಂಧುತ್ವವನ್ನು ಪ್ರಶ್ನಿಸಿದ್ದಾರೆ ಮತ್ತು ಅದನ್ನು ರದ್ದುಗೊಳಿಸಬೇಕೆಂದು ಹಾಗೂ ಸೂಕ್ತ ಆನುಷಂಗಿಕ ನಿರ್ದೇಶನಗಳನ್ನು ನೀಡಬೇಕೆಂದು ಸಹ ಪ್ರಾರ್ಥಿಸಿದ್ದಾರೆ.

೨. ಈ ಅರ್ಜಿಗಳಲ್ಲಿ ಪರಿಶೀಲನೆಗಾಗಿ ಉದ್ಭವಿಸಿದ ಪ್ರಶ್ನೆಯು ರಾಷ್ಟ್ರೀಯ ಹಾಗೂ ಸಂವಿಧಾನಾತ್ಮಕ ಮಹತ್ವದ ವಿಷಯವೆಂಬುದನ್ನು ಮನಗಂಡು ವಿಷಯಗಳನ್ನು ಕರ್ನಾಟಕ ಉಚ್ಚನ್ಯಾಯಾಲಯ ಅಧಿನಿಯಮದ ೯ನೇ ಪ್ರಕರಣದಡಿ ವಿಭಾಗ ನ್ಯಾಯಪೀಠಕ್ಕೆ ಉಲ್ಲೇಖಿಸಲಾಗಿತ್ತು. ವಿಭಾಗ ನ್ಯಾಯಪೀಠವೂ ಸಹ ಆ ಸರ್ಕಾರಿ ಆದೇಶದ ಸಂವಿಧಾನಾತ್ಮಕ ಸಿಂಧುತ್ವಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಅಧಿನಿಯಮದ ೭ನೇ ಪ್ರಕರಣದಡಿ ಪೂರ್ಣ ನ್ಯಾಯಪೀಠಕ್ಕೆ ಉಲ್ಲೇಖಿಸಿತ್ತು. ಪೂರ್ಣ ನ್ಯಾಯಪೀಠದ ಮುಂದೆ ಈ ಅರ್ಜಿಗಳಲ್ಲಿನ ಅರ್ಜಿದಾರರುಗಳ ವಾದ ಏನಿತ್ತೆಂದರೆ, ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಕೊಡಲು ಸಾಕಷ್ಟು ಸೌಲಭ್ಯಗಳನ್ನು ಒದಗಿಸುವುದು ರಾಜ್ಯದ ಹಾಗೂ ಸ್ಥಳೀಯ ಪ್ರಾಧಿಕಾರಗಳ ಹೊಣೆಗಾರಿಕೆಯೆಂದು ಹೇಳಿರುವ ಭಾರತ ಸಂವಿಧಾನದ ೩೫೦ಎ ಅನುಚ್ಛೇದದೊಂದಿಗೆ ಓದಿಕೊಂಡ,

ತಮ್ಮ ಭಾಷೆಯನ್ನು ಸಂರಕ್ಷಿಸಲು ಮೇಲೆ ಹೇಳಿರುವ ಭಾಷಾ ಅಲ್ಪಸಂಖ್ಯಾತರಿಗೆ ಭಾರತ ಸಂವಿಧಾನದ ೨೯ನೆಯ ಅನುಚ್ಛೇದದಡಿ ಭರವಸೆ ಕೊಟ್ಟಿರುವ ಮೂಲಭೂತ ಹಕ್ಕನ್ನು ಗಮನಿಸಲಾಗಿ ಹಾಗೂ ತಮ್ಮ ಇಚ್ಛಾನುಸಾರ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ತಮಗೆ ಭಾರತ ಸಂವಿಧಾನದ ೩೦ನೆಯ ಅನುಚ್ಛೇದದಡಿ ಭರವಸೆ ಕೊಟ್ಟಿರುವ ಹಕ್ಕನ್ನು ಗಮನಿಸಲಾಗಿ, ಮಾತೃಭಾಷೆಯಲ್ಲಿ ತಮ್ಮ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಸಲುವಾಗಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿಕೊಳ್ಳುವ ಹಾಗೂ ಅವುಗಳನ್ನು ನಡೆಸಿಕೊಂಡು ಬರುವ ಹಕ್ಕು ತಮಗಿದೆಯಾದ್ದರಿಂದ, ಪ್ರಾಥಮಿಕಶಾಲೆಯ ಮೊದಲ ವರ್ಷದಿಂದ ತಮ್ಮ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆಯುತ್ತಿರುವ ತಮ್ಮ ಮಕ್ಕಳಿಗೆ ಕನ್ನಡದ ವ್ಯಾಸಂಗವನ್ನು ಕಡ್ಡಾಯ ಮಾಡಿರುವ ಹಾಗೂ ಪ್ರೌಢಶಾಲೆಗಳಲ್ಲಿ ಕನ್ನಡವನ್ನು ಏಕೈಕ ಪ್ರಥಮ ಭಾಷೆಯಾಗಿ ನಿಗದಿಪಡಿಸಿರುವ ಸರ್ಕಾರಿ ಆದೇಶದ ಆ ಭಾಗವು ಸಂವಿಧಾನದ ೨೯ ಮತ್ತು ೩೦ನೆಯ ಅನುಚ್ಛೇದಗಳನ್ನು ಹಾಗೂ ೧೪ನೆಯ ಅನುಚ್ಛೇದವನ್ನೂ ಸಹ ಉಲ್ಲಂಘಿಸುತ್ತದೆ ಎನ್ನುವುದಾಗಿತ್ತು. ಪೂರ್ಣ ನ್ಯಾಯಪೀಠವು ತನ್ನ ಅಭಿಪ್ರಾಯಕ್ಕಾಗಿ ಉಲ್ಲೇಖಿಸಿದ್ದ ಪ್ರಶ್ನೆಗಳಿಗೆ ಅರ್ಜಿದಾರರುಗಳ ಪರ [೧] ಉತ್ತರಿಸಿತು.

೩. ಅದರಲ್ಲೂ ಮುಖ್ಯವಾಗಿ, ಪ್ರಾಥಮಿಕ ಶಾಲೆಗಳ ಮೊದಲ ನಾಲ್ಕು ವರ್ಷಗಳಲ್ಲಿ ಪ್ರಾಥಮಿಕ ಶಿಕ್ಷಣದ ಬೋಧನೆಯು ಮಾತೃಭಾಷೆಯಲ್ಲೇ ಇರಬೇಕೆಂಬ ವಾದಕ್ಕೆ ಸಮರ್ಥನೆಯಾಗಿ ಅರ್ಜಿದಾರರುಗಳು ಹಲವಾರು ತಜ್ಞ ಸಮಿತಿಗಳ ಅಭಿಪ್ರಾಯವನ್ನು, ವರದಿಗಳನ್ನು ಮತ್ತು ಮಂತ್ರಿಗಳ ಸಮ್ಮೇಳನಗಳಲ್ಲಿ ಕೈಗೊಂಡ ತೀರ್ಮಾನಗಳನ್ನು ಒದಗಿಸಿದ್ದರು ಹಾಗೂ ಆ ಹಂತದಲ್ಲಿ ಮಾತೃಭಾಷೆಯೇ ಅಲ್ಲದೆ ಕನ್ನಡವನ್ನೂ ತಂದುದಕ್ಕೆ ಯಾವ ಸಮರ್ಥನೆಯೂ ಇಲ್ಲವೆಂದು ವಾದಿಸಿದ್ದರು. ಪೂರ್ಣ ನ್ಯಾಯಪೀಠದ ಆಜ್ಞೆಯಲ್ಲಿ ಆ ಅಭಿಪ್ರಾಯಗಳ, ವರದಿಗಳ ಹಾಗೂ ತೀರ್ಮಾನಗಳ ಸುಸಂಗತ ಭಾಗಗಳನ್ನು ಕೊಡಲಾಗಿದೆ. ಈ ಎಲ್ಲಾ ವಿಷಯ ಸಾಮಗ್ರಿಗಳನ್ನು ಪರಾಮರ್ಶಿಸಿದ ಮೇಲೆ ಪೂರ್ಣ ನ್ಯಾಯಪೀಠವು, ಪ್ರಾಥಮಿಕ ಶಿಕ್ಷಣವನ್ನು, ಎಂದರೆ, ಮೊದಲ ನಾಲ್ಕು ವರ್ಷಗಳವರೆಗೆ ಮಾತೃಭಾಷೆಯಲ್ಲೇ ಶಿಕ್ಷಣ ಪಡೆಯಲು ತಮಗೆ ಮೂಲಭೂತ ಹಕ್ಕು ಇದೆಯೆಂಬ ಅರ್ಜಿದಾರರುಗಳ ವಾದವನ್ನು ಒಪ್ಪಿಕೊಂಡಿತು. ತೀರ್ಪಿನ ಸುಸಂಗತ ಭಾಗಗಳೆಂದರೆ ೨೬, ೨೭, ೨೮ ಹಾಗೂ ೪೭ನೇ ಪ್ಯಾರಾಗಳು. ಅವು ಹೀಗಿವೆ :

"ಆದ್ದರಿಂದ, ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಸಂಪೂರ್ಣ ಒಮ್ಮತಾಭಿಪ್ರಾಯ ಇರುವುದನ್ನು ನಾವು ನೋಡಬಹುದಾಗಿದೆ. ಮಕ್ಕಳಿಗೆ ಅವರ ಮಾತೃಭಾಷೆಯಲ್ಲೇ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಸೌಲಭ್ಯವನ್ನು ಕೊಡಲೇಬೇಕಾಗುತ್ತದೆ ಎನ್ನುವುದೇ ಆ ಅಭಿಪ್ರಾಯ.

---

೧. ಐಎಲ್‌ಆರ್ ೧೯೮೯, ಕರ್ನಾ ೪೫೭ ಪುಟ ೫೮೪ರಲ್ಲಿ

ಈ ಮೊದಲೇ ಹೇಳಿರುವಂತೆ, ರಾಜ್ಯಗಳ ಪುನರ್ ಸಂಘಟನಾ ಆಯೋಗವು ಭಾಷಾವಾರು ರಾಜ್ಯಗಳ ರಚನೆಯ ಸಂದರ್ಭದಲ್ಲಿ ವಿಷಯದ ಈ ಅಂಶಕ್ಕೆ ಅತ್ಯಂತ ಪ್ರಾಮುಖ್ಯವನ್ನು ಕೊಟ್ಟಿತ್ತು ಮತ್ತು ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದಕ್ಕಾಗಿ ಕ್ರಮ ತೆಗೆದುಕೊಳ್ಳಲು ಪ್ರತಿಯೊಂದು ಭಾಷಾವಾರು ರಾಜ್ಯದ ಮೇಲೂ ಒಂದು ಸಂವಿಧಾನಾತ್ಮಕ ಹೊಣೆಗಾರಿಕೆಯನ್ನು ವಿಧಿಸಲೇಬೇಕಾಗುತ್ತದೆಯೆಂಬ ಖಚಿತ ಅಭಿಪ್ರಾಯಕ್ಕೆ ಬಂದಿತ್ತು. ಈ ಶಿಫಾರಸಿನ ಬೆಳಕಿನಲ್ಲಿ, ೩೫೦ಎ ಅನುಚ್ಛೇದನವನ್ನು (ಈ ಮೊದಲೇ ಉದ್ಧೃತ ಭಾಗವಾಗಿ ಕೊಡಲಾಗಿದೆ) ಸಂವಿಧಾನಕ್ಕೆ ಸೇರಿಸಲಾಯಿತು. ಅದು ಅಲ್ಪಸಂಖ್ಯಾತ ಭಾಷಾ ಗುಂಪುಗಳ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣವನ್ನು ಕೊಡಲು ಸಾಕಷ್ಟು ಸೌಲಭ್ಯಗಳನ್ನು ಒದಗಿಸಬೇಕೆಂಬ ಹೊಣೆಗಾರಿಕೆಯನ್ನು ರಾಜ್ಯ ಸರ್ಕಾರಗಳ ಮೇಲಷ್ಟೇ ಅಲ್ಲ, ರಾಜ್ಯ ಸರ್ಕಾರಗಳಲ್ಲಿರುವ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರಗಳ ಮೇಲೂ ವಿಧಿಸಿದೆ. ಈ ಅನುಚ್ಛೇದದ ದೃಷ್ಟಿಯಿಂದ, ರಾಜ್ಯವು ಅಥವಾ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿರುವ ಅಥವಾ ಅವುಗಳಿಂದ ಹಣಕಾಸು ನೆರವು ಪಡೆಯುತ್ತಿರುವ ಯಾವುದೇ ಶಾಲೆಗೆ ಯಾವುದೇ ವಿಶಿಷ್ಟ ಅಲ್ಪಸಂಖ್ಯಾತ ಭಾಷಾ ಗುಂಪಿಗೆ ಸೇರಿದ ವಿದ್ಯಾರ್ಥಿಗಳು ಪ್ರವೇಶ ಪಡೆಯುವ ಸಂಖ್ಯೆಯನ್ನು ಗಮನಿಸಿ ಕಾರ್ಯಸಾಧ್ಯವಾದಾಗ ಹಾಗೂ ಹಣಕಾಸು ದೃಷ್ಟಿಯಿಂದಲೂ ಕಾರ್ಯರೂಪಕ್ಕೆ ತರಬಹುದಾದುದೆಂದು ಮನದಟ್ಟಾದಾಗ, ಈ ಹೊಣೆಗಾರಿಕೆಯನ್ನು ಸರ್ಕಾರವು ಅಥವಾ ಸ್ಥಳೀಯ ಪ್ರಾಧಿಕಾರವು ನಿರ್ವಹಿಸಬೇಕಾಗುತ್ತದೆಯಾದರೂ, ಅವುಗಳು ಸ್ಥಾಪಿಸಿರುವ ಅಥವಾ ಅವುಗಳಿಂದ ನೆರವು ಪಡೆಯುತ್ತಿರುವ ಶಾಲೆಗಳಲ್ಲಿ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸೌಲಭ್ಯ ಒದಗಿಸುವುದು ಪ್ರತಿಯೊಂದು ರಾಜ್ಯದ, ಹಾಗೆಯೇ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರದ ಮೇಲಿರುವ ಸಂವಿಧಾನಾತ್ಮಕ ಹೊಣೆಗಾರಿಕೆಯೆಂದು ವಾದಿಸಲಾಯಿತು. ಈ ಸಂಬಂಧದಲ್ಲಿ, ಮೊದಲೇ ಹೇಳಿರುವಂತೆ, ಯಾವುದೇ ಭಾಷೆಯಲ್ಲಿ ಶಿಕ್ಷಣ ಒದಗಿಸುವುದಕ್ಕೆ ಅವಕಾಶ ಕಲ್ಪಿಸಲು ಅವಶ್ಯಕವಾದ ವಿದ್ಯಾರ್ಥಿಗಳ ಕನಿಷ್ಠ ಸಂಖ್ಯೆಯನ್ನೂ ಸಹ ನಿರ್ದಿಷ್ಟಪಡಿಸಲಾಗಿದೆ. ವಸ್ತುಸ್ಥಿತಿ ಹೀಗಿರುವಾಗ, ಭಾಷಾ ಅಲ್ಪಸಂಖ್ಯಾತ ಪಂಗಡವೊಂದು ಒಂದು ಶಾಲೆಯನ್ನು ತಾನೇ ಸ್ಥಾಪಿಸಿದಾಗ, ಮಾನ್ಯತೆ ಹಾಗೂ ನೆರವು ನೀಡಿಕೆಯನ್ನು ನಿಯಂತ್ರಿಸುವ ನಿಬಂಧನೆಗಳಿಗನುಸಾರವಾಗಿ ಅದು ಕೋರಿಕೊಂಡರೆ ಮಾನ್ಯತೆ ಹಾಗೂ ಹಣಕಾಸು ನೆರವಿನಂತಹ ಎಲ್ಲಾ ಸೌಲಭ್ಯಗಳನ್ನು ಒದಗಿಸುವುದು ರಾಜ್ಯದ ಒಂದು ಕರ್ತವ್ಯವಾಗಿರುತ್ತದೆ. ಇದು, ನೆರವನ್ನು ಒದಗಿಸುವ ವಿಷಯದಲ್ಲಿ ರಾಜ್ಯವು ಮತೀಯ ಭಾಷಾ ಅಲ್ಪಸಂಖ್ಯಾತರು ಸ್ಥಾಪಿಸಿರುವ ಶೈಕ್ಷಣಿಕ ಸಂಸ್ಥೆಗಳಿಗೆ ತಾರತಮ್ಯ ಮಾಡತಕ್ಕದ್ದಲ್ಲವೆಂದು ಹೇಳಿರುವ ೩೦ನೆಯ ಅನುಚ್ಛೇದದ (೨)ನೆಯ ಕಲಂನಿಂದ ಅತ್ಯಂತ ಸ್ಪಷ್ಟವಾಗುತ್ತದೆ.

೨೭. ಪ್ರಾಥಮಿಕ ಶಿಕ್ಷಣವನ್ನು ಯಾವ ಶಾಲೆಯಲ್ಲಿ ಕೊಡಿಸಬೇಕು ಮತ್ತು ಭಾಷೆಯು ಯಾವುದಿರಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳುವುದು ತಂದೆ ತಾಯಿಯರಿಗಿರುವ ಹಕ್ಕು ಎನ್ನುವುದು ಸಾರ್ವತ್ರಿಕವಾಗಿ ಸ್ಥಿರಪಟ್ಟಿರುವ ವಿಷಯವಾಗಿದೆ. ಈ ಅಂಶವನ್ನು ಸಂತ ಕ್ಸೆವಿಯರ್ಸ್ ಕಾಲೇಜ್ - ವಿರುದ್ಧ - ಗುಜರಾತ್ ರಾಜ್ಯ (ಎಐಆರ್ ೧೯೭೪ ಸರ್ವೋನ್ನಾ ೧೩೮೯) ಮೊಕದ್ದಮೆಯಲ್ಲಿ ನ್ಯಾಯಮೂರ್ತಿ ಮ್ಯಾಥ್ಯೂ ಅವರು ನಿರೂಪಿಸಿದ್ದಾರೆ. ೧೪೧ ಮತ್ತ ೧೪೨ನೇ ಪ್ಯಾರಾಗಳಲ್ಲಿರುವ ತೀರ್ಪಿನ ಸುಸಂಗತ ಭಾಗ ಹೀಗಿದೆ :

೧೪೧. ಸಾರ್ವಜನಿಕ ಶಾಲೆಗಳಿಗೆ ಮಾತ್ರವೇ ಮಕ್ಕಳು ಹೋಗಬೇಕೆಂದು ಒತ್ತಾಯಿಸುವ ಮೂಲಕ ಅವರನ್ನು ಒಂದೇ ಮಟ್ಟಕ್ಕೆ ತರುವ ಮತ್ತು ಸಮಾಜಾಧೀನ ಮಾಡುವ ರಾಜ್ಯದ

ಯಾವುದೇ ಅಧಿಕಾರಕ್ಕೆ ವೈಯಕ್ತಿಕ ಸ್ವಾತಂತ್ರ್ಯದ ಮೂಲಭೂತ ಪರಿಕಲ್ಪನೆಯಲ್ಲಿ ಸ್ಥಾನ ಇಲ್ಲ. ಮಗು ಕೇವಲ ರಾಜ್ಯದ ಸೃಷ್ಟಿಯಲ್ಲ. ಯಾರು ಅದನ್ನು ಪೋಷಿಸುತ್ತಾರೋ ಮತ್ತು ಅದರ ಭವಿಷ್ಯವನ್ನು ರೂಪಿಸಲು ದಾರಿ ತೋರಿಸುತ್ತಾರೋ ಅವರಿಗೆ, ಹೆಚ್ಚಿನ ಕರ್ತವ್ಯವನ್ನು ಗುರುತಿಸುವುದರೊಂದಿಗೆ ಹೆಚ್ಚಿನ ಹೊಣೆಗಾರಿಕೆಗಳನ್ನು ನಿಭಾಯಿಸಲು ಅದನ್ನು ಸಿದ್ಧವಾಗಿರುವಂತೆ ಮಾಡುವ ಹಕ್ಕಿನೊಂದಿಗೆ ಮಹತ್ವದ ಹೊಣೆಗಾರಿಕೆಯೂ ಇರುತ್ತದೆ. ನೋಡಿ : ಪಿಯರ್ಸ್ - ವಿರುದ್ಧ- ಸೊಸೈಟಿ ಆಫ್ ಸಿಸ್ಟರ್ಸ್ ಆಫ್ ಹೋಲಿ ನೇಮ್ಸ್ (೧೯೨೪) ೨೬೮ ಯುಎಸ್ ೫೧೦, ೫೩೫).

೧೪೨. ಶಿಕ್ಷಣದ ವಿಷಯದಲ್ಲಿ ತಂದೆ-ತಾಯಿಯರಿಗಿರುವ ಹಕ್ಕು ಪ್ರಜಾಪ್ರಭುತ್ವ ಪದ್ಧತಿಯ ಅತ್ಯಂತ ಪ್ರಮುಖ ಅಂಶ. ಅದು, ಪ್ರಜಾಪ್ರಭುತ್ವವಾದಿ ಶಿಕ್ಷಣದ ಹಾಗೂ ಸಾಂಸ್ಕೃತಿಕ ಸಂಪೂರ್ಣತ್ವದ ಅಖಂಡ ವ್ಯವಸ್ಥೆಯ ನಡುವಿನ ವ್ಯತ್ಯಾಸದ ಒರೆಗಲ್ಲಾಗಿದೆ.

ಆದ್ದರಿಂದ ರಾಜ್ಯವು, ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದುಕೊಳ್ಳುವ ಆಯ್ಕೆಯನ್ನು ತಂದೆ-ತಾಯಿಯರಿಗೆ ಮತ್ತು ಅವರ ಮಕ್ಕಳಿಗೆ ಬಿಡಬೇಕಾಗುತ್ತದೆ. ರಾಜ್ಯವು ಆ ಹಕ್ಕನ್ನು ಹಾಗೂ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವಂತಿಲ್ಲ.

೨೮. ಆಯಾ ರಾಜ್ಯದ ಪ್ರಾದೇಶಿಕ / ಆಡಳಿತ ಭಾಷೆಯು ಮಾತೃಭಾಷೆಯಾಗಿರುವ ಮಕ್ಕಳು ಹಾಗೂ ಆ ಭಾಷೆಗಿಂತಲೂ ಬೇರೆಯದೇ ಆದ ಭಾಷೆಯು ಮಾತೃಭಾಷೆಯಾಗಿರುವ ಮಕ್ಕಳು ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಬೇರೆ ಬೇರೆ ಪರಿಸ್ಥಿತಿಗಳಲ್ಲಿರುತ್ತಾರೆ. ಇದು ಎಲ್ಲಾ ತಜ್ಞರು, ಆಯೋಗಗಳು ಹಾಗೂ ಸರ್ಕಾರಗಳು ವ್ಯಕ್ತಪಡಿಸಿರುವ ಒಮ್ಮತದ ಅಭಿಪ್ರಾಯವಾಗಿದೆ. ಸಂವಿಧಾನವೇ ೩೫೦-ಎ ಅನುಚ್ಛೇದದ ಮೂಲಕ ಈ ವರ್ಗೀಕರಣಕ್ಕೆ ಮಾನ್ಯತೆ ನೀಡಿದೆ. ಆದ್ದರಿಂದ, ಭಾಷಾ ಅಲ್ಪಸಂಖ್ಯಾತರು ಸ್ಥಾಪಿಸಿರುವ ಪ್ರಾಥಮಿಕ ಶಾಲೆಗಳೂ ಸೇರಿದಂತೆ ಈ ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಿರುವ ಎಲ್ಲಾ ಮಕ್ಕಳಿಗೂ ಕನ್ನಡವನ್ನು ವ್ಯಾಸಂಗ ಮಾಡಬೇಕೆಂದು ಒತ್ತಾಯ ಮಾಡುವ ಸರ್ಕಾರದ ಯಾವುದೇ ಕೃತ್ಯವು ಅಸಮಂಜಸವಾದುದು ಹಾಗೂ ಸ್ವೇಚ್ಛಾನುಸಾರದ್ದಾಗುವುದಷ್ಟೇ ಅಲ್ಲ, ತಾರತಮ್ಯಪೂರಿತವಾದದ್ದು ಸಹ ಆಗುತ್ತದೆ. ಆದ್ದರಿಂದ, ಭಾರತ ಸಂವಿಧಾನದ ೧೪ನೆಯ ಅನುಚ್ಛೇದವನ್ನು ಉಲ್ಲಂಘಿಸುತ್ತದೆ.

೪೭. ಪ್ರತಿಪಕ್ಷದ ವಾದಗಳನ್ನು ಕಾಳಜಿಪೂರ್ವಕವಾಗಿ ಪರಿಶೀಲಿಸಿದ ಮೇಲೆ ಮತ್ತು ಸರ್ವೋಚ್ಚ ನ್ಯಾಯಾಲಯದ ಮೇಲ್ಕಂಡ ತೀರ್ಪುಗಳಲ್ಲಿ ನಿರೂಪಿಸಿರುವ ತತ್ವಗಳ ಬೆಳಕಿನಲ್ಲಿ ಅವುಗಳನ್ನು ಪರಿಶೀಲಿಸಿದ ಮೇಲೆ, ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಗೆ ಒಂದು ಹೆಚ್ಚುವರಿ ಭಾಷೆಯನ್ನು ಹೇರಕೂಡದೆಂದು ಹೇಳಿರುವ ಆಯೋಗಗಳ ಮತ್ತು ಸಮಿತಿಗಳ ಒಮ್ಮತದ ಅಭಿಪ್ರಾಯಕ್ಕೆ ವಿರುದ್ಧವಾಗಿ, ಪ್ರಾಥಮಿಕ ಶಾಲೆಗಳ ಮೊದಲನೆಯ ವರ್ಷದಿಂದಲೇ ಭಾಷಾವಾರು ಅಲ್ಪಸಂಖ್ಯಾತರ ಮಕ್ಕಳಿಗೆ ಕನ್ನಡವನ್ನು ಕಡ್ಡಾಯ ಮಾಡಿರುವಷ್ಟರ ಮಟ್ಟಿಗೆ, ಸರ್ಕಾರಿ ಆದೇಶವು ಮೂರು ಕಾರಣಗಳಿಗಾಗಿ ಸಂವಿಧಾನದ ೨೯ ಮತ್ತು ೩೦ನೇ ಅನುಚ್ಛೇದಗಳಡಿ ಖಾತ್ರಿ ಕೊಟ್ಟಿರುವ ಮೂಲಭೂತ ಹಕ್ಕುಗಳಿಗೆ ಅಸಂಗತವಾದುದಾಗುತ್ತದೆ ಮತ್ತು ಆ ಹಕ್ಕುಗಳನ್ನು ಉಲ್ಲಂಘಿಸುತ್ತದೆಂಬುದು ನಮಗೆ ಮನವರಿಕೆಯಾಗಿದೆ :

ಮೊದಲನೆಯದಾಗಿ, ಅವು ನಿಯಂತ್ರಣಾತ್ಮಕ ಸ್ವರೂಪದವುಗಳಲ್ಲ, ಆದರೆ, ಅವು ಅತಿಕ್ರಮಿಸುವಂಥವುಗಳಾಗಿವೆ. ಎರಡನೆಯದಾಗಿ ಅವು, ಅಲ್ಪಸಂಖ್ಯಾತರ ಹಿತದೃಷ್ಟಿ

ಗನುಗುಣವಾಗಿಲ್ಲ, ಏಕೆಂದರೆ, ಮಕ್ಕಳ ಹಿತದೃಷ್ಟಿಯನ್ನೇ ತೆಗೆದುಕೊಂಡರೆ ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ತಮ್ಮ ಮಾತೃಭಾಷೆಯಲ್ಲೇ ಪಡೆಯಬೇಕೆಂಬುದು ಒಪ್ಪಿಕೊಂಡಿರುವ ತತ್ವವಾಗಿದೆ. ಮೂರನೆಯದಾಗಿ, ಈ ವಿಷಯದಲ್ಲಿ ೩೦ನೇ ಅನುಚ್ಛೇದದಡಿ ಆಯ್ಕೆಯು ಅಲ್ಪಸಂಖ್ಯಾತರ ಗುಂಪಿನವರೇ ಮಾಡಿಕೊಳ್ಳುವ ಆಯ್ಕೆಯಾಗಿದೆ. ಅದು, ಸರ್ವೋಚ್ಚ ನ್ಯಾಯಾಲಯವು ತೀರ್ಮಾನಿಸಿರುವಂತೆ ಆಖೈರಾದುದಾಗಿದೆ".

೪. ಪೂರ್ಣ ನ್ಯಾಯಪೀಠದ ತೀರ್ಪಿನಿಂದ ಮೊದಲ ನಾಲ್ಕು ವರ್ಷಗಳವರೆಗೆ ಮಾತೃಭಾಷೆಯಲ್ಲೇ ಕಿರಿಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಕರ್ತವ್ಯ ರಾಜ್ಯದ ಮೇಲಿರುತ್ತದೆ. ಆದ್ದರಿಂದ, ಸರ್ಕಾರಿ ಶಾಲೆಗಳಾಗಿರಲಿ ಅಥವಾ ಸರ್ಕಾರದ ಮಾನ್ಯತೆ ಪಡೆದಿರುವ ಖಾಸಗಿ ಶಾಲೆಗಳಾಗಿರಲಿ, ಸಹಾಯಧನ ಪಡೆಯುತ್ತಿರಲಿ ಅಥವಾ ಇಲ್ಲದಿರಲಿ, ಭಾಷಾ ಅಲ್ಪಸಂಖ್ಯಾತರು ಸ್ಥಾಪಿಸಿರಲಿ ಅಥವಾ ಬೇರೆಯವರು ಸ್ಥಾಪಿಸಿರಲಿ, ನಾಲ್ಕನೇ ತರಗತಿಯವರೆಗೆ ಈ ಯಾವುದೇ ಪ್ರಾಥಮಿಕ ಶಾಲೆಗಳಲ್ಲಿ ನಿರ್ದಿಷ್ಟವಾದ ಮಾತೃಭಾಷೆಯನ್ನು ಹೊಂದಿರುವ ಮಕ್ಕಳು, ಗೊತ್ತುಪಡಿಸಿರುವ ಸಂಖ್ಯೆಯಲ್ಲಿ ಪ್ರವೇಶ ಪಡೆದರೆ ಮಾತೃಭಾಷೆಯಲ್ಲೇ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕು ಎಂಬುದನ್ನು ರಾಜ್ಯವು ಸುನಿಶ್ಚಿತಪಡಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ, ಆಯಾಯ ಮಗುವಿನ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಈ ಪ್ರತಿಯೊಂದು ಸಂಸ್ಥೆಗಳು ಕೊಡುವಂತೆ ರಾಜ್ಯವು ಕಡ್ಡಾಯಪಡಿಸಬೇಕು.

೫. ಈ ಅರ್ಜಿಗಳು ಈಗ ವಿಚಾರಣೆಗಾಗಿ ಬಂದಿವೆ ಹಾಗೂ ಪೂರ್ಣ ನ್ಯಾಯಪೀಠದ ಅಭಿಪ್ರಾಯಕ್ಕನುಸಾರವಾಗಿ ವಿಲೆ ಮಾಡಬೇಕಾಗಿದೆಯಾದ್ದರಿಂದ ಅವುಗಳನ್ನು ಅಂಗೀಕರಿಸಬೇಕಾಗುತ್ತದೆ.

೬. ಆ ರೀತಿ ಮಾಡುವ ಮೊದಲು, ಮೊದಲ ವರ್ಷದಿಂದ ಇಂಗ್ಲಿಷ್‌ನಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಪ್ರಾಥಮಿಕ ಶಾಲೆಗಳನ್ನು, ಅದೇ ರೀತಿ, ನರ್ಸರಿ ಶಾಲೆಗಳನ್ನೂ ಸ್ಥಾಪಿಸಲು ಅರ್ಜಿದಾರರುಗಳಿಗೆ ಅನುಮತಿ ಕೊಡುವಂತೆ ರಾಜ್ಯ ಸರ್ಕಾರಕ್ಕೆ ಪರಮಾದೇಶ ನೀಡಿ ಸಹ್ಯಾದ್ರಿ ಎಜುಕೇಷನಲ್ ಟ್ರಸ್ಟ್-ವಿರುದ್ಧ-ಕರ್ನಾಟಕ ರಾಜ್ಯ ಮೊಕದ್ದಮೆಯಲ್ಲಿ ನ್ಯಾಯಮೂರ್ತಿ ಬೋಪಣ್ಣ ಅವರು ನೀಡಿರುವ ತೀರ್ಪಿನ ಬಗ್ಗೆ ಸ್ಪಷ್ಟೀಕರಣ ಕೊಡುವುದು ಅವಶ್ಯಕವಾಗಿದೆ. ಸಲ್ಲಿಸಿದ್ದ ನಾಲ್ಕು ಅರ್ಜಿಗಳಲ್ಲಿ ಆ ತೀರ್ಪನ್ನು ನೀಡಲಾಗಿತ್ತು. ಅವುಗಳನ್ನು ನಾಲ್ಕು ಸಂಘಗಳು ಸಲ್ಲಿಸಿದ್ದವು. ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣ ನೀಡುವ ಪ್ರಾಥಮಿಕ ಮತ್ತು / ಅಥವಾ ನರ್ಸರಿ ಶಾಲೆಗಳನ್ನು ಸ್ಥಾಪಿಸಲು ಕೋರಿಕೊಂಡಿದ್ದ ಅವುಗಳ ಮನವಿಯನ್ನು, ೧೯೮೭-೧೯೮೮ನೆಯ ಶೈಕ್ಷಣಿಕ ವರ್ಷದಿಂದ ಇಂಗ್ಲಿಷ್ ಮಾಧ್ಯಮದ ಪ್ರಾಥಮಿಕ ಶಾಲೆಯನ್ನು ಸ್ಥಾಪಿಸಲು ಯಾವ ಅನುಮತಿಯನ್ನೂ ಕೊಡಬಾರದೆಂದು ಸರ್ಕಾರವು ಕೈಗೊಂಡ ಕಾರ್ಯನೀತಿಯ ತೀರ್ಮಾನದ ದೃಷ್ಟಿಯಿಂದ ತಿರಸ್ಕರಿಸಲಾಗಿತ್ತು. ಅಲ್ಲಿನ ಅರ್ಜಿದಾರರುಗಳ ಮುಖ್ಯವಾದ ವಾದವೇನೆಂದರೆ, ನಿರಾಕರಣೆಯು ತಾರತಮ್ಯದ್ದಾಗಿದೆ, ಏಕೆಂದರೆ,

ಅಂಥ ಅನುಮತಿಯನ್ನು ಕೆಲವು ಇತರ ಸಂಸ್ಥೆಗಳಿಗೆ ನೀಡಲಾಗಿದೆ. ಹೀಗಾಗಿ ಸಂವಿಧಾನದ ೧೪ನೆಯ ಅನುಚ್ಛೇದವನ್ನು ಉಲ್ಲಂಘಿಸುತ್ತದೆ ಎನ್ನುವುದಾಗಿದೆ. ಇತರರಿಗೆ ಅಂಥ ಅನುಮತಿಯನ್ನು ಕೊಟ್ಟಿರುವ ಆದೇಶಗಳ ಪ್ರತಿಗಳನ್ನು ಆ ಅರ್ಜಿಗಳಲ್ಲಿ ಒದಗಿಸಲಾಗಿತ್ತು. ವರದಿಯ ೨೧೯೮-೨೧೯೯ನೆಯ ಪುಟಗಳಲ್ಲಿ ಅವುಗಳನ್ನು ಉಲ್ಲೇಖಿಸಲಾಗಿದೆ. ಮನವಿಯು ಸಾಧಾರವಾದುದಾಗಿದೆ, ವಿಷಯದ ಮೇಲೆ ಯಾವುದೇ ಏಕರೂಪದ ನೀತಿಯನ್ನು ರೂಪಿಸಲಾಗಿಲ್ಲ ಹಾಗೂ ಅನುಸರಿಸಲಾಗಿಲ್ಲ. ಆದ್ದರಿಂದ, ತಿರಸ್ಕರಿಸಿರುವುದು ಸಂವಿಧಾನದ ೧೪ನೆಯ ಅನುಚ್ಛೇದವನ್ನು ಉಲ್ಲಂಘಿಸುತ್ತದೆಯೆಂದು ಮಾನ್ಯ ನ್ಯಾಯಮೂರ್ತಿಗಳು ತೀರ್ಪಿತ್ತರು ಹಾಗೂ ಇಂಗ್ಲಿಷ್ ಮಾಧ್ಯಮದ ಹಾಗೂ ಪ್ರಾಥಮಿಕಶಾಲೆ / ನರ್ಸರಿಶಾಲೆಗಳನ್ನು ಸ್ಥಾಪಿಸಲು ಅರ್ಜಿದಾರರುಗಳಿಗೆ ಅನುಮತಿ ಕೊಡಬೇಕೆಂದು ರಾಜ್ಯ ಸರ್ಕಾರಕ್ಕೆ ಪರಮಾದೇಶ ನೀಡಿದರು.

೭. ಈ ಮೊದಲೇ ಹೇಳಿರುವಂತೆ, ಪೂರ್ಣ ನ್ಯಾಯಪೀಠವು, ಮಾತೃಭಾಷೆಯಲ್ಲೇ ivನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣ ಇರಬೇಕೆಂಬುದು ಎಲ್ಲಾ ಶಿಕ್ಷಣತಜ್ಞರ ಒಮ್ಮತದ ಅಭಿಪ್ರಾಯ ಹಾಗೂ ರಾಜ್ಯಸರ್ಕಾರವು ಅಂಗೀಕರಿಸಿರುವ ಹಿತಕರವಾದ ಸಮಂಜಸ ಕಾರ್ಯನೀತಿಯಾಗಿರುವುದರಿಂದ, ಭಾಷಾ ಅಲ್ಪಸಂಖ್ಯಾತರು ಮಂಡಿಸಿದ ಮನವಿಯನ್ನು ಒಪ್ಪಿಕೊಳ್ಳುತ್ತಾ ಪ್ರಾಥಮಿಕಶಾಲೆಯ ಮೊದಲ ವರ್ಷದಿಂದಲೇ ಕನ್ನಡದ ವ್ಯಾಸಂಗವನ್ನು ಅಗತ್ಯಪಡಿಸುವ ಆಕ್ಷೇಪಿತ ಸರ್ಕಾರಿ ಆದೇಶವು ಸಂವಿಧಾನದ ೧೪, ೨೯ ಹಾಗೂ ೩೦ನೆಯ ಅನುಚ್ಛೇದಗಳನ್ನು ಉಲ್ಲಂಘಿಸುತ್ತದೆಂದು ತೀರ್ಪಿತ್ತಿದೆ. ಆದ್ದರಿಂದ, ಪ್ರಾಥಮಿಕಶಿಕ್ಷಣವು ಇಂಗ್ಲಿಷ್‌ನಲ್ಲಿರಬೇಕೆಂಬ ಯಾವುದೇ ವಾದವು, ಯಾವ ಆಧಾರದ ಮೇಲೆ ಪೂರ್ಣ ನ್ಯಾಯಪೀಠವು ಆಕ್ಷೇಪಿತ ಆದೇಶವು ಅಸಂವಿಧಾನಾತ್ಮಕವೆಂದು ತೀರ್ಪಿತ್ತಿದೆಯೋ ಆ ಆಧಾರಕ್ಕೆ ಅಸಂಗತವಾದುದಾಗುತ್ತದೆ ಮತ್ತು ಮಾತೃಭಾಷೆಯಲ್ಲೇ IVನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕೆನ್ನುವ ಸಮಂಜಸ ಕಾರ್ಯನೀತಿಗೆ ಹಾಗೂ ಈ ಅರ್ಜಿಗಳಲ್ಲಿರುವ ಭಾಷಾ ಅಲ್ಪಸಂಖ್ಯಾತರ ವಾದಕ್ಕೂ ಸಂಪೂರ್ಣವಾಗಿ ಅಸಂಗತವಾದುದಾಗುತ್ತದೆ. ಅನುಮತಿಯನ್ನು ಕೆಲವು ಅರ್ಜಿದಾರರಿಗೆ ಕೊಡಲಾಗಿದೆ. ಆದರೆ, ಇಲ್ಲಿನ ಅರ್ಜಿದಾರರುಗಳಿಗೆ ಕೊಡಲಾಗಿಲ್ಲವೆಂದು, ಹೀಗಾಗಿ ಅನುಮತಿಯ ನೀಡಿಕೆಯ ವಿಷಯದಲ್ಲಿ ತಾರತಮ್ಯವಾಗಿದೆಯೆಂಬ ವಾದದ ಮೇಲೆ ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್ ಮೊಕದ್ದಮೆಯಲ್ಲಿ ನೀಡಿರುವ ತೀರ್ಪು ಆಧಾರ ಗೊಂಡಿತ್ತಾದರೂ, ಅದರಲ್ಲಿ, ಪೂರ್ಣ ನ್ಯಾಯಪೀಠದ ತೀರ್ಮಾನಕ್ಕನುಸಾರವಾಗಿ ೪ನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲೇ ಕೊಡಬೇಕೆಂದು ರಾಜ್ಯ ಸರ್ಕಾರವು ಆದೇಶ ಹೊರಡಿಸುವ ವಿಷಯದಲ್ಲಿ ಅಡ್ಡಬರುವ ಕೆಲವು ಇತರೋಕ್ತಿಗಳಿರುವುದರಿಂದ, ಅವುಗಳಿಗೆ ಸ್ಪಷ್ಟೀಕರಣ ಕೊಡಬೇಕಾದ ಅಗತ್ಯವಿದೆ.

೮. ಆ ಉದ್ದೇಶಕ್ಕಾಗಿ, ಕೆಲವೊಂದು ಸುಸಂಗತ ಸನ್ನಿವೇಶಗಳನ್ನು ಹೇಳುವುದು ಅವಶ್ಯಕ. ಬಹುತೇಕ ಕನ್ನಡವನ್ನೇ ಮಾತನಾಡುವ ಜನರಿರುವ ಎಲ್ಲಾ ಪ್ರದೇಶಗಳನ್ನು ಒಂದುಗೂಡಿಸಿ, ದಿನಾಂಕ ೧-೧೧-೧೯೫೬ರಿಂದ ಕರ್ನಾಟಕರಾಜ್ಯವನ್ನು ರಚಿಸಲಾಯಿತು. ಆದ್ದರಿಂದ, ಕನ್ನಡವು ಈ ರಾಜ್ಯದ ಪ್ರಾದೇಶಿಕ ರಾಷ್ಟ್ರ ಭಾಷೆಯಾಗಿದೆ. ಯಾವುದೇ ಶಾಸನದಲ್ಲಿ ಆ ವಿಷಯವು ಒಳಗೊಂಡಿಲ್ಲವಾದ್ದರಿಂದ ರಾಜ್ಯ ಸರ್ಕಾರವು ತನ್ನ ಕಾರ್ಯಾಂಗ ಅಧಿಕಾರವನ್ನು ಚಲಾಯಿಸಿ, ೧೯-೧೦-೧೯೬೯ರ ಆದೇಶದ ಮೂಲಕ ಪ್ರಾಥಮಿಕ ಶಾಲೆಗಳ ಸಹಾಯಾನುದಾನ ಸಂಹಿತೆಯನ್ನು ಹೊರಡಿಸಿತ್ತು. ಸಂಹಿತೆಯ ೧೨ನೆಯ ನಿಯಮ ಹೀಗಿದೆ :

"೧೨. ಶಿಕ್ಷಣ ಮಾಧ್ಯಮ : (I) ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಮಾಧ್ಯಮವು ಸಾಮಾನ್ಯವಾಗಿ ಪ್ರಾದೇಶಿಕ ಭಾಷೆ ಅಥವಾ ಮಗುವಿನ ಮಾತೃಭಾಷೆ ಆಗಿರತಕ್ಕದ್ದು.

(II) ಭಾಷಾ ಅಲ್ಪಸಂಖ್ಯಾತರಿಗೆ ಸೌಲಭ್ಯಗಳನ್ನು ಒದಗಿಸುವ ದೃಷ್ಟಿಯಿಂದ, ನಿರ್ದಿಷ್ಟ ಪಡಿಸಿರುವ ಷರತ್ತುಗಳಿಗೊಳಪಟ್ಟು ಅವರ ಮಾತೃಭಾಷೆಯಲ್ಲೇ ಬೋಧನೆಗೆ ವ್ಯವಸ್ಥೆ ಮಾಡತಕ್ಕದ್ದು.

ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ಅಥವಾ ಈಗಿರುವ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮದ ವಿಭಾಗಗಳನ್ನು ಈ ಮುಂದೆ ಹೇಳಿರುವ ವಿದ್ಯಾರ್ಥಿ ವರ್ಗಗಳ ಪ್ರಯೋಜನಕ್ಕಾಗಿ, ನಿರ್ದೇಶಕರ ಅನುಮತಿಯೊಂದಿಗೆ ಪ್ರಾರಂಭಿಸಬಹುದು;

(i) ಇಂಗ್ಲಿಷ್ ಮಾತೃಭಾಷೆಯಾಗಿರುವ ವಿದ್ಯಾರ್ಥಿಗಳು;

(ii) ಅಖಿಲ ಭಾರತ ಸೇವೆಗಳು, ಕೇಂದ್ರ ಸೇವೆಗಳು ಇತ್ಯಾದಿಗಳಿಗೆ ಹಾಗೂ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವರ್ಗಾವಣೆಯಾಗುವುದಕ್ಕೆ ಬದ್ಧರಾಗಿರುವ ತಂದೆ-ತಾಯಿಯವರ ಮಕ್ಕಳು (ಆಯಾ ಇಲಾಖೆಯಿಂದ ಪ್ರಮಾಣಪತ್ರಗಳನ್ನು ಹಾಜರು ಪಡಿಸಬೇಕು);

(iii) ವಲಸೆ ಗುಂಪಿಗೆ ಸೇರಿದ ಮಕ್ಕಳು - ವಲಸೆ ಗುಂಪು ಎಂದರೆ ಯಾವ ಖಾಯಂ ವಾಸಸ್ಥಾನವೂ ಇರದವರು ಅಥವಾ ವ್ಯಾಪಾರ - ವ್ಯವಹಾರ ಅಥವಾ ಇತರ ಕಾರಣಗಳಿಂದಾಗಿ ಎಂದರೆ ನಿರ್ಮಾಣ ಕಾಮಗಾರಿಗಳಲ್ಲಿ ಉದ್ಯೋಗದಲ್ಲಿರುವ ಕಾರ್ಮಿಕರಾಗಿರುವ ಕಾರಣದಿಂದಾಗಿ ಆಗಿಂದಾಗ್ಗೆ ರಾಜ್ಯದಿಂದ ರಾಜ್ಯಕ್ಕೆ ವಲಸೆ ಹೋಗುವವರು;

(iv) ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಶಾಖೆಗಳನ್ನು ಹೊಂದಿರುವ ಬ್ಯಾಂಕುಗಳ, ಫರ್ಮುಗಳ ಹಾಗೂ ಇತರ ವ್ಯವಹಾರ ಸಂಸ್ಥೆಗಳ ಉದ್ಯೋಗಿಗಳ ಮತ್ತು ರಾಜ್ಯದಿಂದ ರಾಜ್ಯಕ್ಕೆ ವರ್ಗಾವಣೆಯಾಗಲು ಬದ್ಧರಾಗಿರುವ ಉದ್ಯೋಗಿಗಳ ಮಕ್ಕಳು (ಆಯಾ ಪ್ರಾಧಿಕಾರಗಳಿಂದ ಪ್ರಮಾಣಪತ್ರಗಳನ್ನು ಹಾಜರು ಪಡಿಸಬೇಕು);

(v) ಸ್ಥಳೀಯ ಶಾಲೆಗಳಲ್ಲಿ ಯಾವ ವ್ಯವಸ್ಥೆಯೂ ಇರದ, ಅಲ್ಪಸಂಖ್ಯಾತ ಭಾಷೆಯ ಮಾತೃಭಾಷೆಯಾಗಿರುವ ಮಕ್ಕಳು;

(vi) ಅಂಥ ಶಾಲೆಗಳನ್ನು ನಿರ್ದೇಶಕರ ಅನುಮತಿ ಪಡೆದುಕೊಂಡಾದ ಮೇಲೆಯೇ ಪ್ರಾರಂಭಿಸಬೇಕು; ಮತ್ತು

(vii) ಇಂಗ್ಲಿಷ್ ಮಾಧ್ಯಮದ ಶಾಲೆಯನ್ನು ಅಥವಾ ತರಗತಿಯನ್ನು i *ರಿಂದ* iv*ರ ವರೆಗಿನ ತರಗತಿಗಳನ್ನು ಒಟ್ಟಾಗಿ ತೆಗೆದುಕೊಂಡರೆ ಪ್ರತಿ ತರಗತಿಯಲ್ಲಿಯೂ ಕನಿಷ್ಠ ಸಂಖ್ಯೆ ೧೦ ಅಥವಾ ೩೦ ಇರಬೇಕೆಂಬ ಷರತ್ತಿಗೊಳಪಟ್ಟು ಪ್ರಾರಂಭಿಸಲು ಅನುಮತಿ ಕೊಡಬಹುದು.* v *ರಿಂದ* vii*ನೇ ತರಗತಿಯವರೆಗಿನ ತರಗತಿಗಳಿಗೆ ಕನಿಷ್ಠ ಸಂಖ್ಯೆ ಪ್ರತಿ ತರಗತಿಗೆ ೧೦ ಇರತಕ್ಕದ್ದು."*

ನಿಯಮದ ಮೊದಲ ಭಾಗದಿಂದ ಎಂದರೆ, ನಿಯಮ ೧೨(i) ಮತ್ತು (ii)ರಿಂದ ಕಂಡು ಬರುವಂತೆ, ಹೆಚ್ಚಿನ ಸಂದರ್ಭದಲ್ಲಿ ಪ್ರಾದೇಶಿಕ ಭಾಷೆಯೇ ಆಗಿರುವ, ಮಾತೃಭಾಷೆಯಲ್ಲಿ ಪ್ರಾಥಮಿಕಶಿಕ್ಷಣವನ್ನು ಕೊಡುವ ನೀತಿಯನ್ನು ಸೇರಿಸಲಾಗಿದೆ. **ಪೂರ್ಣ ನ್ಯಾಯಪೀಠದ ತೀರ್ಪಿನ ೧೪ನೆಯ ಪ್ಯಾರಾದಲ್ಲಿ ನಿರೂಪಿಸಿರುವಂತೆ ಪ್ರಾಥಮಿಕಶಿಕ್ಷಣವು ಪ್ರಾದೇಶಿಕಭಾಷೆ ಅಥವಾ ಮಾತೃಭಾಷೆಯಲ್ಲಿ ಆಗಬೇಕೆಂದು, ಏಕೆ ಸ್ಪಷ್ಟವಾಗಿ ನಿಗದಿ ಪಡಿಸಲಾಗಿದೆಯೆಂದರೆ, ರಾಜ್ಯದ ಖಾಯಂ ನಿವಾಸಿಗಳ ಮಕ್ಕಳು ತಮ್ಮ ಬಾಲ್ಯಾವಸ್ಥೆಯಿಂದಲೇ ಪ್ರಾದೇಶಿಕ ಭಾಷೆಯನ್ನು ಕಲಿತುಕೊಳ್ಳುತ್ತಾರೆ ಹಾಗೂ ಅದು ಅವರ ಹೆಚ್ಚುವರಿ ಮಾತೃಭಾಷೆಯಾಗುತ್ತದೆಯೆಂಬ ಕಾರಣದಿಂದ. ವಾಸ್ತವವಾಗಿ ಮರಾಠಿ, ಉರ್ದು, ತಮಿಳು ಮತ್ತು ತೆಲುಗನ್ನು ಪ್ರತಿನಿಧಿಸುವ ಭಾಷಾ ಅಲ್ಪಸಂಖ್ಯಾತರಲ್ಲಿ ಬಹು ಮಂದಿ ಬಹಳ ಕಾಲದಿಂದಲೂ ಈ ರಾಜ್ಯದ ನಿವಾಸಿಗಳಾಗಿದ್ದಾರೆ ಮತ್ತು ಪ್ರಾದೇಶಿಕ ಭಾಷೆಯನ್ನು ಎಂದರೆ ಕನ್ನಡವನ್ನು ತಮ್ಮ ಎರಡನೆಯ ಮಾತೃಭಾಷೆಯಾಗಿ ವ್ಯಾವಹಾರಿಕವಾಗಿ ಅಳವಡಿಸಿಕೊಂಡಿರುತ್ತಾರೆ ಎನ್ನುವುದು ಸರ್ವವಿದಿತ ತಿಳಿವಳಿಕೆಯೇ. ತುಳು ಮತ್ತು ಕೊಂಕಣಿಯಂಥ ಅಲ್ಪಸಂಖ್ಯಾತ ಭಾಷೆಯು ಮಾತೃಭಾಷೆಯಾಗಿರುವ, ಈ ರಾಜ್ಯದ ಕೆಲವು ವರ್ಗಗಳ ಜನರ ವಿಷಯದಲ್ಲೂ ಪರಿಸ್ಥಿತಿ ಅದೇ ಇರುತ್ತದೆ. ಅಂಥ ವರ್ಗದ ಜನರ ಮಕ್ಕಳಿಗೆ ಕನ್ನಡದಲ್ಲಿ ಪ್ರಾಥಮಿಕ ಶಿಕ್ಷಣ ಕೊಡುವುದು ಅವರ ಮಾತೃಭಾಷೆಯಲ್ಲಿ ಕೊಟ್ಟಂತೆಯೇ ಆಗುತ್ತದೆ. ಪೂರ್ಣ ನ್ಯಾಯಪೀಠವು ಅಭಿಪ್ರಾಯಪಟ್ಟಿರುವಂತೆ, ಪ್ರಾಥಮಿಕಶಿಕ್ಷಣವು ಮಾತೃಭಾಷೆಯಲ್ಲೇ ಆಗಬೇಕೆಂಬುದು ಎಲ್ಲಾ ಶೈಕ್ಷಣಿಕ ತಜ್ಞರ ಒಮ್ಮತದ ಅಭಿಪ್ರಾಯವಾಗಿದೆ. ಇದರ ಉದ್ದೇಶವೆಂದರೆ, ತಮ್ಮ ತಾಯಿ-ತಂದೆಯರೊಂದಿಗೆ, ಕುಟುಂಬದವರೊಂದಿಗೆ ಹಾಗೂ ಬಂಧು ಬಳಗದವರೊಂದಿಗೆ ಮತ್ತು ತಮ್ಮೊಂದಿಗೆ ಆಟವಾಡುತ್ತಿರುವವರೊಂದಿಗೆ ಯಾವ ಭಾಷೆಯ ಮೂಲಕ ಮಾತನಾಡುತ್ತಿರುತ್ತಾರೋ ಆ ತಮ್ಮ ಮಾತೃಭಾಷೆಯಲ್ಲಿಯೇ ಮಕ್ಕಳಿಗೆ ಪೂರ್ವ ಪ್ರಾಥಮಿಕ ಮಟ್ಟವೂ ಸೇರಿದಂತೆ ನಾಲ್ಕನೇ ತರಗತಿಯವರೆಗೆ ಶಿಕ್ಷಣ ಕೊಡುವುದರಿಂದ ಮಕ್ಕಳು ಯಾವುದೇ ತೊಂದರೆ ಇಲ್ಲದೆಯೆ ಸ್ಪಷ್ಟವಾಗಿ ಆಲೋಚಿಸಬಲ್ಲವರಾಗಿರುತ್ತಾರೆ ಮತ್ತು ವಿಷಯಗಳನ್ನು**

ಗ್ರಹಿಸಬಲ್ಲವರಾಗಿರುತ್ತಾರೆ ಹಾಗೂ ಆ ಮಟ್ಟದಲ್ಲಿ ಅವರ ಮಾತೃಭಾಷೆಯಲ್ಲೇ ಬೋಧಿಸಿದರೆ ಸಹಜ ಪರಿಸರದಲ್ಲಿ ಸೃಜನಾತ್ಮಕ ಪ್ರತಿಭೆಯನ್ನು ಹಾಗೂ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾರೆ. ಆದ್ದರಿಂದ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕೊಡಲು ಕಲ್ಪಿಸಿರುವ ಸಹಾಯಾನುದಾನ ಸಂಹಿತೆಯ ೧೨(i) ಮತ್ತು (ii)ನೇ ನಿಯಮವು ಹಿತಕರವಾದುದಾಗಿದೆ ಮತ್ತು ಅದಕ್ಕೆ ಸಮಂಜಸ ಆಧಾರವಿದೆ. ಅದು ಶಿಕ್ಷಣದಲ್ಲಿ ಉನ್ನತ ಗುಣಮಟ್ಟವನ್ನು ಕಾಪಾಡಿಕೊಂಡು ಬರುವ ಹಾಗೂ ಈ ರಿಟ್ ಅರ್ಜಿಗಳಲ್ಲಿ ಅರ್ಜಿದಾರರುಗಳಾಗಿರುವ ಮತ್ತು ಆ ಮಟ್ಟದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ಕೊಡುವುದಕ್ಕಾಗಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿರುವ ಭಾಷಾ ಅಲ್ಪಸಂಖ್ಯಾತರ ಹಿತದೃಷ್ಟಿಗನುಗುಣವಾಗಿದೆ. ವಾಸ್ತವವಾಗಿ, ಇದೇ, ಪ್ರಶ್ನೆಯಲ್ಲಿರುವ ಸರ್ಕಾರಿ ಆದೇಶವನ್ನು ಪ್ರಶ್ನಿಸುವುದಕ್ಕೆ ಅವರಿಗೆ ಆಧಾರವಾಗಿದೆ. ಪ್ರಾಥಮಿಕ ಶಿಕ್ಷಣದ ಮೊದಲ ನಾಲ್ಕು ವರ್ಷಗಳಲ್ಲಿ ತಮ್ಮ ಮಾತೃಭಾಷೆಯಲ್ಲೇ ಶಿಕ್ಷಣವನ್ನು ಪಡೆದುಕೊಳ್ಳುವ ಹಕ್ಕನ್ನು ಮತ್ತು ರಾಜ್ಯದ ಪ್ರಾದೇಶಿಕ ಮತ್ತು ಆಡಳಿತ ಭಾಷೆಯಾಗಿರುವ ಕನ್ನಡವನ್ನು ಆ ಹಂತದಲ್ಲಿ ತರಬಾರದೆನ್ನುವುದನ್ನು ಪೂರ್ಣ ನ್ಯಾಯಪೀಠವು ಎತ್ತಿ ಹಿಡಿದಿದೆ. ಶಿಕ್ಷಣದಲ್ಲಿ ಉನ್ನತ ಮಟ್ಟವನ್ನು ಕಾಪಾಡಿಕೊಂಡು ಬರುವ ಉದ್ದೇಶವನ್ನು ಹೊಂದಿರುವ ಯಾವುದೇ ಸಮಂಜಸ ನಿಯಂತ್ರಣಾತ್ಮಕ ನಿಬಂಧವು, ಹಾಗೆಯೇ, ಭಾಷಾ ಅಲ್ಪಸಂಖ್ಯಾತರ ಹಿತದೃಷ್ಟಿಗನುಗುಣವಾಗಿರುವ ನಿಬಂಧನೆಯು ೨೯ ಮತ್ತು ೩೦ನೆಯ ಅನುಚ್ಛೇದಗಳನ್ನು ಉಲ್ಲಂಘಿಸುವುದಿಲ್ಲ ವೆಂಬುದು ಪೂರ್ಣನ್ಯಾಯಪೀಠದ ತೀರ್ಪಿನಲ್ಲಿ ಉಲ್ಲೇಖಿಸಿರುವ ಸರ್ವೋಚ್ಚ ನ್ಯಾಯಾಲಯದ ತೀರ್ಮಾನಗಳಿಂದ ಸ್ಥಿರಪಟ್ಟಿದೆ. ವಾಸ್ತವವಾಗಿ, ಪ್ರಾಥಮಿಕ ಶಿಕ್ಷಣವು ಮಾತೃಭಾಷೆಯಲ್ಲೇ ಆಗಬೇಕೆಂಬುದಕ್ಕೆ ಅವಕಾಶ ಕಲ್ಪಿಸಿ ಭಾಷಾ ಅಲ್ಪಸಂಖ್ಯಾತರ ಭಾಷೆಯ ಬೆಳವಣಿಗೆಯನ್ನು ನಿಯಮ ೧೨(i) ಮತ್ತು (ii) ಸುನಿಶ್ಚಿತಗೊಳಿಸುತ್ತದೆ. ಹಾಗೆಯೇ ಪ್ರಶ್ನೆಯಲ್ಲಿರುವ ಸರ್ಕಾರಿ ಆದೇಶವನ್ನು ಅರ್ಜಿದಾರರುಗಳು ಪ್ರಶ್ನಿಸಿರುವುದಕ್ಕೆ ಇರುವ ಆಧಾರವು ಸಹಾಯಾನುದಾನ ಸಂಹಿತೆಯ ೧೨(i) ಮತ್ತು (ii)ನೆಯ ನಿಯಮಕ್ಕೆ ಸುಸಂಗತವಾದುದಾಗಿದೆ ಮತ್ತು ಅದರಿಂದ ಬೆಂಬಲವನ್ನು ಪಡೆಯುತ್ತದೆ.

೯. ಸಹಾಯಾನುದಾನ ಸಂಹಿತೆಯ ೧೨ನೇ ನಿಯಮದ ಎರಡನೆಯ ಭಾಗವು, ಅದರಲ್ಲಿ ಹೇಳಿರುವ ಸನ್ನಿವೇಶಗಳಿಗನುಗುಣವಾಗಿ ಇಂಗ್ಲಿಷ್ ಮಾಧ್ಯಮದ ಪ್ರಾಥಮಿಕ ಶಾಲೆಯನ್ನು ತೆರೆಯಲು ಅನುಮತಿ ಕೊಡುವುದಕ್ಕೆ ಅವಕಾಶ ಕಲ್ಪಿಸುತ್ತದೆ. ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್ ಮೊಕದ್ದಮೆಯಲ್ಲಿ ಹೇಳಿರುವ ಸಂಗತಿಗಳಿಂದ, ೧೯೮೭-೧೯೮೮ನೇ ಶೈಕ್ಷಣಿಕ ವರ್ಷದಿಂದ ಇಂಗ್ಲಿಷ್ ಮಾಧ್ಯಮದ ಪ್ರಾಥಮಿಕ ಶಾಲೆಗಳಿಗೆ

ಅನುಮತಿ ಕೊಡಬಾರದೆಂಬ ಕಾರ್ಯನೀತಿಯನ್ನು ರಾಜ್ಯ ಸಚಿವಸಂಪುಟವು ತೆಗೆದುಕೊಂಡಿರುವುದಾಗಿ ತೋರುತ್ತದೆ. ವರದಿಯ ೨೨೦೦ ಮತ್ತು ೨೨೦೧ನೇ ಪುಟಗಳಲ್ಲಿ ಅದನ್ನು ಉದ್ಧೃತ ಭಾಗವಾಗಿ ಕೊಡಲಾಗಿದೆ. ಆ ತೀರ್ಮಾನದಲ್ಲೂ ಸಹ ವಿರಳ ಪ್ರಕರಣಗಳಲ್ಲಿ ಮಾತ್ರವೇ ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಅನುಮತಿ ನೀಡಬಹುದೆಂದು ಹೇಳಲಾಗಿದೆ. ಆ ತೀರ್ಮಾನದ ನಂತರ, ತೀರ್ಪಿನಲ್ಲಿ ಹೇಳಿರುವಂತೆ, ಇಂಗ್ಲಿಷ್ ಮಾಧ್ಯಮದ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಕೆಲವರಿಗೆ ಅನುಮತಿ ನೀಡಲಾಗಿದ್ದರೂ, ಅದರಲ್ಲಿನ ಅರ್ಜಿದಾರರುಗಳಿಗೆ ಅನುಮತಿಯನ್ನು ನಿರಾಕರಿಸಲಾಗಿತ್ತು ಮತ್ತು ನಿರಾಕರಣೆಗೆ ಕಾರಣಗಳನ್ನು ವಿವರಿಸಿ ಯಾವುದೇ ಆಕ್ಷೇಪಣಾ ವಿವರಣೆಯನ್ನು ದಾಖಲು ಮಾಡಿರಲಿಲ್ಲ ಮತ್ತು ಸರ್ಕಾರವು ಸಚಿವ ಸಂಪುಟದ ತೀರ್ಮಾನದ ಮೇಲೆ ಮಾತ್ರವೇ ಅವಲಂಬಿಸಿತ್ತು. ಆದ್ದರಿಂದ, ಹಾಗೆ ನಿರಾಕರಿಸಿರುವುದು ಸಂವಿಧಾನದ ೧೪ನೆಯ ಅನುಚ್ಛೇದವನ್ನು ಉಲ್ಲಂಘಿಸುತ್ತದೆಂದು ನಿರ್ಣಯಿಸಲಾಯಿತು. ತೀರ್ಪಿನ ಸುಸಂಗತ ಭಾಗವು ಹೀಗಿದೆ :

"ಆದರೆ ಈ ಪ್ರಕರಣದಲ್ಲಿ, ಶಾಸನದಡಿಯಾಗಲಿ ಅಥವಾ ತಜ್ಞ ಅಭಿಪ್ರಾಯದ ಆಧಾರದ ಮೇಲಾಗಲಿ ಕಾರ್ಯನೀತಿಯ ಬಗ್ಗೆ ಯಾವುದೇ ನಿರ್ದಿಷ್ಟ ಸೂತ್ರವನ್ನು ರೂಪಿಸಿಲ್ಲದೇ ಇರುವಾಗ, ಕಾರ್ಯನೀತಿಯ ಆಧಾರದ ಮೇಲೆ ಸಚಿವ ಸಂಪುಟವು ಕೈಗೊಂಡಿರುವ ತೀರ್ಮಾನವನ್ನು ಸಂವಿಧಾನದ ೧೪ ಮತ್ತು ೧೯(೧) (ಜಿ) ಅನುಚ್ಛೇದದ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸಬಹುದಾಗಿದೆ. ಈ ಮೊದಲೇ ಗಮನಿಸಿರುವಂತೆ, ಕಾರ್ಯನೀತಿ ಇತ್ತು ಎಂದಾದರೆ, ಅದು ರಾಜ್ಯದಲ್ಲಿರುವ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಅನ್ವಯವಾಗಬೇಕಾಗುತ್ತದೆ. ಆ ಕಾರ್ಯನೀತಿಯ ಏಕರೂಪದ ಅನ್ವಯ ಇಲ್ಲದಿರುವಾಗ, ಅದು, ಈ ನ್ಯಾಯಾಲಯದ ಮುಂದೆ ಪ್ರಶ್ನಿಸಲು ಗುರಿಯಾಗುತ್ತದೆ ಹಾಗೂ ಈ ನ್ಯಾಯಾಲಯದ ಪರಿಷ್ಕರಣೆಗೆ ಅದನ್ನು ಇಡಬಹುದಾಗಿರುತ್ತದೆ. ಏಕರೂಪವಲ್ಲದ ಮತ್ತು ಭಾಷಾಅಲ್ಪಸಂಖ್ಯಾತರ ಹಕ್ಕುಗಳ ವಸ್ತುನಿಷ್ಠ ಪರಿಶೀಲನೆಯ ಮೇಲೆ ಆಧಾರಿತವಾಗಿರದ ಒಂದು ಕಾರ್ಯನೀತಿಯ ಮೇಲೆ ಆಧಾರಿತವಾಗಿರುವ ರಾಜ್ಯ ಸರ್ಕಾರದ ತೀರ್ಮಾನವು ಸಂವಿಧಾನದ ೧೪ನೆಯ ಅನುಚ್ಛೇದವನ್ನು ಉಲ್ಲಂಘಿಸುತ್ತದೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ ಮತ್ತು ಆ ಆಧಾರದ ಮೇಲೆಯೇ ಅದನ್ನು ಹೊಡೆದುಹಾಕಬೇಕಾಗುತ್ತದೆ".

(ಅಡಿಗೆರೆ (ಓರೆ ಅಕ್ಷರಗಳು) ನಮ್ಮದು)

ಆದ್ದರಿಂದ, ರಾಜ್ಯದಲ್ಲಿರುವ ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಅನ್ವಯವಾಗುವ ಯಾವುದೇ ಏಕರೂಪದ ನೀತಿಯನ್ನು ಅಳವಡಿಸಿಕೊಂಡಿರಲಿಲ್ಲ, ಮತ್ತು ಆ ಮೂಲಕ ಸಂವಿಧಾನದ ೧೪ನೇ ಅನುಚ್ಛೇದವನ್ನು ಉಲ್ಲಂಘಿಸಿ ಅಲ್ಲಿನ ಅರ್ಜಿದಾರರುಗಳ ವಿರುದ್ಧ ತಾರತಮ್ಯ ತೋರಲಾಗಿದೆ ಎಂಬ ಆಧಾರದ ಮೇಲೆ ಮಾನ್ಯ

ನ್ಯಾಯಮೂರ್ತಿಯವರು ಮೊಕದ್ದಮೆಯನ್ನು ತೀರ್ಮಾನಿಸಿದರು. ಹೀಗಾಗಿ, ಅದು, ಆ ಮೊಕದ್ದಮೆಯ ಸಂಗತಿಗಳಿಗೆ ಸೀಮಿತವಾಗಿದೆ ಮತ್ತು ಒಂದೇ ಮಾತೃಭಾಷೆಯ ಮಕ್ಕಳು ನಿರ್ದಿಷ್ಟ ಸಂಖ್ಯೆಯಲ್ಲಿ ಯಾವುದೇ ಶಾಲೆಗಳಲ್ಲಿ ಪ್ರವೇಶ ಪಡೆದುಕೊಂಡಾಗ ಮಾತ್ರವೇ ಅಂಥ ಪ್ರಾಥಮಿಕಶಾಲೆಗಳಲ್ಲಿ ನಾಲ್ಕನೆಯ ತರಗತಿಯವರೆಗೆ ಅವರವರ ಮಾತೃಭಾಷೆಯಲ್ಲಿ ಶಿಕ್ಷಣ ಕೊಡಬೇಕೆಂಬ ಷರತ್ತಿಗೊಳಪಟ್ಟು ಪ್ರಾಥಮಿಕಶಾಲೆಗಳನ್ನು ತೆರೆಯುವುದಕ್ಕೆ ಅನುಮತಿ ಕೊಡುವ ಏಕರೂಪದ ಕಾರ್ಯನೀತಿಯನ್ನು ರಾಜ್ಯ ಸರ್ಕಾರವು ಜಾರಿಗೊಳಿಸುವುದಕ್ಕೆ ಅದು ಅಡ್ಡಿಯಾಗುವುದಿಲ್ಲ.

೧೦. ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್ ಮೊಕದ್ದಮೆಯಲ್ಲಿ ಮಾನ್ಯ ನ್ಯಾಯಮೂರ್ತಿಯವರು, ಅಂಥದ್ದೊಂದು ಏಕರೂಪ ನಿಬಂಧವನ್ನು ಶಾಸನ ರಚನೆಯ ಮೂಲಕ ಮಾತ್ರವೇ ಮಾಡಬಹುದೆಂದು ಅಭಿಪ್ರಾಯ ಪಟ್ಟಿದ್ದಾರೆ. ತೀರ್ಪಿನ ಸುಸಂಗತ ಭಾಗವು ಹೀಗಿದೆ :

"ಹೀಗೆ, ಸಂವಿಧಾನದ ಮತ್ತು ಸಂಹಿತೆಯ ಈ ನಿಬಂಧಗಳಿಂದ, ರಾಜ್ಯ ಶಾಸನ ಸಭೆಗೆ (ಶಿಕ್ಷಣವು ಒಂದು ಸಮವರ್ತಿ ವಿಷಯವಾಗಿರುವುದರಿಂದ) ಕೊಟ್ಟಿರುವ ಅಧಿಕಾರಿಗಳ ಚಲಾವಣೆಯಲ್ಲಲ್ಲದೇ ಅನ್ಯಥಾ ಸಂವಿಧಾನವು ಆಲೋಚಿಸುವುದಿಲ್ಲ. ರಾಜ್ಯ ವಿಧಾನ ಮಂಡಲವು ಇಂಗ್ಲಿಷಿನಲ್ಲಲ್ಲದೇ ಕನ್ನಡದಲ್ಲಿ ಮಾತ್ರವೇ ಶಿಕ್ಷಣವನ್ನು ಕೊಡಲು ಅವಶ್ಯಕ ಶಾಸನಾತ್ಮಕ ನಿಬಂಧಗಳನ್ನು ಮಾಡುತ್ತದೆಯೆಂಬ ಆಧಾರದ ಮೇಲೆ ಈ ನ್ಯಾಯಾಲಯವು ಮುಂದುವರಿಯಬಹುದಾಗಿದೆ. ಅಂಥ ಶಾಸನವನ್ನು ೧೪ ಮತ್ತು ೧೯(೧) (ಜಿ) ಅನುಚ್ಛೇದಗಳನ್ನು ಉಲ್ಲಂಘಿಸದೆಯೇ ಮಾಡಬಹುದೇ ಎನ್ನುವುದು ಪರಿಶೀಲನೆಗೆ ಉದ್ಭವಿಸಬಹುದು. ಆದರೆ, ಪ್ರಾಥಮಿಕ / ನರ್ಸರಿ ಶಾಲೆಗಳಲ್ಲಿನ ಶಿಕ್ಷಣ ಮಾಧ್ಯಮ ಕುರಿತಂತೆ ಅಂತಹ ಶಾಸನವನ್ನು ರಾಜ್ಯ ಸರ್ಕಾರವು ಮಾಡಿಲ್ಲವೆಂಬುದು ಒಂದು ಸಾಮಾನ್ಯ ಆಧಾರವಾಗಿರುವುದರಿಂದ ಅದು ಈ ಅರ್ಜಿಗಳಲ್ಲಿನ ನಮಗೆ ತೊಂದರೆಯುಂಟು ಮಾಡುವುದಿಲ್ಲ. ರಾಜ್ಯ ಸರ್ಕಾರವು, ಈ ಮೊದಲೇ ಗಮನಿಸಿರುವಂತೆ, ಸಂಹಿತೆಯ ನಿಯಮ ೧೨(i)ರಲ್ಲಿರುವ ಸಚಿವ ಸಂಪುಟದ ಕಾರ್ಯನೀತಿಯ ಮೇಲೆ ಮಾತ್ರವೇ ತನ್ನ ವಾದವನ್ನು ಆಧರಿಸಿದೆ. ನಿಯಮ ೧೨(i) ಹೀಗಿದೆ :

"ಎಲ್ಲಾ ಪ್ರಾಥಮಿಕ ಶಾಲೆಗಳಿಗೆ ಶಿಕ್ಷಣದ ಮಾಧ್ಯಮವು ಸಾಮಾನ್ಯವಾಗಿ ಪ್ರಾದೇಶಿಕ ಭಾಷೆ ಅಥವಾ ಮಾತೃಭಾಷೆ ಆಗಿರತಕ್ಕದ್ದು."

ಈ ಅಭಿಪ್ರಾಯವು, ಗೌರವಪೂರ್ವಕವಾಗಿ ಹೇಳುವುದಾದರೆ, ರಾಯ್ ಸಾಹೆಬ್ ರಾಮ್ ಜವಯ-ವಿರುದ್ಧ-ಪಂಜಾಬ್ ರಾಜ್ಯ[೩] ಹಾಗೂ ಮಧ್ಯಪ್ರದೇಶ ರಾಜ್ಯ-ವಿರುದ್ಧ-ಕುಮಾರಿ ನಿವೇದಿತಾ ಜೈನ್[೪] ಮೊಕದ್ದಮೆಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಇತ್ತಿರುವ ತೀರ್ಪಿನ ನಿರ್ಣಯಾಂಶಕ್ಕೆ ವಿರುದ್ಧವಾಗುತ್ತದೆ. ಈ ಎರಡೂ ತೀರ್ಪುಗಳಲ್ಲಿ

೩. ಎಐಆರ್ ೧೯೫೫ ಸರ್ವೋನ್ಯಾ ೫೪೯;

೪. ಎಐಆರ್ ೧೯೮೦ ಸರ್ವೋನ್ಯಾ ೨೦೪೫;

ಸರ್ವೋಚ್ಚ ನ್ಯಾಯಾಲಯವು, ಭಾರತ ಸಂವಿಧಾನದ ೧೬೨ನೇ ಅನುಚ್ಛೇದದಡಿ ರಾಜ್ಯದ ಕಾರ್ಯಾಂಗ ಅಧಿಕಾರವು ಶಾಸಕಾಂಗದ ಅಧಿಕಾರದೊಂದಿಗೆ ಸಮವ್ಯಾಪಕವಾಗಿರುತ್ತದೆ. ಶಾಸನ ಇಲ್ಲದಿರುವಾಗ, ಎಂದರೆ, ಒಂದು ನಿರ್ದಿಷ್ಟ ಕ್ಷೇತ್ರವು ಶಾಸನದಲ್ಲಿ ಒಳಗೊಂಡಿಲ್ಲದಿದ್ದರೆ, ಆಗ ಕಾರ್ಯಾಂಗವು ಕಾರ್ಯ ಪ್ರವೃತ್ತವಾಗಬಹುದಾಗಿದೆ ಎಂದು ನಿರ್ಣಯ ನೀಡಿದೆ. ಈ ತೀರ್ಪುಗಳನ್ನು ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್ ಮೊಕದ್ದಮೆಯಲ್ಲಿ ಆ ಮಾನ್ಯ ನ್ಯಾಯಮೂರ್ತಿಯವರ ಗಮನಕ್ಕೆ ತಂದಿರಲಿಲ್ಲ. ಟಿ.ಸಿ.ಎಚ್. ವ್ಯಾಸಂಗಕ್ಕೆ ಪ್ರವೇಶಕ್ಕಾಗಿ ಇರುವ ವಿದ್ಯಾರ್ಹತೆಯನ್ನು ಬದಲಾಯಿಸಿ ಸಹಾಯಾನುದಾನ ಸಂಹಿತೆಗೆ ಕಾರ್ಯಾಂಗ ಆದೇಶವೊಂದರ ಮೂಲಕ ತಂದಿದ್ದ ತಿದ್ದುಪಡಿಯನ್ನು ಮುನಿಯಪ್ಪ-ವಿರುದ್ಧ-ಕರ್ನಾಟಕ ರಾಜ್ಯ[೫] ಮೊಕದ್ದಮೆಯಲ್ಲಿ, ಅಂಥದೊಂದು ನಿಬಂಧನೆಯನ್ನು ಮಾಡಲು ಕಾರ್ಯಾಂಗವು ಅಧಿಕಾರಯುತವಾಗಿಲ್ಲ, ಅದನ್ನು ಶಾಸನದ ಮೂಲಕ ಮಾತ್ರವೇ ಮಾಡಬೇಕಾಗಿತ್ತು ಎಂಬ ಆಧಾರದ ಮೇಲೆ ಪ್ರಶ್ನಿಸಲಾಗಿತ್ತು. ಅದನ್ನು, ಸರ್ವೋಚ್ಚ ನ್ಯಾಯಾಲಯದ ಆ ಎರಡೂ ತೀರ್ಪುಗಳನ್ನು ಅವಲಂಬಿಸಿ ತಳ್ಳಿಹಾಕಲಾಗಿತ್ತು. ಮುನಿಯಪ್ಪ ಮೊಕದ್ದಮೆಯಲ್ಲಿನ ಆ ವಾದವನ್ನು ತಳ್ಳಿ ಹಾಕಲು ಮಾನ್ಯ ನ್ಯಾಯಮೂರ್ತಿಯವರು ಅವಲಂಬಿಸಿದ್ದ ನಿವೇದಿತಾ ಜೈನ್ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಇತ್ತಿರುವ ತೀರ್ಪಿನ ಸುಸಂಗತ ಭಾಗವು ಹೀಗಿದೆ :

"ಆದ್ದರಿಂದ, ಸಂವಿಧಾನದ ೧೬೨ನೇ ಅನುಚ್ಛೇದದಡಿ ರಾಜ್ಯದ ಕಾರ್ಯಾಂಗ ಅಧಿಕಾರವು, ಯಾವ ವಿಷಯದ ಬಗ್ಗೆ ಕಾನೂನು ಮಾಡಲು ರಾಜ್ಯದ ಶಾಸನಸಭೆಗೆ ಅಧಿಕಾರವಿಲ್ಲವೋ ಆ ವಿಷಯಕ್ಕೂ ವ್ಯಾಪಿಸುತ್ತದೆ. ವೈದ್ಯಕೀಯ ಕಾಲೇಜುಗಳಿಗೆ ಪ್ರವೇಶಕ್ಕಾಗಿ ಅಭ್ಯರ್ಥಿಗಳ ಆಯ್ಕೆ ವಿಷಯವನ್ನು ಒಳಗೊಂಡಿರುವ ಯಾವ ಶಾಸನವೂ ಇಲ್ಲದಿರುವುದರಿಂದ, ಈ ಸಂಬಂಧವಾಗಿ ರಾಜ್ಯ ಸರ್ಕಾರವು ನಿಸ್ಸಂಶಯವಾಗಿಯೂ ಕಾರ್ಯಾಂಗ ಆದೇಶಗಳನ್ನು ಮಾಡಲು ಅಧಿಕಾರಯುತವಾಗಿರುತ್ತದೆ.

೬. ನನ್ನ ಅಭಿಪ್ರಾಯದಲ್ಲಿ, ಆ ಮೊಕದ್ದಮೆಯ ನಿರ್ಣಯಾಂಶವು ಈ ಮೊಕದ್ದಮೆಗಳ ಸಂಗತಿಗಳಿಗೂ ಅಷ್ಟೇ ಬಲವಾಗಿ ಅನ್ವಯವಾಗುತ್ತದೆ. ರಾಜ್ಯ ಸರ್ಕಾರವು ಈ ಮೊದಲೇ ನಿರ್ದಿಷ್ಟಪಡಿಸಿರುವ ಎಸ್‌ಎಸ್‌ಎಲ್‌ಸಿ ಕನಿಷ್ಠ ವಿದ್ಯಾರ್ಹತೆಯು ಯಾವುದೇ ಶಾಸನಾತ್ಮಕ ನಿಬಂಧಕ್ಕನುಸಾರವಾಗಿರಲಿಲ್ಲ. ಒಂದು ಶಾಸನಾತ್ಮಕವಲ್ಲದ ನಿಬಂಧವಾಗಿರುವ ಸಹಾಯಾನುದಾನ ಸಂಹಿತೆಯಡಿ ಅದನ್ನು ಮಾಡಲಾಗಿತ್ತು. ಮಾನವ ಸಂಪನ್ಮೂಲಗಳ ಮಂತ್ರಾಲಯವು ರೂಪಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿಗನುಸಾರವಾಗಿ ಶೈಕ್ಷಣಿಕ ಗುಣಮಟ್ಟಗಳನ್ನು ಹೆಚ್ಚಿಸುವ ದೃಷ್ಟಿಯಿಂದ, ಹೆಚ್ಚಿನ ವಿದ್ಯಾರ್ಹತೆಯನ್ನು ನಿಗದಿಪಡಿಸುವ ಒಂದು ಹೊಸ ನಿಬಂಧನೆಯನ್ನು ಆ ನಿಬಂಧನೆಯ ಬದಲಿಗೆ ತರಲು ರಾಜ್ಯಸರ್ಕಾರಕ್ಕೆ ಅವಕಾಶವಿದೆ".

---

೫. ಐಎಲ್‌ಆರ್ ೧೯೮೯ ಕರ್ನಾ ೬೧೫

ಆದ್ದರಿಂದ, ಗೌರವಪೂರ್ವಕವಾಗಿಯೇ ನಾವು, ಶಾಸನದ ಮೂಲಕ ಮಾತ್ರವೇ ರಾಜ್ಯವು ಪ್ರಾಥಮಿಕಶಿಕ್ಷಣವನ್ನು ನಿಯಂತ್ರಿಸಬಹುದೆಂಬ ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್ ಮೊಕದ್ದಮೆಯಲ್ಲಿನ ಅಭಿಪ್ರಾಯವು, ಸರ್ವೋಚ್ಚ ನ್ಯಾಯಾಲಯವು ಘೋಷಿಸಿರುವ ಹಾಗೂ ಮುನಿಯಪ್ಪ ಮೊಕದ್ದಮೆಯಲ್ಲಿ ಅನ್ವಯಿಸಿರುವ ಕಾನೂನಿಗೆ ವ್ಯತಿರಿಕ್ತವಾದುದಾಗುವುದರಿಂದ, ಅದು ಕಾನೂನನ್ನು ಸರಿಯಾಗಿ ನಿರೂಪಿಸುವುದಿಲ್ಲವೆಂದು ಸ್ಪಷ್ಟಪಡಿಸುತ್ತೇವೆ. ಆದ್ದರಿಂದ, ಪೂರ್ಣ ನ್ಯಾಯಪೀಠದ ತೀರ್ಮಾನವನ್ನು ಮತ್ತು ಈ ಅರ್ಜಿಗಳಲ್ಲಿ ಮಾಡಿರುವ ಆದೇಶಗಳನ್ನು, ಹಾಗೆಯೇ, ಸೂಕ್ತ ಆದೇಶಗಳನ್ನು ನೀಡುವ ಮೂಲಕ ಏಕರೂಪವಾಗಿ ನಾಲ್ಕನೆಯ ತರಗತಿಯವರೆಗೆ ಮಾತೃಭಾಷೆಯಲ್ಲಿಯೇ ಶಿಕ್ಷಣವನ್ನು ನೀಡುವ ಪ್ರಾಥಮಿಕ ಶಾಲೆಗಳಿಗೆ ಅನುಮತಿ ಕೊಡಬೇಕೆನ್ನುವ ಸಚಿವ ಸಂಪುಟದ ತೀರ್ಮಾನವನ್ನು ಜಾರಿಗೆ ತರಲು ರಾಜ್ಯ ಸರ್ಕಾರಕ್ಕೆ ಅವಕಾಶವಿದೆ. ಏಕೆಂದರೆ, ಒಂದು ಕಾರ್ಯಾಂಗದ ಆದೇಶವನ್ನು ಯಾವುದೇ ತರುವಾಯದ ಕಾರ್ಯಾಂಗದ ಆದೇಶದ ಮೂಲಕ ತಿದ್ದುಪಡಿ ಮಾಡಬಹುದೆನ್ನುವುದೂ ಸಹ ಸ್ಪಷ್ಟ. ನಿಯಮ ೧೨(i), ೧೯೬೯ರಲ್ಲಿ ಘೋಷಿಸಿದ ಸಹಾಯಾನುದಾನ ಸಂಹಿತೆಯ ಒಂದು ಭಾಗವಾಗಿದೆ ಮತ್ತು ಮಾತೃಭಾಷೆಯಲ್ಲಿ ಪ್ರಾಥಮಿಕಶಿಕ್ಷಣವನ್ನು ಕೊಡಬೇಕೆನ್ನುವ ಒಂದು ಸಾರ್ವತ್ರಿಕ ನೀತಿಯನ್ನು ಅದರಲ್ಲಿ ಸೇರಿಸಲಾಗಿದೆ, ಅದು ಪೂರ್ಣ ನ್ಯಾಯಪೀಠದ ಆಜ್ಞೆಯಲ್ಲಿ ಉದ್ಧೃತ ಭಾಗವಾಗಿ ಕೊಟ್ಟಿರುವ ತಜ್ಞರ ಅಭಿಪ್ರಾಯ ಹಾಗೂ ಠರಾವುಗಳಿಗನುಸಾರವಾಗಿದೆ ಮತ್ತು ಈಗಾಗಲೇ ಉದ್ಧೃತ ಭಾಗವಾಗಿ ಕೊಟ್ಟಿರುವ ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್ ಮೊಕದ್ದಮೆಯ ತೀರ್ಪಿಗೆ ಸಂಬಂಧಿಸಿದ ೧೧ನೆಯ ಪ್ಯಾರಾದಲ್ಲಿ ಹೇಳಿರುವಂತೆ ಅದನ್ನು, ೧೯೮೭ರಲ್ಲಿ ರೂಪಿಸಿದ ಸಚಿವ ಸಂಪುಟದ ನೀತಿಗನುಸಾರವಾಗಿ ತರಲಾಗಿತ್ತು ಎನ್ನುವುದನ್ನು ಸಹ ನಾವು ಸ್ಪಷ್ಟಪಡಿಸುತ್ತೇವೆ.

೧೧. ಇಂಗ್ಲಿಷ್ ಮಾಧ್ಯಮದ ಶಾಲೆಗಳನ್ನು ತೆರೆಯಲು ಅನುಮತಿಯನ್ನು ನಿರಾಕರಿಸುವ ಆದೇಶಗಳು ಸಂವಿಧಾನದ ೧೯(೧)(ಜಿ) ಮತ್ತು ೧೯(೧)(ಎ) ಅನುಚ್ಛೇದಗಳನ್ನು ಉಲ್ಲಂಘಿಸುತ್ತದೆಂದು ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್ ಮೊಕದ್ದಮೆಯಲ್ಲಿನ ತೀರ್ಪಿನ ೧೬ನೆಯ ಪ್ಯಾರಾದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯವು, ಆ ಮೊಕದ್ದಮೆಯಲ್ಲಿನ ತೀರ್ಮಾನಕ್ಕೆ ಅನವಶ್ಯಕವಾದುದು. ಏಕೆಂದರೆ, ಇಂಗ್ಲಿಷ್ ಮಾಧ್ಯಮದ ಪ್ರಾಥಮಿಕಶಾಲೆಗಳನ್ನು ತೆರೆಯುವುದಕ್ಕಾಗಿ ಬಂದಿದ್ದ ಇತರರ ಅರ್ಜಿಗಳನ್ನು ಒಪ್ಪಿಕೊಳ್ಳಲಾಗಿದ್ದರೂ ಅದರಲ್ಲಿ ಅರ್ಜಿದಾರರುಗಳ ಅರ್ಜಿಯನ್ನು ತಿರಸ್ಕರಿಸಲಾಗಿದೆ ಎಂಬ ಆಧಾರದ ಮೇಲೆಯೇ, ೧೪ನೆಯ ಅನುಚ್ಛೇದದ ಉಲ್ಲಂಘನೆಯಾಗಿದೆಯೆಂಬ ಏಕಮಾತ್ರ ಆಧಾರದ ಮೇಲೆ ಮಾತ್ರವೇ ಆ ಮೊಕದ್ದಮೆಯನ್ನು ತೀರ್ಮಾನಿಸಲಾಗಿತ್ತೆಂದು ಅವಲೋಕಿಸುವುದು ಸಹ ಅವಶ್ಯಕವಾಗಿದೆ. ಸರ್ವೋಚ್ಚ ನ್ಯಾಯಾಲಯದ ಹಲವಾರು ತೀರ್ಪುಗಳ ಮೇಲೆ

ಅವಲಂಬಿಸಿರುವ, ಪೂರ್ಣ ನ್ಯಾಯಪೀಠದ ತೀರ್ಪಿನಲ್ಲಿ ಎತ್ತಿ ತೋರಿಸಿರುವಂತೆ, ಸಮಂಜಸವಾಗಿರುವ, ಶಿಕ್ಷಣದಲ್ಲಿ ಉನ್ನತ ಮಟ್ಟವನ್ನು ಕಾಪಾಡಿಕೊಂಡು ಬರುವ ಹಿತದೃಷ್ಟಿ ಇರುವ ಅಲ್ಪಸಂಖ್ಯಾತರುಗಳ ಹಿತದೃಷ್ಟಿಗನುಗುಣವಾಗಿರುವ ಯಾವುದೇ ನಿಬಂಧನೆಯು, ಭಾಷಾ ಅಲ್ಪಸಂಖ್ಯಾತರಿಗೆ, ಹಾಗೆಯೇ, ಧಾರ್ಮಿಕ ಅಲ್ಪಸಂಖ್ಯಾತರಿಗೆ ತಮ್ಮ ಇಷ್ಟಕ್ಕನುಗುಣವಾದ ಶೈಕ್ಷಣಿಕ ಸಂಸ್ಥೆಗಳನ್ನು ತೆರೆಯಲು ಹಕ್ಕನ್ನು ಕೊಟ್ಟಿರುವ ಸಂವಿಧಾನದ ೩೦ನೆಯ ಅನುಚ್ಛೇದದ ಯಾವ ಉಲ್ಲಂಘನೆಯನ್ನೂ ಮಾಡುವುದಿಲ್ಲ. ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಿಕ್ಷಣವನ್ನು ೪ನೇ ತರಗತಿಯವರೆಗೆ ಮಾತೃಭಾಷೆಯಲ್ಲೇ ಕೊಡುವಂತೆ ಅಗತ್ಯಪಡಿಸುವ ಒಂದು ನಿಬಂಧನೆಯು ಶಿಕ್ಷಣದಲ್ಲಿ ಉನ್ನತಮಟ್ಟ ಇರಬೇಕೆನ್ನುವ ಹಿತದೃಷ್ಟಿಯಿಂದ ಮತ್ತು ಅಲ್ಪಸಂಖ್ಯಾತರ ಹಿತದೃಷ್ಟಿಯನ್ನು ಕಾಪಾಡಬೇಕೆನ್ನುವ ದೃಷ್ಟಿಯಿಂದ ಒಂದು ಸಮಂಜಸವಾದ ನಿಬಂಧನೆಯಾಗುತ್ತದೆ. ತಮ್ಮ ತಮ್ಮ ಮಾತೃಭಾಷೆಯಲ್ಲಿ ಪ್ರಾಥಮಿಕಶಾಲೆಗಳಲ್ಲಿ ಶಿಕ್ಷಣ ಒದಗಿಸುವ ಹಕ್ಕು ತಮಗಿದೆಯೆಂಬ ಮತ್ತು ಸಂವಿಧಾನದ ೨೯ನೆಯ ಅನುಚ್ಛೇದದಡಿ ತಮ್ಮ ಭಾಷೆಯನ್ನು ಸಂರಕ್ಷಿಸಿಕೊಳ್ಳುವ ಮತ್ತು ಅಭಿವೃದ್ಧಿ ಪಡಿಸಿಕೊಳ್ಳುವ ತಮ್ಮ ಹಕ್ಕನ್ನು ರಕ್ಷಿಸಿಕೊಳ್ಳಲು ಅಂಥದೊಂದು ನಿಬಂಧನೆಯು ಅವಶ್ಯಕವೆಂಬ ಅರ್ಜಿದಾರರುಗಳ, ಅವರಲ್ಲಿ ಕೆಲವರು ಧಾರ್ಮಿಕ ಅಲ್ಪಸಂಖ್ಯಾತರೂ ಆಗಿರುವ ಭಾಷಾ ಅಲ್ಪಸಂಖ್ಯಾತರುಗಳ, ಹಕ್ಕು ಕೋರಿಕೆಗೆ ಅದು ಅನುಗುಣವಾಗಿದೆ. ೧೪ ಅಥವಾ ೧೯ನೆಯ ಅನುಚ್ಛೇದದಡಿ ಭಾಷಾ ಅಲ್ಪಸಂಖ್ಯಾತರು ಅಥವಾ ಭಾಷಾ ಅಲ್ಪಸಂಖ್ಯಾತರಲ್ಲದವರು ಕೇಳುವ ಪ್ರಾಥಮಿಕಶಾಲೆಗಳನ್ನು ತೆರೆಯುವ ಹಕ್ಕು ಸಹ ಶಿಕ್ಷಣದಲ್ಲಿ ಉನ್ನತಮಟ್ಟವನ್ನು ಕಾಪಾಡಿಕೊಂಡು ಬರುವ ಹಿತದೃಷ್ಟಿಯಿಂದ ಮಾಡಿರುವ ಸಮಂಜಸ ನಿಬಂಧನೆಗೆ ಒಳಪಟ್ಟಿರುವುದರಿಂದ, ಪ್ರಾಥಮಿಕ ಶಾಲೆಯ ನಾಲ್ಕನೆಯ ತರಗತಿಯವರೆಗೆ ಮಕ್ಕಳ ಮಾತೃಭಾಷೆಯಲ್ಲಿಯೇ ಶಿಕ್ಷಣವನ್ನು ಕೊಡಲು ಅಗತ್ಯಪಡಿಸುವ ಒಂದು ನಿಬಂಧದಿಂದ ಉಲ್ಲಂಘನೆಯಾಗುವುದಿಲ್ಲ. ವಾಸ್ತವವಾಗಿ, ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್ ಮೊಕದ್ದಮೆಯಲ್ಲಿ ಮಾನ್ಯ ನ್ಯಾಯಮೂರ್ತಿಯವರು, ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲಿ ಕೊಡಲು ರಾಜ್ಯದ ಮೇಲಿರುವ ಹೊಣೆಗಾರಿಕೆಯನ್ನು ಒತ್ತಿ ಹೇಳಿದ್ದಾರೆ :

"೪೫ನೇ ಅನುಚ್ಛೇದವು ಸಂವಿಧಾನವು ಪ್ರಾರಂಭವಾದಾಗಿನಿಂದ ೧೦ ವರ್ಷಗಳ ಕಾಲಾವಧಿಯೊಳಗಾಗಿ ಉಚಿತ ಮತ್ತು ಕಡ್ಡಾಯ ವಿದ್ಯಾಭ್ಯಾಸದ ಸಂವಿಧಾನಾತ್ಮಕ ಗುರಿಯ ಬಗ್ಗೆ ಕಲ್ಪಿಸಿದ್ದರೆ, ೩೫೦ಎ ಅನುಚ್ಛೇದವು ಶಿಕ್ಷಣದ ಪ್ರಾಥಮಿಕ ಹಂತದಲ್ಲಿ ಶಿಕ್ಷಣದ ಮಾಧ್ಯಮದ ಬಗ್ಗೆ ಭಾಷಾ ಅಲ್ಪಸಂಖ್ಯಾತರಿಗಿರುವ ಹಕ್ಕುಗಳ ಬಗ್ಗೆ ಕಲ್ಪಿಸಿದೆ. ಈ ಎರಡೂ ನಿಬಂಧಗಳನ್ನು ಒಟ್ಟಾಗಿ ಓದಿದರೆ, ಅವು, ಪ್ರಾಥಮಿಕ ಹಂತದಲ್ಲಿ ಭಾಷಾ ಅಲ್ಪಸಂಖ್ಯಾತರ ಗುಂಪುಗಳ ಮಕ್ಕಳ ಮೇಲೆ ಬಹು ಜನಸಮುದಾಯದ ಭಾಷೆಯನ್ನು ಶಿಕ್ಷಣದ ಮಾಧ್ಯಮವಾಗಿ ರಾಜ್ಯ ಸರ್ಕಾರವು ಹೇರುವುದಕ್ಕೆ ಅಧಿಕಾರ ಕೊಡುವುದಿಲ್ಲವೆಂಬುದನ್ನು ಸೂಚಿಸುತ್ತವೆ. ಭಾಷಾ

ಅಲ್ಪಸಂಖ್ಯಾತರ ಗುಂಪುಗಳ ಮಕ್ಕಳ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಮಾತೃಭಾಷೆಯಲ್ಲೇ ಬೋಧಿಸಲು ವಿಶೇಷ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕಾಗುತ್ತದೆ".

[ಅಡಿಗೆರೆ (ಓರೆ ಅಕ್ಷರಗಳು) ನಮ್ಮದು]

ಆದ್ದರಿಂದ, ಏಕರೂಪವಾಗಿ ಮತ್ತು ಯಾವುದೇ ತಾರತಮ್ಯ ತೋರದೆಯೆ ಪ್ರಾಥಮಿಕಶಾಲೆಗಳಲ್ಲಿ ನಾಲ್ಕನೆಯ ತರಗತಿಯವರೆಗೆ ಮಾತೃಭಾಷೆಯಲ್ಲಿಯೇ ಶಿಕ್ಷಣ ಕೊಡಲು ಪ್ರಾಥಮಿಕಶಾಲೆಗಳನ್ನು ತೆರೆಯಲು ಅನುಮತಿ ಕೊಡುವ ತನ್ನ ನೀತಿಯನ್ನು ಕಾರ್ಯಗತಗೊಳಿಸಲು ರಾಜ್ಯ ಸರ್ಕಾರಕ್ಕೆ ಅವಕಾಶವಿದೆ ಎನ್ನುವುದನ್ನು ನಾವು ಸ್ಪಷ್ಟಪಡಿಸುತ್ತೇವೆ.

೧೨. ಈಗ ರಿಟ್ ಅರ್ಜಿ ಸಂಖ್ಯೆ ೧೦೦೬/೧೯೮೩ರ ಬಗ್ಗೆ ಹೇಳುವುದಾದರೆ, ಶ್ರೀ ಮಾಧವರಾವ್ ಅತ್ನೀಕರ್ ಎಂಬ ತನ್ನ ಅಧ್ಯಕ್ಷರಿಂದ ಪ್ರತಿನಿಧಿತವಾಗಿರುವ, ಬೆಳಗಾಂನಲ್ಲಿರುವ ಇಂಗ್ಲಿಷ್ ಮೀಡಿಯಂ ಸ್ಟೂಡೆಂಟ್ ಪೇರೆಂಟ್ಸ್ ಅಸೋಸಿಯೇಷನ್ ಎಂಬ ಹೆಸರಿನಲ್ಲಿ ಅರ್ಜಿಯನ್ನು ಸಲ್ಲಿಸಿದೆ. ಈ ಅರ್ಜಿಯಲ್ಲಿ, ಪ್ರಶ್ನೆಯಲ್ಲಿರುವ ಸರ್ಕಾರಿ ಆದೇಶವನ್ನು ರದ್ದು ಮಾಡಬೇಕೆಂಬ ಒಂದೇ ಒಂದು ಪ್ರಾರ್ಥನೆಯನ್ನು ಮಾಡಲಾಗಿದೆ. ಮೇಲೆ ವಿವರಿಸಿರುವ ಏಳು ರಿಟ್ ಅರ್ಜಿಗಳಲ್ಲಿ ನಿರೂಪಿಸಿರುವುದಕ್ಕಿಂತಲೂ ಈ ರಿಟ್ ಅರ್ಜಿಯಲ್ಲಿರುವ ಆಧಾರವು ತೀರಾ ಬೇರೆಯದೇ ಆಗಿದೆ. ರಿಟ್ ಅರ್ಜಿಯ ಸುಸಂಗತ ಭಾಗವು ಹೀಗಿದೆ :

"೧. ರಿಟ್ ಅರ್ಜಿದಾರ-ಸಂಘವು ಬೆಳಗಾಂನಲ್ಲಿರುವ ಇಂಗ್ಲಿಷ್ ಮೀಡಿಯಂ ಸ್ಟೂಡೆಂಟ್ಸ್ ಪೇರೆಂಟ್ಸ್ ಅಸೋಸಿಯೇಷನ್ ಎಂಬ ಒಂದು ನೋಂದಾಯಿತ ಸಂಘವಾಗಿದೆ. ಈ ಕೆಳಗೆ ಅನುಸೂಚಿಯಲ್ಲಿ ಕೊಟ್ಟಿರುವ ಹಲವಾರು ಶಾಲೆಗಳಲ್ಲಿ ಮೊದಲನೆಯ ತರಗತಿಯಲ್ಲಿ ಓದುತ್ತಿರುವ ೨೦೦೦ ವಿದ್ಯಾರ್ಥಿಗಳಿದ್ದಾರೆ. ಅವರ ತಂದೆ-ತಾಯಿಯರು ಅರ್ಜಿದಾರ-ಸಂಘದ ಸದಸ್ಯರಾಗಿದ್ದಾರೆ. ಅವುಗಳಲ್ಲಿ ೭ ಶಾಲೆಗಳನ್ನು ಕ್ರಿಶ್ಚಿಯನ್ನರು ನಡೆಸುತ್ತಿದ್ದಾರೆ. ಅವರು ಧಾರ್ಮಿಕ ಅಲ್ಪಸಂಖ್ಯಾತರಾಗಿದ್ದಾರೆ. ಈ ಶಾಲೆಗಳು ಮೊದಲನೇ ತರಗತಿಯಿಂದ ವಿದ್ಯಾರ್ಥಿಗಳಿಗೆ ಇಂಗ್ಲಿಷ್‌ನಲ್ಲೆ ಶಿಕ್ಷಣ ಕೊಡುತ್ತಿವೆ.

* * * * *

ಆಧಾರಗಳು

ಎ) ಅನುಬಂಧ-ಎ ನಲ್ಲಿ ಕೊಟ್ಟಿರುವ ಸರ್ಕಾರಿ ಆದೇಶ ಮತ್ತು ಅನುಬಂಧ-ಬಿ ಯಲ್ಲಿ ಕೊಟ್ಟಿರುವ ಸುತ್ತೋಲೆ ಇವು ಅನುಸೂಚಿಯಲ್ಲಿ ಕೊಟ್ಟಿರುವ ಪ್ರಾಥಮಿಕ ಶಾಲೆಗಳಲ್ಲಿ ಪ್ರಥಮ ಭಾಷೆಯಾಗಿರುವ ಇಂಗ್ಲಿಷನ್ನು ಬದಲಿಸಿರುವಷ್ಟರ ಮಟ್ಟಿಗೆ ಸಂವಿಧಾನದ ೨೯(೧)ನೆಯ ಅನುಚ್ಛೇದವನ್ನು ಉಲ್ಲಂಘಿಸುತ್ತವೆ. ಅರ್ಜಿದಾರ-ಸಂಘವು ಪ್ರತಿನಿಧಿಸುತ್ತಿರುವ

ತಂದೆ-ತಾಯಿಯರಲ್ಲಿ, ಸುಮಾರು ೭೦೦ ರಿಂದ ೮೦೦ರ ವರೆಗಿನ ಮಕ್ಕಳ ಮಾತೃಭಾಷೆ ಇಂಗ್ಲಿಷ್ ಆಗಿದೆ. ತಮ್ಮ ತಮ್ಮ ಮನೆಯಲ್ಲಿ ಅವರುಗಳು ಇಂಗ್ಲಿಷನ್ನೇ ಮಾತನಾಡುತ್ತಾರೆ. ಅವರುಗಳು ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಅಳವಡಿಸಿಕೊಂಡಿದ್ದಾರೆ. ಈ ಸರ್ಕಾರಿ ಆದೇಶ ಮತ್ತು ಸುತ್ತೋಲೆಗಳು ಇಂಗ್ಲಿಷ್ ಮಾತೃಭಾಷೆಯಾಗಿರುವ ಈ ಮಕ್ಕಳನ್ನು ತೊಂದರೆಗೀಡುಮಾಡುತ್ತದೆ. ಸಂವಿಧಾನದ ೨೯ ಮತ್ತು ೩೦ನೆಯ ಅನುಚ್ಛೇದಗಳಡಿ ಅವರು ರಕ್ಷಣೆಗೆ ಹಕ್ಕುಳ್ಳವರಾಗಿದ್ದಾರೆ."

೨೯ ಮತ್ತು ೩೦ನೆಯ ಅನುಚ್ಛೇದಗಳ ಮೇಲೆ ಆಧಾರಿತವಾಗಿರುವ ಅರ್ಜಿದಾರರುಗಳ ಹಕ್ಕು ಕೋರಿಕೆಯನ್ನು ಪೂರ್ಣ ನ್ಯಾಯಪೀಠ ತೀರ್ಪಿನ ೫೨ನೆಯ ಪ್ಯಾರಾದಲ್ಲಿ, ಎಂದರೆ ೫೫೦ ಮತ್ತು ೫೫೧ನೆಯ ಪುಟಗಳಲ್ಲಿ ಚರ್ಚಿಸಲಾಗಿದೆ. ಅದು ಹೀಗಿದೆ :

*"೫೨. *** *** *** ****

ಅರ್ಜಿಯಲ್ಲಿ, ಇಂಗ್ಲಿಷ್ ಮಾತೃಭಾಷೆಯಾಗುಳ್ಳ ೭೦೦ ರಿಂದ ೮೦೦ ಕ್ರಿಶ್ಚಿಯನ್ ತಂದೆ-ತಾಯಿಯರನ್ನು ಅರ್ಜಿದಾರ - ಸಂಘವು ಪ್ರತಿನಿಧಿಸುತ್ತದೆ ಎಂದು ಹೇಳಲಾಗಿದೆ. ದೇಶದಲ್ಲಿ ಅತ್ಯಂತ ಕಡಿಮೆ ಸಂಖ್ಯೆಯಲ್ಲಿರುವ ಅಲ್ಪಸಂಖ್ಯಾತರಾಗಿರುವ ಆಂಗ್ಲೋ-ಇಂಡಿಯನ್‌ರ ಮಾತೃಭಾಷೆ ಮಾತ್ರ ಇಂಗ್ಲಿಷ್ ಆಗಿದ್ದು, ಎಲ್ಲಾ ಭಾರತೀಯ ಕ್ರೈಸ್ತರ ಮಾತೃಭಾಷೆಯು ಅವರವರ ಸ್ವಂತ ಭಾಷೆಯೇ ಹೊರತು ಇಂಗ್ಲಿಷ್ ಅಲ್ಲವೆಂಬುದು ಚೆನ್ನಾಗಿ ತಿಳಿದಿರುವ ಮತ್ತು ನಿರ್ವಿವಾದದ ವಿಷಯವಾಗಿದೆ. ಆದಾಗ್ಯೂ, ಮೇಲ್ಕಂಡ ವಾದವನ್ನು ಅರ್ಜಿಯಲ್ಲಿ ಮಂಡಿಸಲಾಗಿದೆ. ಅರ್ಜಿದಾರ - ಸಂಘದ ಸದಸ್ಯರಾಗಿರುವ ೭೦೦ ರಿಂದ ೮೦೦ ಜನ ಕ್ರೈಸ್ತ ತಂದೆ-ತಾಯಿಯರ ಮಾತೃಭಾಷೆಯು ಇಂಗ್ಲಿಷ್ ಆಗಿದೆ ಎಂಬುದನ್ನು ಸಮರ್ಥಿಸಲು ವಕೀಲರಿಗೆ ಸಾಧ್ಯವಾಗಲಿಲ್ಲ. ಆದ್ದರಿಂದ, ಅವರು, ಇಂಗ್ಲಿಷ್ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆಯಲು ೨೯ ಅಥವಾ ೩೦ನೆಯ ಅನುಚ್ಛೇದಗಳಡಿಯ ಯಾವುದೇ ಹಕ್ಕನ್ನು ಕೋರುವಂತಿಲ್ಲ".

ಆದ್ದರಿಂದ, ಈ ಅರ್ಜಿಯು ವಜಾ ಆಗಲು ಗುರಿಯಾಗುತ್ತದೆ.

೧೩. ಆದಾಗ್ಯೂ, ಕ್ರಿಶ್ಚಿಯನ್ನರೂ ಸೇರಿದಂತೆ ರಿಟ್ ಅರ್ಜಿ ಸಂಖ್ಯೆ ೧೦೦೬/೮೩ ರಲ್ಲಿರುವ ಅರ್ಜಿದಾರ - ಸಂಘದ ಎಲ್ಲಾ ಸದಸ್ಯರೂ ಮೊದಲ ಅರ್ಜಿಗಳಲ್ಲಿ ಮಾಡಿರುವ ಆಜ್ಞೆಯಿಂದ ದೊರಕುವ ಪ್ರಯೋಜನಗಳಿಗೆ ಹಕ್ಕುಳ್ಳವರಾಗತಕ್ಕದ್ದೆಂದು ಮತ್ತು ಪ್ರಾಥಮಿಕ ಶಿಕ್ಷಣದಲ್ಲಿ ತಮ್ಮ ತಮ್ಮ ಭಾಷೆಗಳಿಗೆ ಸಂಬಂಧಿಸಿದಂತೆ ಹಾಗೂ ಪ್ರೌಢಶಾಲೆಗಳಲ್ಲಿ ಪ್ರಥಮ ಭಾಷೆಯ ಆಯ್ಕೆಗೆ ಸಂಬಂಧಿಸಿದಂತೆ ಅದೇ ರಕ್ಷಣೆಗೆ ಅವರು ಹಕ್ಕುಳ್ಳವರಾಗತಕ್ಕದ್ದೆಂದು ನಾವು ಸ್ಪಷ್ಟಪಡಿಸುತ್ತೇವೆ.

೧೪. ತತ್ಪರಿಣಾಮವಾಗಿ, ನಾವು ಈ ಮುಂದಿನ ಆಜ್ಞೆ ಮಾಡಿದ್ದೇವೆ :

I. ರಿಟ್ ಅರ್ಜಿ ಸಂಖ್ಯೆಗಳು ೨೮೫೬೬ ಹಾಗೂ ೨೮೫೬೭/೧೯೮೨, ೩೨೬೫೪/೧೯೮೨, ೩೩೭೯೦/೧೯೮೨, ೩೬೬೩೦ಎ/೧೯೮೨ ಮತ್ತು ೧೩೯೦೭/೧೯೮೩ರಲ್ಲಿ:

(i) ರಿಟ್ ಅರ್ಜಿಗಳನ್ನು ಪುರಸ್ಕರಿಸಲಾಗಿದೆ;

(ii) ದಿನಾಂಕ ೨೦-೭-೧೯೮೨ರ ಆಕ್ಷೇಪಿತ ಸರ್ಕಾರಿ ಆದೇಶ ಮತ್ತು ಮೇಲ್ಕಂಡ ಸರ್ಕಾರಿ ಆದೇಶಕ್ಕನುಸಾರ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಹೊರಡಿಸಿರುವ ದಿನಾಂಕ ೧೧-೮-೧೯೮೨ರ ಸುತ್ತೋಲೆ ಭಾರತ ಸಂವಿಧಾನದ ೧೪, ೨೯(೧) ಮತ್ತು ೩೦(೧)ನೆಯ ಅನುಚ್ಛೇದಗಳನ್ನು ಉಲ್ಲಂಘಿಸುತ್ತವೆಯಾದ್ದರಿಂದ ಅವುಗಳು ಅನೂರ್ಜಿತವೆಂದು ಘೋಷಿಸಲಾಗಿದೆ;

(iii) ರಾಜ್ಯ ಸರ್ಕಾರಕ್ಕೆ :

(ಎ) ಸರ್ಕಾರಿ ಶಾಲೆಗಳಲ್ಲಿ, ಹಾಗೆಯೇ ಭಾಷಾ ಅಲ್ಪಸಂಖ್ಯಾತರೂ ಸೇರಿದಂತೆ ಯಾವುದೇ ಖಾಸಗಿ ಏಜೆನ್ಸಿಯು ತೆರೆದಿರುವ ಮನ್ನಣೆ ಪಡೆದಿರುವ ಶಾಲೆಗಳಲ್ಲಿ ಸಹ, ಅವು ಧನಸಹಾಯವನ್ನು ಪಡೆಯುತ್ತಿರಲಿ ಅಥವಾ ಇಲ್ಲದಿರಲಿ, ಆಯಾ ಶಾಲೆಗಳಲ್ಲಿ ಪ್ರವೇಶ ಪಡೆದುಕೊಂಡಿರುವ ಒಂದೇ ಮಾತೃಭಾಷೆಯ ಮಕ್ಕಳು ನಿರ್ದಿಷ್ಟಪಡಿಸಿರುವ ಕನಿಷ್ಠ ಸಂಖ್ಯೆಯಲ್ಲಿರಬೇಕೆಂಬ ಷರತ್ತಿಗೆ ಒಳಪಟ್ಟು ಪೂರ್ವ ಪ್ರಾಥಮಿಕ ಶಿಕ್ಷಣವೂ ಸೇರಿದಂತೆ ಮೊದಲ ನಾಲ್ಕು ವರ್ಷಗಳವರೆಗೆ ಪ್ರಾಥಮಿಕ ಶಿಕ್ಷಣವನ್ನು ಮಕ್ಕಳ ಆಯಾ ಮಾತೃ ಭಾಷೆಯಲ್ಲೇ ಕೊಡುವ ವ್ಯವಸ್ಥೆಯೊದಗಿಸಲು ಹಾಗೂ ಅದನ್ನು ಸುನಿಶ್ಚಿತ ಪಡಿಸಿಕೊಳ್ಳಲು; ಮತ್ತು

(ಬಿ) ಪ್ರೌಢಶಾಲೆಗಳಲ್ಲಿ ವ್ಯಾಸಂಗಕ್ಕಾಗಿ ಪ್ರಥಮಭಾಷೆಯನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೇ ಬಿಟ್ಟು ಬಿಡಲು;

ಆನುಷಂಗಿಕ ನಿರ್ದೇಶನವನ್ನು ಕೊಡತಕ್ಕದ್ದು.

(iv) ಆದಾಗ್ಯೂ, ಸರ್ಕಾರಕ್ಕೆ, ಸೂಕ್ತ ಆದೇಶ ಅಥವಾ ನಿಯಮಗಳನ್ನು ಮಾಡುವ ಮೂಲಕ :

(ಎ) ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕ ಪದ್ಧತಿಯ ಒಂದು ಭಾಗವಾಗಿ ಮಾತೃಭಾಷೆಯ ಜೊತೆಗೆ ಇನ್ನೊಂದು ಭಾಷೆಯ ವ್ಯಾಸಂಗವನ್ನು ಯಾವ ತರಗತಿಯಿಂದ ಕಡ್ಡಾಯ ಮಾಡಲಾಗಿದೆಯೋ ಆ ಪ್ರಾಥಮಿಕ ಶಾಲಾ ತರಗತಿಯ ವರ್ಷದಿಂದ, ಕನ್ನಡವನ್ನು ಎರಡು ಭಾಷೆಗಳಲ್ಲಿ ಒಂದು ಭಾಷೆಯಾಗಿ ಪ್ರಾರಂಭಿಸಲು; ಮತ್ತು ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣ ನೀಡಬೇಕು.

(ಬಿ) ಸೆಕೆಂಡರಿ ಶಾಲೆಗಳಲ್ಲಿ ಮೂರು ಭಾಷೆಗಳಲ್ಲಿ ಒಂದು ಭಾಷೆಯಾಗಿ ಕನ್ನಡದ ವ್ಯಾಸಂಗವನ್ನು ಕಡ್ಡಾಯ ಮಾಡಲು, ಮತ್ತು ಯಾವುದೇ ಭಾಷಾ ಅಲ್ಪಸಂಖ್ಯಾತರು ಸ್ಥಾಪಿಸಿರುವ ಶಾಲೆಗಳೂ ಸೇರಿದಂತೆ, ಅವು, ಸರ್ಕಾರಿ ಶಾಲೆಗಳಾಗಿರಲಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಾಗಿರಲಿ, ಅನುಕ್ರಮವಾಗಿ ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳಲ್ಲಿರುವ,

ಕನ್ನಡವು ಮಾತೃಭಾಷೆಯಾಗಿರುವ ಎಲ್ಲರಿಗೆ ಮತ್ತು ಈ ರಾಜ್ಯದಲ್ಲಿ ಖಾಯಂ ನಿವಾಸಿಗಳಾಗಿರುವ ಮತ್ತು ನಿವಾಸಿಗಳಾಗುವ ಭಾಷಾ ಅಲ್ಪಸಂಖ್ಯಾತರೆಲ್ಲರಿಗೂ ಅದನ್ನು ಅನ್ವಯವಾಗುವಂತೆ ಮಾಡಲು ಸ್ವಾತಂತ್ರ್ಯವಿರತಕ್ಕದ್ದು.

II. ರಿಟ್ ಅರ್ಜಿ ಸಂಖ್ಯೆ ೧೦೦೬/೧೯೮೩ ರಲ್ಲಿ:

ರಿಟ್ ಅರ್ಜಿಯನ್ನು ಈ ಆಜ್ಞೆಯ ೧೩ನೆಯ ಪ್ಯಾರಾದಲ್ಲಿ ಹೇಳಿರುವುದಕ್ಕೆ ಒಳಪಟ್ಟು ವಜಾ ಮಾಡಲಾಗಿದೆ.

ಕರ್ನಾಟಕ ತೀರ್ಪುಗಳ ವರದಿ

ಸಂಪುಟ೬ ಭಾಗ ೯, ೧ ಸೆಪ್ಟೆಂಬರ್ ೧೯೮೯ ಪು. ೭೦೨-೨೩

■

ಅಧ್ಯಾಯ-೭

ಎಚ್. ನರಸಿಂಹಯ್ಯ ಸಮಿತಿ ವರದಿ

ಗೋಕಾಕ್ ವರದಿಯ ಅಂಗೀಕಾರದ ನಂತರ ಸರಕಾರ ಅಧಿಕೃತವಾಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಅನುಮತಿಯನ್ನು ನಿಲ್ಲಿಸಿದರೂ ಅನಧಿಕೃತವಾಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳು ತಲೆ ಎತ್ತಿದ್ದವು. ಅವುಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಬಂದ ಒತ್ತಾಯಗಳ ಹಿನ್ನೆಲೆಯಲ್ಲಿ ಆಗಿನ ಮುಖ್ಯಮಂತ್ರಿಗಳಾಗಿದ್ದ ಬಂಗಾರಪ್ಪನವರು ಸರಕಾರದ ವತಿಯಿಂದ ಒಂದು ಸಮಿತಿಯನ್ನು ನೇಮಿಸಿದರು. ಅದರಲ್ಲಿ ದಿವಂಗತ ಎಚ್. ನರಸಿಂಹಯ್ಯನವರು ಓರ್ವ ಸದಸ್ಯರಾಗಿದ್ದರಿಂದ ಅದಕ್ಕೆ ಎಚ್. ನರಸಿಂಹಯ್ಯ ಸಮಿತಿ ವರದಿ ಎಂಬ ಹೆಸರೇ ಬಂದಿತು.

ಈ ಸಮಿತಿಯು ನಾಲ್ಕನೇ ತರಗತಿವರೆಗೆ ಮಾತೃಭಾಷೆ ಅಥವಾ ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕು ಎಂಬ ಶಿಫಾರಸನ್ನು ಮುಖ್ಯವಾಗಿ ಸಲ್ಲಿಸಿತು.

ಇದನ್ನು ಸರಕಾರ ಅಂಗೀಕರಿಸಿತಾದರೂ, ಅನುದಾನ ಸಂಹಿತೆ ೧೨ಎ ಪ್ರಕಾರ ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡಬಹುದು ಎಂದು ನಿರ್ಧರಿಸಿತು.

ಇದರ ಬಗ್ಗೆ ಕನ್ನಡಪರವಾದವರಿಂದ ಪ್ರತಿರೋಧ ವ್ಯಕ್ತವಾಯಿತು. ಆದರೆ ಅಷ್ಟರಲ್ಲಿ ಮುಖ್ಯಮಂತ್ರಿ ಸ್ಥಾನದಿಂದ ಬಂಗಾರಪ್ಪನವರು ಇಳಿದು, ವೀರಪ್ಪಮೊಯಿಲಿಯವರು ಗದ್ದುಗೆ ಏರಿದರು.

ಶಿಕ್ಷಣ ಮಾಧ್ಯಮದ ಪ್ರಶ್ನೆ ಮತ್ತೆ ನೆನಗುದಿಗೆ ಬಿತ್ತು.

■

ಅಧ್ಯಾಯ-೮

ಸರ್ವೋಚ್ಚ ನ್ಯಾಯಾಲಯದ ತೀರ್ಪು

೧. ಶಿಕ್ಷಣದಲ್ಲಿ ಭಾಷೆಯ ಕಲಿಕೆ ಮಹತ್ವದ ವಿಷಯ. ಪ್ರಾಥಮಿಕ ಹಂತದಲ್ಲಿ ಭಾಷೆಯ ಕಲಿಕೆಯೇ ಮುಖ್ಯ. ಅನಂತರ ಭಾಷೆಯ ಮೂಲಕ ಉಳಿದ ವಿಷಯಗಳನ್ನು ಕಲಿಯಲು ಸಾಧ್ಯ. ಸ್ವಾತಂತ್ರ್ಯ ಪೂರ್ವದಲ್ಲಿ ಮಾತೃಭಾಷೆಯ ಶಾಲೆಗಳೇ ಇದ್ದವು. ಇಂಗ್ಲಿಷ್ ಮಾಧ್ಯಮ ಶಾಲೆಗಳಿರಲಿಲ್ಲ. ೧೯೫೬ರಲ್ಲಿ ಕನ್ನಡನಾಡು ಉದಯವಾದಾಗ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆ, ೫ನೆಯ ತರಗತಿಯಿಂದ ಎರಡನೆಯ ಭಾಷೆ ಹಾಗೂ ಪ್ರೌಢಶಾಲೆಯಲ್ಲಿ ಮೂರು ಭಾಷೆಗಳನ್ನು ಕಲಿಯುವ ಕ್ರಮವಿತ್ತು. ೧೯೬೩ರಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಘೋಷಿಸಿದ ಮೇಲೆ ಕನ್ನಡ ಕಲಿಕೆಗೆ ಹೆಚ್ಚು ಮಹತ್ವ ಬಂದಿತು. ಆದರೆ ಪ್ರೌಢಶಾಲೆಯಲ್ಲಿ ಹೆಚ್ಚು ಅಂಕಗಳಿಸುವ ದೃಷ್ಟಿಯಿಂದ ಪ್ರಾಥಮಿಕ ಮಟ್ಟದ ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ಕಲಿಯುವ ಪ್ರವೃತ್ತಿ ಹೆಚ್ಚಿತು. ಇದರ ವಿರುದ್ಧ ಕನ್ನಡಿಗರು ಅಸಮಾಧಾನ ವ್ಯಕ್ತಪಡಿಸಿದಾಗ ಪ್ರೌಢಶಾಲೆಯಲ್ಲಿ ಸಂಸ್ಕೃತ ಕಲಿಕೆಯ ಸ್ಥಾನ ಹಾಗೂ ಕಡ್ಡಾಯವಾಗಿ ಕನ್ನಡವನ್ನು ಕಲಿಸುವ ಬಗ್ಗೆ ಸರಕಾರವು ದಿ. ವಿ. ಕೃ. ಗೋಕಾಕರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ ಅದರ ಅಭಿಪ್ರಾಯವನ್ನು ಕೋರಿತು. ಪ್ರಾಥಮಿಕ ೩ನೆಯ ತರಗತಿಯಿಂದ ಕನ್ನಡೇತರರಿಗೆ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕು. ಪ್ರೌಢಶಾಲೆಯಲ್ಲಿ ಕನ್ನಡವು ೧೫೦ ಅಂಕಗಳ ಏಕೈಕ ಪ್ರಥಮ ಭಾಷೆಯಾಗಿರಬೇಕು ಎಂದು ಸಮಿತಿಯು ತನ್ನ ಅಭಿಪ್ರಾಯವನ್ನು ತಿಳಿಸಿತು. ಅದನ್ನು ಮಾರ್ಪಡಿಸಿ ಜಾರಿಗೆ ತಂದಾಗ ಇದು ಕನ್ನಡಪರ ಹಾಗೂ ಅಲ್ಪಸಂಖ್ಯಾತಪರ ಇಬ್ಬರಿಗೂ ತೃಪ್ತಿ ತರಲಿಲ್ಲ. ಈ ಬಗೆ ಸರಕಾರವು ವಿಧಾನಮಂಡಲದ ಅಭಿಪ್ರಾಯ ಪಡೆದು ಪ್ರೌಢಶಾಲೆಯಲ್ಲಿ ೧೨೫ ಅಂಕಗಳ ಏಕೈಕ ಪ್ರಥಮ ಭಾಷೆಯಾಗಿ ಕನ್ನಡವನ್ನೂ ತಲಾ ೧೦೦ ಅಂಕಗಳ ಇನ್ನೆರಡು ಭಾಷೆಗಳನ್ನೂ ಕಲಿಯಬೇಕೆಂದು ನಿರ್ಧರಿಸಿತು. ಜೊತೆಗೆ ಎಲ್ಲರಿಗೂ ಪ್ರಾಥಮಿಕ ೧ನೆಯ ತರಗತಿಯಿಂದ ಕನ್ನಡ ಕಲಿಕೆಯನ್ನು ಕಡ್ಡಾಯಗೊಳಿಸಿತು. ಪ್ರಾಥಮಿಕ ತರಗತಿಯಲ್ಲಿ ಕನ್ನಡೇತರ ಮಾತೃಭಾಷೆಯ ವಿದ್ಯಾರ್ಥಿಗಳು ಉಳಿದ ವಿಷಯಗಳ ತರಗತಿಗಳಲ್ಲಿ ೫ ಗಂಟೆಗಳನ್ನು ಕಡಿತಗೊಳಿಸಿ ಅವನ್ನು ಕನ್ನಡ ಕಲಿಕೆಗೆ ವರ್ಗಾಯಿಸಿತು. ಇದರಿಂದ ಸಂವಿಧಾನದ

೧೪ (ಸಮಾನತೆ), ೨೯(೧) (ಅಲ್ಪಸಂಖ್ಯಾತರ ಲಿಪಿ, ಭಾಷೆ, ಸಂಸ್ಕೃತಿ ರಕ್ಷಣೆ) ಮತ್ತು ೩೧(೧) (ಅಲ್ಪಸಂಖ್ಯಾತರು ತಮ್ಮ ಇಚ್ಛೆಯ ಶಿಕ್ಷಣ ಸಂಸ್ಥೆಗಳನ್ನು ನಡೆಸುವುದು) ಮತ್ತು ೩೫೦ ಅ (ಅಲ್ಪಸಂಖ್ಯಾತರಿಗೆ ಅವರ ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣ ಒದಗಿಸುವುದು) ಅನುಚ್ಛೇದಗಳ ಉಲ್ಲಂಘನೆಯಾಗಿದೆ ಎಂದು ವಿವಿಧ ಅಲ್ಪಸಂಖ್ಯಾತ ವ್ಯಕ್ತಿಗಳು ಮತ್ತು ಸಂಘಟನೆಗಳು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಹೂಡಿ ತಡೆಯಾಜ್ಞೆ ಪಡೆದರು.

೨. ಈ ವಿಷಯದ ಮಹತ್ತ್ವವನ್ನೂ ಇದರಲ್ಲಿ ಸಂವಿಧಾನದ ಉಲ್ಲಂಘನೆಯ ಅಂಶಗಳಿರುವುದನ್ನೂ ಗಮನಿಸಿ ಇದನ್ನು ವಿಭಾಗಪೀಠಕ್ಕೆ ಒಪ್ಪಿಸಲಾಯಿತು. ಸರಕಾರದಿಂದ ಸಂವಿಧಾನದತ್ತ ಹಕ್ಕುಗಳ ಉಲ್ಲಂಘನೆಯಾಗಿದೆಯೇ ಎಂಬ ಬಗ್ಗೆ ವಿಭಾಗಪೀಠವು ಪೂರ್ಣಪೀಠದ ಅಭಿಪ್ರಾಯವನ್ನು ಕೋರಿತು. ಸರಕಾರದ ಆದೇಶದಿಂದ ಸಂವಿಧಾನದತ್ತ ಹಕ್ಕುಗಳ ಉಲ್ಲಂಘನೆಯಾಗಿರುವುದಾಗಿ ಪೂರ್ಣಪೀಠವು ಬಹುಮತದ(೨-೧) ಅಭಿಪ್ರಾಯ ನೀಡಿತು. ಅದನ್ನು ಲಕ್ಷಿಸಿ ವಿಭಾಗಪೀಠವು ೨೯-೪-೮೯ ರಂದು ಅಂತಿಮ ತೀರ್ಪು ನೀಡಿತು. ಆ ತೀರ್ಪಿನ ಬೆಳಕಿನಲ್ಲಿ ಕರ್ನಾಟಕ ಸರಕಾರವು ತನ್ನ ಭಾಷಾನೀತಿಯನ್ನು ಪ್ರಕಟಿಸಿತು (೧೯-೭-೮೯).

ಅದರ ಪ್ರಕಾರ :

೧. ೧ ರಿಂದ ೪ನೆಯ ತರಗತಿಯವರೆಗೆ ಮಾತೃಭಾಷೆಯೇ ಶಿಕ್ಷಣ ಮಾಧ್ಯಮ. ಒಂದು ಭಾಷೆ ಮಾತ್ರ ಅಧ್ಯಯನ ವಿಷಯ.

೨. ೩ನೆಯ ತರಗತಿಯಿಂದ ಕನ್ನಡೇತರರಿಗೆ ಕನ್ನಡ ಐಚ್ಛಿಕ ವಿಷಯ, ವರ್ಷದ ಕೊನೆಯಲ್ಲಿ ಕನ್ನಡದಲ್ಲಿ ಪರೀಕ್ಷೆ ಇಲ್ಲ.

೩. ೫ನೆಯ ತರಗತಿಯಿಂದ ಎರಡನೆಯ ಭಾಷೆಯ ಬೋಧನೆ ಆರಂಭ. ಆಗ ಕನ್ನಡೇತರರಿಗೆ ಕನ್ನಡ ಕಲಿಕೆ ಕಡ್ಡಾಯ, ಕನ್ನಡ ವಿದ್ಯಾರ್ಥಿಗೆ ಇನ್ನೊಂದು ಭಾಷೆಯ ಕಲಿಕೆ ಕಡ್ಡಾಯ. ಇದೇ ವರ್ಷದಿಂದ ಮೂರನೆಯ ಭಾಷೆಯ ಕಲಿಕೆಯೂ ಆರಂಭ.

೪. ಪ್ರೌಢಶಾಲೆಯ ಹಂತದಲ್ಲಿ ೧೨೫, ೧೦೦, ೧೦೦ ಅಂಕಗಳ ಮೂರು ಭಾಷೆಗಳ ಕಲಿಕೆ ಕಡ್ಡಾಯ, ಅದರಲ್ಲಿ ಒಂದು ಕನ್ನಡ.

ಈ ಆಜ್ಞೆಯನ್ನು ಇಂಗ್ಲಿಷ್ ಮಾಧ್ಯಮ ವಿದ್ಯಾರ್ಥಿಗಳ ಪೋಷಕರ ಸಂಘವು ರಿಟ್ ಅರ್ಜಿಯಲ್ಲಿ ಪ್ರಶ್ನಿಸಿತು. ಇದರಿಂದ ಸಂವಿಧಾನದ ೧೪, ೨೯(೧) ಮತ್ತು ೩೧(೧)ನೇ ಅನುಚ್ಛೇದಗಳ ಉಲ್ಲಂಘನೆಯಾಗಿದೆ ಎಂದು ವಾದಿಸಿತು.

ಕರ್ನಾಟಕ ಸರಕಾರವು ಶೈಕ್ಷಣಿಕ ಶಿಸ್ತನ್ನು ತರುವ ದೃಷ್ಟಿಯಿಂದ ನಿಯಂತ್ರಣಾತ್ಮಕ ಸ್ವರೂಪದ ಆದೇಶವನ್ನು ಉಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗೆ ಅನುಗುಣವಾಗಿ ಹೊರಡಿಸಿದೆ. ಕರ್ನಾಟಕದಲ್ಲಿರುವ ಶಿಕ್ಷಣ ಸಂಸ್ಥೆಗಳು ರಾಜ್ಯ ಭಾಷೆಯನ್ನು ಕಲಿಸುವುದು ಅವುಗಳ ಕರ್ತವ್ಯ. ಈ ಬಗ್ಗೆ ಪ್ರಾಥಮಿಕ ಹಂತದಲ್ಲಿ ಕಡ್ಡಾಯವೂ ಇಲ್ಲ ಎಂದು ಕರ್ನಾಟಕವು ಮರುನುಡಿಯಿತು.

ಸರ್ವೋನ್ನತ ನ್ಯಾಯಪೀಠವು, ಸರಕಾರಿ ಆದೇಶವನ್ನು ಎಚ್ಚರದಿಂದ ಓದಿದರೆ ಅದರಲ್ಲಿ ಬಲಾತ್ಕಾರದ ಅಂಶವಿಲ್ಲದಿರುವುದು ಗೊತ್ತಾಗುತ್ತದೆ, ಅದು ಸಂವಿಧಾನಕ್ಕೆ ಅನುಗುಣವಾಗಿದೆ, ಎಂದು ಹೇಳಿ ಪ್ರಾಥಮಿಕ ಶಿಕ್ಷಣದ ಬಗ್ಗೆ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಅಭಿಪ್ರಾಯಗಳನ್ನು ಉಲ್ಲೇಖಿಸಿದೆ. ಅಲ್ಲದೆ ಶಿಕ್ಷಣವು ರಾಜ್ಯ ಸರಕಾರದ ನೀತಿಯ ವಿಷಯವಾಗಿದ್ದು ಅದರಲ್ಲಿ ತಾನು ಮಧ್ಯ ಪ್ರವೇಶಿಸುವುದಿಲ್ಲ ವೆಂದೂ ಸ್ಪಷ್ಟಪಡಿಸಿದೆ. ಕರ್ನಾಟಕ ಉಚ್ಚ ನ್ಯಾಯಾಲಯವು ಚೆನ್ನಾಗಿ ಪರಿಶೀಲಿಸಿ ನೀಡಿರುವ ತೀರ್ಪನ್ನು ಎತ್ತಿ ಹಿಡಿದು ಈ ದಿಕ್ಕಿನಲ್ಲಿ ಕರ್ನಾಟಕ ಸರಕಾರ ತೆಗೆದುಕೊಂಡಿರುವ ಕ್ರಮಗಳನ್ನು ಪ್ರಶಂಸಿಸಿದೆ.

ಚಾರಿತ್ರಿಕವಾದ ಈ ತೀರ್ಪು ದೇಶದ ಭಾಷಾಶಿಕ್ಷಣದ ಸಮಸ್ಯೆಗೆ ಕರ್ನಾಟಕ ತೋರಿಸಿದ ಪರಿಹಾರವೆಂಬಂತಿದೆ. ಈ ಮಹತ್ವದ ತೀರ್ಪಿಗೆ ಸಮಗ್ರ ಕನ್ನಡ ಜನತೆ ಅಪೂರ್ವವಾದ ರೀತಿಯಲ್ಲಿ ಭಾಗವಹಿಸಿದ ಗೋಕಾಕ್ ಚಳುವಳಿ ಕಾರಣ. ಅಲ್ಲದೆ ಕರ್ನಾಟಕ ಉಚ್ಚ ನ್ಯಾಯಾಲಯದವರು ಸರ್ವೋನ್ನತ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಎಂ. ಎನ್. ವೆಂಕಟಾಚಲಯ್ಯನವರು ತಮ್ಮ ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣ ಪಡೆದ ಕನ್ನಡಿಗರು. ಸರ್ವೋನ್ನತ ನ್ಯಾಯಾಲಯದ ಮತ್ತೊಬ್ಬ ನ್ಯಾಯಮೂರ್ತಿ ಎಸ್. ಮೋಹನ್ ಅವರು ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿದ್ದವರು. ಕರ್ನಾಟಕದ ಅಡ್ವೋಕೇಟ್ ಜನರಲ್ ಬಿ. ವಿ. ಆಚಾರ್ಯರೂ ಇದ್ದಾರೆ. ಭಾಷಾ ಶಿಕ್ಷಣ ಕುರಿತ ಈ ಚಾರಿತ್ರಿಕ ತೀರ್ಪು ಒಂದು ರೀತಿಯಲ್ಲಿ ಕರ್ನಾಟಕದ ವಿವೇಕದ ವಿಜಯವೆಂಬ ಹೆಮ್ಮೆ ಕನ್ನಡಿಗರದಾಗಿದೆ.

ಈ ಚಾರಿತ್ರಿಕ ತೀರ್ಪನ್ನು ಜಾರಿಗೊಳಿಸುವ ಮೂಲಕ ದೇಶಕ್ಕೆ ಮಾದರಿಯಾಗುವ ಸುವರ್ಣಾವಕಾಶ ಈಗ ಕರ್ನಾಟಕ ಸರಕಾರದ ಮುಂದಿದೆ. ಅದು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವುದಾಗಿಯೂ ಹೇಳಿದೆ. ಹಾಗೆಯೇ ಆಗಬೇಕು ಎಂಬುದೇ ಕನ್ನಡಿಗರೆಲ್ಲರ ಹಾರೈಕೆ.

ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣ ನೀಡಬೇಕು ಎಂದು ಕರ್ನಾಟಕ ಉಚ್ಚ ನ್ಯಾಯಾಲಯವು ೨೯ನೇ ಏಪ್ರಿಲ್ ೧೯೮೯ರಂದು ನೀಡಿದ ತೀರ್ಪನ್ನು ೧೯೯೦ ರಲ್ಲಿ ಮೈಸೂರಿನಲ್ಲಿ ನಡೆದ ಅಖಿಲ ಭಾರತ ೬೦ನೆಯ ಕನ್ನಡ ಸಾಹಿತ್ಯ

ಸಮ್ಮೇಳನದಲ್ಲಿ ವಿತರಿಸಿ ಅದರ ಜಾರಿಗಾಗಿ ಒತ್ತಾಯಿಸಿದ್ದೆ. ಸರ್ವೋನ್ನತ ನ್ಯಾಯಾಲಯಕ್ಕೆ ಮೇಲ್ಮನವಿಗಳು ಹೋದದ್ದರಿಂದ ಅದು ಇಲ್ಲಿಯವರೆಗೆ ಜಾರಿಗೆ ಬರಲಿಲ್ಲ. ೮ನೇ ಡಿಸೆಂಬರ್ ೧೯೯೩ರಂದು ಸರ್ವೋನ್ನತ ನ್ಯಾಯಾಲಯವು ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದಿದೆ. ಇನ್ನಾದರೂ ಅದನ್ನು ಜಾರಿಗೊಳಿಸಲೆಂದು ಒತ್ತಾಯಿಸುವುದಕ್ಕಾಗಿ ಅದನ್ನು ಅನುವಾದಿಸಿ ಮಂಡ್ಯದಲ್ಲಿ ನಡೆಯುವ ಅಖಿಲ ಭಾರತ ೬೩ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿತರಿಸುತ್ತಿದ್ದೇನೆ. ಈ ಬಗ್ಗೆ ಸೂಕ್ತ ಆದೇಶ ನೀಡುವುದಾಗಿ ಮಾನ್ಯ ಮುಖ್ಯಮಂತ್ರಿಯವರು ವಿಧಾನ ಮಂಡಲದಲ್ಲಿ ಹೇಳಿದ್ದಾರೆ. ಅದು ವಾಸ್ತವ ರೂಪಕ್ಕೆ ಇಳಿಯುವುದೆಂಬ ನಂಬಿಕೆ ನನ್ನದು ಎಂಬ ಮುನ್ನುಡಿಯೊಂದಿಗೆ ಶ್ರೀ ಪಂಡಿತಾರಾಧ್ಯರು ಕನ್ನಡಕ್ಕೆ ಅನುವಾದ ಮಾಡಿ, ಅಚ್ಚುಮಾಡಿ, ಹಂಚಿದ ಕೈಪಿಡಿಯಲ್ಲಿನ ಮಾಹಿತಿಯನ್ನೇ ಮುಂದೆ ಕೊಡಲಾಗಿದೆ :

ಮುಖ್ಯ ನ್ಯಾಯಮೂರ್ತಿ ಎಂ. ಎನ್. ವೆಂಕಟಾಚಲಯ್ಯ

ಮತ್ತು

ನ್ಯಾಯಮೂರ್ತಿ ಎಸ್. ಮೋಹನ್

ಇಂಗ್ಲಿಷ್ ಮಾಧ್ಯಮ ವಿದ್ಯಾರ್ಥಿಗಳ ಪೋಷಕರ ಸಂಘ

ವಿರುದ್ಧ

ಕರ್ನಾಟಕ ರಾಜ್ಯ ಮತ್ತು ಇತರರು

ಹಾಗೂ

ಕರ್ನಾಟಕ ರಾಜ್ಯ ಮತ್ತು ಇತರರು*

ವಿರುದ್ಧ

ಚನ್ನಗಿರಿ ತಾಲ್ಲೂಕು ಉರ್ದು ಶಾಲೆಗಳ ಅಭಿವೃದ್ಧಿ ಸಮಿತಿ ಮತ್ತು ಇತರರು**

ನ್ಯಾಯಮೂರ್ತಿ ಎಸ್. ಮೋಹನ್

೧. ಈ ಎಲ್ಲ ಅರ್ಜಿಗಳ ವಿಷಯವೂ ಒಂದೇ ಆಗಿರುವುದರಿಂದ ಇವನ್ನು ಒಂದು ಸಮಾನ ತೀರ್ಪಿನ ಅಡಿಯಲ್ಲಿ ಪರಿಶೀಲಿಸಬಹುದು. ಮೊದಲಿಗೆ ರಿಟ್ ಅರ್ಜಿಯನ್ನು ತೆಗೆದುಕೊಳ್ಳುತ್ತೇವೆ.

೨. ಕನ್ನಡ ಪ್ರಗತಿಗೆ ಬದ್ಧವಾಗಿರುವ ಕರ್ನಾಟಕ ಸರಕಾರವು ಡಾ|| ವಿ. ಕೃ. ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿ ಈ ಕೆಳಗಿನ ಪ್ರಶ್ನೆಗಳನ್ನು ಅದರ ಪರಿಶೀಲನೆಗೆ ಒಪ್ಪಿಸಿತು.

೧) ಶಾಲೆಯ ಪಠ್ಯಕ್ರಮದಲ್ಲಿ ಸಂಸ್ಕೃತವು ಅಧ್ಯಯನ ವಿಷಯವಾಗಿ ಉಳಿಯಬೇಕೆ?

೨) ಹಾಗಿದ್ದಲ್ಲಿ ಅದನ್ನು ಕನ್ನಡಕ್ಕೆ ಪರ್ಯಾಯವಾಗದಂತೆ ಉಳಿಸುವುದು ಹೇಗೆ?

೩) ಕನ್ನಡವನ್ನು ಕಡ್ಡಾಯಗೊಳಿಸುವುದು ತ್ರಿಭಾಷಾಸೂತ್ರದ ಪ್ರಕಾರ ಸಾಧುವೆ? ಉಳಿದ ಎರಡು ಭಾಷೆಗಳನ್ನು ಆಯ್ದುಕೊಳ್ಳುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ಬಿಡಬೇಕೆ?

---

* ರಿಟ್ ಅರ್ಜಿ ಎಸಿಪಿ ಸಂಖ್ಯೆ ೫೩೬/೧೯೯೧

** ನಾಗರಿಕ ಮೇಲ್ಮನವಿ ಸಂಖ್ಯೆಗಳು ೨೮೫೬ - ೫೬/೧೯೮೯

೩. ೨೭ನೇ ಜನವರಿ ೧೯೮೧ ರಂದು ಸಮಿತಿಯು ಡಾ|| ಗೋಕಾಕ್ ಸಮಿತಿ ವರದಿ ಎಂದು ಪ್ರಸಿದ್ಧವಾಗಿರುವ ತನ್ನ ವರದಿಯನ್ನು ಸಲ್ಲಿಸಿತು. ಅದರ ಶಿಫಾರಸುಗಳ ಸಾರಾಂಶ ಹೀಗಿದೆ :

೧) ಎಲ್ಲ ಮಕ್ಕಳಿಗೂ ೩ನೆಯ ತರಗತಿಯಿಂದ ಕನ್ನಡವನ್ನು ಒಂದು ಕಡ್ಡಾಯ ವಿಷಯವಾಗಿ ಕಲಿಸಲು ಆರಂಭಿಸಬೇಕು.

೨) ಪ್ರೌಢಶಾಲೆಯಲ್ಲಿ (ಅಂದರೆ ೮, ೯ ಮತ್ತು ೧೦ನೆಯ ತರಗತಿಗಳಲ್ಲಿ) ಕನ್ನಡವೇ ೧೫೦ ಅಂಕಗಳ ಏಕೈಕ ಪ್ರಥಮ ಭಾಷೆಯಾಗಬೇಕು. ಇದನ್ನು ಕನ್ನಡ ಮಾತನಾಡುವವರಿಗೆ ೧೯೮೧-೮೨ ರಿಂದಲೇ ಜಾರಿಗೊಳಿಸಬೇಕು. ಉಳಿದವರಿಗೆ ೧೯೮೧-೮೨ರಿಂದ ೩ನೆಯ ತರಗತಿಯಿಂದ ಕನ್ನಡವನ್ನು ಕಲಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಂಡ ಮೇಲೆ ೧೯೮೬-೮೭ರಿಂದ ಜಾರಿಗೊಳಿಸಬೇಕು.

೪. ಮೇಲೆ ಹೇಳಿದ ವರದಿಯನ್ನು ಪರಿಗಣಿಸಿ ದಿನಾಂಕ ೩೦-೪-೮೨ ರಂದು ರಾಜ್ಯ ಸರಕಾರವು ಆಜ್ಞೆಯನ್ನು ಹೊರಡಿಸಿತು. ಅದು ಹೀಗಿದೆ :

ಆಜ್ಞೆ ಇಡಿ ೧೧೩ ಎಸ್‌ಒಎಚ್ ೭೯ ಬೆಂಗಳೂರು ೩೦ನೇ ಏಪ್ರಿಲ್ ೧೯೮೨.

ಸರಕಾರವು ಸಮಿತಿಯ ಶಿಫಾರಸುಗಳನ್ನು ಎಚ್ಚರದಿಂದ ಪರಿಶೀಲಿಸಿ ವಿಷಯಕ್ಕೆ ಸಂಬಂಧಿಸಿದ ಎಲ್ಲ ಅಂಶಗಳನ್ನು ಗಮನಿಸಿ ಈ ರೀತಿ ಆಜ್ಞೆ ಹೊರಡಿಸಿದೆ :

೧) ಪ್ರೌಢಶಾಲೆಯ ಹಂತದಲ್ಲಿ ಅನುಸರಿಸುವ ಭಾಷಾ ಕ್ರಮವು ಹೀಗಿರುತ್ತದೆ :

ಅ) ಪ್ರಥಮ ಭಾಷೆ : ಕನ್ನಡ ಅಥವಾ ಮಾತೃಭಾಷೆ (ಉರ್ದು, ತಮಿಳು, ತೆಲುಗು, ಮರಾಠಿ, ಇಂಗ್ಲಿಷ್, ಹಿಂದಿ) ೧೫೦ ಅಂಕಗಳು

ಆ) ಇವುಗಳಲ್ಲಿ ಎರಡು ಭಾಷೆಗಳು : ಕನ್ನಡ, ಹಿಂದಿ, ಇಂಗ್ಲಿಷ್, ಸಂಸ್ಕೃತ, ಅರಾಬಿಕ್, ಪರ್ಷಿಯನ್, ಉರ್ದು, ತಮಿಳು, ತೆಲುಗು, ಮರಾಠಿ. ಪ್ರತಿಯೊಂದಕ್ಕೂ ೧೦೦ ಅಂಕಗಳು.

ಸೂಚನೆ: *೧. ಕನ್ನಡದ ಬದಲು ಬೇರೊಂದು ಭಾಷೆಯನ್ನು ಪ್ರಥಮಭಾಷೆಯಾಗಿ ಆಯ್ದುಕೊಂಡ ವಿದ್ಯಾರ್ಥಿಗಳು ಉಳಿದ ಭಾಷೆಗಳಲ್ಲಿ ಕಡ್ಡಾಯಭಾಷೆಯಾಗಿ ಕನ್ನಡವನ್ನೂ (ಆ ಗುಂಪಿನ ಭಾಷೆಗಳಲ್ಲಿ) ಮತ್ತೊಂದು ಭಾಷೆಯನ್ನೂ ಅಧ್ಯಯನ ಮಾಡುತ್ತಾರೆ. ಆ ಎರಡೂ ಭಾಷೆಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯ ವಿಷಯಗಳು; ೨. ಕನ್ನಡವನ್ನು ಪ್ರಥಮ ಭಾಷೆಯಾಗಿ ಆಯ್ದುಕೊಳ್ಳುವ ವಿದ್ಯಾರ್ಥಿಗಳು (ಆ ಗುಂಪಿನಿಂದ) ಕನ್ನಡವನ್ನು ಬಿಟ್ಟು ಬೇರೆ ಯಾವುದೇ ಎರಡು ಭಾಷೆಗಳನ್ನು ತೆಗೆದುಕೊಳ್ಳುತ್ತಾರೆ.*

೨) ರಾಜ್ಯದ ಹೊರಗಿನಿಂದ ಬಂದು ೮, ೯ ಅಥವಾ ೧೦ನೆಯ ತರಗತಿಗಳಿಗೆ ಸೇರುವ ವಿದ್ಯಾರ್ಥಿಗಳು ಮೇಲೆ ಹೇಳಿದ ಯಾವ ಭಾಷೆಯನ್ನೂ ಪ್ರಥಮ

ಭಾಷೆಯಾಗಿ ಅಧ್ಯಯನ ಮಾಡಿರದಿದ್ದಲ್ಲಿ ಅಂಥವರು ಹೆಚ್ಚುವರಿ ಇಂಗ್ಲಿಷ್ ಅಥವಾ ಹಿಂದಿಯನ್ನು ಪ್ರಥಮ ಭಾಷೆಯಾಗಿ ತೆಗೆದುಕೊಳ್ಳಲು ಅವಕಾಶ ನೀಡಬಹುದು.

೩) ಕನ್ನಡೇತರ ಶಾಲೆಗಳಲ್ಲಿ ೧೯೮೨-೮೩ನೆಯ ಶೈಕ್ಷಣಿಕ ವರ್ಷದಿಂದಲೇ ೩ನೆಯ ತರಗತಿಯಿಂದ ಕನ್ನಡ ಬೋಧನೆ ಆರಂಭವಾಗುತ್ತದೆ. ೧ನೆಯ ಪ್ಯಾರಾದಲ್ಲಿ ಸೂಚಿಸಿರುವ ಪ್ರೌಢಶಾಲೆಯ ಭಾಷಾಕ್ರಮವು ೧೯೮೭-೮೮ನೆಯ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುತ್ತದೆ.

೪) ೧೯೮೨-೮೩ನೆಯ ಶೈಕ್ಷಣಿಕ ವರ್ಷದಿಂದ ೮ನೆಯ ತರಗತಿಯನ್ನು ಸೇರುವ ವಿದ್ಯಾರ್ಥಿಗಳು ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ಅಥವಾ ಪೂರಕ ಪ್ರಥಮ ಭಾಷೆಯಾಗಿ ತೆಗೆದುಕೊಳ್ಳುವಂತಿಲ್ಲ. ಅವರು ಸಂಸ್ಕೃತವನ್ನು ಮೂರನೆಯ ಭಾಷೆಯಾಗಿ ತೆಗೆದುಕೊಳ್ಳಬಹುದು. ೧ನೆಯ ಪ್ಯಾರಾದಲ್ಲಿ ಸೂಚಿಸಿರುವ ಭಾಷಾ ಕ್ರಮವು ೧೯೮೭-೮೮ನೆಯ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವವರೆಗೆ ಈ ವ್ಯವಸ್ಥೆಯು ಮುಂದುವರೆಯುತ್ತದೆ.

೫) ಈ ಮೇಲಿನ ಆಜ್ಞೆಗಳನ್ನು ಜಾರಿಗೊಳಿಸಲು ಅಗತ್ಯ ಕ್ರಮಗಳನ್ನು ಕೂಡಲೆ ಕೈಗೊಳ್ಳುವಂತೆ ಸಾರ್ವಜನಿಕ ಶಿಕ್ಷಣ ಆಯುಕ್ತರನ್ನು ಕೋರಲಾಗಿದೆ.

೫. ೧೯೮೨ನೇ ಏಪ್ರಿಲ್ ೩೦ ರ ಆಜ್ಞೆಯು ಕನ್ನಡಿಗರ ಆಶೋತ್ತರಗಳನ್ನು ಸಮರ್ಪಕವಾಗಿ ಪ್ರತಿಬಿಂಬಿಸಿಲ್ಲವೆಂಬ ಭಾವನೆಗಳು ವ್ಯಕ್ತವಾದ್ದರಿಂದ, ಇಡೀ ವಿಷಯವನ್ನು ರಾಜ್ಯದ ವಿಧಾನಮಂಡಲದ ಮುಂದೆ ಇರಿಸುವುದು ಯುಕ್ತವೆಂದು ಸರಕಾರವು ಯೋಚಿಸಿತು. ಪ್ರೌಢಶಾಲೆಗಳಲ್ಲಿ ಕನ್ನಡವು ೧೨೫ ಅಂಕಗಳಿರುವ ಏಕೈಕ ಪ್ರಥಮ ಭಾಷೆಯಾಗಿರಬೇಕೆಂದು ವಿಧಾನಮಂಡಲವು ನಿರ್ಣಯಿಸಿತು. ಇದಕ್ಕೆ ಪೂರಕವಾಗಿ ವಿದ್ಯಾರ್ಥಿಯು ತಲಾ ೧೦೦ ಅಂಕಗಳಿಗೆ ಇನ್ನಾವುದೇ ಎರಡು ಭಾಷೆಗಳನ್ನು ಅಧ್ಯಯನ ಮಾಡಬಹುದು. ಕನ್ನಡವನ್ನು ಪ್ರಥಮ ಪ್ರಾದೇಶಿಕ ಭಾಷೆಯಾಗಿ ಅಧ್ಯಯನ ಮಾಡುವ ಭಾಷಾ ಅಲ್ಪಸಂಖ್ಯಾತರಿಗೆ ಹಾಗೂ ಹಿಂದಿಯನ್ನು ಅಧ್ಯಯನ ಮಾಡುವ ಹಿಂದಿ ಮಾತೃಭಾಷೆಯಲ್ಲದ ವಿದ್ಯಾರ್ಥಿಗಳಿಗೆ ಹತ್ತು ವರ್ಷಗಳವರೆಗೆ ಶೇ. ೧೫ರಷ್ಟು ಕೃಪಾಂಕಗಳನ್ನು ನೀಡುವ ಮೂಲಕ ಕನ್ನಡೇತರ ಮಾತೃಭಾಷೆಯವರು ಪ್ರೌಢಶಾಲೆಯನ್ನು ಕನ್ನಡವನ್ನು ಏಕೈಕ ಪ್ರಥಮ ಭಾಷೆಯಾಗಿ ಕಲಿಯಲು ಅನುವು ಮಾಡಿಕೊಡಬೇಕು. ಇದೇ ಶೈಕ್ಷಣಿಕ ವರ್ಷದಿಂದ, ಅಂದರೆ ೧೯೮೨-೮೩ರಿಂದ ಕನ್ನಡವನ್ನು ಮೂರನೆಯ ತರಗತಿಯಿಂದಲೇ ಬೋಧಿಸಲು ಸರಕಾರವು ಕ್ರಮವನ್ನು ತೆಗೆದುಕೊಂಡಿದೆ.

೬. ಇದರ ಜೊತೆಗೆ ೧೯೮೨-೮೩ ರಿಂದ ಮೊದಲನೆಯ ತರಗತಿಯಿಂದಲೇ ಕನ್ನಡವನ್ನು ಬೋಧಿಸಲು ಕ್ರಮ ಕೈಗೊಳ್ಳಬೇಕೆಂದೂ ಶಿಫಾರಸು ಮಾಡಲಾಗಿತ್ತು.

೭. ಈ ನಿರ್ಣಯಕ್ಕೆ ಅನುಗುಣವಾಗಿ ರಾಜ್ಯ ಸರಕಾರವು ೨೦ನೇ ಜುಲೈ ೧೯೮೨ ರಂದು ಆಜ್ಞೆಯನ್ನು ಹೊರಡಿಸಿತು.

ಅದು ಹೀಗಿದೆ : ಆಜ್ಞೆ ಸಂ. ಇಡಿ ೧೧೩ ಎಸ್‌ಓಎಚ್ ೭೯, ಬೆಂಗಳೂರು, ೨೦ನೇ ಜುಲೈ ೧೯೮೨.

ಮೇಲೆ ಹೇಳಿದ ವಿಷಯುಗಳನ್ನು ಗಮನಿಸಿ ಸರಕಾರವು ಈ ರೀತಿ ನಿರ್ದೇಶಿಸುತ್ತದೆ :

೧) ಪ್ರೌಢಶಾಲಾಹಂತದಲ್ಲಿ (೧೯೮೭-೮೮ನೆಯ ಶೈಕ್ಷಣಿಕ ವರ್ಷದಿಂದ) ಅನುಸರಿಸುವ ಭಾಷಾ ಕ್ರಮವು ಈ ರೀತಿ ಇರುತ್ತದೆ : ಮಾತೃಭಾಷೆಯಲ್ಲಿಯೇ ಪ್ರಾಥಮಿಕ ಶಿಕ್ಷಣ ನೀಡಬೇಕು.

ಅ) ಪ್ರಥಮ ಭಾಷೆ : ಕನ್ನಡ ಏಕೈಕ ಪ್ರಥಮ ಭಾಷೆ (೧೨೫ ಅಂಕಗಳು)

ಆ) ಇವುಗಳಲ್ಲಿ ಇನ್ನೆರಡು ಭಾಷೆಗಳು : ಉರ್ದು, ತಮಿಳು, ತೆಲುಗು, ಮರಾಠಿ, ಇಂಗ್ಲಿಷ್, ಹಿಂದಿ, ಸಂಸ್ಕೃತ, ಅರಾಬಿಕ್, ಪರ್ಷಿಯನ್, ಮಲಯಾಳಂ ಮತ್ತು ಕನ್ನಡ (ತಲಾ ೧೦೦ ಅಂಕಗಳು)

ಸೂಚನೆ : ೧೦ ವರ್ಷಗಳವರೆಗೆ ೧೫ ಕೃಪಾಂಕಗಳನ್ನು (ಅ) ಕನ್ನಡ ಮಾತೃಭಾಷೆಯಲ್ಲಿದ್ದವರಿಗೆ ಪ್ರಥಮ ಭಾಷೆಯ ಪರೀಕ್ಷೆಯಲ್ಲಿ ಮತ್ತು (ಆ) ಹಿಂದಿ ಮಾತೃಭಾಷೆಯಲ್ಲದವರಿಗೆ ಹಿಂದಿ ಪರೀಕ್ಷೆಯಲ್ಲಿ ಕೊಡಲಾಗುವುದು.

೨) ರಾಜ್ಯದ ಹೊರಗಿನಿಂದ ಬಂದು ೮, ೯ ಅಥವಾ ೧೦ನೆಯ ತರಗತಿಗಳಿಗೆ ಸೇರುವ ವಿದ್ಯಾರ್ಥಿಗಳು ಆವರೆಗೆ ಕನ್ನಡವನ್ನು ಕಲಿತಿಲ್ಲದಿದ್ದಲ್ಲಿ ಅವರು ಇಂಗ್ಲಿಷ್ ಅಥವಾ ಹಿಂದಿಯನ್ನು ಪ್ರಥಮ ಭಾಷೆಯಾಗಿ ತೆಗೆದುಕೊಳ್ಳಲು ಅನುಮತಿಸಬಹುದು.

೩) ಕನ್ನಡೇತರ ಶಾಲೆಗಳಲ್ಲಿ ೧೯೮೨-೮೩ನೆಯ ಶೈಕ್ಷಣಿಕ ವರ್ಷದಿಂದಲೇ ೧ನೆಯ ತರಗತಿಯಿಂದ ಕನ್ನಡ ಬೋಧನೆ ಆರಂಭವಾಗುವುದು;

೧ನೆಯ ಪ್ಯಾರಾದಲ್ಲಿ ಸೂಚಿಸಿರುವ ಪ್ರೌಢಶಾಲೆಗಳ ಭಾಷಾಕ್ರಮವು ೧೯೮೭-೮೮ನೆಯ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವುದು.

೪) ೧೯೮೨-೮೩ನೆಯ ಶೈಕ್ಷಣಿಕ ವರ್ಷದಿಂದ ೮ನೆಯ ತರಗತಿಗೆ ಸೇರುವ ವಿದ್ಯಾರ್ಥಿಗಳು ಸಂಸ್ಕೃತವನ್ನು ಪ್ರಥಮ ಭಾಷೆಯಾಗಿ ಆಗಲಿ ಸಂಯೋಜಿತ ಪ್ರಥಮ ಭಾಷೆಯಾಗಿ ಆಗಲಿ ತೆಗೆದುಕೊಳ್ಳುವಂತಿಲ್ಲ. ಆದಾಗ್ಯೂ ಅವರು ಸಂಸ್ಕೃತವನ್ನು ಮೂರನೆಯ ಭಾಷೆಯಾಗಿ ತೆಗೆದುಕೊಳ್ಳಬಹುದು. ೧ನೆಯ ಪ್ಯಾರಾದಲ್ಲಿ ಸೂಚಿಸಿರುವ ಭಾಷಾ ಕ್ರಮವು ೧೯೮೭-೮೮ನೆಯ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವವರೆಗೆ ಇದು ಮುಂದುವರೆಯುತ್ತದೆ.

ಸೂಚನೆ: ಮೇಲಿನ ೪ನೆಯ ಪ್ಯಾರಾವು ೩೦ ಏಪ್ರಿಲ್ ೧೯೮೨ರ, ಇಡಿ ೧೧೩ ಎಸ್‌ಓಎಚ್ ೭೯ನೇ ಸಂಖ್ಯೆಯ ಸರಕಾರಿ ಆಜ್ಞೆಯ ೪ನೆಯ ಪ್ಯಾರಾಗೆ ಸಂವಾದಿಯಾಗಿದೆ. ೩೦ ಏಪ್ರಿಲ್ ೧೯೮೯ರ ಸರಕಾರಿ ಆದೇಶದ ೪ನೆಯ ಪ್ಯಾರಾಗೆ ಕರ್ನಾಟಕ ಉಚ್ಚ ನ್ಯಾಯಾಲಯವು ೧೮೮೮೨ ರಿಂದ ೧೮೮೮೫ ಸಂಖ್ಯೆಗಳ ೧೯೯೨ರ ರಿಟ್ ಅರ್ಜಿಗಳ ವಿಚಾರಣೆಯಲ್ಲಿ ತಡೆಯಾಜ್ಞೆ ನೀಡಿರುವುದರಿಂದ ಅವು ಇತ್ಯರ್ಥವಾಗುವವರೆಗೆ ಮೇಲಿನ ೪ನೆಯ ಪ್ಯಾರಾವನ್ನು ಜಾರಿಗೊಳಿಸಲಾಗುವುದಿಲ್ಲ.

೫) ಮೇಲಿನ ಆಜ್ಞೆಗಳನ್ನು ಜಾರಿಗೊಳಿಸಲು ಅಗತ್ಯ ಕ್ರಮಗಳನ್ನು ಕೂಡಲೆ ತೆಗೆದುಕೊಳ್ಳುವಂತೆ ಸಾರ್ವಜನಿಕ ಶಿಕ್ಷಣ ಆಯುಕ್ತರನ್ನು ಕೋರಲಾಗಿದೆ.

೬) ಭಾಷಾ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಉನ್ನತ ಅಧಿಕಾರದ ಸಮಿತಿಯನ್ನು ರಚಿಸುವ ಬಗ್ಗೆ ಪ್ರತ್ಯೇಕ ಆಜ್ಞೆಯನ್ನು ನೀಡಲಾಗುವುದು.

೭) ಸರಕಾರಿ ಆಜ್ಞೆ ಇಡಿ ೧೧೫ ಎಸ್‌ಓಎಚ್ ೩೦-೪-೮೨ರಲ್ಲಿ ನೀಡಲಾದ ಆದೇಶಗಳನ್ನು ಈ ಮೂಲಕ ಹಿಂದಕ್ಕೆ ಪಡೆಯಲಾಗಿದೆ.

೮. ಮೇಲೆ ಹೇಳಿದ ಆಜ್ಞೆಗೆ ಅನುಸಾರವಾಗಿ ೧೧-೮-೮೨ರಂದು ಸಾರ್ವಜನಿಕ ಶಿಕ್ಷಣ ನಿರ್ದೇಶಕರು ಈ ಕೆಳಕಂಡ ಸುತ್ತೋಲೆಯನ್ನು ಹೊರಡಿಸಿದರು :

"ಸರಕಾರಿ ಆದೇಶದ ೩ನೆಯ ಪ್ಯಾರಾದಲ್ಲಿ ಹೇಳಿರುವಂತೆ ರಾಜ್ಯದಲ್ಲಿರುವ ಎಲ್ಲ ಕನ್ನಡೇತರ ಶಾಲೆಗಳು ೧೯೮೨-೮೩ನೆಯ ವರ್ಷದಿಂದ ೧ನೆಯ ತರಗತಿಯಿಂದ ಕನ್ನಡವನ್ನು ಬೋಧಿಸಲು ಆರಂಭಿಸಬೇಕು. ಆ ಉದ್ದೇಶಕ್ಕಾಗಿ ಈ ಕೆಳಕಂಡಂತೆ ವಿಷಯಗಳ ಬೋಧನೆಯ ಅವಧಿಯನ್ನೂ, ಪಾಠಗಳನ್ನೂ ನಿಗದಿಪಡಿಸಲಾಗಿದೆ.

೧) ಬೋಧನೆ ಅವಧಿ : ವಾರದಲ್ಲಿ ೫ ಗಂಟೆ ಅಂದರೆ, ಕಾರ್ಯಾನುಭವದಿಂದ ಎರಡು ಗಂಟೆಗಳು, ದೈಹಿಕ ಶಿಕ್ಷಣದಿಂದ ೨ ಗಂಟೆಗಳು ಮತ್ತು ಹಾಡುವ ಶಿಕ್ಷಣದಿಂದ ಒಂದು ಗಂಟೆ.

೨) ಪಠ್ಯ ಪುಸ್ತಕಗಳು : ಕನ್ನಡ ಭಾರತಿ

೩) ಅಭ್ಯಾಸಕ್ಕಾಗಿ ಪಾಠಗಳು : ೧ ರಿಂದ ೧೬, ೧೮ ಮತ್ತು ೩೬

೪) ಅಂಕಗಳು : ಇದು ಪರೀಕ್ಷೆಯ ವಿಷಯವಾಗಿರುವುದರಿಂದ ೧೦೦ ಅಂಕಗಳನ್ನು ನಿಗದಿಪಡಿಸಲಾಗಿದೆ.

೫) ಅಂಕ ನೀಡಿಕೆ : ೧ನೆಯ ತರಗತಿಗೆ ನಿಗದಿಪಡಿಸಿರುವ ಅಂಕ ನೀಡಿಕೆ ಮತ್ತು ಪರೀಕ್ಷೆ ನಿಯಮಗಳು ಇದಕ್ಕೂ ಅನ್ವಯವಾಗುತ್ತದೆ.

೯. ಮೇಲೆ ಹೇಳಿದ ೨೦ನೇ ಜುಲೈ ೧೯೮೨ರ ಆಜ್ಞೆಯಿಂದ ನೊಂದ ಕೆಲವು ಶಿಕ್ಷಣ ಸಂಸ್ಥೆಗಳು (ನಾಗರಿಕ ಮೇಲ್ಮನವಿಗಳ ಪ್ರತಿವಾದಿಗಳು) ಕರ್ನಾಟಕ ಉಚ್ಚ

ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಬಯಸಿದರು. ಈ ಆಜ್ಞೆಯು ಭಾರತ ಸಂವಿಧಾನದ ೨೯ ಮತ್ತು ೩೦ನೆಯ ಅನುಚ್ಛೇದಗಳನ್ನು ಉಲ್ಲಂಘಿಸುತ್ತವೆ ಎಂಬುದು ಅವರ ವಾದ. ಅಲ್ಲದೆ ಇದು ಭಾರತ ಸಂವಿಧಾನದ ೧೪ನೆಯ ಅನುಚ್ಛೇದವನ್ನೂ ಉಲ್ಲಂಘಿಸುತ್ತದೆ ಎಂದೂ ವಾದಿಸಲಾಯಿತು. ಮೊದಲಿಗೆ ರಿಟ್ ಅರ್ಜಿಗಳು ಏಕ ನ್ಯಾಯಾಧೀಶರ ಮುಂದೆ ವಿಚಾರಣೆಗೆ ಬಂದಾಗ ವಿಷಯವನ್ನು ವಿಭಾಗಪೀಠಕ್ಕೆ ವರ್ಗಾಯಿಸಲಾಯಿತು. ೨೭ನೇ ಜನವರಿ ೧೯೮೪ ರಂದು ಮೇಲೆ ಹೇಳಿದ ಪ್ರಶ್ನೆಗಳನ್ನು ವಿಭಾಗಪೀಠವು ಪೂರ್ಣಪೀಠಕ್ಕೆ ವರ್ಗಾಯಿಸಿತು. ಪೂರ್ಣಪೀಠವು ಎಲ್‌ಎಂಪಿ ಸಮಿತಿ ವಿರುದ್ಧ ಕರ್ನಾಟಕ ರಾಜ್ಯ (ಎಐಆರ್ ೧೯೮೯ ಕರ್ನಾಟಕ ೨೨೬)ದ ೩೬೪ನೇ ಪುಟದಲ್ಲಿ ಮೂರು ಪ್ರಶ್ನೆಗಳ ಬಗ್ಗೆ ತನ್ನ ಅಭಿಪ್ರಾಯವನ್ನು ಹೀಗೆ ವ್ಯಕ್ತ ಪಡಿಸಿದೆ.

೧) "೨೦ನೇ ಜುಲೈ ೧೯೮೨ ರ ಸರಕಾರಿ ಆಜ್ಞೆಯು - ಭಾಷಾ ಅಲ್ಪಸಂಖ್ಯಾತ ಗುಂಪಿಗೆ ಸೇರಿದ ಮಕ್ಕಳಿಗೆ ಪ್ರಾಥಮಿಕ ಶಾಲೆಯ ೧ನೆಯ ತರಗತಿಯಿಂದ ಕನ್ನಡವನ್ನು ಕಡ್ಡಾಯ ವಿಷಯವಾಗಿ ಮಾಡುವುದು ಮತ್ತು ಅದನ್ನು ಭಾಷಾ ಅಲ್ಪಸಂಖ್ಯಾತರು ಸ್ಥಾಪಿಸಿರುವ ಪ್ರಾಥಮಿಕ ಶಾಲೆಗಳಲ್ಲಿ ೧ನೆಯ ತರಗತಿಯಿಂದ ಕಡ್ಡಾಯ ವಿಷಯವಾಗಿ ಆರಂಭಿಸುವುದು ಮತ್ತು ಪ್ರೌಢಶಾಲೆಗೆ ಸೇರುವ ವಿದ್ಯಾರ್ಥಿಗಳು ಕನ್ನಡವನ್ನು ಏಕೈಕ ಪ್ರಥಮ ಭಾಷೆಯಾಗಿ ತೆಗೆದುಕೊಳ್ಳುವಂತೆ ಒತ್ತಾಯಿಸುವುದು ಹಾಗೂ ಭಾಷಾ ಅಲ್ಪಸಂಖ್ಯಾತರು ಸ್ಥಾಪಿಸಿರುವ ಪ್ರೌಢಶಾಲೆಗಳಲ್ಲಿ ಕನ್ನಡವನ್ನು ಏಕೈಕ ಪ್ರಥಮ ಭಾಷೆಯಾಗಿ ಆರಂಭಿಸಲು ಒತ್ತಾಯಿಸುವುದು - ಅಷ್ಟರಮಟ್ಟಿಗೆ ಸಂವಿಧಾನದ ೨೯(೧) ಮತ್ತು ೩೦(೧)ನೆಯ ಅನುಚ್ಛೇದಗಳನ್ನು ಉಲ್ಲಂಘಿಸುತ್ತದೆ.

೨) ೨೦ನೇ ಜುಲೈ ೧೯೮೨ ರ ಸರಕಾರಿ ಆಜ್ಞೆಯು - ಭಾಷಾ ಅಲ್ಪಸಂಖ್ಯಾತ ಗುಂಪಿಗೆ ಸೇರಿದ ಮಕ್ಕಳಿಗೆ ಪ್ರಾಥಮಿಕ ಶಾಲೆಯ ೧ನೆಯ ತರಗತಿಯಿಂದ ಕನ್ನಡವನ್ನು ಕಡ್ಡಾಯ ವಿಷಯವಾಗಿ ಮಾಡುವುದು ಮತ್ತು ಅದನ್ನು ಭಾಷಾ ಅಲ್ಪಸಂಖ್ಯಾತರು ಸ್ಥಾಪಿಸಿರುವ ಪ್ರಾಥಮಿಕಶಾಲೆಗಳಲ್ಲಿ ೧ನೆಯ ತರಗತಿಯಿಂದ ಕಡ್ಡಾಯ ವಿಷಯವಾಗಿ ಆರಂಭಿಸುವುದು ಮತ್ತು ಪ್ರೌಢಶಾಲೆಗೆ ಸೇರುವ ವಿದ್ಯಾರ್ಥಿಗಳು ಕನ್ನಡವನ್ನು ಏಕೈಕ ಪ್ರಥಮ ಭಾಷೆಯಾಗಿ ತೆಗೆದುಕೊಳ್ಳುವಂತೆ ಒತ್ತಾಯಿಸುವುದು ಹಾಗೂ ಭಾಷಾ ಅಲ್ಪಸಂಖ್ಯಾತರು ಸ್ಥಾಪಿಸಿರುವ ಪ್ರೌಢಶಾಲೆಗಳಲ್ಲಿ ಕನ್ನಡವನ್ನು ಏಕೈಕ ಪ್ರಥಮ ಭಾಷೆಯಾಗಿ ಆರಂಭಿಸಲು ಒತ್ತಾಯಿಸುವುದು - ಅಷ್ಟರ ಮಟ್ಟಿಗೆ ಸಂವಿಧಾನದ ೧೪ನೆಯ ಅನುಚ್ಛೇದವು ವಾಗ್ದಾನ ನೀಡಿರು ಸಮಾನತೆಯ ಭರವಸೆಯನ್ನು ಉಲ್ಲಂಘಿಸುತ್ತದೆ.

೩) ರಾಜ್ಯ ಸರಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ೧೧-೮-೧೯೮೨ ರಂದು ಹೊರಡಿಸಿರುವ ಸುತ್ತೋಲೆಯು ವಾಸ್ತವಾಂಶಗಳು ಮತ್ತು ಅರ್ಜಿಯ ಸಂದರ್ಭದಲ್ಲಿ ಭಾರತ ಸಂವಿಧಾನದ ೧೪, ೨೯(೧) ಮತ್ತು ೩೦(೧)ನೆಯ ಅನುಚ್ಛೇದಗಳನ್ನು ಉಲ್ಲಂಘಿಸುತ್ತದೆ.

ಈ ಅರ್ಜಿಗಳನ್ನು ಅಂತಿಮ ಇತ್ಯರ್ಥಕ್ಕಾಗಿ ವಿಭಾಗಪೀಠದ ಮುಂದೆ ಇರಿಸಲಾಗಿದೆ.

೧೦. ಪೂರ್ಣನ್ಯಾಯಪೀಠವು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಅದಕ್ಕನುಗುಣವಾಗಿ ವಿಷಯವನ್ನು ಇತ್ಯರ್ಥಪಡಿಸುವಂತೆ ಇದನ್ನು ವಿಭಾಗ ನ್ಯಾಯಪೀಠಕ್ಕೆ ಹಿಂದಿರುಗಿಸಿತು. ಅದರಂತೆ ೨೪-೧-೧೯೮೯ ರ ತೀರ್ಪು ಈ ಅರ್ಜಿಗಳನ್ನು ತಿರಸ್ಕರಿಸಿತು. ಈ ತೀರ್ಪನ್ನು ವಿರೋಧಿಸಿ ಕರ್ನಾಟಕ ಸರಕಾರವು ೨೮೪೬-೪೭/೧೯೮೯ರ ನಾಗರಿಕ ಮೇಲ್ಮನವಿಗಳನ್ನು ಸಲ್ಲಿಸಿತು. ಈ ತೀರ್ಪಿನ ಅನಂತರ ಕರ್ನಾಟಕಸರಕಾರವು ಸಂ. ೮೭ ಪಿಆಯುಎಸ್‌ಇಬಿಎಚ್‌ಎ, ೮೮ ಬೆಂಗಳೂರು, ೧೯-೬-೮೯ ರ ಆಜ್ಞೆಯಲ್ಲಿ ತನ್ನ ನೀತಿಯನ್ನು ಘೋಷಿಸಿತು. ಅದು ಹೀಗಿವೆ :

“ಈ ಸರಕಾರಿ ಆಜ್ಞೆಯ ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭಗಳಿಗೆ ಅನುಗುಣವಾಗಿ ಈ ಭಾಷಾನೀತಿಯನ್ನು ಆದೇಶಿಸುತ್ತದೆ. ಇದನ್ನು ಸರ್ವೋನ್ನತ ನ್ಯಾಯಾಲಯದ ಅಂತಿಮ ತೀರ್ಪನ್ನು ಕಾಯ್ದಿರಿಸಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಜಾರಿಗೊಳಿಸಲಾಗುವುದು.

i) ೧ ರಿಂದ ४ನೆಯ ತರಗತಿಯವರೆಗೆ ಮಾತೃಭಾಷೆಯೋ ಶಿಕ್ಷಣ ಮಾಧ್ಯಮವಾಗಿರುತ್ತದೆ. ಈ ಅವಧಿಯಲ್ಲಿ ೧ನೇ ಅನುಬಂಧದಲ್ಲಿ ನಮೂದಿಸಿರುವ ಭಾಷೆಗಳಲ್ಲಿ ಒಂದು ಮಾತ್ರ ಅಧ್ಯಯನದ ವಿಷಯ.

೩ನೆಯ ತರಗತಿಯಿಂದ ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡವು ಐಚ್ಛಿಕ ವಿಷಯ. ಇದನ್ನು ಶುದ್ಧವಾಗಿ ಸ್ವಂತ ಇಚ್ಛೆಯ ಆಧಾರದ ಮೇಲೆ ಬೋಧಿಸಬೇಕು ಮತ್ತು ಇದನ್ನು ಶಾಲೆಯಲ್ಲಿ ಕಲಿಸುವ ಇನ್ನಾವುದೇ ವಿಷಯದ ಬದಲಾಗಿ ಅಥವಾ ಎಲ್ಲ ವಿದ್ಯಾರ್ಥಿಗಳೂ ಭಾಗವಹಿಸುವ ಶಾಲೆಯ ಬೇರಾವುದೇ ಚಟುವಟಿಕೆಯ ಬದಲಾಗಿಯೂ ಕಲಿಸುವಂತಿಲ್ಲ. ವರ್ಷದ ಕೊನೆಯಲ್ಲಿ ಕನ್ನಡ ಭಾಷೆಯ ಪರೀಕ್ಷೆ ಇರುವುದಿಲ್ಲ.

ii) ೫ನೆಯ ತರಗತಿಯಿಂದ ಸಹಜವಾಗಿ ೨ನೆಯ ಭಾಷೆಯನ್ನು ಪರಿಚಯಿಸುವಾಗ ವಿದ್ಯಾರ್ಥಿಯು (೧ನೆಯ ಅನುಬಂಧದಲ್ಲಿರುವ ಭಾಷೆಗಳಲ್ಲಿ ಒಂದನ್ನು) ಎರಡನೆಯ ಭಾಷೆಯಾಗಿ ತೆಗೆದುಕೊಳ್ಳಬೇಕು. ಅದು ಮೊದಲನೆಯ ಭಾಷೆಗಿಂತ ಬೇರೆಯಾಗಿರಬೇಕು. ವಿದ್ಯಾರ್ಥಿಯು ಕನ್ನಡವನ್ನು ಪ್ರಥಮ ಭಾಷೆಯಾಗಿ ತೆಗೆದುಕೊಂಡಿರದಿದ್ದಲ್ಲಿ ಅದನ್ನು ಎರಡನೆಯ ಭಾಷೆಯಾಗಿ ತೆಗೆದುಕೊಳ್ಳಬೇಕು.

೫ನೆಯ ತರಗತಿಯಿಂದ ವಿದ್ಯಾರ್ಥಿಯು ಮೂರನೆಯ ಭಾಷೆಯನ್ನು ಕಲಿಯಲು ಅವಕಾಶ ಕಲ್ಪಿಸಲಾಗುವುದು. ಅದು ಪ್ರಥಮ ಮತ್ತು ದ್ವಿತೀಯ ಭಾಷೆಗಳಿಗಿಂತ ಬೇರೆಯಾಗಿರುತ್ತದೆ. ಅದನ್ನು ೨ನೆಯ ಅನುಬಂಧದಲ್ಲಿರುವ ಭಾಷೆಗಳ ಪಟ್ಟಿಯಿಂದ ಆಯ್ದುಕೊಳ್ಳಬೇಕು. ಮೂರನೆಯ ಭಾಷೆಯ ತರಗತಿಯಲ್ಲಿ ಹಾಜರಿ ಮತ್ತು ಪರೀಕ್ಷೆಗಳು ಕಡ್ಡಾಯ. ಆದರೆ ೫ ರಿಂದ ೭ನೆಯ ತರಗತಿಯವರೆಗೆ ಮೂರನೆಯ ಭಾಷೆಯಲ್ಲಿ ತೇರ್ಗಡೆಯಾಗುವುದು ಅನಿವಾರ್ಯವಲ್ಲ. ರ‍್ಯಾಂಕು, ವರ್ಗ, ದರ್ಜೆ ಮೊದಲಾದವುಗಳಲ್ಲಿ ೫ ರಿಂದ ೭ನೆಯ ತರಗತಿಗಳಲ್ಲಿ ಮೂರನೆಯ ಭಾಷೆಯಲ್ಲಿ ಪಡೆದ ಅಂಕಗಳನ್ನು ಪರಿಗಣಿಸಿ ಯಾವುದೇ ಹೆಚ್ಚಿನ ಅಂಕಗಳನ್ನು ನೀಡುವುದಿಲ್ಲ.

iii) ಪ್ರೌಢಶಾಲೆಯ ಹಂತದಲ್ಲಿ, ಅಂದರೆ ೮ ರಿಂದ ೧೦ನೆಯ ತರಗತಿಯಲ್ಲಿ ಮೂರು ಭಾಷಗಳು ಕಡ್ಡಾಯ. ಪ್ರಥಮ ಭಾಷೆಗೆ ೧೨೫ ಅಂಕಗಳು. ಎರಡನೆಯ ಭಾಷೆಗೆ ೧೦೦ ಮತ್ತು ಮೂರನೆಯ ಭಾಷೆಗೆ ೧೦೦ ಅಂಕಗಳು. ಈ ಮೂರೂ ಭಾಷೆಗಳಲ್ಲಿ - ಅವುಗಳಲ್ಲಿ ಒಂದು ಕನ್ನಡ - ನಡೆಸುವ ಪರೀಕ್ಷೆಗಳಲ್ಲಿ ತೇರ್ಗಡೆ ಯಾಗುವುದು ಅನಿವಾರ್ಯ.

iv) ೧೦ನೆಯ ತರಗತಿಯ ಕೊನೆಯಲ್ಲಿ ಎರಡು ಮತ್ತು ಮೂರನೆಯ ಭಾಷೆಗಳಲ್ಲಿ ನಿರೀಕ್ಷಿಸುವ ಮಟ್ಟವು ಆ ಭಾಷೆಗಳನ್ನು ಮೊದಲನೆಯ ಭಾಷೆಯಾಗಿ ಆಯ್ದುಕೊಂಡಿದ್ದಲ್ಲಿ ೬ ವರ್ಷಗಳ ಅಧ್ಯಯನದಿಂದ ಪಡೆಯುವ ಮಟ್ಟವಾಗಿರುತ್ತದೆ.

v) ಸರಕಾರಿ ಆಜ್ಞೆ ಇಡಿ ೧೧೩ ಎಸ್‌ಒಎಚ್ ೭೯, ೨೦-೭-೧೯೮೨ ರಲ್ಲಿ ಹೇಳಿರುವಂತೆ ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಹಾಗೂ ಹಿಂದಿ ಮಾತೃಭಾಷೆಯಲ್ಲದ ವಿದ್ಯಾರ್ಥಿಗಳಿಗೆ ಹಿಂದಿಯಲ್ಲಿ ಕೃಪಾಂಕಗಳನ್ನು ನೀಡಲಾಗುವುದು. ವಿದ್ಯಾರ್ಥಿಯು ಭಾಷೆಯ ಪರೀಕ್ಷೆಯಲ್ಲಿ ತೇರ್ಗಡೆಯಾಗುವಂತೆ ಗರಿಷ್ಠ ೧೫ ಕೃಪಾಂಕಗಳನ್ನು ನೀಡಲಾಗುವುದು.

vi) ರಾಜ್ಯಕ್ಕೆ ತಾತ್ಕಾಲಿಕವಾಗಿ ವರ್ಗವಾಗಿ ಬಂದಿರುವವರ ಮಕ್ಕಳಿಗೆ ಕನ್ನಡವನ್ನು ಕಡ್ಡಾಯವಾಗಿ ಕಲಿಯುವ ಬಗ್ಗೆ ವಿನಾಯಿತಿ ನೀಡಬಹುದು.

ಅನುಬಂಧ ೧

೧. ಕನ್ನಡ	೨. ತಮಿಳು	೩. ತೆಲುಗು	೪. ಮಲಯಾಳಂ
೫. ಮರಾಠಿ	೬. ಹಿಂದಿ	೭. ಉರ್ದು	೮. ಇಂಗ್ಲಿಷ್

೧೧. ಸರಕಾರಿ ಆಜ್ಞೆಯು ಭಾರತ ಸಂವಿಧಾನದ ೨೯ ಮತ್ತು ೩೦ನೆಯ ಅನುಚ್ಛೇದಗಳನ್ನು ಉಲ್ಲಂಘಿಸುತ್ತದೆ ಎಂದು ಅದರ ಸಿಂಧುತ್ವವನ್ನು ರಿಟ್ ಅರ್ಜಿಯು ಪ್ರಶ್ನಿಸಿದೆ. ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಸಮಾನ ಅವಕಾಶದಲ್ಲಿ ಭೇದವನ್ನು ಬಗೆಯುವುದರಿಂದ ಅದು ಸಂವಿಧಾನದ ೧೪ನೆಯ ಅನುಚ್ಛೇದವನ್ನೂ ಉಲ್ಲಂಘಿಸುತ್ತದೆ. ಪ್ರಶ್ನಿತ ಆಜ್ಞೆಯು, ಭಾಷೆಗಳ ಆಯ್ಕೆಯ ಬಗೆ ಇರುವ ಅವಕಾಶಗಳನ್ನು ಅಲ್ಪಸಂಖ್ಯಾತ ವರ್ಗವು ಬಳಸಿಕೊಳ್ಳಲು ಅಡ್ಡಿಪಡಿಸುವುದರಿಂದ ಅದು ಸಂವಿಧಾನದ ೩೫೦-ಅ ಅನುಚ್ಛೇದವು ಭರವಸೆ ನೀಡಿರುವ ಹಕ್ಕನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ.

೧೨. ಕರ್ನಾಟಕ ಉಚ್ಚ ನ್ಯಾಯಾಲಯದ ಪೂರ್ಣಪೀಠದ ತೀರ್ಪಿನ ಸ್ಪಷ್ಟ ನಿರ್ದೇಶವಿದ್ದೂ ಕನ್ನಡವನ್ನು ಕಡ್ಡಾಯಗೊಳಿಸಿದ್ದು ಅನುಚಿತ. ಪ್ರಾಥಮಿಕ ಶಾಲಾ ಹಂತದಿಂದಲೇ ವಿದ್ಯಾರ್ಥಿಗಳು ಮೂರೂ ಭಾಷೆಗಳನ್ನು ಕಲಿಯಬೇಕಾಗುವುದರಿಂದ ಪ್ರಶ್ನಿತ ಆದೇಶವು ಅವರ ಮೇಲೆ ಅನಗತ್ಯ ಹೊರೆಯನ್ನು ಹೊರಿಸುತ್ತದೆ. ಅದರಂತೆ ಪ್ರಶ್ನಿತ ಆಜ್ಞೆಯನ್ನು ಜಾರಿಗೊಳಿಸುವಂತೆ ಪರಮಾದೇಶವನ್ನು ನೀಡಬೇಕೆಂದು ಪ್ರಾರ್ಥಿಸಲಾಯಿತು.

೧೩. ರಿಟ್ ಅರ್ಜಿಯಲ್ಲಿ ಒತ್ತಾಯಿಸಿರುವ ಅಂಶಗಳಿಗೆ ಪೂರಕವಾಗಿ ೨೯ ಮತ್ತು ೩೦ನೆಯ ಅನುಚ್ಛೇದಗಳನ್ನು ೩೯(ಚ) ಅನುಚ್ಛೇದದ ಜೊತೆಯಲ್ಲಿ ಗಮನಿಸುವುದು ಇಂದು ಮಹತ್ವದ್ದಾಗಿದೆಯೆಂದು ಅರ್ಜಿದಾರರ ಮಾನ್ಯ ವಕೀಲರು ವಾದಿಸಿದರು. ಆದ್ದರಿಂದ ಭಾಷಾ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಅವಕಾಶಗಳನ್ನು ನೀಡುವುದರಲ್ಲಿ ಯಾವುದೇ ಭಾಷೆಯನ್ನು ಹೇರಬಾರದು. ಮಗುವಿನ ಭಾಷೆಯನ್ನು (ತಂದೆ-ತಾಯಿಯರು) ಆಯ್ದುಕೊಳ್ಳುತ್ತಾರೆ. ಪ್ರಶ್ನಿತ ಆಜ್ಞೆಯ ಪ್ರಕಾರ ೫ನೆಯ ತರಗತಿಯ ಅನಂತರ ಕನ್ನಡ ಕಡ್ಡಾಯ. ಅದನ್ನು ಅಲ್ಪ ಸಂಖ್ಯಾತರಿಗೆ ಅನ್ವಯಿಸುವಂತಿಲ್ಲ. ಈ ನೆಚ್ಚಿಕೆಗೆ ಬೆಂಬಲವಾಗಿ ಡಿಎವಿ ಕಾಲೇಜು ಇತ್ಯಾದಿ ವಿರುದ್ಧ ಪಂಜಾಬ್ ರಾಜ್ಯ ಮತ್ತು ಇತರರು (೧೯೭೧ ಪುರವಣಿ ಎಸ್‌ಸಿಆರ್ ೬೮೮)ವನ್ನು ಇರಿಸಲಾಯಿತು.

ಮತ್ತೆ ಪಂಜಾಬಿಯನ್ನು ಏಕೈಕ ಶಿಕ್ಷಣ ಮಾಧ್ಯಮವಾಗಿ ಮಾಡಿದಾಗ ಅದನ್ನು ಈ ನ್ಯಾಯಾಲಯವು ಡಿಎವಿ ಕಾಲೇಜು ಭಟಿಂಡ ಮತ್ತು ಇತರರು ವಿರುದ್ಧ ಪಂಜಾಬ್ ರಾಜ್ಯ ಮತ್ತು ಇತರರು (೧೯೭೧ ಪುರವಣಿ ಎಸ್‌ಸಿಆರ್ ೬೭೭)ದಲ್ಲಿ ಹೇಳಿರುವಂತೆ ಹೊಡೆದುಹಾಕಿತು. ದಿ ಅಹ್ಮದಾಬಾದ್ ಸೇಂಟ್ ಕ್ಸೇವಿಯರ್ ಕಾಲೇಜು ಸಂಘ ಮತ್ತು ಮತ್ತೊಬ್ಬರು ವಿರುದ್ಧ ಗುಜರಾತ್ ರಾಜ್ಯ ಮತ್ತು ಮತ್ತೊಬ್ಬರು (೧೯೭೫(೧) ಎಸ್‌ಸಿಆರ್ ೧೭೩)ನಲ್ಲಿ ಹೇಳಿರುವಂತೆ ತಮ್ಮ ಭಾಷೆ ಅಥವಾ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳುವುದು ಭಾಷಾಅಲ್ಪಸಂಖ್ಯಾತರ ಮೂಲಭೂತ ಹಕ್ಕು. ಅದರಲ್ಲಿ ಹಸ್ತಕ್ಷೇಪಮಾಡಿ ವಿದ್ಯಾರ್ಥಿಯು ಬೇರೊಂದು ಭಾಷೆಯನ್ನು ಅಭ್ಯಾಸಿಸುವ

ಮಾಡಬೇಕೆಂಬ ಒತ್ತಾಯದ ಅಂಶವಿರಲು ಸಾಧ್ಯವಿಲ್ಲ. ಕನ್ನಡವನ್ನು ಕಲಿಯಬೇಕೆಂದು ಒತ್ತಾಯಿಸುವುದರಿಂದ ೧೪ನೆಯ ಅನುಚ್ಛೇದದ ಉಲ್ಲಂಘನೆಯಾಗುತ್ತದೆ. ಮನೇಕಾ ಗಾಂಧಿ - ವಿರುದ್ಧ ಭಾರತ ಒಕ್ಕೂಟ (೧೯೭೮(೨) ಎಸ್‌ಸಿಆರ್ ಪು. ೬೨೧, ೬೮೬ರಲ್ಲಿ) ತೀರ್ಮಾನಿಸಿರುವಂತೆ ಅವಕಾಶ ದೊರೆಯುವವರೆಗೆ ಯಾದೃಚ್ಛಿಕವಾಗಿ ಮಾಡುವ ಕಾಯ್ದೆಯು ಅನೂರ್ಜಿತವಾಗುತ್ತದೆ.

೧೪. ಸರಕಾರಿ ಆಜ್ಞೆಯು ಪೂರ್ಣ ನ್ಯಾಯಪೀಠದ ತೀರ್ಪಿಗೆ ಅನುಗುಣವಾಗಿದೆ ಯೆಂದು ಕರ್ನಾಟಕದ ಮಾನ್ಯ ಅಡ್ವೋಕೇಟ್ ಜನರಲ್ ವಾದಿಸಿದ್ದಾರೆ. ಕರ್ನಾಟಕ ಸರಕಾರವು ತೀರ್ಪನ್ನು ಒಪ್ಪಿ ಪ್ರಶ್ನಿತ ಆದೇಶವನ್ನು ಹೊರಡಿಸಿದೆ. ಈ ಆದೇಶವು ಶೈಕ್ಷಣಿಕ ಶಿಸ್ತನ್ನು ತರುವ ನಿಯಂತ್ರಣಾತ್ಮಕ ಸ್ವರೂಪ ಮಾತ್ರದ್ದಾಗಿದೆ. ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತರ ಸಂಸ್ಥೆಗಳ ಅಸ್ತಿತ್ವವನ್ನು ಮನ್ನಿಸಿದರೂ ಕನ್ನಡ ಜ್ಞಾನವನ್ನು ಬೋಧಿಸುವುದು ಈ ಸಂಸ್ಥೆಗಳ ಕರ್ತವ್ಯವಾಗಿದೆ. ಇದು ಈ ರಾಜ್ಯದ ಪ್ರದೇಶ ಭಾಷೆ, ಸರಕಾರಿ ಆದೇಶವು ಪ್ರಾಥಮಿಕ ಹಂತದಲ್ಲಿನ ಕಡ್ಡಾಯದ ಅಂಶವನ್ನು ಸಂವಿಧಾನದ ೩೫೦-ಅ ಅನುಚ್ಛೇದಕ್ಕನುಗುಣವಾಗಿ ತೆಗೆದುಹಾಕಿದೆ. ಅರ್ಜಿದಾರರ ವಾದವು, ಅಲ್ಪಸಂಖ್ಯಾತರು ತಮ್ಮ ಭಾಷೆ ಅಥವಾ ಸಂಸ್ಕೃತಿಯ ಮೇಲಿನ ಹಕ್ಕನ್ನು ಒತ್ತಾಯದಿಂದ ಕಳೆದುಕೊಂಡರೇನೋ ಎಂಬಂತೆ ತಪ್ಪು ಗ್ರಹಿಕೆಯಲ್ಲಿ ಸಾಗಿದೆ. ಅದು ಹಾಗಲ್ಲ. ಸಂವಿಧಾನದ ೨೯ನೆಯ ಅಥವಾ ೩೦ನೆಯ ಅನುಚ್ಛೇದಗಳನ್ನು ಉಲ್ಲಂಘಿಸಿಲ್ಲ ಅಥವಾ ೧೪ನೆಯ ಅನುಚ್ಛೇದದ ಉಲ್ಲಂಘನೆಯಾದರೂ ಆಗಿಲ್ಲ.

೧೫. ಇಬ್ಬರ ವಾದಗಳ ಬೆಲೆ ಕಟ್ಟಲು, ಎಐಆರ್ ೧೯೮೯ ಕರ್ನಾಟಕ ೨೨೯ರಲ್ಲಿ ವರದಿಯಾಗಿರುವ ಪ್ರಧಾನ ಕಾರ್ಯದರ್ಶಿ, ಭಾಷಾ ಅಲ್ಪಸಂಖ್ಯಾತರ ರಕ್ಷಣಾ ಸಮಿತಿ - ವಿರುದ್ಧ - ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಪೂರ್ಣಪೀಠವು ನೀಡಿರುವ ತೀರ್ಪಿನ ಉದ್ದೇಶ ತಿಳಿಯುವುದು ಅಗತ್ಯ. ೨೯೫ನೆಯ ಪುಟದಲ್ಲಿ ಇತರ ವಿಷಯಗಳ ನಡುವೆ ಈ ರೀತಿ ಹೇಳಿದೆ :

*೧೮೪೮ / ೧೯೮೭ ಮತ್ತು ೧೦೯೭ / ೧೯೮೮ ರ ರಿಟ್ ಅರ್ಜಿಗಳಲ್ಲಿ

i) ರಿಟ್ ಅರ್ಜಿಗಳನ್ನು ಪುರಸ್ಕರಿಸಲಾಗಿದೆ.

ii) ದಿನಾಂಕ ೨೦-೭-೧೯೮೨ರಲ್ಲಿ ಆಕ್ಷೇಪಿತ ಸರಕಾರಿ ಆದೇಶ ಮತ್ತು ಮೇಲ್ಕಂಡ ಸರಕಾರಿ ಆದೇಶಕ್ಕನುಸಾರ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಹೊರಡಿಸಿರುವ ದಿನಾಂಕ ೧೦-೮-೧೯೮೨ ರ ಸುತ್ತೋಲೆ ಭಾರತ ಸಂವಿಧಾನದ ೧೯, ೨೯(೧) ಮತ್ತು ೩೦(೧)ನೆಯ ಅನುಚ್ಛೇದಗಳನ್ನು ಉಲ್ಲಂಘಿಸುತ್ತದೆಯಾದ್ದರಿಂದ ಅವುಗಳು ಅನೂರ್ಜಿತವೆಂದು ಘೋಷಿಸಲಾಗಿದೆ.

iii) ಆದಾಗ್ಯೂ, ಸರಕಾರಕ್ಕೆ ಸೂಕ್ತ ಆದೇಶ ಅಥವಾ ನಿಯಮಗಳನ್ನು ಮಾಡುವ ಮೂಲಕ

(ಎ) ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕ ಪದ್ಧತಿಯ ಒಂದು ಭಾಗವಾಗಿ ಮಾತೃಭಾಷೆಯ ಜೊತೆಗೆ ಇನ್ನೊಂದು ಭಾಷೆಯ ವ್ಯಾಸಂಗವನ್ನು ಯಾವ ತರಗತಿಯಿಂದ ಕಡ್ಡಾಯಮಾಡಲಾಗಿದೆಯೋ ಆ ಪ್ರಾಥಮಿಕ ಶಾಲಾ ತರಗತಿಯ ವರ್ಷದಿಂದ ಕನ್ನಡವನ್ನು ಎರಡು ಭಾಷೆಗಳಲ್ಲಿ ಒಂದು ಭಾಷೆಯಾಗಿ ಪ್ರಾರಂಭಿಸಲು ಮತ್ತು

(ಬಿ) ಸೆಕೆಂಡರಿ ಶಾಲೆಗಳಲ್ಲಿ ಮೂರು ಭಾಷೆಗಳಲ್ಲಿ ಒಂದು ಭಾಷೆಯಾಗಿ ಕನ್ನಡದ ವ್ಯಾಸಂಗವನ್ನು ಕಡ್ಡಾಯಮಾಡಲು, ಮತ್ತು ಯಾವುದೇ ಭಾಷಾ ಅಲ್ಪಸಂಖ್ಯಾತರು ಸ್ಥಾಪಿಸಿರುವ ಶಾಲೆಗಳೂ ಸೇರಿದಂತೆ, ಅವು ಸರ್ಕಾರಿ ಶಾಲೆಗಳಾಗಿರಲಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಾಗಿರಲಿ, ಅನುಕ್ರಮವಾಗಿ ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳಲ್ಲಿರುವ, ಕನ್ನಡವು ಮಾತೃಭಾಷೆಯಾಗಿರುವ ಎಲ್ಲರಿಗೆ ಮತ್ತು ಈ ರಾಜ್ಯದಲ್ಲಿ ಖಾಯಂ ನಿವಾಸಿಗಳಾಗಿರುವ ಮತ್ತು ನಿವಾಸಿಗಳಾಗುವ ಭಾಷಾ ಅಲ್ಪಸಂಖ್ಯಾತರೆಲ್ಲರಿಗೂ ಅದನ್ನು ಅನ್ವಯವಾಗುವಂತೆ ಮಾಡಲು ಸ್ವಾತಂತ್ರ್ಯವಿರತಕ್ಕದ್ದು.

೧೬. ಈ ಆದೇಶಕ್ಕೆ ಪ್ರಾಥಮಿಕ ಹಂತದಲ್ಲಿ ಕೂಡ ಕನ್ನಡ ಕಡ್ಡಾಯ ಎಂಬ ಅಂಶವೇ ಆಧಾರ. ರಿಟ್ ಅರ್ಜಿ ಸಲ್ಲಿಸಿರುವ ಸಂಸ್ಥೆಗಳ ಮುಖ್ಯ ಆರೋಪವೂ ಅದೇ ಆಗಿತ್ತು. ಮೇಲೆ ಹೇಳಿರುವ ಮೂರು ಪ್ರಶ್ನೆಗಳಿಗೆ ಪೂರ್ಣನ್ಯಾಯಪೀಠವು ಆ ರೀತಿಯಲ್ಲಿ ಉತ್ತರಿಸಿರುವುದಕ್ಕೂ ಇದೇ ಕಾರಣ.

೧೭. ಕರ್ನಾಟಕ ರಾಜ್ಯಕ್ಕೆ ದತ್ತವಾಗಿರುವ ಸ್ವಾತಂತ್ರ್ಯದ ದೃಷ್ಟಿಯಿಂದ ಮೇಲೆ ಉಲ್ಲೇಖಿಸಿರುವ ಸಂ. ೮೭ ಪಿಆರ್‌ಒಯು ಎಸ್‌ಇಬಿಎಚ್‌ಎ ೮೮, ಬೆಂಗಳೂರು ೧೯-೬-೮೯ರ ಸರಕಾರಿ ಆಜ್ಞೆಯನ್ನು ಹೊರಡಿಸಲಾಯಿತು. ೨೨-೬-೮೯ರಂದು ಈ ಕೆಳಗಿನ ತಿದ್ದುಪಡಿಯನ್ನೂ ಹೊರಡಿಸಲಾಯಿತು :

"ಮೇಲೆ ಹೇಳಿದ ೧೯-೬-೮೯ರ ಸರಕಾರಿ ಆದೇಶದ i) ನೆಯ ಪ್ಯಾರಾದ ಬದಲು, ಅಂದರೆ 'ಮೊದಲನೆಯ ತರಗತಿಯಿಂದ' ಎಂಬ ಪದಗಳಿಂದ "ಅಧ್ಯಯನದ ವಿಷಯ" ಎಂಬುವರೆಗೆ ಈ ಕೆಳಗಿನ ಪ್ಯಾರಾವನ್ನು ಸೇರಿಸಿಕೊಳ್ಳಬೇಕು :

"ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಿರುತ್ತದೆಂದು ಸಾಮಾನ್ಯವಾಗಿ ನಿರೀಕ್ಷಿಸುವ ೧ ರಿಂದ ೪ನೆಯ ತರಗತಿಯವರೆಗೆ ಅನುಬಂಧ ೧ ರಲ್ಲಿನ ಒಂದು ಭಾಷೆ ಮಾತ್ರ ಅಧ್ಯಯನ ವಿಷಯವಾಗಿರುತ್ತದೆ."

೧೮. ಮೇಲಿನ ಸರಕಾರಿ ಆಜ್ಞೆಯನ್ನು ಎಚ್ಚರದಿಂದ ಓದಿದರೆ ಪ್ರಾಥಮಿಕ ಶಾಲಾ ಹಂತದಲ್ಲಿ ಕಡ್ಡಾಯದ ಅಂಶವಿಲ್ಲವೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಏಕೆಂದರೆ ಅದು, ಒಂದನೆಯ ತರಗತಿಯಿಂದ ನಾಲ್ಕನೆಯ ತರಗತಿಯವರೆಗೆ ಮಾತೃಭಾಷೆಯೇ ಶಿಕ್ಷಣ ಮಾಧ್ಯಮ, ಅನುಬಂಧ ೧ ರಲ್ಲಿನ ಒಂದು ಭಾಷೆ ಮಾತ್ರ ಅಧ್ಯಯನ

ವಿಷಯ ಎಂದು ಅದು ನಿಸ್ಸಂದಿಗ್ಧವಾಗಿ ಹೇಳಿದೆ. ೩ನೆಯ ತರಗತಿಯಿಂದ ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡವು ಐಚ್ಛಿಕ ವಿಷಯ, ಅದನ್ನು ಸ್ವಂತ ಇಚ್ಛೆಯ ಆಧಾರದ ಮೇಲೆ ಬೋಧಿಸಬೇಕು, ವರ್ಷದ ಕೊನೆಯಲ್ಲಿ ಕನ್ನಡ ಭಾಷೆಯ ಬಗ್ಗೆ ಪರೀಕ್ಷೆ ಇರುವುದಿಲ್ಲ. ಸರಕಾರಿ ಆದೇಶದ ಈ ಭಾಗವು ಕೆಳಗೆ ಉಲ್ಲೇಖಿಸಿರುವ ಭಾರತ ಸಂವಿಧಾನದ ೩೫೦ ಎ ಅನುಚ್ಛೇದಕ್ಕೆ ಅನುಗುಣವಾಗಿರುವುದು ಸ್ಪಷ್ಟವಾಗಿದೆ :

"ಭಾಷಾ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ಮಕ್ಕಳಿಗೆ ವಿದ್ಯಾಭ್ಯಾಸದ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವುದಕ್ಕಾಗಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಲು ಪ್ರತಿಯೊಂದು ರಾಜ್ಯವು ಮತ್ತು ಆ ರಾಜ್ಯದಲ್ಲಿನ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರವೂ ಪ್ರಯತ್ನಿಸತಕ್ಕದ್ದು ಮತ್ತು ಶುಭ ಸೌಲಭ್ಯಗಳನ್ನು ಒದಗಿಸುವುದನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ರಾಷ್ಟ್ರಪತಿಯು ತಾನು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸುವಂಥ ನಿರ್ದೇಶನಗಳನ್ನು ಯಾವುದೇ ರಾಜ್ಯಕ್ಕೆ ಕೊಡಬಹುದು".

೧೯. ರಾಜ್ಯಗಳ ಪುನರ್ವಿಂಗಡಣೆಯಾದ ಮೇಲೆ ರಾಜ್ಯಗಳಲ್ಲಿರುವ ಭಾಷಾ ಅಲ್ಪಸಂಖ್ಯಾತರ ರಕ್ಷಣೆಯ ಬಗ್ಗೆ ರಾಜ್ಯ ರಚನಾ ಆಯೋಗವು ಮಾಡಿದ ಮುಖ್ಯ ಶಿಫಾರಸುಗಳಲ್ಲಿ ಒಂದನ್ನು ಜಾರಿಗೊಳಿಸಲು ಈ ಅನುಚ್ಛೇದವನ್ನು ರೂಪಿಸಲಾಯಿತು.

೨೦. ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕೆಂದು ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಅನೇಕ ಸಂದರ್ಭಗಳಲ್ಲಿ ಹೇಳಿದ್ದಾರೆ. ಅವರು ಒತ್ತಾಯ ಪೂರ್ವಕವಾಗಿ ಈ ರೀತಿ ಹೇಳಿದ್ದಾರೆ, "ಮಗುವು ತನ್ನ ಮೊದಲ ಪಾಠವನ್ನು ತನ್ನ ತಾಯಿಯಿಂದ ಕಲಿಯುತ್ತದೆ. ತಾಯಿನಾಡಿನ ಮಕ್ಕಳ ಮಾನಸಿಕ ವಿಕಾಸಕ್ಕಾಗಿ ಅವರ ತಾಯಿಯ ಭಾಷೆಗಿಂತ ಭಿನ್ನವಾದ ಭಾಷೆಯನ್ನು ಹೇರುವುದನ್ನು ತಾಯಿನಾಡಿನ ವಿರುದ್ಧ ಎಸಗುವ ಪಾಪವೆಂದೇ ನಾನು ಭಾವಿಸುತ್ತೇನೆ".

"ಮಾತೃಭಾಷೆಯ ಭದ್ರ ತಳಹದಿಯ ಮೇಲೆ ಮಗುವಿನ ವಿಕಾಸವು ಬೆಳೆಯಬೇಕಾಗಿರುವುದು ಹಳ್ಳಿಯ ಮಗುವಿನಷ್ಟೇ ಪಟ್ಟಣದ ಮಗುವಿಗೂ ಅತ್ಯಗತ್ಯ".

"ರಾಷ್ಟ್ರದ ಸಾವಿರಾರು ಎಳೆಯ ಪ್ರಜೆಗಳು ತಮ್ಮ ನಿತ್ಯ ಜೀವನದಲ್ಲಿ ಕನಿಷ್ಠವಾಗಿ ಬಳಸುವ ಮತ್ತು ಅದನ್ನು ಕಲಿಯಲು ಹಾಗೂ ಅದರ ಮಾಧ್ಯಮದ ಮೇಲೆ ಪ್ರಭುತ್ವ ಗಳಿಸಲು ವರ್ಷಗಳನ್ನು ವ್ಯರ್ಥ ಮಾಡಬೇಕಾಗಿರುವುದರಿಂದ ಅವರು ತಮ್ಮ ಮಾತೃಭಾಷೆ ಮತ್ತು ಸಾಹಿತ್ಯವನ್ನೇ ಕಡೆಗಣಿಸಬೇಕಾಗುವುದರಿಂದ ರಾಷ್ಟ್ರಕ್ಕಾಗುವ ಅಪಾರ ನಷ್ಟವನ್ನು ಯಾರು ಎಣಿಸಬಲ್ಲರು?"

೨೧. ವಿದ್ಯಾರ್ಥಿಗಳು ಶಿಕ್ಷಣವನ್ನು ತಮ್ಮ ಮಾತೃಭಾಷೆಯ ಮೂಲಕವೇ ಆರಂಭಿಸಬೇಕೆಂದು ಎಲ್ಲ ಶಿಕ್ಷಣತಜ್ಞರು ಏಕರೂಪದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಅದರ ಹಿಂದೆ ಅಪಾರವಾದ ವಿವೇಕ, ನ್ಯಾಯಗಳಿವೆ. ಮಕ್ಕಳ ಎಳೆಯ ಮನಸ್ಸುಗಳು ಪರಕೀಯ ಮಾಧ್ಯಮಕ್ಕೆ ತುತ್ತಾದಾಗ ಕಲಿಯುವ ಪ್ರಕ್ರಿಯೆ ಅಸ್ವಾಭಾವಿಕವಾಗುತ್ತದೆ. ಅದು ಮಕ್ಕಳ ಮನಸ್ಸಿನ ಮೇಲೆ ಕ್ರೂರವಾದ ಹಿಂಸೆಯನ್ನುಂಟುಮಾಡುವುದರಿಂದ ಇಡೀ ಕಲಿಯುವಿಕೆ ಯಾಂತ್ರಿಕವಾಗುತ್ತದೆ. ಅಲ್ಲದೆ, ಶಿಕ್ಷಣ ಪ್ರಕ್ರಿಯೆ ಕೃತಕವೂ ಯಾತನಾಮಯವೂ ಆಗುತ್ತದೆ. ಮೂಲಭೂತ ಜ್ಞಾನವನ್ನು ಮಾತೃಭಾಷೆಯ ಮೂಲಕ ಗಳಿಸಬಹುದು. ಪರಭಾಷೆಯ ಕಲಿಕೆಯ ಆರಂಭ ಮಾತೃಭಾಷೆಯ ವಿಕಾಸವನ್ನು ತಡೆದು ಅದನ್ನು ವಿರೂಪಗೊಳಿಸುವುದಾಗಿ ಬೆದರಿಸುತ್ತದೆ. ವಿದ್ಯಾರ್ಥಿಯು ಬೆಳೆದು ೫ನೆಯ ತರಗತಿಗೆ ಬಂದಾಗ ಎರಡನೆಯ ಭಾಷೆಯನ್ನು ಆರಂಭಿಸಲಾಗುವುದು. ಪ್ರಥಮ ಭಾಷೆಯಾಗಿ ಕನ್ನಡವನ್ನು ತೆಗೆದುಕೊಂಡಿರದ ವಿದ್ಯಾರ್ಥಿ ಈ ಹಂತದಲ್ಲಿ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಪ್ರೌಢಶಾಲೆಯ ಹಂತದಲ್ಲಿ ತ್ರಿಭಾಷಾ ಸೂತ್ರವನ್ನು ಆರಂಭಿಸಲಾಗುವುದು. ಆದಾಗ್ಯೂ, ಕನ್ನಡೇತರ ವಿದ್ಯಾರ್ಥಿಗಳಿಗೆ ಶೇ. ೧೫ರಷ್ಟು ಕೃಪಾಂಕಗಳನ್ನು ನೀಡಲಾಗುವುದು. ಕರ್ನಾಟಕದಲ್ಲಿ ಓದುವ ವಿದ್ಯಾರ್ಥಿ ಆ ಪ್ರದೇಶದ ಭಾಷೆಯನ್ನು ತಿಳಿಯಬೇಕಿಲ್ಲವೆಂದು ವಾದಿಸಲು ಖಂಡಿತ ಸಾಧ್ಯವಿಲ್ಲ. ಪ್ರತಿಯೊಂದು ರಾಜ್ಯದ ಭಾಷೆಯನ್ನು ಪ್ರೋತ್ಸಾಹಿಸುವುದು ಆಯಾ ರಾಜ್ಯದ ಕರ್ತವ್ಯ. ವಾಸ್ತವವಾಗಿ ಕರ್ನಾಟಕ ಸರ್ಕಾರವು ಈ ಆಜ್ಞೆಯನ್ನು ಹೊರಡಿಸಿರುವುದು ಸ್ತುತ್ಯರ್ಹ. ಆದ್ದರಿಂದ ಕನ್ನಡವನ್ನು ಕಲಿಯುವಂತೆ ಒತ್ತಾಯಿಸುವುದು ವಿದ್ಯಾರ್ಥಿಗಳ ಮೇಲೆ ಹೊರಿಸಿದ ಅನ್ಯಾಯದ ಹೊರೆಯಾಗುತ್ತದೆಯೆಂದು ವಾದಿಸುವುದು ಅಸಮರ್ಥನೀಯ. ಮಹಾತ್ಮಾ ಗಾಂಧಿಯವರನ್ನು ಮತ್ತೆ ಉದ್ಧರಿಸುವುದಾದರೆ, "ಶಿಕ್ಷಣ ಮಾಧ್ಯಮವನ್ನು ಯಾವ ಬೆಲೆ ತೆತ್ತಾದರೂ ಕೂಡಲೆ ಬದಲಾಯಿಸಬೇಕು. ಪ್ರಾಂತೀಯ ಭಾಷೆಗಳಿಗೆ ಅವುಗಳಿಗೆ ಸಲ್ಲಬೇಕಾದ ಸ್ಥಾನವನ್ನು ನೀಡಬೇಕು. ದಿನವೂ ಹೆಚ್ಚುತ್ತಾ ಹೋಗುವ ವ್ಯರ್ಥಕ್ಕಿಂತ ಉನ್ನತ ಶಿಕ್ಷಣದಲ್ಲಾಗುವ ತಾತ್ಕಾಲಿಕ ಅವ್ಯವಸ್ಥೆಯನ್ನೇ ನಾನು ಆರಿಸಿಕೊಳ್ಳುತ್ತೇನೆ".

೨೨. ಈ ವಿಶ್ಲೇಷಣೆಯ ದೃಷ್ಟಿಯಲ್ಲಿ ಅಲ್ಪಸಂಖ್ಯಾತರ ಹಕ್ಕುಗಳನ್ನು ಮೊಟಕುಗೊಳಿಸುವಂತೆ ಭಾರತ ಸಂವಿಧಾನದ ೨೯ ಅಥವಾ ೩೦ನೆಯ ಅನುಚ್ಛೇದಗಳ ಯಾವ ಉಲ್ಲಂಘನೆಯೂ ಆಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಡಿಎವಿ ಕಾಲೇಜು ಭಟಿಂಡ ವಿರುದ್ಧ ಪಂಜಾಬ್ ರಾಜ್ಯ (೧೯೭೧, ಪುರವಣಿ ಎಸ್‌ಸಿಆರ್ ೬೭೭) ರಲ್ಲಿ ಈ ನ್ಯಾಯಾಲಯವು ಈ ರೀತಿ ಅಭಿಪ್ರಾಯಪಟ್ಟಿದೆ.

"ವಿಶ್ವವಿದ್ಯಾಲಯಕ್ಕೆ ಸೇರಿದ ಕಾಲೇಜುಗಳಲ್ಲಿ ಪಂಜಾಬಿಯನ್ನು ಏಕೈಕ ಶಿಕ್ಷಣ ಮಾಧ್ಯಮವಾಗಿ ಜಾರಿಗೊಳಿಸುವ ಮೂಲಕ, ವಿಶ್ವವಿದ್ಯಾನಿಲಯಕ್ಕೆ ಇರುವ ರಿಯಾಯಿತಿಗಳನ್ನು ಗಮನಿಸಿದರೂ, ಅದು ತನಗೆ ದತ್ತವಾಗಿರುವ ಅಧಿಕಾರವನ್ನು ಮೀರಿ ವರ್ತಿಸಿದೆ. ವಿಶ್ವವಿದ್ಯಾನಿಲಯವು ಪಂಜಾಬಿಯನ್ನು ಶಿಕ್ಷಣ ಮಾಧ್ಯಮವಾಗಿ

ಆರಂಭಿಸುವಾಗ ಅದನ್ನು ಏಕೈಕ ಶಿಕ್ಷಣ ಮಾಧ್ಯಮವಾಗಿ ವಿಧಿಸುವಂತಿಲ್ಲ ಅಥವಾ ಭಾಷೆ ಅಥವಾ ಧಾರ್ಮಿಕ ಅಲ್ಪಸಂಖ್ಯಾತರು ಸ್ಥಾಪಿಸಿ ನಡೆಸುತ್ತಿರುವ ಮನ್ನಣೆ ಪಡೆದ ಕಾಲೇಜುಗಳು ಅಥವಾ ತಮ್ಮ ಭಾಷೆ, ಲಿಪಿ ಮತ್ತು ಸಂಸ್ಕೃತಿಗಳನ್ನು ಉಳಿಸಿಕೊಳ್ಳಲು ಬಯಸುವ ನಾಗರಿಕರ ಒಂದು ವರ್ಗವು ಪಂಜಾಬಿಯಲ್ಲಿ ಬೋಧಿಸಲು, ಗುರುಮುಖಿ ಲಿಪಿಯಲ್ಲಿ ಉತ್ತರಿಸಲು ಒತ್ತಾಯಿಸುವಂತಿಲ್ಲ. ವಿಶ್ವವಿದ್ಯಾನಿಲಯದ ಕಾಯ್ದೆಯು ಈ ಕಾಲೇಜುಗಳನ್ನು ಕಡ್ಡಾಯವಾಗಿ ವಿಶ್ವವಿದ್ಯಾನಿಲಯಕ್ಕೆ ಅನುಬಂಧಿಸಿರುವದರಿಂದ ಅವುಗಳ ಅವಶ್ಯಕತೆಗಳನ್ನು ಪೂರೈಸುವುದು ಅಗತ್ಯವಾಗಿದೆ ಮತ್ತು ಅವರು ತಮ್ಮ ಸಂಸ್ಥೆಗಳನ್ನು ತಮ್ಮದೇ ಆದ ರೀತಿಯಲ್ಲಿ ನಡೆಸಿ, ತಮ್ಮದೇ ಆದ ಮಾಧ್ಯಮದಲ್ಲಿ ಬೋಧಿಸಿ, ತಮ್ಮದೇ ಆದ ಲಿಪಿಯಲ್ಲಿ ಉತ್ತರಿಸಲು ಬಿಡಬೇಕು".

೨೩. ಆದ್ದರಿಂದ ಈ ತೀರ್ಪು ಪ್ರಸ್ತುತ ಮೊಕದ್ದಮೆಗೆ ಯಾವ ರೀತಿಯಲ್ಲಿಯೂ ಅನ್ವಯಿಸುವುದಿಲ್ಲ.

೨೪. ಅರ್ಜಿದಾರರ ಮಾನ್ಯ ವಕೀಲರು ತಪ್ಪು ಗ್ರಹಿಕೆಯಿಂದ ಈ ತೀರ್ಪನ್ನು ಅವಲಂಬಿಸಿದ್ದಾರೆ. ಡಿಎವಿ ಕಾಲೇಜು ವಿರುದ್ಧ ಪಂಜಾಬ್ ರಾಜ್ಯ (೧೨೧ ಪುರವಣಿ, ಎಸ್‌ಸಿಆರ್ ೬೮೮)ದ ೭೦೩-೭೦೪ನೇ ಪುಟಗಳಲ್ಲಿ ಈ ರೀತಿ ಅಭಿಪ್ರಾಯ ಪಡಲಾಗಿದೆ.

"ನಮ್ಮ ದೃಷ್ಟಿಯಲ್ಲಿ ೪ನೆಯ ಪ್ರಕರಣದ (೩)ನೆಯ ಉಪಪ್ರಕರಣವೂ ೨೯(೧)ನೆಯ ಅನುಚ್ಛೇದದ ಅಡಿಯಲ್ಲಿರುವ ಭರವಸೆಯನ್ನು ಅತಿಕ್ರಮಿಸುವುದಿಲ್ಲ. ಯಾರಾದರೂ ಇಷ್ಟಪಡಲಿ ಬಿಡಲಿ ದೇಶದಲ್ಲಿ ಭಾಷಾವಾರು ರಾಜ್ಯಗಳಿರುವುದು ಖಂಡಿತ. ಆಯಾ ಪ್ರದೇಶದ ಜನರಿಗೆ ಆಯಾ ಪ್ರದೇಶದ ಭಾಷೆಯಲ್ಲಿ ಹೆಚ್ಚು ಸುಲಭವಾಗಿ ಸಾಮಾಜಿಕ-ಸಾಂಸ್ಕೃತಿಕ ಶಿಕ್ಷಣ ನೀಡುವುದು ಭಾಷಾವಾರು ರಾಜ್ಯಗಳ ರಚನೆಯ ಉದ್ದೇಶ. ಆದರೆ ಬಹುಸಂಖ್ಯಾತರಿಗೆ ಪ್ರದೇಶ ಭಾಷಾ ಮಾಧ್ಯಮದಲ್ಲಿ ಶಿಕ್ಷಣ ನೀಡುವ ಎಲ್ಲ ಹಕ್ಕು ರಾಜ್ಯ ಸರಕಾರ ಅಥವಾ ವಿಶ್ವವಿದ್ಯಾಲಯಕ್ಕೆ ಇದ್ದು ಅದು ೨೫ರಿಂದ ೩೦ನೆಯ ಅನುಚ್ಛೇದಗಳ ನಿಯಂತ್ರಣಗಳಿಗೆ ಒಳಪಟ್ಟಿರುತ್ತದೆ. ಯಾವುದೇ ವರ್ಗದ ನಾಗರಿಕರ ಭಾಷೆ ಮತ್ತು ಲಿಪಿಗಳ ಕತ್ತುಹಿಸುಕುವಂಥ ಭಾಷಾ ಮಾಧ್ಯಮದಲ್ಲಿ ವಿಶ್ವವಿದ್ಯಾನಿಲಯವಾಗಲಿ ಸರಕಾರವಾಗಲಿ ಶಿಕ್ಷಣ ನೀಡುವಂತಿಲ್ಲ. ಅಂಥ ಕ್ರಮವು, ತಮ್ಮದೇ ಆದ ಶಿಕ್ಷಣ ಸಂಸ್ಥೆಗಳ ಮೂಲಕ ತಮ್ಮ ವಿಶಿಷ್ಟ ಭಾಷೆ ಮತ್ತು ಲಿಪಿಗಳನ್ನು ರಕ್ಷಿಸಿಕೊಳ್ಳಬಯಸುವ ನಾಗರಿಕ ವರ್ಗಗಳ ಹಕ್ಕುಗಳನ್ನು ಅತಿಕ್ರಮಿಸುತ್ತದೆ. ನಮ್ಮ ದೃಷ್ಟಿಯಲ್ಲಿ ೪(೩)ನೆಯ ಪ್ರಕರಣವು ಎಲ್ಲ ಮನ್ನಣೆ ಪಡೆದ ಕಾಲೇಜುಗಳ ಶಿಕ್ಷಣ ಮಾಧ್ಯಮ ಪಂಜಾಬಿಯಾಗಿರಬೇಕೆಂಬ ವ್ಯಾಖ್ಯಾನಕ್ಕೆ

ಅವಕಾಶ ನೀಡುವುದಿಲ್ಲ. ನಾವು ಗ್ರಹಿಸಿರುವಂತೆ, ಅದರಲ್ಲಿ ಪಂಜಾಬಿ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಅಧ್ಯಯನ ಮತ್ತು ಸಂಶೋಧನೆಗೆ ಪ್ರೋತ್ಸಾಹ ನೀಡುವ ಅವಕಾಶವಿದ್ದರೂ ಅದರ ಅಡಿಯಲ್ಲಿ ವಿಶ್ವವಿದ್ಯಾಲಯವು ಮನ್ನಣೆ ಪಡೆದ ಕಾಲೇಜುಗಳನ್ನು, ಅದರಲ್ಲಿಯೂ ಅಲ್ಪಸಂಖ್ಯಾತರವನ್ನು, ಪಂಜಾಬಿಯಲ್ಲಿ ಶಿಕ್ಷಣ ನೀಡಬೇಕು ಎಂದು ಒತ್ತಾಯಿಸಲು ಅಥವಾ ತಮ್ಮ ಭಾಷೆ, ಲಿಪಿ ಮತ್ತು ಸಂಸ್ಕೃತಿಗಳನ್ನು ರಕ್ಷಿಸಿಕೊಳ್ಳುವ ಅವರ ಹಕ್ಕನ್ನು ಉಲ್ಲಂಘಿಸಲು ಸಾಧ್ಯವಿಲ್ಲ.

೪(೨) ಮತ್ತು ೪(೩)ನೆಯ ಪ್ರಕರಣಗಳಲ್ಲಿ ಗುರುನಾನಕರ ಜೀವನ ಮತ್ತು ಬೋಧನೆಗಳ ಅಧ್ಯಯನ ಹಾಗೂ ಪಂಜಾಬಿನ ಭಾಷೆ, ಲಿಪಿ ಮತ್ತು ಸಾಹಿತ್ಯಗಳ ಅಧ್ಯಯನಕ್ಕೆ ಅವಕಾಶವಿದ್ದರೂ ರಾಜ್ಯದ ಪ್ರಜಾಸಂಖ್ಯೆಯ ಗಮನಾರ್ಹ ಭಾಗವಾಗಿರುವ ಹಿಂದೂಗಳ ಧಾರ್ಮಿಕ ನಾಯಕರು ಮತ್ತು ಅವರ ಬೋಧನೆಗಳು ಹಾಗೂ ಹಿಂದಿ ಭಾಷೆಯ ಅಧ್ಯಯನ ಮತ್ತು ದೇವನಾಗರಿ ಲಿಪಿಯ ಬಳಕೆಯ ಬಗ್ಗೆ ಅಂಥ ಯಾವ ಅವಕಾಶವನ್ನೂ ಮಾಡಿಲ್ಲ ಎಂದೂ ವಾದಿಸಲಾಯಿತು. ಆದ್ದರಿಂದ ಈ ಅವಕಾಶಗಳು ವಿಭೇದಾತ್ಮಕವಾಗಿದ್ದು, ಸಂವಿಧಾನದ ೧೪ನೆಯ ಅನುಚ್ಛೇದವನ್ನು ಉಲ್ಲಂಘಿಸುತ್ತವೆ. ನಮ್ಮ ದೃಷ್ಟಿಯಲ್ಲಿ ಈ ವಾದದಲ್ಲಿ ಹುರುಳಿಲ್ಲ. ಪಂಜಾಬಿಯು ಏಕೈಕ ಭಾಷೆಯಾಗಿರುವ ಪಂಜಾಬ್ ರಾಜ್ಯದ ನಿರ್ಮಾಣವಾಯಿತು. ಪಂಜಾಬಿ ಭಾಷೆಯ ಅಧ್ಯಯನಕ್ಕೆ ಅವಕಾಶ ಮಾಡಿಕೊಡುವುದು ಭೇದವೆಣಿಸಲು ಆಧಾರವಾಗುವುದಿಲ್ಲ. ಅಥವಾ ಗುರುನಾನಕರ ಜೀವನ ಮತ್ತು ಬೋಧನೆಗಳ ಅಧ್ಯಯನ ಅವಕಾಶವು ಯಾವುದೇ ವ್ಯಕ್ತಿ ಅಂಥ ಅಧ್ಯಯನ ಮಾಡಲು ಒತ್ತಾಯಿಸುವುದೆಂದು ದೂರಲು ಅವಕಾಶ ನೀಡಿದ್ದಾಗಲಿ ಇಲ್ಲವೆ ಯಾವುದೇ ಸಮುದಾಯವು ಹಿಂದಿ ಭಾಷೆ ಅಥವಾ ಹಿಂದೂ ಸಂತರ ಜೀವನ ಮತ್ತು ಚಿಂತನೆಗಳನ್ನು ಅಧ್ಯಯನ ಮಾಡಲು ನಿಷೇಧಿಸಿದ್ದಾಗಲಿ ನಮ್ಮ ಗಮನಕ್ಕೆ ಬಂದಿಲ್ಲ. ನಮ್ಮ ದೃಷ್ಟಿಯಲ್ಲಿ ಈ ಮೊಕದ್ದಮೆಯ ಅಂಶಗಳು ೧೪ನೆಯ ಅನುಚ್ಛೇದವನ್ನು ಬಯಸುವುದಿಲ್ಲ".

೨೫. ೩೯(ಚ) ಅನುಚ್ಛೇದದಲ್ಲಿರುವ ನಿರ್ದೇಶಕ ತತ್ತ್ವವು ಅರ್ಜಿದಾರರ ವಾದವನ್ನು ಮುಂದಕ್ಕೆ ಕೊಂಡೊಯ್ಯುವುದಿಲ್ಲ.

೨೬. ಮಾನ್ಯ ಅಡ್ವೋಕೇಟ್ ಜನರಲ್ಲರು ಸರಿಯಾಗಿ ವಾದಿಸಿರುವಂತೆ ಸರಕಾರವು ಪ್ರಶ್ನಿತ ಆಜ್ಞೆಯ ಮೂಲಕ ಶೈಕ್ಷಣಿಕ ಶಿಸ್ತನ್ನು ನಿಯಂತ್ರಣಾತ್ಮಕ ವಿಧಾನವಾಗಿ ತರಲು ಉದ್ದೇಶಿಸಿರುವುದು ನೀತಿಯ ವಿಷಯವಾಗಿದೆ. ಭಾಷಾನೀತಿಯನ್ನು ಎಷ್ಟು ಚೆನ್ನಾಗಿ ಜಾರಿಗೊಳಿಸಬೇಕು ಎನ್ನುವುದು ಸರಕಾರಕ್ಕೆ ಗೊತ್ತಿದೆ. ಅದರಲ್ಲಿ ನ್ಯಾಯಾಲಯ ಮಧ್ಯ ಪ್ರವೇಶಿಸುವುದಿಲ್ಲ. ಹಿಂದಿ ಹಿತರಕ್ಷಕ ಸಮಿತಿ ಮತ್ತು ಇತರರು ವಿರುದ್ಧ ಭಾರತ ಒಕ್ಕೂಟ (೧೯೯೦(೧) ಎಸ್‌ಸಿಆರ್ ೫೮೮) ೫೯೨ನೆಯ ಪುಟದಲ್ಲಿ ಇದನ್ನು ಈ ರೀತಿ ಹೇಳಿದೆ :

"ಹಿಂದಿ ಅಥವಾ ಇತರ ಪ್ರದೇಶ ಭಾಷೆಗಳು ಬಹು ಜನರಿಗೆ ಶಿಕ್ಷಣ ನೀಡಲು ಹೆಚ್ಚು ಉಚಿತ ಮಾಧ್ಯಮವಾಗಿದ್ದು ಪ್ರವೇಶ ಅಥವಾ ಬೇರಾವುದೇ ಪರೀಕ್ಷೆಗಳನ್ನು ಯಾವುದೇ ಪ್ರದೇಶ ಭಾಷೆಗಳಲ್ಲಿ ನಡೆಸುವುದು ಉಚಿತವೂ ಯೋಗ್ಯವೂ ಆಗಿರಬಹುದು. ಇಲ್ಲವೆ ಹಿಂದಿ ಅಥವಾ ಇತರ ಪ್ರದೇಶ ಭಾಷೆಗಳು ಆಯಾ ಭಾಷೆಗಳ ಬೆಳವಣಿಗೆಯ ಕಾರಣದಿಂದ ವೈದ್ಯಕೀಯ ಮತ್ತು ದಂತವೈದ್ಯ ಶಿಕ್ಷಣದಂಥ ವಿಷಯಗಳ ಶಿಕ್ಷಣ ಮಾಧ್ಯಮವಾಗಿ ಜ್ಞಾನ ಮತ್ತು ಸಾಮರ್ಥ್ಯಗಳನ್ನು ಹರಡಲೂ, ಪರೀಕ್ಷಿಸಲೂ ಇನ್ನೂ ಸಮರ್ಪಕವಾಗಿಲ್ಲದಿರಬಹುದು. ಇದು ಯಾವುದೇ ನಿರ್ದಿಷ್ಟ ಸಂದರ್ಭದಲ್ಲಿ ರಾಜ್ಯ ಸರಕಾರ ಅಥವಾ ಸಂಬಂಧಪಟ್ಟ ಶಿಕ್ಷಣಾಧಿಕಾರಿಗಳು ರೂಪಿಸುವ ನೀತಿ ನಿರೂಪಣೆಯ ವಿಷಯವಾಗಿದೆ. ಅಲ್ಲಿ ಒಂದು ನಿರ್ದಿಷ್ಟ ನೀತಿಯನ್ನು ಒಪ್ಪಿಕೊಳ್ಳುವುದರಿಂದ ಮೂಲಭೂತ ಹಕ್ಕನ್ನು ಸ್ಥಾಪಿಸುವ ಅಥವಾ ಕಾನೂನಿನ ಒತ್ತಡ ಇಲ್ಲವೇ ನಿಯಮಗಳ ಒತ್ತಾಯವಿಲ್ಲದ ಕಾರ್ಯಕ್ರಮವಿರಬೇಕು. ಅದರ ಬಗ್ಗೆ ವಿಭಿನ್ನ ದೃಷ್ಟಿಕೋನಗಳಿದ್ದು ಅದನ್ನು ಸಂವಿಧಾನದ ೩೨ನೆಯ ಅನುಚ್ಛೇದದಿಂದ ಜಾರಿಗೊಳಿಸುವಂತಿಲ್ಲ. ಸಂವಿಧಾನದ ೩೨ನೆಯ ಅನುಚ್ಛೇದವು ನೀತಿಯ ಆಯ್ಕೆಯನ್ನು ಸೂಚಿಸುವ ಸಾಧನವಲ್ಲ.

೨೭. ನೀತಿಗೆ ಸಂಬಂಧಿಸಿದ ವಿಷಯದಲ್ಲಿ ಮಧ್ಯಪ್ರವೇಶಿಸಲು ಈ ನ್ಯಾಯಾಲಯವು ನಿರಾಕರಿಸುತ್ತದೆ. ಅದರ ಫಲವಾಗಿ ರಿಟ್ ಅರ್ಜಿಯಲ್ಲಿ ಹುರುಳಿಲ್ಲವೆಂದು ತೀರ್ಮಾನಿಸಿ ತಿರಸ್ಕರಿಸಿದ್ದೇವೆ.

೨೮. ಉಚ್ಚ ನ್ಯಾಯಾಲಯದ ಬಹುಮತದ ಅಭಿಪ್ರಾಯವು ನಾಗರಿಕ ಅರ್ಜಿಗಳಿಗೆ ಸಂಬಂಧಿಸಿದಂತೆ ವಿಷಯವನ್ನು ಉಚಿತವಾದ ಪರಿಪ್ರೇಕ್ಷ್ಯದಲ್ಲಿ ನೋಡಿರುವುದನ್ನು ಗಮನಿಸಿದ್ದೇವೆ. ತೀರ್ಪಿನ ಪ್ರಸ್ತುತ ಭಾಗಗಳನ್ನು ಈ ಹಿಂದೆ ಉದ್ಧರಿಸಿದ್ದೇವೆ. ಭಾಷಾ ಅಲ್ಪಸಂಖ್ಯಾತರ ಮಕ್ಕಳಿಗೆ ಪ್ರಾಥಮಿಕಶಾಲೆಯ ಮೊದಲನೆಯ ವರ್ಷದಿಂದಲೇ ಕನ್ನಡವನ್ನು ಕಡ್ಡಾಯ ಮಾಡುವುದು, ಪ್ರೌಢಶಾಲೆಯ ಹಂತದಲ್ಲಿ ಅದನ್ನು ಏಕೈಕ ಪ್ರಥಮ ಭಾಷೆಯಾಗಿ ಮಾಡುವುದು ಸರಕಾರ ಮೊದಲಿನ ಆದೇಶಗಳು ಮತ್ತು ಆಜ್ಞೆಗಳಲ್ಲಿದ್ದ ಮುಳ್ಳಾಗಿತ್ತು. ಅಂಥ ಅವಕಾಶವು ಸಂವಿಧಾನದ ೨೯ ಮತ್ತು ೩೦ನೆಯ ಅನುಚ್ಛೇದಗಳನ್ನು ಉಲ್ಲಂಘಿಸುತ್ತದೆ. ಉಚ್ಚನ್ಯಾಯಾಲಯವು ಚೆನ್ನಾಗಿ ಪರಿಶೀಲಿಸಿ ನೀಡಿರುವ ತೀರ್ಪನ್ನು ಎತ್ತಿ ಹಿಡಿಯಲು ನಮಗೆ ಯಾವ ಅಡ್ಡಿಯೂ ಇಲ್ಲ. ವಾಸ್ತವವಾಗಿ ಸರಕಾರವು ತೀರ್ಪನ್ನು ಒಪ್ಪಿಕೊಂಡಿರುವುದಲ್ಲದೆ ರಿಟ್ ಅರ್ಜಿ ೫೩೬ / ೧೯೯೧, ೧೯-೬-೮೯ರಲ್ಲಿ ಪ್ರಶ್ನಿಸಿರುವ ಆಜ್ಞೆಯನ್ನು ಹೊರಡಿಸಿದೆ. ಆದ್ದರಿಂದ ನಾಗರಿಕ ಮೇಲ್ಮನವಿಗಳು ರದ್ದಾಗಿವೆ. ಆದಾಗ್ಯೂ ಮೊಕದ್ದಮೆಯ ಸಂದರ್ಭದಲ್ಲಿ ವೆಚ್ಚವನ್ನು ಕುರಿತು ಯಾವ ಆದೇಶವೂ ಇಲ್ಲ'.

■

ಅಧ್ಯಾಯ-೯

ಸರಕಾರದಿಂದ ೧೯೯೪ರ ನಿರ್ಣಾಯಕ ಆದೇಶ

ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪು ಮಾತೃಭಾಷಾ ಮಾಧ್ಯಮದ ಚಳುವಳಿಗೆ ಹೊಸ ಬಲವನ್ನು ತಂದಿತು. ನಾಡಿನಾದ್ಯಂತ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಜಾರಿಗೆ ತರಲು ಒತ್ತಾಯ ಬರಲಾರಂಭಿಸಿತು.

ಬೆಂಗಳೂರಿನ ಕನ್ನಡ ಶಕ್ತಿ ಕೇಂದ್ರದ ವತಿಯಿಂದ ತೀರ್ಪಿನ ಜಾರಿಗಾಗಿ ಮೈಸೂರು, ಧಾರವಾಡದ ಪ್ರತಿನಿಧಿಗಳ ಸಹಿತವಾಗಿ ಮೆರವಣಿಗೆ ಮತ್ತು ಪತ್ರಿಕಾಗೋಷ್ಠಿಗಳು ನಡೆದವು.

ಸರಕಾರ ಬಾಯಿಮಾತಿನ ಭರವಸೆಯನ್ನು ನೀಡಿದರೂ ಕೃತಿಯಲ್ಲಿ ಏನೂ ಆಗಲಿಲ್ಲ.

ಕನ್ನಡ ಶಕ್ತಿ ಕೇಂದ್ರದ ಡಾ. ಎಂ. ಚಿದಾನಂದಮೂರ್ತಿಯವರು ದಿನಾಂಕ ಮಾರ್ಚ್೨೭, ೧೯೯೪ರಂದು ಅನಿರ್ದಿಷ್ಟ ಕಾಲದ ಉಪವಾಸ ಮುಷ್ಕರ ಆರಂಭಿಸಿದರು. ಅವರಿಗೆ ಬೆಂಬಲವಾಗಿ ಮೈಸೂರಿನ ಕನ್ನಡ ಕ್ರಿಯಾ ಸಮಿತಿಯು ೨೪ ಗಂಟೆಗಳ ಸರದಿ ಉಪವಾಸವನ್ನು ಆರಂಭಿಸಿತು. ನಾಡಿನ ಬೇರೆ ಬೇರೆ ಕಡೆಗಳಿಂದಲೂ ಬೆಂಬಲ ವ್ಯಕ್ತವಾಯಿತು.

ಆಗಿನ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಅವರು ನೀಡಿದ ಭರವಸೆ ಮೇರೆಗೆ ಚಿದಾನಂದಮೂರ್ತಿಯವರು ಉಪವಾಸವನ್ನು ನಿಲ್ಲಿಸಿದರು.

ಅದಾದ ನಂತರ ಸರಕಾರ ಒಂದು ನಿರ್ಣಯವನ್ನು ತೆಗೆದುಕೊಂಡಿತು. ಅದರಂತೆ ಏಪ್ರಿಲ್ ೨೨, ೧೯೯೪ರಂದು ಆದೇಶವನ್ನು ಹೊರಡಿಸಿತು. ಅದರ ಪ್ರಕಾರ ೧೯೯೪ರ ನಂತರ ಆರಂಭವಾದ ಎಲ್ಲ ಶಾಲೆಗಳಲ್ಲೂ ೧ರಿಂದ ನಾಲ್ಕನೇ ತರಗತಿವರೆಗೆ ಮಾತೃಭಾಷೆ ಅಥವಾ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕೆಂದು ಸೂಚಿಸಿತು. ೧೯೮೯ಕ್ಕಿಂತ ಮುಂಚೆ ಆರಂಭವಾದ ಆಂಗ್ಲಮಾಧ್ಯಮ ಶಾಲೆಗಳಿಗೆ ಈ ಆದೇಶ ಅನ್ವಯಿಸದಿರುವುದನ್ನು ಪ್ರತಿಭಟಿಸಿ, ಏಕರೂಪದ ಶಿಕ್ಷಣ ನೀತಿಗೆ ಆಗ್ರಹಿಸಿ, ರಾಜ್ಯದ ಪ್ರಮುಖ ಸಾಹಿತಿಗಳು ಮತ್ತು ಹೋರಾಟಗಾರರ ಪರವಾಗಿ ಕನ್ನಡ ಶಕ್ತಿ ಕೇಂದ್ರ

ಪತ್ರಿಕಾಗೋಷ್ಠಿಯನ್ನು ನಡೆಸಿ, ಸರಕಾರ ತಮ್ಮ ಹಕ್ಕೊತ್ತಾಯವನ್ನು ಮಾನ್ಯ ಮಾಡದಿದ್ದರೆ ಮತ್ತೊಂದು ಗೋಕಾಕ್ ಚಳುವಳಿ ನಡೆಸುವುದಾಗಿ ರಣಕಹಳೆ ಮೊಳಗಿಸಿತು. ಈ ಪತ್ರಿಕಾಗೋಷ್ಠಿಯಲ್ಲಿ ನಿಟ್ಟೂರ ಶ್ರೀನಿವಾಸರಾಯರು, ಎಚ್. ನರಸಿಂಹಯ್ಯ, ಜಿ. ನಾರಾಯಣ ಇನ್ನೂ ಮುಂತಾದ ಹಿರಿಯರು ಭಾಗವಹಿಸಿದ್ದರು. ಇದರಿಂದ ವಿಚಲಿತರಾದ ಮುಖ್ಯಮಂತ್ರಿಗಳು ಮಾರನೇ ದಿನವೇ ಸಾಹಿತಿಗಳನ್ನು ಚರ್ಚೆಗೆ ಕರೆದರು. ಮಾತುಕತೆಯಾದ ನಂತರ ೧೯೮೯ಕ್ಕಿಂತ ಮುಂಚೆ ಆರಂಭವಾದ ಆಂಗ್ಲ ಮಾಧ್ಯಮ ಶಾಲೆಗಳಿಗೂ ೧ರಿಂದ ೪ನೇ ತರಗತಿವರೆಗೆ ಮಾತೃಭಾಷೆ ಅಥವಾ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕೆಂಬ ಆದೇಶವನ್ನು ವಿಸ್ತರಿಸಲು ಒಪ್ಪಿದರು. ಅದರಂತೆ ಅಂದು ಸಂಜೆಯೇ ಸಚಿವ ಸಂಪುಟದ ಸಭೆ ಕರೆದು ಐತಿಹಾಸಿಕ ನಿರ್ಣಯ ಕೈಗೊಂಡರು. ಮಾರನೆದಿನ ಅದು ಪತ್ರಿಕೆಗಳಲ್ಲಿ ಪ್ರಕಟವಾದಾಗ ಕನ್ನಡಾಭಿಮಾನಿಗಳು ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ದಿನಾಂಕ ೨೯ನೇ ಏಪ್ರಿಲ್ ೧೯೯೪ರಂದು ಹೊರಡಿಸಿದ ಇಡಿ ೨೮ ಪಿಜಿಸಿ ೯೪ರ ಆದೇಶದ ಪೂರ್ಣಪಾಠ ಹೀಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಇಡಿ ೨೮ ಪಿಜಿಸಿ ೯೪ ಬೆಂಗಳೂರು ದಿನಾಂಕ ೨೯ನೇ ಏಪ್ರಿಲ್ ೧೯೯೪.

ವಿಷಯಕ್ಕೆ ಸಂಬಂಧಿಸಿದ ಹಿಂದಿನ ಎಲ್ಲಾ ಆದೇಶಗಳನ್ನು ಹಾಗೂ ದಿನಾಂಕ ೨೨ನೇ ಏಪ್ರಿಲ್ ೧೯೯೪ರ ಇಡಿ ೨೮ ಪಿಜಿಸಿ ೯೪ ಕ್ರಮಾಂಕದ ಆದೇಶವನ್ನು ರದ್ದುಗೊಳಿಸಿ, ದಿನಾಂಕ ೮ನೇ ಡಿಸೆಂಬರ್ ೧೯೯೩ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಆಧಾರದ ಮೇರೆಗೆ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ೧೯೯೪-೯೫ನೇ ಶೈಕ್ಷಣಿಕ ವರ್ಷದಿಂದ ಅನ್ವಯವಾಗುವಂತೆ ಅನುಸರಿಸಬೇಕಾದ ಭಾಷಾನೀತಿ ಕೆಳಕಂಡಂತೆ ಇರತಕ್ಕದ್ದೆಂದು ಸರಕಾರ ಆದೇಶಿಸಿದೆ.

ಅ) ಸಾಮಾನ್ಯವಾಗಿ ಮಗುವಿನ ಮಾತೃಭಾಷೆಯೇ ಮಾಧ್ಯಮವಾಗಬೇಕೆಂದು ನಿರೀಕ್ಷೆ ಇರುವ ೧ರಿಂದ ೪ನೇ ತರಗತಿವರೆಗೆ ಅನುಬಂಧ - ೧ರಲ್ಲಿ ತಿಳಿಸಿರುವಂತೆ ಭಾಷೆಗಳ ಪೈಕಿ ಒಂದು ಮಾತೃಭಾಷೆ ಅಥವಾ ಕನ್ನಡ ಮಾತ್ರ ಕಡ್ಡಾಯ ಭಾಷೆಯಾಗಿರುತ್ತದೆ.

ಆ) ೩ನೇ ತರಗತಿಯಿಂದ ಕನ್ನಡೇತರರಿಗೆ ಕನ್ನಡವು ಐಚ್ಛಿಕ ವಿಷಯವಾಗಿರುತ್ತದೆ. ಇದನ್ನು ಸ್ವಪ್ರೇರಣೆಯಿಂದ ಮಾತ್ರ ಕಲಿಸಲಾಗುವುದು ಮತ್ತು ಈ ಬೋಧನೆಯಿಂದ ಬೇರೆ ವಿಷಯಗಳ ಕಲಿಕೆ ಅಥವಾ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಭಾಗವಹಿಸುವ ಶಾಲಾ ಚಟುವಟಿಕೆಗೆ ಯಾವುದೇ ಬಾಧಕವಾಗಬಾರದು. ವರ್ಷಾಂತ್ಯದಲ್ಲಿ ೩ನೇ ಮತ್ತು ೪ನೇ ತರಗತಿಗಳಲ್ಲಿ ಕನ್ನಡ ಭಾಷೆಗೆ ಯಾವುದೇ ಪರೀಕ್ಷೆಯಿರುವುದಿಲ್ಲ.

ಇ) ೫ನೇ ತರಗತಿಯಿಂದ ಅಂದರೆ, ಸಾಮಾನ್ಯ ಪದ್ಧತಿಯಂತೆ ದ್ವಿತೀಯ ಭಾಷೆಯನ್ನು ಕಲಿಸುವ ವ್ಯವಸ್ಥೆ ಎಲ್ಲಿದೆಯೋ ಅಲ್ಲಿಂದ ವಿದ್ಯಾರ್ಥಿ ಅನುಬಂಧ - ೧ರಲ್ಲಿ ತಿಳಿಸಿರುವ ಭಾಷೆಗಳಿಂದ ಆಯ್ಕೆ ಮಾಡಿದ ಪ್ರಥಮ ಭಾಷೆಯಾಗಿರದ ಭಾಷೆಯನ್ನು ದ್ವಿತೀಯ ಭಾಷೆಯಾಗಿ ಅಭ್ಯಾಸ ಮಾಡಬೇಕು. ಕನ್ನಡವನ್ನು ಪ್ರಥಮ ಭಾಷೆಯಾಗಿ ಅಭ್ಯಾಸ ಮಾಡದ ಮಗುವು, ಕನ್ನಡವನ್ನು ದ್ವಿತೀಯ ಭಾಷೆಯಾಗಿ ಕಲಿಯಬೇಕು ಎಂಬ ಷರತ್ತಿಗೆ ಇದು ಒಳಪಟ್ಟಿದೆ.

೫ನೆಯ ತರಗತಿಯಿಂದ ತೃತೀಯ ಭಾಷೆಯನ್ನು ಕಲಿಯಲು ಅವಕಾಶ ಕಲ್ಪಿಸಲಾಗುವುದು. ತೃತೀಯ ಭಾಷೆಯ ವಿದ್ಯಾರ್ಥಿಯು ಪ್ರಥಮ ಮತ್ತು ದ್ವಿತೀಯ ಭಾಷೆಯಾಗಿ ಅಭ್ಯಾಸ ಮಾಡಿದ ಭಾಷೆಯಾಗಿರಬಾರದು. ವಿದ್ಯಾರ್ಥಿ ಅಭ್ಯಾಸ ಮಾಡಬಹುದಾದ ತೃತೀಯ ಭಾಷೆಯ ವಿವರವನ್ನು ಅನುಬಂಧ - ೨ರಲ್ಲಿ ನೀಡಿದೆ.

ತೃತೀಯ ಭಾಷೆಯ ತರಗತಿಗಳಿಗೆ ಹಾಜರಾಗುವುದು ಮತ್ತು ಪರೀಕ್ಷೆ ತೆಗೆದುಕೊಳ್ಳುವುದು ಕಡ್ಡಾಯವಾಗಿದೆ. ಆದರೆ ತೃತೀಯ ಭಾಷೆಯ ಕಲಿಕೆಯನ್ನು ೫ ರಿಂದ ೭ನೇ ತರಗತಿಯವರೆಗೆ ಮುಂದುವರಿಸುತ್ತಾರೆ. ಆದರೆ ತೃತೀಯ ಭಾಷೆಯ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು ಕಡ್ಡಾಯವಲ್ಲ. ೫ರಿಂದ ೭ನೇ ತರಗತಿಗಳಲ್ಲಿ ತೃತೀಯ ಭಾಷೆಯಲ್ಲಿ ಪಡೆಯುವ ಅಂಕಗಳ ಆಧಾರದ ಮೇಲೆ ರ್‍ಯಾಂಕ್, ದರ್ಜೆ ಇತ್ಯಾದಿಗಳಲ್ಲಿ ಹೆಚ್ಚಿನ ಸ್ಥಾನ ನೀಡಲಾಗುವುದಿಲ್ಲ.

ಈ)ಪ್ರೌಢಶಾಲಾ ಹಂತದಲ್ಲಿ ಅಂದರೆ ೮ರಿಂದ ೧೦ನೇ ತರಗತಿವರೆಗೆ ಮೂರು ಭಾಷೆಗಳನ್ನು ಕಲಿಸಲಾಗುವುದು. ಪ್ರಥಮ ಭಾಷೆಯು ೧೨೫ ಅಂಕಗಳನ್ನು, ದ್ವಿತೀಯ ಭಾಷೆಯು ೧೦೦ ಅಂಕಗಳನ್ನು ಮತ್ತು ತೃತೀಯ ಭಾಷೆಯು ೧೦೦ ಅಂಕಗಳನ್ನು ಹೊಂದಿರುವುದು. ಇವುಗಳಲ್ಲಿ ಎರಡು ಭಾಷೆಗಳಲ್ಲಿ ಉತ್ತೀರ್ಣರಾಗುವುದು ಕಡ್ಡಾಯ ಹಾಗೂ ಎರಡು ಭಾಷೆಗಳಲ್ಲಿ ಒಂದು ಕನ್ನಡ ಭಾಷೆಯಾಗಿರತಕ್ಕದ್ದು.

ಉ) ೧೦ನೇ ತರಗತಿಯ ಅಂತ್ಯದಲ್ಲಿ ದ್ವಿತೀಯ ಮತ್ತು ತೃತೀಯ ಭಾಷೆಯ ಕಲಿಕೆ ಮಟ್ಟವು ಆ ಭಾಷೆಗಳನ್ನು ಪ್ರಥಮ ಭಾಷೆಯಾಗಿ ೬ ವರ್ಷ ಅಭ್ಯಾಸ ಮಾಡಿದಾಗ ಗಳಿಸುವ ಮಟ್ಟಕ್ಕೆ ಸಮನಾಗಿರಬೇಕು.

ಊ) ಕನ್ನಡ ಮಾತೃಭಾಷೆಯಲ್ಲದ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಪರೀಕ್ಷೆಯಲ್ಲಿ ಮತ್ತು ಹಿಂದಿ ಮಾತೃಭಾಷೆಯಲ್ಲದ ವಿದ್ಯಾರ್ಥಿಗಳಿಗೆ ಹಿಂದಿ ಭಾಷಾ ಪರೀಕ್ಷೆಯಲ್ಲಿ ಕೃಪಾಂಕ ನೀಡತಕ್ಕದ್ದು. ಈ ಸೌಲಭ್ಯವು ಆದೇಶ ಹೊರಡಿಸಿದ ದಿನಾಂಕದಿಂದ ೧೦ ವರ್ಷಗಳವರೆಗೆ ದೊರೆಯುವುದು.

೨) ೧೯೯೪-೯೫ನೇ ಶೈಕ್ಷಣಿಕ ವರ್ಷದಿಂದ ರಾಜ್ಯಸರ್ಕಾರದಿಂದ ಅಂಗೀಕೃತವಾದ ಎಲ್ಲ ಶಾಲೆಗಳಲ್ಲಿ ೧ ರಿಂದ ೪ನೇ ತರಗತಿವರೆಗಿನ ಶಿಕ್ಷಣಮಾಧ್ಯಮವು ಮಾತೃಭಾಷೆ ಅಥವಾ ಕನ್ನಡ ಭಾಷೆಯೇ ಆಗತಕ್ಕದ್ದೆಂದು ಆದೇಶಿಸಲಾಗಿದೆ.

೩) ೧೯೯೪-೯೫ನೇ ಶೈಕ್ಷಣಿಕ ವರ್ಷದಲ್ಲಿ ೧ನೇ ತರಗತಿಗೆ ದಾಖಲಾಗುವ ವಿದ್ಯಾರ್ಥಿಗಳಿಗೆ ಮಾತೃಭಾಷೆ ಅಥವಾ ಕನ್ನಡ ಭಾಷಾಮಾಧ್ಯಮದಲ್ಲಿಯೇ ಬೋಧಿಸತಕ್ಕದ್ದು.

೪) ಆದರೂ ೧೯೯೪-೯೫ನೇ ಶೈಕ್ಷಣಿಕ ವರ್ಷದಲ್ಲಿ ೨, ೩ ಮತ್ತು ೪ನೇ ತರಗತಿಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಅವರು ಈಗ ಕಲಿಯುತ್ತಿರುವ ಭಾಷಾ ಮಾಧ್ಯಮದಲ್ಲಿಯೇ ಬೋಧಿಸಲು ಶಾಲೆಗಳಿಗೆ ಅನುಮತಿ ನೀಡಬಹುದು.

೫) ವಿದ್ಯಾರ್ಥಿಗಳು ೫ನೇ ತರಗತಿಯಿಂದ ತಮ್ಮ ಇಚ್ಛೆಯಂತೆ ಇಂಗ್ಲಿಷ್ ಅಥವಾ ಬೇರೆ ಯಾವುದೇ ಭಾಷಾ ಮಾಧ್ಯಮಕ್ಕೆ ಬದಲಾವಣೆ ಮಾಡಿಕೊಳ್ಳಬಹುದು.

೬) ಇಂಗ್ಲಿಷ್ ಮಾತೃಭಾಷೆಯಾಗಿರುವ ವಿದ್ಯಾರ್ಥಿಗಳಿಗೆ ಮಾತ್ರ ಈಗ ಇರುವ ಅಂಗೀಕೃತ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ೧ ರಿಂದ ೪ನೇ ತರಗತಿಗಳಲ್ಲಿ ಆಂಗ್ಲ ಮಾಧ್ಯಮಗಳಲ್ಲಿ ವ್ಯಾಸಂಗ ಮಾಡಲು ಅನುಮತಿ ನೀಡಬಹುದು.

೭) ಈಗ ಇರುವ ಅನಧಿಕೃತ ಶಾಲೆಗಳನ್ನು ಸಕ್ರಮಗೊಳಿಸುವ ಪ್ರಸ್ತಾವನೆಯನ್ನು ಮೇಲೆ ವಿಶದಪಡಿಸಿದ ಖಂಡಿಕೆ ೧ರಿಂದ ೬ವರೆಗಿನ ನೀತಿಯನ್ವಯವೇ ಸರ್ಕಾರ ಪರಿಶೀಲಿಸುವುದು. ಶಿಕ್ಷಣ ಸಂಹಿತೆಯ ನಿಬಂಧನೆಗಳನ್ನು ಪೂರೈಸುವ ಮತ್ತು ಸರಕಾರದ ಪ್ರಚಲಿತ ನೀತಿಗಳಿಗನುಗುಣವಾಗಿರುವ ಶಾಲೆಗಳ ಪ್ರಸ್ತಾವನೆಯನ್ನು ಜಿಲ್ಲಾ ಪಂಚಾಯತ್‌ಗಳು ಸಾರ್ವಜನಿಕ ಶಿಕ್ಷಣ ಆಯುಕ್ತರ ಮೂಲಕ ಸರ್ಕಾರಕ್ಕೆ ಸಲ್ಲಿಸುವ ವರದಿಯ ಶಿಫಾರಸ್ಸನ್ನು ಆಧರಿಸಿ ಸರ್ಕಾರವು ಪರಿಶೀಲಿಸುವುದು.

೮) ಮೇಲ್ಕಂಡ ನಿಬಂಧನೆಗಳನ್ನು ಪೂರೈಸದಿರುವ ಎಲ್ಲಾ ಅನಧಿಕೃತ ಶಾಲೆಗಳನ್ನು ಮುಚ್ಚಲು ಆದೇಶಿಸಲಾಗಿದೆ.

೯) ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ (ಸಿ. ಬಿ. ಎಸ್. ಇ) ಅಥವಾ ಇಂಡಿಯನ್ ಕೌನ್ಸಿಲ್ ಆಫ್ ಸೆಕೆಂಡರಿ ಎಜುಕೇಷನ್ (ಐ. ಸಿ. ಎಸ್. ಇ) ಸಂಯೋಜಿತ ಶಾಲೆಗಳನ್ನು ತೆರೆಯಲು ಈ ಕೆಳಕಂಡ ಅಂಶಗಳನ್ನು ಪೂರೈಸುವ ಶಾಲೆಗಳಿಗೆ ಮಾತ್ರ ಸರ್ಕಾರದ ಮಟ್ಟದಲ್ಲಿ ನಿರಾಕ್ಷೇಪಣಾ (ಎನ್. ಓ. ಸಿ) ಪತ್ರವನ್ನು ನೀಡಲು ಪರಿಗಣಿಸಲಾಗುವುದು.

(ಅ) ರಾಜ್ಯದಿಂದ ರಾಜ್ಯಕ್ಕೆ ವರ್ಗಾವಣೆಗೆ ಬದ್ಧರಾದ ಅಖಿಲ ಭಾರತ ಸೇವೆ, ಕೇಂದ್ರ ಸರ್ಕಾರದ ಸೇವೆ ಮತ್ತು ಕೇಂದ್ರ ಸರಕಾರದ ಉದ್ದಿಮೆಗಳಿಗೆ ಸೇರಿದ ಪೋಷಕರ ಮಕ್ಕಳಿದ್ದಲ್ಲಿ (ಇದನ್ನು ಪುಷ್ಟೀಕರಿಸಲು ಸಂಬಂಧಪಟ್ಟ ಇಲಾಖೆ / ಸಂಸ್ಥೆಗಳಿಂದ ದೃಢೀಕರಣ ಪತ್ರ ಸಲ್ಲಿಸುವುದು);

(ಆ) ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಶಾಖೆಗಳನ್ನು ಹೊಂದಿದ ಹಾಗೂ ಅಂತರರಾಜ್ಯ ವರ್ಗಾವಣೆಗೆ ಒಳಪಡುವ ಬ್ಯಾಂಕ್‌ಗಳು, ಸಂಸ್ಥೆಗಳು (ಫರ್ಮ್‌ಗಳು)

ಅಥವಾ ವಾಣಿಜ್ಯ ಸಂಸ್ಥೆಗಳಲ್ಲಿ ಕೆಲಸ ಮಾಡುವ ಪೋಷಕರ ಮಕ್ಕಳಿದ್ದಲ್ಲಿ (ಇದನ್ನು ಪುಷ್ಟೀಕರಿಸಲು ಸಂಬಂಧಪಟ್ಟ ಬ್ಯಾಂಕ್/ ಸಂಸ್ಥೆಗಳಿಂದ ದೃಢೀಕರಣ ಪತ್ರ ಸಲ್ಲಿಸುವುದು);

(೯) ಸರಕಾರವು ಕಾಲಕಾಲಕ್ಕೆ ಹೊರಡಿಸಿರುವ / ಹೊರಡಿಸುವ ಸೂಚನೆಗಳನ್ನು ಪಾಲಿಸಿರಬೇಕು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ. ಎಂ. ಪೊನ್ನಪ್ಪ
ಸರ್ಕಾರದ ಕಾರ್ಯದರ್ಶಿ - ೨
ಶಿಕ್ಷಣ ಇಲಾಖೆ

ವಿ.ಸೂ. ಕೇಂದ್ರ ಸರ್ಕಾರವು ಸರ್ವ ಶಿಕ್ಷಣ ಅಭಿಯಾನದನ್ವಯ ೧ರಿಂದ ೫ನೇ ತರಗತಿವರೆಗೆ ಕಿರಿಯ ಪ್ರಾಥಮಿಕ ಹಂತವೆಂದು ಪರಿಗಣಿಸಿದ್ದನ್ನು ರಾಜ್ಯ ಸರಕಾರ ಒಪ್ಪಿಕೊಂಡ ಮೇರೆಗೆ ೨೦೦೩ರಲ್ಲಿ ೧ರಿಂದ ೫ನೇ ತರಗತಿವರೆಗೆ ಮಾತೃಭಾಷೆ ಅಥವಾ ಕನ್ನಡ ಭಾಷೆ ಶಿಕ್ಷಣ ಮಾಧ್ಯಮವಾಗಬೇಕೆಂದು ಆದೇಶವನ್ನು ಮಾರ್ಪಡಿಸಲಾಗಿದೆ.

■

ಅಧ್ಯಾಯ-೧೦

ಚಂಪಾ ವರದಿ

ಮಧ್ಯಂತರ ವರದಿ – ೧೯೯೬

ಪ್ರಸ್ತಾವನೆ

ಶಿಕ್ಷಣದಲ್ಲಿ ಮಾಧ್ಯಮದ ಪ್ರಶ್ನೆ ಮುಖ್ಯವಾದುದು ಮತ್ತು ಮೂಲಭೂತವಾದುದು. ಶೈಕ್ಷಣಿಕವಾಗಿ ಸ್ವೀಕೃತವಾದ ವಿಚಾರವೆಂದರೆ ತಾಯ್ನುಡಿ ಅಥವಾ ಮಗುವಿನ ಪರಿಸರದ ಭಾಷೆಯೇ ಶಿಕ್ಷಣ ಮಾಧ್ಯಮಕ್ಕೆ ಸೂಕ್ತ. ಇದೇ ಮಗುವಿನ ಸಹಜ ಚಿಂತನೆಯ, ಕಲ್ಪನೆಯ ಭಾಷೆ. ಯಾವುದೇ ಭಾಷೆ ಅರ್ಥಗ್ರಹಿಕೆಗಾಗಿ ತಕ್ಕುದಾದುದಾಗಿರ ಬಹುದಾದರೂ ನಾವು ಬೆಳೆದು ಬಂದಿರುವ ಭಾಷೆ ಹಾಗೂ ಅದರ ಪರಿಸರವೇ ನಮ್ಮ ಚಿಂತನೆ ಹಾಗೂ ಅಭಿವ್ಯಕ್ತಿಗೆ ಹೇಳಿ ಮಾಡಿಸಿದ್ದು.

ಕರ್ನಾಟಕ ಮಟ್ಟಿಗೆ ಹೇಳುವುದಾದರೆ ಸ್ವಾತಂತ್ರ್ಯಪೂರ್ವದಲ್ಲೇ ಶಾಲೆಗಳಲ್ಲಿ ಕನ್ನಡ ಬಳಕೆಯಲ್ಲಿದ್ದಿತು. ಡೆಪ್ಯೂಟಿ ಚೆನ್ನಬಸಪ್ಪ, ಉತ್ತಂಗಿ ಚೆನ್ನಪ್ಪ ಮುಂತಾದ ವಿದ್ವಾಂಸರು ಕನ್ನಡ ಮಾಧ್ಯಮ ಶಾಲೆಗಳ ಪ್ರಾರಂಭಕ್ಕೆ ಹಾಗೂ ಏಳಿಗೆಗೆ ಕಾರಣೀಭೂತರಾದರು. ಸುಮಾರು ೪೦ ವರ್ಷಗಳ ಹಿಂದೆಯೇ ಕರ್ನಾಟಕ ಪ್ರೌಢಶಾಲೆಗಳಲ್ಲಿ ಕನ್ನಡ ಮಾಧ್ಯಮ ಜಾರಿಗೆ ಬಂದಿತು. ಶಿಕ್ಷಣ ಇಲಾಖೆಯ ಆಗಿನ ಮುಖ್ಯಾಧಿಕಾರಿಗಳಾದ ಶ್ರೀ ಎನ್. ಎಸ್. ಸುಬ್ಬರಾವ್ ಈ ನಿಯಮವನ್ನು ಜಾರಿಗೊಳಿಸಿದರು.

ಆದರೆ, ಸ್ವಾತಂತ್ರ್ಯಾನಂತರ ಕೆಲವೊಂದು ಶಾಲೆಗಳಲ್ಲಿ ಇಂಗ್ಲೀಷ್ ಮಾಧ್ಯಮ ತರಬೇತಿಗಳನ್ನು ಪ್ರಾರಂಭಿಸುವ ಪ್ರವೃತ್ತಿ ಆರಂಭವಾಗಿ ಒಂದೆರಡು ದಶಕಗಳಲ್ಲೇ ಅದು ವ್ಯಾಪಕವಾಗುತ್ತ ಬಂದಿತು. ಈ ಹಿನ್ನೆಲೆಯಲ್ಲಿ ದೇಶೀಯ ಭಾಷೆಗಳೇ ಶಿಕ್ಷಣ ಮಾಧ್ಯಮವಾಗಬೇಕೆಂಬ ಒತ್ತಾಯ ಕೇಳಿಬರತೊಡಗಿತು. ೧೯೮೦ರ ದಶಕದಲ್ಲಿ ಡಾ|| ವಿ. ಕೃ. ಗೋಕಾಕರ ಅಧ್ಯಕ್ಷತೆಯಲ್ಲಿ ಸಮಿತಿಯು ನೀಡಿದ ವರದಿ ಶಿಕ್ಷಣ ಹಾಗೂ ಭಾಷಾ ನೀತಿಯ ಬಗ್ಗೆ ಸರ್ಕಾರಿ ಮಟ್ಟದಲ್ಲಿ ಚಿಂತನೆಗೆ ಹೆಚ್ಚಿತು.

ವಾಸ್ತವವಾಗಿ, ಅದು ಪ್ರೌಢಶಾಲೆಯಲ್ಲಿ ಕಲಿಯುವ ಭಾಷೆಗಳು ಏನಿರಬೇಕೆಂಬ ಬಗ್ಗೆ ನೀಡಿದ ವರದಿಯಾದರೂ ಅದರಲ್ಲಿ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯು ಶಿಕ್ಷಣ ಮಾಧ್ಯಮವಾಗಬೇಕೆಂದು ಪ್ರತಿಪಾದಿಸಿ, ಅದಕ್ಕೆ ಪೂರಕವಾಗಿ ಕರ್ನಾಟಕದಲ್ಲಿ ಕಲಿಯುವವರೆಲ್ಲರಿಗೂ ಕನ್ನಡದಲ್ಲಿ ಸಮಾನ ಪ್ರಭುತ್ವ ಇರಬೇಕೆಂದು ಕನ್ನಡಕ್ಕೆ ಪ್ರಥಮ ಭಾಷೆಯ ಸ್ಥಾನ ನೀಡಿ ಭಾಷಾ ಬೋಧನೆಗೆ ಸಂಬಂಧಪಟ್ಟಂತೆ ಸಲಹೆಗಳನ್ನು ನೀಡಲಾಯಿತು.

ಇದನ್ನು ಆಧರಿಸಿ ದಿನಾಂಕ ೩೦ನೇ ಏಪ್ರಿಲ್ ೧೯೮೨ರಂದು ಪ್ರೌಢಶಾಲಾ ಹಂತದಲ್ಲಿ ಕನ್ನಡವು ಪ್ರಥಮ ಭಾಷೆಯಾಗಬೇಕೆಂದು ನಿಗದಿಪಡಿಸಿ, ಸರ್ಕಾರವು ಆದೇಶವೊಂದನ್ನು ಹೊರಡಿಸಿತು.

ರಾಜ್ಯ ಉಚ್ಚನ್ಯಾಯಾಲಯದಲ್ಲಿ ಈ ಆದೇಶವನ್ನು ಕೆಲವರು ಪ್ರಶ್ನಿಸಿದರು. ಆಗ ನ್ಯಾಯಾಲಯವು ಪ್ರಾಥಮಿಕ ಶಿಕ್ಷಣದ ಸಾಮಾನ್ಯ ಮಾದರಿಯಂತೆ ಮಾತೃಭಾಷೆಯ ಜೊತೆಗೆ ಮತ್ತೊಂದು ಭಾಷೆಯ ಕಲಿಕೆಯನ್ನು ಕಡ್ಡಾಯಗೊಳಿಸಿದ ಪ್ರಾಥಮಿಕ ತರಗತಿಯಿಂದ ಎರಡು ಭಾಷೆಗಳ ಪೈಕಿ ಒಂದನ್ನಾಗಿ ಕನ್ನಡವನ್ನು ಬೋಧಿಸಲು ಮತ್ತು ಪ್ರೌಢಶಾಲಾ ಹಂತದಲ್ಲಿ ಕನ್ನಡವನ್ನು ಮೂರು ಭಾಷೆಗಳ ಪೈಕಿ ಒಂದು ಕಡ್ಡಾಯ ಭಾಷೆಯನ್ನಾಗಿ ಅಳವಡಿಸಲು ಸೂಕ್ತ ಆದೇಶ ಅಥವಾ ನಿಯಮವನ್ನು ರೂಪಿಸಿ, ಅದನ್ನು ಕನ್ನಡ ಮಾತೃಭಾಷೆಯಾದ ಎಲ್ಲರಿಗೂ ಮತ್ತು ರಾಜ್ಯದ ಶಾಶ್ವತ ನಿವಾಸಿಗಳಾದ ಮತ್ತು ಶಾಶ್ವತ ನಿವಾಸಿಗಳಾಗುವ ಭಾಷಾ ಅಲ್ಪಸಂಖ್ಯಾತರಿಗೂ ಅನ್ವಯಿಸಲು ರಾಜ್ಯ ಸರ್ಕಾರಕ್ಕೆ ಸ್ವಾತಂತ್ರ್ಯ ನೀಡಿತ್ತು.

ಉಚ್ಚನ್ಯಾಯಾಲಯದ ಈ ಆದೇಶದ ವಿರುದ್ಧ ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಆದರೂ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಕಾಯ್ದಿರಿಸಿ ರಾಜ್ಯ ಸರ್ಕಾರವು ದಿನಾಂಕ ೧೯ನೇ ಜೂನ್ ೧೯೮೯ರ ಆದೇಶದಲ್ಲಿ ಭಾಷಾನೀತಿಯನ್ನು ನಿರೂಪಿಸಿ ಆದೇಶ ಹೊರಡಿಸಿತು.

ಈ ಮಧ್ಯೆ ಸರ್ಕಾರವು ಅನಧಿಕೃತ ಆಂಗ್ಲ ಮಾಧ್ಯಮ ಶಾಲೆಗಳ ಸಮಸ್ಯೆ ಮತ್ತು ಪ್ರಾಥಮಿಕ ಹಂತದಲ್ಲಿ ಇಂಗ್ಲೀಷ್ ಮಾಧ್ಯಮ ಹೊಂದುವ ಬಗ್ಗೆ ಪರಿಶೀಲಿಸಿ, ವರದಿ ಸಲ್ಲಿಸಲು ಡಾ॥ ಹೆಚ್. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತು. ಈ ಸಮಿತಿಯು ಒಂದರಿಂದ ನಾಲ್ಕನೇ ತರಗತಿಯವರೆಗೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ(ಅಂದರೆ ಕನ್ನಡ)ಯೇ ಶಿಕ್ಷಣ ಮಾಧ್ಯಮವಾಗಿರಬೇಕೆಂದು ಶಿಫಾರಸ್ಸು ಮಾಡಿತು.

ಅದೇ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯವು ದಿನಾಂಕ ೮ನೇ ಡಿಸೆಂಬರ್ ೧೯೯೩ರ ತೀರ್ಪಿನಲ್ಲಿ ರಾಜ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಮತ್ತು ಉಚ್ಚ ನ್ಯಾಯಾಲಯದ ಆದೇಶಾನುಸಾರ ಹೊರಡಿಸಿದ ದಿನಾಂಕ ೧೯ನೇ ಜೂನ್ ೧೯೮೯ರ

ಸರ್ಕಾರಿ ಆದೇಶದ ಸಿಂಧುತ್ವವನ್ನು ಎತ್ತಿ ಹಿಡಿದಿದೆ. ಮುಂದುವರೆದು ಭಾಷಾ ನೀತಿಯನ್ನು ಹೇಗೆ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದು ರಾಜ್ಯಕ್ಕೆ ತಿಳಿದಿದೆ ಎಂದು ಹಾಗೂ ಇದರಲ್ಲಿ ನ್ಯಾಯಾಲಯವು ಮಧ್ಯಪ್ರವೇಶಿಸಬಾರದು ಎಂದು ತೀರ್ಪಿತ್ತಿದೆ.

ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನ ಹಿನ್ನೆಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಅನುಸರಿಸಬೇಕಾದ ಭಾಷಾನೀತಿಯನ್ನು ಮತ್ತು ಪ್ರಾಥಮಿಕ ಹಂತದಲ್ಲಿ ಅನುಸರಿಸಬೇಕಾದ ಶಿಕ್ಷಣ ಮಾಧ್ಯಮ ನೀತಿಯನ್ನು ಕುರಿತು ಸಮಗ್ರವಾದ ಆದೇಶ ಹೊರಡಿಸುವ ಅಗತ್ಯವಿದೆ. ಅದರಂತೆ ದಿನಾಂಕ ೨೨ನೇ ಏಪ್ರಿಲ್ ೧೯೯೪ರ ಆದೇಶದಲ್ಲಿ ಪರಿಷ್ಕೃತ ಭಾಷಾನೀತಿಯನ್ನು ಪ್ರಕಟಿಸಲಾಯಿತು. ಭಾಷಾನೀತಿಯ ಕೆಲವು ಅಂಶಗಳು ದಿನಾಂಕ ೧೯ನೇ ಜೂನ್ ೧೯೮೯ಕ್ಕೆ ಮುಂಚೆ ಪ್ರಾರಂಭಿಸಿದ ಶಾಲೆಗಳಲ್ಲಿ ಅನ್ವಯಿಸುವುದಿಲ್ಲವೆಂದು ಈ ಆದೇಶದಲ್ಲಿ ತಿಳಿಸಲಾಗಿತ್ತು. ಈ ನಿರ್ಬಂಧವನ್ನು ತೆಗೆದುಹಾಕಿ ಭಾಷಾ ನೀತಿಯನ್ನು ಎಲ್ಲಾ ಅಂಗೀಕೃತ ಶಾಲೆಗಳಿಗೂ ಅನ್ವಯಿಸುವ ಅಗತ್ಯವಿದೆಯೆಂದು ಸರ್ಕಾರ ಭಾವಿಸಿ ೨೯ನೇ ಏಪ್ರಿಲ್ ೧೯೯೪ರಂದು ಮತ್ತೊಂದು ಆದೇಶ ಹೊರಡಿಸಿತು.

ಈ ಆದೇಶ ಜಾರಿಗೆ ಬಂದ ನಂತರ ೧೯೮೯ಕ್ಕೆ ಮುಂಚೆ ಪ್ರಾರಂಭವಾದ ಇಂಗ್ಲೀಷ್ ಮಾಧ್ಯಮ ಶಾಲೆಗಳು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಈ ಆದೇಶವನ್ನು ಪ್ರಶ್ನಿಸಿದವು. ಆಗ ರಾಜ್ಯದ ಉಚ್ಚ ನ್ಯಾಯಾಲಯವು ಸರ್ವೋಚ್ಚ ನ್ಯಾಯಾಲಯದಲ್ಲಿ ಸಹ್ಯಾದ್ರಿ ಶಿಕ್ಷಣ ಸಂಸ್ಥೆಗೆ ಸಂಬಂಧಪಟ್ಟ ದಾವೆಯಲ್ಲಿ ತೀರ್ಪು ಬರುವವರೆಗೆ ೧೯೮೯ಕ್ಕೆ ಮುಂಚೆ ಪ್ರಾರಂಭವಾದ ಶಾಲೆಗಳು ಹಿಂದಿನಂತೆಯೇ ಮುಂದುವರೆಯಲು ಅವಕಾಶ ನೀಡಿತು.

ಆದರೆ, ಈ ಆದೇಶ ಜಾರಿಗೆ ಬಂದ ನಂತರ ರಾಜ್ಯಾದ್ಯಂತ ಅಸ್ತಿತ್ವದಲ್ಲಿದ್ದ ಸಾವಿರಾರು ಅನಧಿಕೃತ ಇಂಗ್ಲೀಷ್ ಮಾಧ್ಯಮ ಶಾಲೆಗಳು ಒಂದರಿಂದ ನಾಲ್ಕನೆಯ ತರಗತಿಯವರೆಗೆ ಮಾತೃಭಾಷೆ / ಪ್ರಾದೇಶಿಕ ಭಾಷಾ ಮಾಧ್ಯಮವನ್ನು ಜಾರಿಗೆ ತರುವುದಾಗಿ ಮುಚ್ಚಳಿಕೆ ಬರೆದುಕೊಟ್ಟು ಸರ್ಕಾರದಿಂದ ಮಾನ್ಯತೆ ಪಡೆದವು.

ಆದರೆ, ಈ ಶಾಲೆಗಳು ಇಂಗ್ಲೀಷ್ ಮಾಧ್ಯಮದಲ್ಲೇ ಬಹುತೇಕ ಶಿಕ್ಷಣ ನೀಡುತ್ತಿರುವುದು ಎಲ್ಲರಿಗೂ ತಿಳಿದಿದೆ. ಇಂತಹ ಎಲ್ಲಾ ಶಾಲೆಗಳಿಗೂ ಶಿಕ್ಷಣ ಇಲಾಖೆಯ ಸಿಬ್ಬಂದಿ ಸದಾಕಾಲ ಭೇಟಿ ನೀಡುತ್ತಲೇ ಇರುವುದು ವ್ಯಾವಹಾರಿಕವಾಗಿ ಕಾರ್ಯಸಾಧ್ಯವಲ್ಲ. ಜೊತೆಗೆ ಇಲಾಖೆಯ ಸಿಬ್ಬಂದಿ ಭ್ರಷ್ಟರಾಗಿದ್ದರೆ ಇಂತಹ ಶಾಲೆಗಳಿಗೆ ನಿರಾತಂಕ ಪರಿಸ್ಥಿತಿ ಬೇರೆ. ಇದರಿಂದಾಗಿ ಪ್ರಾಥಮಿಕ ಶಿಕ್ಷಣ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲೇ ಇರಬೇಕೆಂಬ ಸರ್ಕಾರದ ನೀತಿ ಕೇವಲ ಕಾಗದದ ಮೇಲೆ ಉಳಿಯಿತು.

ಇದಲ್ಲದೇ ಪ್ರಾಥಮಿಕ ಶಿಕ್ಷಣವನ್ನು ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಿಕ್ಷಣ ಎಂಬ ವಿಂಗಡಣೆಯನ್ನು ಆಧರಿಸಿ, ಖಾಸಗಿ ಶಾಲೆಗಳಲ್ಲಿ ೫ನೇ ತರಗತಿಯಿಂದ ಆಂಗ್ಲ ಮಾಧ್ಯಮ ತರಗತಿಗಳಿಗೆ ಅವಕಾಶ ಕೊಡುವ ನೀತಿಯನ್ನು ಸರ್ಕಾರ ಪ್ರಾರಂಭಿಸಿತು. ಅದರ ವಿಸ್ತರಣೆಯಾಗಿ ಸರ್ಕಾರಿ ಶಾಲೆಗಳಲ್ಲೂ ೧೯೯೮-೯೯ನೇ ಸಾಲಿನಿಂದ ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಲು ಹೊರಟಿತು.

೨

ಈ ಅವೈಜ್ಞಾನಿಕ ನೀತಿಯ ಬಗ್ಗೆ ನಾಡಿನ ಬುದ್ಧಿಜೀವಿಗಳಿಂದ ವ್ಯಕ್ತವಾದ ಪ್ರತಿಭಟನೆಯ ಹಿನ್ನೆಲೆಯಲ್ಲಿ, ಶೈಕ್ಷಣಿಕ ರಂಗದಲ್ಲಿ ಕನ್ನಡಕ್ಕೆ ಆದ್ಯತೆ ಮತ್ತು ಪ್ರೋತ್ಸಾಹ ಸಿಗುವಂತೆ ಕ್ರಮಗಳನ್ನು ಕೈಗೊಳ್ಳುವ ಅಧಿಕಾರ ಹಾಗೂ ಜವಾಬ್ದಾರಿಯನ್ನು ಕರ್ನಾಟಕ ಸರ್ಕಾರವು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಿಕೊಟ್ಟ ಹಿನ್ನೆಲೆಯಲ್ಲಿ ಆಗಸ್ಟ್ ೧೧, ೧೯೯೮ರಂದು ರಾಜ್ಯಮಟ್ಟದ ಸಮಾಲೋಚನಾ ಸಭೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕರೆಯಲಾರಂಭಿಸಿತು. ಈ ಸಭೆಯಲ್ಲಿ ಸನ್ಮಾನ್ಯ ಸಚಿವರಾದ ಹೆಚ್. ಜಿ. ಗೋವಿಂದೇಗೌಡ ಹಾಗೂ ಬಸವರಾಜ ಪಾಟೀಲ ಅಟ್ಟೂರ್ ಅವರು ಉಪಸ್ಥಿತರಿದ್ದರು.

ಮಾನ್ಯ ಸಚಿವರಾದ ಹೆಚ್. ಜಿ. ಗೋವಿಂದೇಗೌಡರು ಕರ್ನಾಟಕ ರಾಜ್ಯದ ಶೈಕ್ಷಣಿಕ ಕ್ಷೇತ್ರದ ವಿಷಯಗಳಿಗೆ ಸಂಬಂಧಿಸಿದಂತೆ, ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ನೀಡಲು ಉಚ್ಚ ಮಟ್ಟದ ಶಿಕ್ಷಣ ತಜ್ಞರ ಸಲಹಾ ಸಮಿತಿಯನ್ನು ರಚಿಸಬೇಕೆಂದು ಅದರ ಶಿಫಾರಸ್ಸುಗಳ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಬದ್ಧವಾಗಿರುವುದೆಂದು ಆಶ್ವಾಸನೆ ನೀಡಿದರು.

ಅದರಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನೇತೃತ್ವದಲ್ಲಿ ೧೨ ಜನ ಸದಸ್ಯರನ್ನೊಳಗೊಂಡ ಉನ್ನತ ಮಟ್ಟದ ಶಿಕ್ಷಣ ತಜ್ಞರ ಸಲಹಾ ಸಮಿತಿಯೊಂದನ್ನು ಈ ಕೆಳಗಿನಂತೆ ಆಗಸ್ಟ್ ೧೨, ೧೯೯೮ರಂದು ಅಧಿಕೃತವಾಗಿ ರಚಿಸಲಾಯಿತು.

ಪ್ರೊ. ಚಂದ್ರಶೇಖರ ಪಾಟೀಲ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು	ಸಲಹಾ ಸಮಿತಿಯ ಅಧ್ಯಕ್ಷರು
ಡಾ॥ ಎಂ. ಐ. ಸವದತ್ತಿ ಯುಜಿಸಿ ಸದಸ್ಯರು ಮತ್ತು ಮಂಗಳೂರು ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳು	ಸಲಹಾ ಸಮಿತಿಯ ಸದಸ್ಯರು
ಡಾ॥ ಎಂ. ಎಂ. ಕಲಬುರ್ಗಿ ಕನ್ನಡ ವಿಶ್ವವಿದ್ಯಾಲಯ ಕುಲಪತಿಗಳು, ಹಂಪಿ	ಸಲಹಾ ಸಮಿತಿಯ ಸದಸ್ಯರು

ಶ್ರೀ ಪ್ರಭಾಕರ ರಾಣೆ ಕರ್ನಾಟಕ ಸರ್ಕಾರದ ಮಾಜಿ ಸಚಿವರು	ಸಲಹಾ ಸಮಿತಿಯ ಸದಸ್ಯರು
ಡಾ|| ಬಿ. ವಿ. ವಿವೇಕ ರೈ ಅಧ್ಯಕ್ಷರು, ತುಳು ಸಾಹಿತ್ಯ ಅಕಾಡೆಮಿ	ಸಲಹಾ ಸಮಿತಿಯ ಸದಸ್ಯರು
ಡಾ|| ಸ. ಜ. ನಾಗಲೋಟಿಮಠ ಸಂಚಾಲಕರು, ವಿಜ್ಞಾನ ವಸ್ತುಭಂಡಾರ, ಬೆಳಗಾವಿ	ಸಲಹಾ ಸಮಿತಿಯ ಸದಸ್ಯರು
ಶ್ರೀ ಶಿವಶಂಕರ ಹಿರೇಮಠ ನಿವೃತ್ತ ಶಿಕ್ಷಣ ಅಧಿಕಾರಿಗಳು, ಧಾರವಾಡ	ಸಲಹಾ ಸಮಿತಿಯ ಸದಸ್ಯರು
ಶ್ರೀ ರಂಜಾನ ದರ್ಗಾ ಪತ್ರಕರ್ತರು.	ಸಲಹಾ ಸಮಿತಿಯ ಸದಸ್ಯರು
ಪ್ರೊ. ವಿಘ್ನೇಶ ಎನ್. ಭಟ್ ಪ್ರಾಧ್ಯಾಪಕರು, ಕುವೆಂಪು ವಿಶ್ವವಿದ್ಯಾಲಯ	ಸಲಹಾ ಸಮಿತಿಯ ಸದಸ್ಯರು
ಶ್ರೀ ಸ. ರ. ಸುದರ್ಶನ ಕಾರ್ಯದರ್ಶಿ, ಕನ್ನಡ ಕ್ರಿಯಾ ಸಮಿತಿ, ಮೈಸೂರು	ಸಲಹಾ ಸಮಿತಿಯ ಸದಸ್ಯರು
ಶ್ರೀಮತಿ ಹೇಮಲತಾ ಮಹಿಷಿ ನ್ಯಾಯವಾದಿಗಳು	ಸಲಹಾ ಸಮಿತಿಯ ಸದಸ್ಯರು
ಶ್ರೀ ಟಿ. ವಿ. ಶ್ರೀನಾಥ ಶಾಸ್ತ್ರಿ ಪ್ರಧಾನ ಕಾರ್ಯದರ್ಶಿ, ಕನ್ನಡ ಗಣಕ ಪರಿಷತ್ತು ಬೆಂಗಳೂರು	ಸಲಹಾ ಸಮಿತಿಯ ಸದಸ್ಯರು
ಶ್ರೀಮತಿ ಬಿ. ಟಿ. ಲಲಿತಾ ನಾಯಕ್ ಮಾಜಿ ಸಚಿವರು ಮತ್ತು ಶಾಸಕರು	ಸಲಹಾ ಸಮಿತಿಯ ಸದಸ್ಯರು

ಈ ಸಮಿತಿಯು ಸಭೆ ಸೇರಿ ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಶಿಕ್ಷಣ ಮಾಧ್ಯಮ ಹಾಗೂ ಭಾಷಾ ಬೋಧನೆಯ ಬಗ್ಗೆ ನಿರ್ದಿಷ್ಟವಾದ ನೀತಿ ಏನಿರಬೇಕೆಂಬ ಬಗ್ಗೆ ವ್ಯಾಪಕವಾಗಿ ಚರ್ಚಿಸಿತು. ಆದರೆ, ೧೯೯೯-೨೦೦೦ದ ಸಾಲಿನ ಶೈಕ್ಷಣಿಕ ವರ್ಷವು ಸನಿಹದಲ್ಲಿರುವುದರಿಂದ ಸರ್ಕಾರ ಶೀಘ್ರವಾಗಿ ಶಿಕ್ಷಣ ಮಾಧ್ಯಮ ಹಾಗೂ ಭಾಷಾ ಕಲಿಕೆ ಬಗ್ಗೆ ಸ್ಪಷ್ಟ ಆದೇಶವನ್ನು ಹೊರಡಿಸಬೇಕೆಂಬ ಉದ್ದೇಶದಿಂದ ಮಧ್ಯಂತರ ವರದಿಯೊಂದನ್ನು ಸರ್ಕಾರಕ್ಕೆ ಸಲ್ಲಿಸುವುದು ಸೂಕ್ತವೆಂದು ತೀರ್ಮಾನಿಸಿ, ಕೆಳಕಂಡಂತೆ ಶಿಫಾರಸ್ಸುಗಳನ್ನು ಮಾಡಿರುತ್ತದೆ.

ಶಿಫಾರಸು ೧

ಕರ್ನಾಟಕ ರಾಜ್ಯ ಸರ್ಕಾರವು ಶಿಕ್ಷಣ ಮಾಧ್ಯಮ ಮತ್ತು ಭಾಷಾ ಬೋಧನೆ ಕುರಿತಂತೆ ಒಂದು ಸ್ಪಷ್ಟವಾದ ಸಮಗ್ರ ನೀತಿಯನ್ನು ಪ್ರಕಟಿಸಬೇಕು. ನಿರ್ದಿಷ್ಟ ಕಾಲಮಿತಿಯೊಳಗೆ (ಹತ್ತು ವರ್ಷಗಳಲ್ಲಿ ಹಂತ ಹಂತವಾಗಿ) ತಾಂತ್ರಿಕ ಶಿಕ್ಷಣವೂ ಸೇರಿದಂತೆ ಸ್ನಾತಕೋತ್ತರ ಮಟ್ಟದವರೆಗೂ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ (ಅಂದರೆ ಕನ್ನಡ)ಯು ಶಿಕ್ಷಣ ಮಾಧ್ಯಮವಾಗಬೇಕು ಎಂಬುದು ಸರ್ಕಾರದ ನೀತಿಯಾಗಬೇಕು.

ವಿವರಣೆ :

ಪ್ರಸ್ತುತ ಪ್ರಾಥಮಿಕ ಶಿಕ್ಷಣವು ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿರಬೇಕೆಂಬುದು ಸರ್ಕಾರದ ಸ್ಪಷ್ಟ ನೀತಿಯಾಗಿದೆ. ಆದರೆ, ಹಿರಿಯ ಪ್ರಾಥಮಿಕ ಶಿಕ್ಷಣದಿಂದ ಸ್ನಾತಕೋತ್ತರ ಮಟ್ಟದವರೆಗೆ ಶಿಕ್ಷಣ ಮಾಧ್ಯಮ ಯಾವುದಿರಬೇಕೆಂಬುದು ಸರ್ಕಾರದ ನೀತಿಯಲ್ಲಿ ಸ್ಪಷ್ಟವಾಗಿಲ್ಲ, ಅದನ್ನು ನಿವಾರಿಸಲು ಮೇಲೆ ಹೇಳಿದಂತೆ ಸರ್ಕಾರ ತನ್ನ ಸಮಗ್ರ ನೀತಿಯನ್ನು ಘೋಷಿಸಬೇಕು. ಈ ನೀತಿಯ ಘೋಷಣೆಯಿಂದ ಸರ್ಕಾರ ಮುಂದಿನ ಹತ್ತು ವರ್ಷಗಳಲ್ಲಿ ಶಿಕ್ಷಣದ ಎಲ್ಲಾ ಹಂತಗಳಲ್ಲೂ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ ಶಿಕ್ಷಣ ಮಾಧ್ಯಮವಾಗಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲು ಅಣಿ ಮಾಡಿದಂತಾಗುತ್ತದೆ.

ಶಿಫಾರಸು ೨

ಈಗಿನಂತೆ ಪ್ರಾಥಮಿಕ ಶಿಕ್ಷಣವನ್ನು ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಎಂದು ವಿಂಗಡಣೆ ಮಾಡದೇ ೧ ರಿಂದ ೭ನೇ ತರಗತಿಯವರೆಗೆ ಸಮಗ್ರವಾಗಿ ಪ್ರಾಥಮಿಕ ಶಿಕ್ಷಣ ಎಂದು ಪರಿಗಣಿಸಬೇಕು. ಸದ್ಯ, ೧ ರಿಂದ ೪ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ ಕಡ್ಡಾಯ ಶಿಕ್ಷಣ ಮಾಧ್ಯಮವಾಗಿರ ಬೇಕೆಂಬುದು ಸರ್ಕಾರದ ಶೈಕ್ಷಣಿಕ ನೀತಿಯಾಗಿದೆ. ಮುಂದಿನ ಶೈಕ್ಷಣಿಕ ವರ್ಷದಿಂದಲೇ (೧೯೯೯-೨೦೦೦) ಪೂರ್ವ ಪ್ರಾಥಮಿಕವನ್ನೂ ಒಳಗೊಂಡು ೧ ರಿಂದ ೭ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯು ಕಡ್ಡಾಯ ಶಿಕ್ಷಣ ಮಾಧ್ಯಮವೆಂದು ಘೋಷಿಸಿ ಆದೇಶ ಹೊರಡಿಸಬೇಕು.

ಅಂದರೆ ಈ ವರೆಗೆ ೧ ರಿಂದ ೪ನೇ ತರಗತಿಯವರೆಗೆ ಸರ್ಕಾರದ ನೀತಿಯನ್ನು ಒಪ್ಪಿರುವ ಅಂಗೀಕೃತ ಶಾಲೆಗಳು ೧೯೯೯-೨೦೦೦ದ ಸಾಲಿನಿಂದ ಪ್ರಾರಂಭಿಸಿ, ವರ್ಷ ವರ್ಷ ಕ್ರಮವಾಗಿ ೭ನೇ ತರಗತಿಯವರೆಗೆ ಅದನ್ನು ವಿಸ್ತರಿಸಬೇಕು.

ವಿವರಣೆ :

ಪ್ರಸ್ತುತ ಸರ್ಕಾರವು ೧ ರಿಂದ ೪ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯು ಶಿಕ್ಷಣ ಮಾಧ್ಯಮವಾಗಿರಬೇಕೆಂದು ೨೯ನೇ ಏಪ್ರಿಲ್ ೧೯೯೪ರಂದು ಇಡಿ ೨೮ ಪಿಜಿಸಿ ೯೪ ಸಂಖ್ಯೆಯ ಸರ್ಕಾರಿ ಆದೇಶವನ್ನು ಹೊರಡಿಸಿದೆ. ಆದರೆ, ಈ ನೀತಿಗೆ ಬದ್ಧವಾಗಿರುವುದಾಗಿ ಮುಚ್ಚಳಿಕೆ ಕೊಟ್ಟಿರುವ ಶಾಲೆಗಳೂ ಸೇರಿದಂತೆ ಸಾವಿರಾರು ಶಾಲೆಗಳು ಅನಧಿಕೃತವಾಗಿ ಇಂಗ್ಲೀಷ್ ಮಾಧ್ಯಮದಲ್ಲೇ ಶಿಕ್ಷಣ ನೀಡುತ್ತಿವೆ. ಈ ಎಲ್ಲಾ ಶಾಲೆಗಳಿಗೂ ಶಿಕ್ಷಣ ಇಲಾಖೆಯ ಸಿಬ್ಬಂದಿಯು ಸದಾಕಾಲ ಭೇಟಿ ನೀಡುತ್ತಲೇ ಇರುವುದು ವ್ಯಾವಹಾರಿಕವಾಗಿ ಕಾರ್ಯಸಾಧ್ಯವಲ್ಲ.

ಆದ್ದರಿಂದ, ಇಂತಹ ಶಾಲೆಗಳು ತಾವಾಗಿಯೇ ಅನಿವಾರ್ಯವಾಗಿ ಸರ್ಕಾರದ ನೀತಿಯನ್ನು ಅನುಸರಿಸಲೇಬೇಕಾದಂತಹ ವ್ಯವಸ್ಥೆಯಾಗಬೇಕು.

ಈಗ ೭ನೇ ತರಗತಿಯ ಪರೀಕ್ಷೆ ಪಬ್ಲಿಕ್ ಪರೀಕ್ಷೆಯಾಗಿರುವುದರಿಂದ ಪ್ರಶ್ನೆ ಪತ್ರಿಕೆಗಳನ್ನು ಇಲಾಖೆಯೇ ಸಿದ್ಧಪಡಿಸುವುದರಿಂದ ಅದೇ, ಭಾಷೆಯ ಶಿಕ್ಷಣ ಮಾಧ್ಯಮವನ್ನು ಇಂತಹ ಶಾಲೆಗಳು ಅನುಸರಿಸುವುದು ಅನಿವಾರ್ಯವಾಗುತ್ತದೆ.

ಕರ್ನಾಟಕ ಶಿಕ್ಷಣ ಮಸೂದೆಯ ನಿಯಮ ೩(ಅ) ನೇ ಕಲಂನ ಪ್ರಕಾರ ೧ ರಿಂದ ೭ನೇ ತರಗತಿಯವರೆಗೆ ಸಮಗ್ರವಾಗಿ ಪ್ರಾಥಮಿಕ ಶಿಕ್ಷಣ ಎಂದು ಪರಿಗಣಿಸಿರುವುದರಿಂದ ಕಾನೂನಿನ ಪ್ರಕಾರವೂ ಅದು ಸಿಂಧುವಾಗುತ್ತದೆ.

ಶಿಫಾರಸು ೩

ಈಗಾಗಲೇ ೫ ರಿಂದ ೭ರ ವರೆಗೆ ಇಂಗ್ಲೀಷ್ ಮಾಧ್ಯಮಕ್ಕೆ ಅನುಮತಿ ಪಡೆದಿರುವ ಅಂಗೀಕೃತ ಶಾಲೆಗಳು ೧೯೯೯-೨೦೦೦ನೇ ಸಾಲಿನಿಂದ ಪ್ರಾರಂಭಿಸಿ, ವರ್ಷ ವರ್ಷ ಕ್ರಮವಾಗಿ ಬದಲಾವಣೆ ಮಾಡಿ ಮೂರು ವರ್ಷಗಳಲ್ಲಿ ೭ನೇ ತರಗತಿಯವರೆಗೆ ಸರ್ಕಾರದ ನೀತಿಯಂತೆ ಶಿಕ್ಷಣ ಮಾಧ್ಯಮವನ್ನು ಬದಲಾಯಿಸಬೇಕು. ಇಲ್ಲದಿದ್ದರೆ ಆ ಶಾಲೆಗೆ ಸರ್ಕಾರ ನೀಡಿರುವ ಮಾನ್ಯತೆ ರದ್ದಾಗುತ್ತದೆ.

ಶಿಫಾರಸು ೪

೧ ರಿಂದ ೭ನೇ ತರಗತಿಯವರೆಗೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ ಶಿಕ್ಷಣ ಮಾಧ್ಯಮವಾಗಿರಬೇಕೆಂಬ ನೀತಿಯನ್ನು ಅಂಗೀಕರಿಸಿದ ನಂತರ ಕಲಿಸುವ ಭಾಷೆಗಳಿಗೆ ಸಂಬಂಧಿಸಿದಂತೆ ಮುಂದೆ ಸೂಚಿತವಾದ ಭಾಷಾನೀತಿಯನ್ನು ಜಾರಿಗೆ ತರಬೇಕು.

ಸೂಚಿತ ಭಾಷಾ ನೀತಿ

ಕನ್ನಡ ಮಾಧ್ಯಮದವರಿಗೆ

೧ ಹಾಗೂ ೨ನೇ ತರಗತಿ	• ಕನ್ನಡ
೩ ಹಾಗೂ ೪ನೇ ತರಗತಿ	• ಕನ್ನಡ • ಭಾಷೆ ೧ (ಇಂಗ್ಲೀಷ್ / ಹಿಂದಿ ಮುಂತಾದ ಇತರೆ ಭಾರತೀಯ ಭಾಷೆಗಳಲ್ಲಿ ಒಂದು) • ಭಾಷೆ ೨ (ಮೇಲೆ ತೆಗೆದುಕೊಂಡ ಭಾಷೆಗಳನ್ನು ಬಿಟ್ಟು ಇನ್ನೊಂದು ಭಾಷೆ)

ಕನ್ನಡೇತರರಿಗೆ

೧ ಹಾಗೂ ೨ನೇ ತರಗತಿ	• ಮಾತೃಭಾಷೆ
೩ ಹಾಗೂ ೪ನೇ ತರಗತಿ	• ಮಾತೃಭಾಷೆ • ಭಾಷೆ ೧ : ಕನ್ನಡ • ಭಾಷೆ ೨ (ಮೇಲೆ ತೆಗೆದುಕೊಂಡ ಭಾಷೆಗಳನ್ನು ಬಿಟ್ಟು ಇನ್ನೊಂದು ಭಾಷೆ)

ವಿ.ಸೂ.

೧. ಕನ್ನಡ ಮಾಧ್ಯಮದವರಿಗೆ ಕನ್ನಡ ಕಲಿಕೆ ಮತ್ತು ಪರೀಕ್ಷೆಗಳು ಕಡ್ಡಾಯ
೨. ಮಾತೃಭಾಷೆಯ ಕಲಿಕೆ ಮತ್ತು ಪರೀಕ್ಷೆಗಳು ಕಡ್ಡಾಯ
೩. ಭಾಷೆ ೧ರ ಕಲಿಕೆ ಕಡ್ಡಾಯ, ಪರೀಕ್ಷೆ ಐಚ್ಛಿಕ
೪. ಭಾಷೆ ೨ರ ಕಲಿಕೆ ಮತ್ತು ಪರೀಕ್ಷೆ - ಎರಡೂ ಐಚ್ಛಿಕ

ಕನ್ನಡ ಮಾಧ್ಯಮದವರಿಗೆ

೫ ರಿಂದ ೭ನೇ ತರಗತಿ	• ಕನ್ನಡ • ಭಾಷೆ ೧ • ಭಾಷೆ ೨

ಕನ್ನಡೇತರರಿಗೆ

೫ ರಿಂದ ೭ನೇ ತರಗತಿ	• ಮಾತೃಭಾಷೆ • ಭಾಷೆ ೧ : ಕನ್ನಡ • ಭಾಷೆ ೨ (ಮೇಲೆ ತೆಗೆದುಕೊಂಡಿರುವ ಎರಡು ಭಾಷೆಗಳನ್ನು ಹೊರತುಪಡಿಸಿ)

ವಿ.ಸೂ. : ೧. ಮಾಧ್ಯಮವಾಗಿರುವ ಭಾಷೆಯ ಕಲಿಕೆ ಮತ್ತು ಪರೀಕ್ಷೆ ಕಡ್ಡಾಯ. ಆದರೆ, ಕನ್ನಡವೂ ಸೇರಿದಂತೆ ಯಾವುದಾದರೂ ಎರಡು ಭಾಷೆಗಳಲ್ಲಿ ತೇರ್ಗಡೆಯ ಅಂಕಗಳನ್ನು ಪಡೆಯಬೇಕು; ೨. ಭಾಷಾ ೧ ಮತ್ತು ಭಾಷಾ ೨ : ಮೂರು ಹಾಗೂ ನಾಲ್ಕನೇ ತರಗತಿಗಳಲ್ಲಿ ಆಯ್ಕೆ ಮಾಡಿಕೊಂಡ ಭಾಷೆಗಳು ಐದರಿಂದ ಏಳನೇ ತರಗತಿಯವರೆಗೆ ಮುಂದುವರೆಯುತ್ತದೆ.

ವಿವರಣೆ :

ಈ ಸೂಚಿತ ಭಾಷಾನೀತಿಯಿಂದ ಅಪೇಕ್ಷೆ ಪಡುವ ಪೋಷಕರು ನಮ್ಮ ಮಕ್ಕಳಿಗೆ ಮೂರನೇ ತರಗತಿಯಿಂದ ಭಾಷೆ ೧ರ ಅನ್ವಯ ಇಂಗ್ಲೀಷ್ / ಹಿಂದಿ ಅಥವಾ ಬೇರಾವುದಾದರೂ ಭಾರತೀಯ ಭಾಷೆಯನ್ನು ಒಂದು "ವಿಷಯ"ವನ್ನಾಗಿ ಕಲಿಸುವುದು. ಭಾಷೆ ೧ರ ಕಲಿಕೆ ಮಾತ್ರ ಕಡ್ಡಾಯವಾಗಿದ್ದು, ಅದು ಪರೀಕ್ಷೆಗೆ ಕಡ್ಡಾಯವಲ್ಲದ್ದರಿಂದ ಭಾಷೆಯನ್ನು ಹೇರಿದಂತಾಗುವುದಿಲ್ಲ. ಭಾಷೆ ೨ರ ಕಲಿಕೆ ಮತ್ತು ಪರೀಕ್ಷೆಗಳೆರಡೂ ಕಡ್ಡಾಯವಲ್ಲದ್ದರಿಂದ ತ್ರಿಭಾಷಾಸೂತ್ರವನ್ನು ಹೇರಿದಂತಾಗುವುದಿಲ್ಲ. ಜೊತೆಗೆ ಈ ಮಟ್ಟದಲ್ಲಿ ಈ ಭಾಷೆಗಳನ್ನು ಕಲಿಸಲು ಹೆಚ್ಚುವರಿ ಅಧ್ಯಾಪಕರ ನೇಮಕ ಅಗತ್ಯವಾಗುವುದಿಲ್ಲ.

೩ನೇ ತರಗತಿಯಿಂದಲೇ ಇಂಗ್ಲೀಷ್ ಭಾಷೆಯನ್ನು ಕಲಿಯುವ ಅವಕಾಶ ಕಲ್ಪಿಸುವುದರಿಂದ ಜಾಗತೀಕರಣ ಮತ್ತು ಉದಾರೀಕರಣದ ಹಿನ್ನೆಲೆಯಲ್ಲಿ ಅನಗತ್ಯವಾದರೂ ಪೋಷಕರಲ್ಲಿ ಮನೆ ಮಾಡಿರುವ - ಇಂಗ್ಲೀಷ್ ಕಲಿಕೆಯಿಂದ ನಮ್ಮ ಮಕ್ಕಳು ವಂಚಿತರಾಗುತ್ತಾರೆಂಬ - ಆತಂಕವನ್ನು ದೂರ ಮಾಡಿದಂತಾಗುತ್ತದೆ.

೩ನೇ ತರಗತಿಯಿಂದಲೇ ಸರ್ಕಾರಿ ಶಾಲೆಗಳಲ್ಲೂ ಇಂಗ್ಲೀಷ್ ಕಲಿಸುವ ನಿರ್ಧಾರವನ್ನು ಪಶ್ಚಿಮ ಬಂಗಾಳ ಸರ್ಕಾರ ಕೈಗೊಂಡಿರುವುದನ್ನು ಇಲ್ಲಿ ಉಲ್ಲೇಖಿಸಬಹುದು.

ಶಿಫಾರಸು ೫

ಈಗಾಗಲೇ ಆರಂಭವಾಗಿರುವ / ಮುಂದೆ ಆರಂಭವಾಗಲಿರುವ ಐ. ಸಿ. ಎಸ್. ಸಿ. ಮತ್ತು ಸಿ. ಬಿ. ಎಸ್. ಇ. ಶಾಲೆಗಳ ಪ್ರವೇಶಾವಕಾಶವನ್ನು ಇನ್ನು ಮುಂದೆ ಏಪ್ರಿಲ್ ೨೯, ೧೯೯೪ರ ಸರ್ಕಾರಿ ಆದೇಶ ಸಂಖ್ಯೆ : ಇಡಿ ೨೮ ಪಿಜಿಸಿ ೯೪ರ ಪ್ರಕಾರ ಕಲಂ ೯(ಅ, ಆ, ಇ) ಪ್ರಕಾರ *ಅಂತರರಾಜ್ಯ ವರ್ಗಾವಣೆಯ ಪೋಷಕರಿಗೆ ಮಾತ್ರ* ನಿರ್ಬಂಧಿಸಿ, ಅದನ್ನು ಉಲ್ಲಂಘಿಸುವ ಶಾಲೆಗಳಿಗೆ ಈಗಾಗಲೇ ಲಭ್ಯವಿರುವ ಅವಕಾಶಗಳಡಿಯಲ್ಲಿ ಮಾನ್ಯತೆ ರದ್ದು ಮಾಡುವುದಾಗಿ ಘೋಷಿಸಿ ಆದೇಶ ಹೊರಡಿಸಬೇಕು.

ವಿವರಣೆ :

ಇದನ್ನು ಮಾಡದಿದ್ದರೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕೆಂಬ ರಾಜ್ಯ ಸರ್ಕಾರದ ನೀತಿಯನ್ನು ಇಂತಹ ಶಾಲೆಗಳು ವಿಫಲಗೊಳಿಸುತ್ತವೆ. ಹೇಗೆಂದರೆ ಹಾಲಿ ಷರತ್ತುಗಳ ಪ್ರಕಾರ ಈ ಶಾಲೆಗಳ ಪ್ರವೇಶಾವಕಾಶದಲ್ಲಿ ಅಂತರರಾಜ್ಯ ವರ್ಗಾವಣೆಯ ಪೋಷಕರ ಮಕ್ಕಳಿಗೆ ಆದ್ಯತೆ ನೀಡಬೇಕೆಂದಿದೆಯೇ ಹೊರತು ನಿರ್ಬಂಧವಿಲ್ಲ. ಅಂತಹ ಸಂದರ್ಭಗಳಲ್ಲಿ ವಿದ್ಯಾರ್ಥಿಗಳ ಕೊರತೆಯ ನೆಪವೊಡ್ಡಿ ಸಾಮಾನ್ಯವಾಗಿ ರಾಜ್ಯದೊಳಗೆ ನೆಲೆಸಿರುವ ಪೋಷಕರ ಮಕ್ಕಳಿಗೂ ಪ್ರವೇಶ ನೀಡಿ, ಸರ್ಕಾರದ ಉದ್ದೇಶವನ್ನು ಈ ಶಾಲೆಗಳು ವಿಫಲಗೊಳಿಸುತ್ತವೆ.

ಶಿಫಾರಸು ೬

ಈಗಾಗಲೇ ಇಂಗ್ಲೀಷ್ ಅಥವಾ ಬೇರೆ ಮಾತೃಭಾಷಾ ಮಾಧ್ಯಮದ ತರಗತಿಗಳನ್ನು ನಡೆಸುತ್ತಿರುವ ರಾಜ್ಯಪಠ್ಯಕ್ರಮದ ಅಥವಾ ಕೇಂದ್ರಪಠ್ಯಕ್ರಮದ ಶಾಲೆಗಳ ಆಡಳಿತ ಸಂಸ್ಥೆಗಳು ಸ್ವ-ಇಚ್ಛೆಯಿಂದ ಕನ್ನಡ ಮಾಧ್ಯಮಕ್ಕೆ ಯಾವಾಗಲಾದರೂ ಬದಲಾವಣೆ ಬಯಸಿದರೆ ರಾಜ್ಯ ಸರ್ಕಾರವು ಮುಕ್ತವಾಗಿ ಅನುಮತಿ ನೀಡಬೇಕು.

ವಿವರಣೆ :

ಇದರಿಂದ ರಾಜ್ಯದ ಮುಖ್ಯ ವಾಹಿನಿಯಲ್ಲಿ ತಾವಾಗಿಯೇ ಸೇರಬಯಸುವವರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಜೊತೆಗೆ ವಿದ್ಯಾರ್ಥಿಗಳ ಕೊರತೆಯ ನೆಪವೊಡ್ಡಿ ಶಾಲೆ ಮುಚ್ಚುವ ಅನಿವಾರ್ಯ ಸ್ಥಿತಿ ಉಂಟಾಗಿದೆಯೆಂದು ಕೆಲವು ಶಾಲೆಗಳ ಆಡಳಿತ ಸಂಸ್ಥೆಗಳು ನ್ಯಾಯಾಲಯದ ಮೆಟ್ಟಿಲನ್ನು ಹತ್ತಬಹುದಾದ ಪರಿಸ್ಥಿತಿಯನ್ನು ತಪ್ಪಿಸಿದಂತಾಗುತ್ತದೆ.

ಶಿಫಾರಸು ೭

೨೯ನೇ ಏಪ್ರಿಲ್ ೯೪ರಂದು ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ, ೧೯೮೯ಕ್ಕಿಂತ ಮುಂಚೆ ಆರಂಭವಾಗಿದ್ದ ಇಂಗ್ಲೀಷ್ ಮಾಧ್ಯಮ ಶಾಲೆಗಳು ಸಲ್ಲಿಸಿದ್ದ ಅರ್ಜಿಯ ಸಂಬಂಧದಲ್ಲಿ ರಾಜ್ಯ ಉಚ್ಚ ನ್ಯಾಯಾಲಯವು ಸಹ್ಯಾದ್ರಿ ಎಜುಕೇಷನ್ ಟ್ರಸ್ಟ್‌ನ ದಾವೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿಯ ಮೇಲೆ ತೀರ್ಪು ಬರುವವರೆಗೆ ಸದರಿ ಅದೇಶವನ್ನು ಆ ಶಾಲೆಗಳಿಗೆ ಜಾರಿಗೆ ಕೊಡದಂತೆ ಆದೇಶ ಹೊರಡಿಸಿರುವುದರಿಂದ, ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಸದರಿ ಮೇಲ್ಮನವಿಯನ್ನು ಹಿಂತೆಗೆದು

ಕೊಂಡು ರಾಜ್ಯ ಉಚ್ಚ ನ್ಯಾಯಾಲಯವು ಮೇಲಿನ ಶಾಲೆಗಳಿಗೆ ಸಂಬಂಧಿಸಿದಂತೆ ಹೊರಡಿಸಿರುವ ಆದೇಶವನ್ನು ಹಿಂದಕ್ಕೆ ಪಡೆಯುವಂತೆ ಕಾನೂನು ಇಲಾಖೆಯ ಮೂಲಕ ತಕ್ಷಣ ಕ್ರಮ ಕೈಗೊಳ್ಳಬೇಕು.

ಶಿಫಾರಸ್ಸು ೮

ಕರ್ನಾಟಕ ರಾಜ್ಯದ ಗಡಿ ಭಾಗಗಳಲ್ಲಿ ವಿಶೇಷ ಆಸಕ್ತಿ ವಹಿಸಿ ಕನ್ನಡ ಮಾಧ್ಯಮ ಶಾಲೆಗಳನ್ನು ತೆರೆಯುವ ಖಾಸಗಿ ಸಂಸ್ಥೆಗಳಿಗೆ ಈಗಿನ ನಿಯಮಗಳನ್ನು ಸಡಿಲಿಸಿ, ವಿಶೇಷ ಆದ್ಯತೆ ಮತ್ತು ಪ್ರೋತ್ಸಾಹ ನೀಡುವ ಕ್ರಮಗಳನ್ನು ಕೈಗೊಳ್ಳಬೇಕು.

ಶಿಫಾರಸ್ಸು ೯

ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮವಾಗಿರಬೇಕೆಂಬ ಸರ್ಕಾರದ ನೀತಿಯನ್ನು ಪೂರ್ವ ಪ್ರಾಥಮಿಕ ಹಂತಕ್ಕೂ ಅನ್ವಯಿಸಬೇಕು.

ವಿವರಣೆ

ಪ್ರಸ್ತುತ ಪೂರ್ವಪ್ರಾಥಮಿಕ ಶಿಕ್ಷಣ ಸರ್ಕಾರದ ನಿಯಂತ್ರಣದಲ್ಲಿ ಇಲ್ಲದಿರುವುದರಿಂದ ಹಲವಾರು ಸಂಸ್ಥೆಗಳು ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಇಂಗ್ಲಿಷ್ ಮಾಧ್ಯಮದಲ್ಲಿ ನೀಡಿ ಮತ್ತೆ ನಂತರ ಕಿರಿಯ ಪ್ರಾಥಮಿಕ ಹಂತದಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡುತ್ತಿರುವುದು ಒಂದು ಅವೈಜ್ಞಾನಿಕ ಕ್ರಮವಾಗಿದೆ.

ಇದನ್ನು ತಪ್ಪಿಸಲು ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆಯಲ್ಲಿ ಹಾಗೂ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಪ್ರಾಥಮಿಕ ಶಿಕ್ಷಣವು ಪೂರ್ವ ಪ್ರಾಥಮಿಕ ಹಂತವನ್ನು ಒಳಗೊಳ್ಳುತ್ತದೆ ಎಂದು ಸ್ಪಷ್ಟೀಕರಿಸಿರುವುದನ್ನು ಬಳಸಿಕೊಳ್ಳಬೇಕು.

ಇಲ್ಲಿಯವರೆಗೆ ಚಂಪಾ ಅಧ್ಯಕ್ಷತೆಯ ಶಿಕ್ಷಣ ತಜ್ಞರ ಸಮಿತಿಯ ಮಧ್ಯಂತರ ವರದಿಯನ್ನು ಯಥಾವತ್ತಾಗಿ ಕೊಡಲಾಗಿದೆ. ಈ ವರದಿಯನ್ನು ತಾತ್ವಿಕವಾಗಿ ಒಪ್ಪಿರುವುದಾಗಿ ಆಗಿನ ಮುಖ್ಯಮಂತ್ರಿ ಪಟೇಲರು ರಸವತ್ತಾದ ಸಾಹಿತ್ಯ ಸಮ್ಮೇಳನದಲ್ಲಿ ಘೋಷಿಸಿದ್ದರು. ಈ ವರದಿಗೆ ಕಾರಣವಾದ ರಾಜ್ಯಮಟ್ಟದ ಸಮಾಲೋಚನೆ ಸಭೆಯ ನಂತರವೇ ಶಿಕ್ಷಣ ಸಚಿವರಾಗಿದ್ದ ಶ್ರೀ ಎಚ್. ಜಿ. ಗೋವಿಂದೇಗೌಡರು ಸರ್ಕಾರಿ ಶಾಲೆಗಳಲ್ಲಿ ೫ನೇ ತರಗತಿಯಿಂದ ಆರಂಭಿಸಿದ್ದ ಇಂಗ್ಲಿಷ್ ಮಾಧ್ಯಮವನ್ನು ಹಿಂತೆಗೆದುಕೊಳ್ಳುವುದಾಗಿ ಆಗಿನ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಚಂಪಾ ಅವರಿಗೆ ಭರವಸೆ ನೀಡಿ, ಅದರಂತೆ ಕೂಡಲೇ ಶಿಕ್ಷಣ ಇಲಾಖೆ ಅಧಿಕಾರಿಗಳ ಸಭೆ ಕರೆದು ಆದೇಶ ನೀಡಿದರು.

■

ಅಧ್ಯಾಯ-೧೧

ಬರಗೂರು ವರದಿ

ನೀತಿ ನಿರೂಪಣಾ ವರದಿ

ಶಿಕ್ಷಣ ಮಾಧ್ಯಮದ ಪ್ರಶ್ನೆ ಕೇವಲ ಭಾಷೆಗೆ ಸೀಮಿತವಾದುದಲ್ಲ. ಒಟ್ಟು ಶಿಕ್ಷಣ ಪದ್ಧತಿ, ಪಠ್ಯಕ್ರಮ, ಸಾಮಾಜಿಕ-ಆರ್ಥಿಕ ಸನ್ನಿವೇಶಗಳಿಂದ ಉಂಟಾಗುವ ನೀತಿ ನಿರೂಪಣೆಯ ನೆಲೆ-ಹೀಗೆ ವಿವಿಧ ಅಂಶಗಳ ಅಂತರ್ ಸಂಬಂಧವನ್ನು ಗ್ರಹಿಸುತ್ತಲೇ ಶಿಕ್ಷಣ ಮಾಧ್ಯಮದ ನಿಲುವುಗಳನ್ನು ಖಚಿತಪಡಿಸಿಕೊಳ್ಳುವುದು ಸೂಕ್ತ. ಯಾಕೆಂದರೆ ಶಿಕ್ಷಣ ಮಾಧ್ಯಮವೆನ್ನುವುದು ಸಮಾಜ ಮತ್ತು ಸಂಸ್ಕೃತಿಯ ಇತರೆ ಘಟಕಗಳಿಂದ ಪ್ರತ್ಯೇಕಿಸಿ ನೋಡುವ ಪರಿಕಲ್ಪನೆಯಲ್ಲ. ಒಂದು ನಿರ್ದಿಷ್ಟ ಭಾಷಾ ಮಾಧ್ಯಮದಲ್ಲಿ ವ್ಯಾಸಂಗ ನಡೆಸಬೇಕೆಂಬ ವಿಚಾರಕ್ಕೆ ಭಾಷಾಭಿಮಾನವನ್ನು ಮೀರಿದ ಸಂಗತಿಗಳ ಸಮರ್ಥನೆಯಿರುತ್ತದೆ. ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣ ಕೊಡಬೇಕೆಂಬ ವಿಚಾರವು ವಿದ್ಯಾರ್ಥಿಗಳ ಜ್ಞಾನಗ್ರಹಿಕೆಗೆ ಪೂರಕ ಅಂಶವೂ ಆಗಿರುತ್ತದೆ. ಅದೇ ಸಂದರ್ಭದಲ್ಲಿ, ಒಂದೇ ಸಮಾಜದ ಅಥವಾ ರಾಜ್ಯದ ಕೆಲವು ಜನವರ್ಗಗಳು ಮಾತೃಭಾಷಾ ಮಾಧ್ಯಮದಲ್ಲಿ, ಇನ್ನು ಕೆಲವು ಜನವರ್ಗಗಳು ಆಂಗ್ಲ ಮಾಧ್ಯಮದಲ್ಲಿ ಓದುತ್ತಿರುವುದಕ್ಕೆ ಸಾಮಾಜಿಕ-ಆರ್ಥಿಕ ಕಾರಣಗಳಿರುತ್ತವೆ; ಜೊತೆಗೆ ನಮ್ಮ ಸನ್ನಿವೇಶದಲ್ಲಿ ಸೃಷ್ಟಿಯಾಗುತ್ತಿರುವ ಒತ್ತಡಗಳೂ ಪಾತ್ರ ವಹಿಸುತ್ತವೆ. ಅಂದರೆ ಆಂಗ್ಲ ಮಾಧ್ಯಮದ ಮೂಲಕ ಏನೆಲ್ಲ ಸಾಧಿಸಬಹುದೆಂಬ ಕನಸುಗಳನ್ನು, ಭ್ರಮೆಗಳನ್ನು ಸೃಷ್ಟಿಸುವ ಒತ್ತಡದ ವಾತಾವರಣವಿದ್ದಾಗ, ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳನ್ನೂ ಮೀರಿ ಮಾಧ್ಯಮದ ಆಯ್ಕೆ ನಡೆಯುವುದು ಸಾಧ್ಯ. ಇಲ್ಲದೆ ಇದ್ದಾಗ ಗ್ರಾಮೀಣ ಪ್ರದೇಶದ ಜನ ಮತ್ತು ನಗರದ ಬಡವರ್ಗಗಳು ಮಾತೃಭಾಷಾ ಮಾಧ್ಯಮಕ್ಕೆ ಮೊರೆ ಹೋದರೆ, ಮಧ್ಯಮ, ಮೇಲ್ ಮಧ್ಯಮ ಮತ್ತು ಮೇಲ್ವರ್ಗದ ಜನರು ಬಹುಪಾಲು ಆಂಗ್ಲ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಅಂಶಗಳನ್ನು ಗಮನಿಸಿದಾಗ ಮಾತೃಭಾಷಾ ಮಾಧ್ಯಮಕ್ಕಿರುವ ಜ್ಞಾನಗ್ರಹಿಕೆಯ ಸಾಧ್ಯತೆಗಳನ್ನು ಮೀರಿ ಇತರೆ ಅಂಶಗಳು ಅಥವಾ ಒತ್ತಡಗಳು ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಹಾಗೆಂದು

ಮಾತೃಭಾಷಾ ಮಾಧ್ಯಮದ ಮಹತ್ವ ಮತ್ತು ಪ್ರಸ್ತುತತೆಯನ್ನು ಗೌಣಗೊಳಿಸುವುದು ಸಾಧುವಲ್ಲ. ಮಾತೃಭಾಷಾ ಮಾಧ್ಯಮವನ್ನು ನಿರ್ಲಕ್ಷಿಸಿದರೆ, ಅದು ಕೇವಲ ಭಾಷಾ ನಿರ್ಲಕ್ಷತೆಯ ಪ್ರಶ್ನೆಯಾಗುವುದಿಲ್ಲ, ಶಿಕ್ಷಣದ ಉದ್ದೇಶವೇ ಇಲ್ಲಿ ಪ್ರಶ್ನಿತವಾಗುತ್ತದೆ; ಜನಸಂಸ್ಕೃತಿಯ ಪ್ರಸ್ತುತತೆಯನ್ನೇ ಅಲ್ಲಗಳೆದಂತಾಗುತ್ತದೆ. ಆದ್ದರಿಂದ ಸಮಾಜದಲ್ಲಿ ಮೇಲುಗೈ ಪಡೆಯುವ ಸಾಮಾಜಿಕ-ಆರ್ಥಿಕ ಹಿತಾಸಕ್ತಿಗಳು ರೂಪಿಸುವ ಭಾಷಾ ಭ್ರಮೆಗಳಿಗೂ ಏಕಕಾಲಕ್ಕೆ ಜ್ಞಾನಮುಖಿ ಹಾಗೂ ಜನಮುಖಿಯಾಗುವ ವಾಸ್ತವಗಳಿಗೂ ವೈಚಾರಿಕ ಸಂಘರ್ಷ ಇದ್ದೇ ಇರುತ್ತದೆ.

ಆಂಗ್ಲಭಾಷೆಯನ್ನೂ ಒಳಗೊಂಡಂತೆ ಯಾವುದೇ ಭಾಷೆಯನ್ನು ಒಂದು ಭಾಷೆಯಾಗಿ ಕಲಿಯಲು ಪಠ್ಯಕ್ರಮದ ಇತಿಮಿತಿಯಲ್ಲಿ ಅವಕಾಶ ಕಲ್ಪಿಸುವುದು ತಪ್ಪಲ್ಲ. ವಿಶೇಷವಾಗಿ, ಆಂಗ್ಲಭಾಷೆಯ ಬಗ್ಗೆ ಈ ಮಾತನ್ನು ಹೇಳಬಹುದಾಗಿದೆ. ಆದರೆ ಹುಟ್ಟಿನಿಂದಲೇ ಆಡುಮಾತಾಗಿ ನಮ್ಮೊಳಗೆ ಬೇರೂರುವ ಮಾತೃಭಾಷೆಯ ಮೂಲಕ ಜ್ಞಾನವನ್ನು ಗಳಿಸುವುದು ಯಾವತ್ತೂ ಸುಲಭ ಸಾಧ್ಯವಾದುದು. ಇಲ್ಲಿ ಭಾಷಾಮಾಧ್ಯಮವೆಂದರೆ ಭಾಷೆ ಮಾತ್ರ ಮುಖ್ಯವಾಗದೆ ಆ ಭಾಷೆಯ ಜನ, ಜನಜೀವನ, ಆಲೋಚನಾವಿಧಾನ, ಇತ್ಯಾದಿಗಳು ಒಗ್ಗೂಡಿದ ಒಂದು ಶೈಲಿಯೇ ರೂಪಿತವಾಗುತ್ತದೆ. ಇದರಲ್ಲಿ ನಾಡು-ನುಡಿಗಳ ಅಭಿಮಾನವೂ ಒಂದಂಶವಾಗಿರುತ್ತದೆ. ಆದ್ದರಿಂದ, ಜಗತ್ತಿನ ಬಹುಪಾಲು ಶಿಕ್ಷಣತಜ್ಞರು-ಚಿಂತಕರು ಮಾತೃಭಾಷಾ ಮಾಧ್ಯಮದ ಶಿಕ್ಷಣವನ್ನು ಪ್ರತಿಪಾದಿಸಿದ್ದಾರೆ. ಅದರಲ್ಲೂ ಪ್ರಾಥಮಿಕ ಶಿಕ್ಷಣ ಮಾತೃಭಾಷಾ ಮಾಧ್ಯಮದಲ್ಲೇ ಇರಬೇಕೆಂಬ ಬಗ್ಗೆ ಒತ್ತು ನೀಡಿದ್ದಾರೆ.

ಕರ್ನಾಟಕ ರಾಜ್ಯ ಅಧಿಕೃತ ಭಾಷೆಯಾದ ಕನ್ನಡವು ಈ ರಾಜ್ಯದ ಬಹುಸಂಖ್ಯಾತರ ಮಾತೃಭಾಷೆ. ಇಲ್ಲಿ ಮಾತೃಭಾಷೆಯ ಪ್ರಸ್ತಾಪ ಬಂದಾಗ ಪ್ರಧಾನವಾಗಿ ಕನ್ನಡ ಭಾಷೆಯನ್ನೇ ಗಮನಿಸಲಾಗಿದೆ. ಆದರೂ ಈ ರಾಜ್ಯದಲ್ಲಿರುವ ಭಾಷಾ ಅಲ್ಪಸಂಖ್ಯಾತರು ತಂತಮ್ಮ ಮಾತೃಭಾಷೆಯ ಶಾಲೆಗಳನ್ನು ತೆರೆಯಲು, ಓದಲು ಹಕ್ಕುಳ್ಳವರಾಗಿದ್ದಾರೆ. ಜೊತೆಗೆ ಅವರು ರಾಜ್ಯದ ಅಧಿಕೃತ ಭಾಷೆಯನ್ನು ಪಠ್ಯಕ್ರಮದ ಒಂದು ಭಾಗವಾಗಿ ಕಲಿಯಬೇಕಾದ್ದು ಅನಿವಾರ್ಯ. ಇಲ್ಲದಿದ್ದರೆ ಅವರು ರಾಜ್ಯದ ಆಡಳಿತಾತ್ಮಕ ಹಾಗೂ ಸಾಮಾಜಿಕ ಪ್ರಕ್ರಿಯೆಯಲ್ಲಿ ಪಾಲುದಾರರಾಗಲು ಸಾಧ್ಯವಾಗುವುದಿಲ್ಲ.

ನಮ್ಮ ರಾಜ್ಯದಲ್ಲಿ ಭಾಷೆ ಮತ್ತು ಮಾಧ್ಯಮವನ್ನು ಕುರಿತಂತೆ ಕೆಲವು ವರದಿಗಳು ಬಂದಿವೆ. ಡಾ|| ಗೋಕಾಕ್ ಸಮಿತಿಯ ವರದಿಯು ಪ್ರೌಢಶಾಲಾ ಶಿಕ್ಷಣದಲ್ಲಿ ಕನ್ನಡವನ್ನು ಏಕೈಕ ಪ್ರಥಮ ಭಾಷೆಯಾಗಿ ಕಡ್ಡಾಯಗೊಳಿಸುವ ಆಶಯವನ್ನು ಪ್ರಕಟಿಸಿತು. ೧೯೮೨ರಲ್ಲಿ ಸಲ್ಲಿಸಿದ ಈ ವರದಿಯು ಶಿಕ್ಷಣ ಮಾಧ್ಯಮದ ಅಂಶವನ್ನೂ ಚರ್ಚಿಸಿತು. ಸಂಸ್ಕೃತವನ್ನು ಪ್ರೌಢಶಾಲೆಗಳಲ್ಲಿ ಪ್ರಥಮ ಭಾಷೆಯಾಗಿ ಬೋಧನೆ ಮಾಡಲು ಅವಕಾಶ

ಕಲ್ಪಿಸಿದ ಅಂದಿನ ಸರ್ಕಾರದ ನಿಲುವಿನಿಂದಾಗಿ ಮೂಡಿದ ವಿರೋಧವನ್ನು ಗಮನಿಸಿ ಡಾ|| ವಿ. ಕೃ. ಗೋಕಾಕ್ ಅವರ ನೇತೃತ್ವದ ಸಮಿತಿಯನ್ನು ರಚಿಸಲಾಯಿತೆಂಬ ಅಂಶವನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. ಅನಂತರ, ೧೯೯೧ನೇ ಜನವರಿಯಲ್ಲಿ ಸರ್ಕಾರವು ಡಾ|| ಎಚ್. ನರಸಿಂಹಯ್ಯನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿ 'ಅನಧಿಕೃತ ಆಂಗ್ಲ ಮಾಧ್ಯಮ ಪ್ರಾಥಮಿಕಶಾಲೆಗಳ ಸಮಸ್ಯೆ ಕುರಿತು' ವರದಿ ಸಲ್ಲಿಸಲು ಕೋರಿತು. ಈ ಸಮಿತಿಯು ಜೂನ್ ೧೯೯೧ರಲ್ಲಿ ತನ್ನ ವರದಿಯನ್ನು ಸಲ್ಲಿಸಿ ಅನಧಿಕೃತ ಆಂಗ್ಲ ಮಾಧ್ಯಮಶಾಲೆಗಳ ಸಮಸ್ಯೆಗೆ ಪರಿಹಾರ ಸೂಚಿಸುತ್ತ "ಅನುದಾನ ಸಂಹಿತೆಯ ನಿಯಮಗಳನ್ನು ಪೂರೈಸಿದ್ದಲ್ಲಿ ಮಾನ್ಯತೆ ನೀಡಿ ಈ ವರ್ಷದಿಂದಲೇ ಮಾತೃಭಾಷೆ ಮಾಧ್ಯಮದಲ್ಲಿ ಕಲಿಯಲು ಮಾತ್ರ ಪ್ರಥಮ ತರಗತಿಗೆ ಪ್ರವೇಶ ಕೊಡಬೇಕು" ಎಂದು ಶಿಫಾರಸ್ಸು ಮಾಡುವುದರ ಮೂಲಕ ಪ್ರಾಥಮಿಕ ಹಂತದಲ್ಲಿ ಮಾತೃಭಾಷಾ ಮಾಧ್ಯಮ ಕಡ್ಡಾಯವೆಂಬ ನೀತಿಗೆ ಪುಷ್ಟಿ ನೀಡಿತು. ಕನ್ನಡೇತರರು ತಮ್ಮ ಮಾತೃಭಾಷೆಯಲ್ಲಿ ಓದಲು ಅಗತ್ಯವಿರುವಷ್ಟು ಸಂಖ್ಯೆ ಇಲ್ಲದಿದ್ದಲ್ಲಿ ಪ್ರಾದೇಶಿಕ ಭಾಷೆಯನ್ನೇ (ಕನ್ನಡ) ಮಾಧ್ಯಮವಾಗಿ ಆಯ್ದುಕೊಳ್ಳಬೇಕೆಂದೂ ಈ ವರದಿ ಹೇಳಿದೆ. ಈಗಾಗಲೇ ಅಂಗೀಕೃತವಾದ ಆಂಗ್ಲ ಮಾಧ್ಯಮ ಶಾಲೆಗಳಲ್ಲೂ ೧೯೯೨ನೇ ಸಾಲಿನಿಂದ ಮಾತೃಭಾಷೆ ಮಾಧ್ಯಮ ಬರಬೇಕೆಂದು ಸೂಚಿಸಿದ ಡಾ|| ಎಚ್ಚಿನ್ ವರದಿಯು ಇನ್ನು ಮುಂದೆ ಪ್ರಾಥಮಿಕ ಹಂತದಲ್ಲಿ ಸಿ. ಬಿ. ಎಸ್. ಇ., ಐ. ಸಿ. ಎಸ್. ಇ. ಶಿಕ್ಷಣ ಶಾಲೆಗಳಿಗೆ ರಾಜ್ಯದಲ್ಲಿ ಅನುಮತಿ ನೀಡಬಾರದೆಂದೂ ಹೇಳಿದೆ. ೧೯೯೮ನೇ ಆಗಸ್ಟ್, ೧೧ರಂದು ನಡೆದ ಶಿಕ್ಷಣ ತಜ್ಞರ ಸಮಾಲೋಚನಾ ಸಭೆಯಲ್ಲಿ ಅಂದಿನ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಣ ಸಚಿವರಾದ ಶ್ರೀ ಹೆಚ್. ಜಿ. ಗೋವಿಂದೇಗೌಡ ಅವರು ಕೊಟ್ಟ ಸಲಹೆಯನ್ನು ಅನುಸರಿಸಿ ಅಂದಿನ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ತನ್ನ ವ್ಯಾಪ್ತಿಯಲ್ಲಿ ತಜ್ಞರ ಸಲಹಾ ಸಮಿತಿಯನ್ನು ರಚಿಸಿ, ಅದರ ಶಿಫಾರಸ್ಸುಗಳ ಮಧ್ಯಂತರ ವರದಿಯನ್ನು ೧೧ ಮಾರ್ಚ್ ೧೯೯೯ರಂದು ಮಾನ್ಯ ಶ್ರೀ ಗೋವಿಂದೇಗೌಡ ಅವರಿಗೆ ಸಲ್ಲಿಸಿತು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಂದಿನ ಅಧ್ಯಕ್ಷರಾದ ಪ್ರೊ. ಚಂದ್ರಶೇಖರ ಪಾಟೀಲರ ನೇತೃತ್ವದ ಈ ತಜ್ಞರ ಸಲಹಾ ಸಮಿತಿಯು ೧ ರಿಂದ ೭ನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣವೆಂದು ಸರ್ಕಾರವು ಘೋಷಿಸಿ ಮಾತೃಭಾಷಾ ಮಾಧ್ಯಮವೇ ಇರಬೇಕೆಂದು ಶಿಫಾರಸ್ಸು ಮಾಡಿತು. ಕನ್ನಡ (ಮಾತೃಭಾಷಾ) ಮಾಧ್ಯಮಶಾಲೆಗಳಲ್ಲಿ ಪ್ರಾಥಮಿಕ ಮೂರನೇ ತರಗತಿಯಿಂದ ಆಂಗ್ಲಭಾಷೆ (ಅಥವಾ ಇತರ ಭಾರತೀಯ ಭಾಷೆಗಳಲ್ಲಿ ಒಂದನ್ನು) ಕಲಿಯಲು ಅವಕಾಶ ನೀಡಬೇಕೆಂದೂ ಮೂರು ಮತ್ತು ನಾಲ್ಕನೇ ತರಗತಿಗಳಿಗೆ ಆಂಗ್ಲ ಭಾಷೆಯ ಕಲಿಕೆ ಕಡ್ಡಾಯ, ಆದರೆ ಪರೀಕ್ಷೆ ಕಡ್ಡಾಯವಲ್ಲವೆಂದೂ ತಿಳಿಸಿತು. ಮೂರನೇ ಭಾಷೆಯೊಂದನ್ನು ಕಲಿಯುವ ಅವಕಾಶವನ್ನೂ ಈ ವರದಿಯು ಒಳಗೊಂಡಿತ್ತು. ಮೂರನೇ ಭಾಷೆಯ ಕಲಿಕೆ ಮತ್ತು ಪರೀಕ್ಷೆ ಎರಡೂ

ಐಚ್ಛಿಕವಾಗಿರಬೇಕೆಂದು ಈ ವರದಿ ಶಿಫಾರಸು ಮಾಡಿತು. 'ಪೂರ್ವಪ್ರಾಥಮಿಕ ಶಿಕ್ಷಣ ಸರ್ಕಾರದ ನಿಯಂತ್ರಣದಲ್ಲಿ ಇಲ್ಲ' ಎಂದು ಭಾವಿಸಿದ ಈ ವರದಿ 'ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆಯಲ್ಲಿ ಹಾಗೂ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ಪ್ರಾಥಮಿಕ ಶಿಕ್ಷಣವು ಪೂರ್ವ ಪ್ರಾಥಮಿಕ ಹಂತವನ್ನು ಒಳಗೊಳ್ಳುತ್ತದೆ ಎಂದು ಸ್ಪಷ್ಟೀಕರಿಸಿರುವುದನ್ನು ಬಳಸಿಕೊಳ್ಳಬೇಕು' ಎಂದು ಸೂಚಿಸಿತು.

ಈ ಎಲ್ಲ ವರದಿಗಳು ಕನ್ನಡ ಭಾಷೆ ಮತ್ತು ಕನ್ನಡ ಮಾಧ್ಯಮದ ಆಶಯಕ್ಕೆ ಬದ್ಧವಾದ ಆಲೋಚನೆಗಳನ್ನು ಹೊಂದಿವೆ. ಈ ಎಲ್ಲ ವರದಿಗಳ ಆಶಯ ಮತ್ತು ಆಲೋಚನೆಗಳನ್ನು ಸಕಾರಾತ್ಮಕವಾಗಿ ಗ್ರಹಿಸುತ್ತ ಹಾಗೂ ಗೌರವಿಸುತ್ತ, ಒಟ್ಟು ಶಿಕ್ಷಣ ಪದ್ಧತಿಯ ಸಂದರ್ಭದಲ್ಲಿ ಕನ್ನಡ ಮಾಧ್ಯಮದ ಪ್ರಸ್ತುತತೆಯನ್ನು ಖಚಿತಪಡಿಸಲು ಇಲ್ಲಿ ವಿನಮ್ರವಾಗಿ ಪ್ರಯತ್ನಿಸಲಾಗಿದೆ.

ಗಡಿನಾಡಿನ ಸಮಸ್ಯೆಗಳನ್ನು ಅಧ್ಯಯನ ಮಾಡಲು ಸರ್ಕಾರವು ನೇಮಿಸಿದ ಶ್ರೀ ವಾಟಾಳ್ ನಾಗರಾಜ್ ಅವರ ಅಧ್ಯಕ್ಷತೆಯ ಗಡಿನಾಡು ಅಧ್ಯಯನ ಆಯೋಗದ ಮಧ್ಯಂತರ ವರದಿಯನ್ನು ಇಲ್ಲಿ ನೆನೆಯುತ್ತ ಅದರ ಕೆಲವು ಉಪಯುಕ್ತ ಅಂಶಗಳ ಕಡೆ ಸರ್ಕಾರವು ಗಮನ ಕೊಡಬೇಕೆಂದು ಪ್ರಾಧಿಕಾರವು ಬಯಸುತ್ತದೆ.

ಕನ್ನಡ ಮತ್ತು ನ್ಯಾಯಾಂಗ

೧೯೮೨ರಲ್ಲಿ ಸಲ್ಲಿಸಲಾದ 'ಗೋಕಾಕ್ ವರದಿ'ಯನ್ನು ಆಧರಿಸಿ ಸರ್ಕಾರವು ೨೦-೭-೧೯೮೨ರಂದು ಆದೇಶವೊಂದನ್ನು ಹೊರಡಿಸಿತು. ೨೦-೭-೧೯೮೨ರ ಇಡಿ ೧೧೩ ಎಸ್.ಒ.ಎಚ್.೭೯ ಕ್ರಮಾಂಕದ ಈ ಸರ್ಕಾರಿ ಆದೇಶದಲ್ಲಿ - 'ಪ್ರೌಢಶಾಲಾ ಹಂತದಲ್ಲಿ ಕನ್ನಡವೇ ಏಕೈಕ ಪ್ರಥಮಭಾಷೆಯಾಗತಕ್ಕದ್ದೆಂದೂ ಹಾಗೂ ಈ ಆದೇಶದಲ್ಲಿ ತಿಳಿಸಿರುವಂತೆ ಕನ್ನಡವೂ ಸೇರಿದಂತೆ ೧೦ ಭಾಷೆಗಳ ಪೈಕಿ ಇತರೆ ಎರಡು ಭಾಷೆಗಳನ್ನು ವಿದ್ಯಾರ್ಥಿಗಳು ಕಲಿಕೆಗಾಗಿ ಆಯ್ಕೆ ಮಾಡಿಕೊಳ್ಳಬಹುದೆಂದೂ ಕನ್ನಡೇತರ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಥಮ ವರ್ಷದಿಂದಲೇ ಕನ್ನಡ ಬೋಧನೆ ಕಡ್ಡಾಯವಾಗತಕ್ಕದ್ದೆಂದೂ-ತಿಳಿಸಲಾಗಿತ್ತು. ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಈ ಆದೇಶವನ್ನು ಕೆಲವರು ಪ್ರಶ್ನಿಸಿದರು. ಉಚ್ಚ ನ್ಯಾಯಾಲಯವು ಸಂವಿಧಾನದ ಅನುಚ್ಛೇದ ೧೪, ೨೯(೧) ಮತ್ತು ೩೦(೧)ರ ವಿಧಿಗಳನ್ನು ೨೦-೭-೧೯೮೨ರ ಸರ್ಕಾರಿ ಆದೇಶವು ಉಲ್ಲಂಘಿಸುತ್ತದೆಯೆಂದು ಹೇಳಿ ಅದನ್ನು ಅನೂರ್ಜಿತಗೊಳಿಸಿತು. ಆದರೂ ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷೆಯ ಜೊತೆಗೆ ಇನ್ನೊಂದು ಭಾಷೆಯನ್ನು ಬೋಧಿಸಲು ಒಪ್ಪಿಗೆ ನೀಡಿದ ನ್ಯಾಯಾಲಯವು ಪ್ರೌಢಶಿಕ್ಷಣದ ಹಂತದಲ್ಲಿ ಮೂರು ಭಾಷೆಗಳಲ್ಲಿ ಒಂದಾಗಿ ಕನ್ನಡವನ್ನು ಕಡ್ಡಾಯಗೊಳಿಸಲು ಸರ್ಕಾರಕ್ಕೆ ಅಧಿಕಾರ ನೀಡಿತು; ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯಗೊಳಿಸುವ ಈ ನೀತಿಯನ್ನು ಕನ್ನಡ ಮಾತೃಭಾಷೆಯಾದ ಎಲ್ಲರಿಗೂ ಮತ್ತು

ರಾಜ್ಯದ ಶಾಶ್ವತ ನಿವಾಸಿಗಳಾದ ಮತ್ತು ಶಾಶ್ವತ ನಿವಾಸಿಗಳಾಗುವ ಭಾಷಾ ಅಲ್ಪಸಂಖ್ಯಾತರಿಗೂ ಅನ್ವಯಿಸಲು ಸರ್ಕಾರಕ್ಕೆ ಸ್ವಾತಂತ್ರ್ಯ ನೀಡಲಾಯಿತು.

ರಾಜ್ಯ ಸರ್ಕಾರವು ೨೦-೭-೧೯೮೨ರ ತನ್ನ ಆದೇಶವನ್ನು ಅನೂರ್ಜಿತಗೊಳಿಸಿದ ಉಚ್ಚನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿತು. ಅದೇ ಕಾಲಕ್ಕೆ ಸರ್ಕಾರವು ೧೯-೨-೧೯೮೯ರಂದು ಇಡಿ. ೮೭ ಪ್ರೌಶಿಭಾ ೮೮ ಕ್ರಮಾಂಕದ ಆದೇಶವೊಂದನ್ನು ಹೊರಡಿಸಿತು. ಈ ಆದೇಶದ ಪ್ರಕಾರ -

(ಅ) ೧ ರಿಂದ ೪ನೇ ತರಗತಿಯವರೆಗೆ ಮಾತೃಭಾಷೆಯು ಬೋಧನಾ ಮಾಧ್ಯಮವಾಗಿರಬೇಕು.

(ಆ) ಕನ್ನಡೇತರ ಶಾಲೆಗಳಲ್ಲಿ ಮೂರನೇ ತರಗತಿಯಿಂದ ಕನ್ನಡವನ್ನು ಐಚ್ಛಿಕ ವಿಷಯವಾಗಿ ಬೋಧಿಸಬೇಕು.

(ಇ) ಪ್ರೌಢಶಾಲಾ ಹಂತದಲ್ಲಿ ಒಂದು ಭಾಷೆಯಾಗಿ ಕನ್ನಡ ಕಲಿಕೆ ಕಡ್ಡಾಯವಾಗಬೇಕು.

ಸರ್ಕಾರವು ೧೯೮೭-೮೮ರ ಶೈಕ್ಷಣಿಕ ವರ್ಷದ ನಂತರ ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡಬಾರದೆಂದು ತೀರ್ಮಾನಿಸಿತು. ಈ ತೀರ್ಮಾನವನ್ನೂ ಒಳಗೊಂಡಂತೆ ಸರ್ಕಾರದ ೧೯-೬-೧೯೮೯ರ ಆದೇಶವನ್ನು ಪ್ರಶ್ನಿಸಿ ಕೆಲವು ಸಂಸ್ಥೆಗಳು ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದಲ್ಲಿ ಅರ್ಜಿ ಹಾಕಿದವು. ಸರ್ವೋಚ್ಚ ನ್ಯಾಯಾಲಯವು ೮ನೇ ಡಿಸೆಂಬರ್ ೧೯೯೩ರಲ್ಲಿ ಕೊಟ್ಟ ತನ್ನ ತೀರ್ಪಿನಲ್ಲಿ ಕರ್ನಾಟಕ ಸರ್ಕಾರದ ೧೯ನೇ ಜೂನ್ ೧೯೮೯ರ ಆದೇಶದ ಸಿಂಧುತ್ವವನ್ನು ಎತ್ತಿ ಹಿಡಿಯಿತು. ಜೊತೆಗೆ 'ಭಾಷಾನೀತಿಯನ್ನು ಹೇಗೆ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದು ರಾಜ್ಯಕ್ಕೆ ತಿಳಿದಿದೆ; ಈ ವಿಚಾರದಲ್ಲಿ ನ್ಯಾಯಾಲಯವು ಹಸ್ತಕ್ಷೇಪ ಮಾಡಬಾರದು' ಎಂದೂ ಅಭಿಪ್ರಾಯಪಟ್ಟಿತು.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ನಂತರ ಸರ್ಕಾರವು ೨೯-೪-೧೯೯೪ರ ಇ.ಡಿ. ೨೮ ಪಿಜಿಸಿ ೯೪ ಕ್ರಮಾಂಕದ ಹೊಸ ಆದೇಶವನ್ನು ಹೊರಡಿಸಿತು. ಈ ಆದೇಶದ ಪ್ರಕಾರ -

(ಅ) ೧ ರಿಂದ ೪ನೇ ತರಗತಿಯವರೆಗೆ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಿರುತ್ತದೆ. ಕನ್ನಡೇತರ ವಿದ್ಯಾರ್ಥಿಗಳಿಗೆ ಮೂರನೇ ತರಗತಿಯಿಂದ ಕನ್ನಡವನ್ನು ಐಚ್ಛಿಕವಾಗಿ ಕಲಿಸಬಹುದು. ಆದರೆ ಪರೀಕ್ಷೆ ಇರುವುದಿಲ್ಲ.

(ಆ) ೫ನೇ ತರಗತಿಯಿಂದ ಮೂರನೇ ಭಾಷೆಯನ್ನು ಜಾರಿಗೆ

ತರಲಾಗುವುದು. ಒಂದು ಮತ್ತು ಎರಡನೇ ಭಾಷೆಯನ್ನು ಬಿಟ್ಟು ಬೇರೆ ಭಾಷೆಯನ್ನು ಇಲ್ಲಿ ಆಯ್ಕೆ ಮಾಡಿಕೊಳ್ಳಬಹುದು. ಆದರೆ ಉತ್ತೀರ್ಣರಾಗುವುದು ಕಡ್ಡಾಯವಲ್ಲ.

(ಇ) ಪ್ರೌಢಶಾಲಾ ಹಂತದಲ್ಲಿ ಮೂರು ಭಾಷೆಗಳನ್ನು ಕಲಿಸಲಾಗುವುದು. ಕನ್ನಡದಲ್ಲಿ ಉತ್ತೀರ್ಣರಾಗುವುದು ಕಡ್ಡಾಯ.

(ಈ) ೫ನೇ ತರಗತಿಯಿಂದ ವಿದ್ಯಾರ್ಥಿಗಳು ಮಾತೃಭಾಷೆಗೆ ಹೊರತಾದ ಭಾಷಾ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳಬಹುದು. ಇಲ್ಲಿ ಮಾತೃಭಾಷಾ ಮಾಧ್ಯಮ ಕಡ್ಡಾಯವಲ್ಲ.

(ಉ) ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್ (ಸಿ.ಬಿ.ಎಸ್.ಇ.) ಅಥವಾ ಇಂಡಿಯನ್ ಕೌನ್ಸಿಲ್ ಆಫ್ ಸೆಕೆಂಡರಿ ಎಜುಕೇಷನ್ (ಐ.ಸಿ.ಎಸ್.ಇ.) ಶಾಲೆಗಳನ್ನು ತೆರೆಯಲು ಸರ್ಕಾರವು ನಿರಾಕ್ಷೇಪಣಾ (ಎನ್.ಓ.ಸಿ.) ಪತ್ರ ಕೊಡಲು ನಿರ್ಬಂಧಗಳನ್ನು ಹಾಕಿದ್ದು - ಅಂತರರಾಜ್ಯ ವರ್ಗಾವಣೆ, ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಶಾಖೆಗಳನ್ನು ಹೊಂದಿದ ಬ್ಯಾಂಕು ಮತ್ತು ವಾಣಿಜ್ಯಾದಿ ಸಂಸ್ಥೆಗಳು, ಕೇಂದ್ರ ಸರ್ಕಾರದ ಸೇವೆ ಮತ್ತು ಕೇಂದ್ರೋದ್ಯಮಕ್ಕೆ ಸೇರಿದ ಪೋಷಕರ ಮಕ್ಕಳಿದ್ದಲ್ಲಿ ಮಾತ್ರ ನಿರಾಕ್ಷೇಪಣಾ ಪತ್ರ ಕೊಡುವುದಾಗಿ ಹೇಳಲಾಗಿದೆ.

ಸರ್ಕಾರದ ಈ ಆದೇಶವನ್ನು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಯಿತು. ಜೊತೆಗೆ ೧೯೮೯ಕ್ಕೆ ಮುಂಚೆ ಪ್ರಾರಂಭವಾದ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆಗಳಿಗೆ ಕಡ್ಡಾಯ ಕನ್ನಡ ಮಾಧ್ಯಮದ ನೀತಿಯನ್ನು ಅನ್ವಯಿಸಲು ಸಾಧ್ಯವಾಗದಂತೆ, ತಡೆಯಾಜ್ಞೆಯನ್ನೂ ತರಲಾಗಿತ್ತು. ಹೀಗಾಗಿ ೧೯೮೯ರ ನಂತರ ಪ್ರಾರಂಭವಾದ ೧ ರಿಂದ ೪ನೇ ತರಗತಿಯ (ಕಿರಿಯ) ಪ್ರಾಥಮಿಕ ಶಾಲೆಗಳು ಕನ್ನಡ ಮಾಧ್ಯಮವನ್ನೇ ಅಳವಡಿಸಿಕೊಳ್ಳಬೇಕಾದ್ದು ಸರ್ಕಾರದ ನೀತಿಯಾಗಿದ್ದರೆ, ಅದಕ್ಕೆ ಹಿಂದೆಯೇ ಪ್ರಾರಂಭವಾದ ಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಉಳಿದುಕೊಂಡು ಬಂದಿದೆ.

ಕನ್ನಡ ಮಾಧ್ಯಮಪರವಾದ ಸರ್ಕಾರಿ ಆದೇಶದ ವಿರುದ್ಧ ಸಹ್ಯಾದ್ರಿ ಸಂಸ್ಥೆಯು ಮೇಲ್ಮನವಿ ಸಲ್ಲಿಸಿ, ಆನಂತರ ಇದು ಸಹ್ಯಾದ್ರಿ ಪ್ರಕರಣವೆಂದೇ ಹೆಸರು ಗಳಿಸಿತು. ಅಂತಿಮವಾಗಿ ೧೯೯೯ರಲ್ಲಿ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯವು ಈ ಪ್ರಕರಣವು ನಿರರ್ಥಕ ಎಂದು ಭಾವಿಸಿ ವಜಾ ಮಾಡಿತು. ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನ ಅನ್ವಯ - ರಾಜ್ಯ ಉಚ್ಚ ನ್ಯಾಯಾಲಯವನ್ನು ಕೂಡಲೇ ಸಂಪರ್ಕಿಸಿ - ಆಂಗ್ಲ ಮಾಧ್ಯಮ ಶಾಲೆಗಳಿಗೆ ಸಂಬಂಧಿಸಿದಂತೆ ನೀಡಿರುವ ಯಥಾಸ್ಥಿತಿ ಆದೇಶವನ್ನು

ತ್ವರಿತವಾಗಿ ತೆರವುಗೊಳಿಸಲು ಮತ್ತು ದಿನಾಂಕ ೨೯-೪-೧೯೯೪ರ ಆದೇಶದ ಅನುಸಾರ, ಆಂಗ್ಲ ಮಾಧ್ಯಮ ಶಾಲೆಗಳು ಮಾತೃಭಾಷಾ ಮಾಧ್ಯಮ ಬೋಧನೆಗೆ ಪರಿವರ್ತಿಸಿಕೊಳ್ಳಲು ಆದೇಶ ನೀಡುವಂತೆ ಕೋರಲು - ಸರ್ಕಾರವು ಕೂಡಲೇ ಕ್ರಮಕೈಗೊಳ್ಳಬೇಕಾಗಿದೆ.

ನೀತಿ ನಿರೂಪಣೆ ಮತ್ತು ಶಿಫಾರಸುಗಳು

೧. ಪ್ರಾಥಮಿಕಪೂರ್ವ ಶಿಕ್ಷಣದ ಏಕರೂಪತೆ ಮತ್ತು ಕನ್ನಡ

ಸರ್ಕಾರದ ದಿನಾಂಕ ೨೯-೪-೧೯೯೪ರ ಆದೇಶದ ಪ್ರಕಾರ ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗಿನ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡವೇ (ಮಾತೃಭಾಷೆ) ಬೋಧನಾ ಮಾಧ್ಯಮವಾಗಿರಬೇಕೆಂದು ಕಡ್ಡಾಯಗೊಳಿಸಲಾಗಿದೆ. ಈ ಆದೇಶ ಹಾಗೂ ಆಶಯಕ್ಕೆ ಮತ್ತಷ್ಟು ಸಾರ್ಥಕತೆ ಬರಬೇಕಾದರೆ ಪ್ರಾಥಮಿಕ ಪೂರ್ವ ಶಿಕ್ಷಣದಿಂದಲೇ ಕನ್ನಡ ಮಾಧ್ಯಮವನ್ನು ಕಡ್ಡಾಯಗೊಳಿಸುವುದು ಅಗತ್ಯವಾಗಿದೆ.

ಪ್ರಾಥಮಿಕಪೂರ್ವ ಶಿಕ್ಷಣವು ನಗರ, ಪಟ್ಟಣ ಮತ್ತು ಕೆಲವು ಹಳ್ಳಿಗಳಲ್ಲಿ ಸಹ ಪ್ರಾರಂಭವಾಗಿದ್ದು ಆಂಗ್ಲ ಭಾಷೆ ಕಾನ್ವೆಂಟುಗಳು ಹೆಚ್ಚಾಗುತ್ತಿವೆ. ಇದು ಮೇಲ್ನೋಟಕ್ಕೆ ಅನೌಪಚಾರಿಕ ಶಿಕ್ಷಣದಂತೆ ಕಾಣಿಸಿದರೂ ಬೋಧನೆ ಹಾಗೂ ಸಂವಾದದ ಮಾಧ್ಯಮವಾಗಿ ಆಂಗ್ಲಭಾಷೆಯನ್ನೇ ಬಳಸುವ ಬಗ್ಗೆ ಕ್ರಮಬದ್ಧತೆ ಲಭ್ಯವಾಗಿದೆ. ಪ್ರಾಥಮಿಕ ಪೂರ್ವ ಶಿಕ್ಷಣವನ್ನು ಆಂಗ್ಲ ಭಾಷಾ ಮಾಧ್ಯಮದಲ್ಲಿ ಕಲಿತವರು ಆನಂತರ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಗಳಿಗೆ ಸೇರುತ್ತಾರೆಂದು ನಿರೀಕ್ಷಿಸಲಾಗದು. ಜೊತೆಗೆ ಆಂಗ್ಲ ಮಾಧ್ಯಮದಲ್ಲಿ ಪ್ರಾಥಮಿಕಪೂರ್ವ ಶಿಕ್ಷಣ ಪಡೆಯುವವರು ಮಧ್ಯಮವರ್ಗ ಮತ್ತು ಅದಕ್ಕೆ ಮೇಲ್ಪಟ್ಟವರಾಗಿದ್ದು ಅವರೆಲ್ಲ ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶ ಪಡೆಯುವಾಗ ಬಹುಪಾಲು ಆಂಗ್ಲಮಾಧ್ಯಮವನ್ನೇ ಆಯ್ಕೆ ಮಾಡಿಕೊಂಡು, ನಗರದ ಕೆಳಮಧ್ಯಮ ಮತ್ತು ಕೆಳವರ್ಗದ ಮಕ್ಕಳು ಮಾತ್ರ ಕನ್ನಡ ಮಾಧ್ಯಮಕ್ಕೆ ಸೇರುತ್ತಾರೆ. ಮಧ್ಯಮವರ್ಗದ ಕೆಲವರು ಪೋಷಕರು ಆಸಕ್ತಿಯಿಂದ ಅವರ ಮಕ್ಕಳನ್ನು ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆಗಳಿಗೆ ಸೇರಿಸುತ್ತಿರುವುದು ನಿಜವಾದರೂ ಅವರ ಆಸಕ್ತಿ ಕುಗ್ಗುತ್ತಿರುವ ವಾತಾವರಣ ನಿರ್ಮಾಣವಾಗುತ್ತಿದೆ. ಹಳ್ಳಿಗಳಿಗೆ ಬಂದರೆ, ಪ್ರಾಥಮಿಕ ಪೂರ್ವ ಶಿಕ್ಷಣವು ಅಂಗನವಾಡಿಗಳ ಮಾದರಿಯಲ್ಲಿ ಅಸ್ತಿತ್ವದಲ್ಲಿದೆ. ಇಲ್ಲಿ ಇರುವುದು ಪೂರ್ಣ ಕನ್ನಡ ಮಾಧ್ಯಮ. ಅಂದರೆ ಆಂಗ್ಲ ಮಾಧ್ಯಮವು ಬಹುಪಾಲು ಉಳ್ಳವರ ಮಾಧ್ಯಮವಾಗುತ್ತಿದ್ದು, ಗ್ರಾಮೀಣ ಜನರು ಮತ್ತು ನಗರ -ಪಟ್ಟಣಗಳ ಬಡವರು ಕನ್ನಡ ಮಾಧ್ಯಮದಲ್ಲಿ ಓದುತ್ತಿದ್ದಾರೆ. ಈ ಅಸಮತೋಲನವನ್ನು ತಪ್ಪಿಸುವುದು ಶಿಕ್ಷಣದ ಪ್ರಮುಖ ಆಶಯವಾಗಬೇಕಾಗಿದೆ.

ಆದ್ದರಿಂದ ಅಂಗನವಾಡಿಗಳ ಮತ್ತು ಪ್ರಾಥಮಿಕ ಪೂರ್ವ ಆಂಗ್ಲಭಾಷಾ ಕಾನ್ವೆಂಟುಗಳನ್ನು ಒಂದೇ ನಿಯಮದಡಿ ತರುವುದು ತುಂಬಾ ತುರ್ತಿನ ಕೆಲಸವಾಗಬೇಕು. ಹೀಗೆ ಹೇಳಿದಾಗ ಪ್ರಾಥಮಿಕ ಪೂರ್ವ ಶಿಕ್ಷಣವು ಸರ್ಕಾರದ ಅಧಿಕೃತ ಹಿಡಿತಕ್ಕೆ ಬರುವುದಿಲ್ಲವೆಂದು ಭಾವಿಸುವವರೂ ಇದ್ದಾರೆ. ಬಹುಶಃ ಪ್ರಾಥಮಿಕ ಪೂರ್ವ ಶಿಕ್ಷಣವು ಅನೌಪಚಾರಿಕ ಶಿಕ್ಷಣವೆಂಬ ಭಾವನೆಯಿಂದ ಈ ರೀತಿಯ ಅಭಿಪ್ರಾಯವು ಮೂಡಿರಬಹುದು.

ವಾಸ್ತವವಾಗಿ, ಗ್ರಾಮೀಣ ಪ್ರದೇಶದ ಅಂಗನವಾಡಿಗಳು ಸರ್ಕಾರದ ಪ್ರಾಥಮಿಕ ಪೂರ್ವ ಶಿಕ್ಷಣದ ಅಧಿಕೃತ ಭಾಗವೆಂಬುದನ್ನು ಇಲ್ಲಿ ಗಮನಿಸಬೇಕು. ಇವು ಸರ್ಕಾರದ ನೇರ ನಿರ್ದೇಶನದಲ್ಲೇ ನಡೆಯುತ್ತವೆ. ಇನ್ನು, ಆಂಗ್ಲ ಮಾಧ್ಯಮ ಪ್ರಾಥಮಿಕ ಪೂರ್ವ ಶಿಕ್ಷಣವು ಸರ್ಕಾರದ ನಿಯಂತ್ರಣಕ್ಕೆ ಬಂದೇ ಇಲ್ಲವೆಂದು ಹೇಳಲಾಗದು. ಸರ್ಕಾರವು ರೂಪಿಸಿದ 'ಕರ್ನಾಟಕ ಶಿಕ್ಷಣ ಸಂಸ್ಥೆಗಳ ನಿಯಮಾವಳಿ-೧೯೯೫' - ಎಂಬ ಕಾನೂನು-ವರ್ಗೀಕರಣ, ಕ್ರಮಬದ್ಧತೆ ಮತ್ತು ಪಠ್ಯಕ್ರಮ ನಿಗದಿಗೆ ಸಂಬಂಧಿಸಿದ್ದು, ಪ್ರಾಥಮಿಕ ಪೂರ್ವ ಶಿಕ್ಷಣವನ್ನೂ ತನ್ನ ನಿಯಮಗಳಡಿಗೆ ತಂದಿರುವುದನ್ನು ಗಮನಿಸಬೇಕು. ಕೆಲವು ವಿವರಗಳು ಕೆಳಕಂಡಂತಿವೆ :

೧. ಕರ್ನಾಟಕ ಶಿಕ್ಷಣ ಸಂಸ್ಥೆಗಳ ನಿಯಮಗಳು-೧೯೯೫ರ ೧೦ನೇ ಪರಿಚ್ಛೇದದ ಮೂರನೇ ವಿಭಾಗದಲ್ಲಿ ಶಿಕ್ಷಣ ಶುಲ್ಕದ ಬಗ್ಗೆ ತಿಳಿಸಲಾಗಿದ್ದು -'ಪ್ರಾಥಮಿಕ ಪೂರ್ವ ಮತ್ತು ಕಿರಿಯ ಪ್ರಾಥಮಿಕ ವಿದ್ಯಾರ್ಥಿಗಳಿಂದ ಅವಧಿ ಶುಲ್ಕವನ್ನು ವಸೂಲಿ ಮಾಡಬಾರದು' ಎಂದು ಸರ್ಕಾರವು ಸೂಚಿಸಿದೆ.

೨. ಇದೇ ನಿಯಮಾವಳಿಯ ೧೪ನೇ ಪರಿಚ್ಛೇದದ ಮೂರನೇ ವಿಭಾಗದಲ್ಲಿ ಪ್ರಾಥಮಿಕ ಪೂರ್ವ ಶಿಕ್ಷಣದಿಂದ ಪದವಿ ಶಿಕ್ಷಣದವರೆಗೆ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸುವ ನಿಯಮಾನುಸಾರ ಪ್ರತಿ ತರಗತಿಯ ಶೇ. ೨೫ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕೊಡಬೇಕೆಂದು ಸರ್ಕಾರದ ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳಿಗೆ ತಿಳಿಸಲಾಗಿದೆ. ಅಂದರೆ ಪ್ರತಿ ತರಗತಿಯಲ್ಲಿ ಸರ್ಕಾರದ ನೀತಿಗನುಸಾರವಾಗಿ ಶೇ. ೨೫ ಭಾಗ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಉಳಿದ ಸೀಟುಗಳನ್ನು ಆಯಾ ಶಿಕ್ಷಣ ಸಂಸ್ಥೆಗಳು ನಿರ್ವಹಿಸಬಹುದಾಗಿದೆ. ಈ ನಿಯಮವು ಸರ್ಕಾರದಿಂದ ಮನ್ನಣೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನ್ವಯಿಸುತ್ತದೆಯೆಂಬುದನ್ನೂ, ಪ್ರಾಥಮಿಕ ಪೂರ್ವ ಶಿಕ್ಷಣವನ್ನು ಈ ನಿಯಮದಡಿಗೆ ತರಲಾಗಿದೆಯೆಂಬುದನ್ನೂ ಗಮನಿಸಬೇಕು.

೩. ಇದೇ ನಿಯಮಾವಳಿಯ ೧೪ನೇ ಪರಿಚ್ಛೇದದ ೫ನೇ ವಿಭಾಗವು - ಪ್ರಾಥಮಿಕ ಪೂರ್ವ ಶಿಕ್ಷಣದಿಂದ ಪದವಿ ಶಿಕ್ಷಣದವರೆಗೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳಿಗನುಸಾರವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ

ವರ್ಗಗಳಿಗೆ ಮೀಸಲಾತಿ ನೀಡಿ ಪ್ರವೇಶಾವಕಾಶ ಕಲ್ಪಿಸಬೇಕೆಂದು-ತಿಳಿಸಿದೆ. ಇದು ಸರ್ಕಾರದಿಂದ ಮನ್ನಣೆ ಪಡೆದ, ಸರ್ಕಾರದಿಂದ ಸ್ಥಾಪಿತವಾದ, ಅಥವಾ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಅನ್ವಯಿಸುತ್ತದೆ.

೪. ಇದೇ ನಿಯಮಾವಳಿಯ ೧೪ನೇ ಪರಿಚ್ಛೇದದ ೬ನೇ ವಿಭಾಗವು ಸಹಶಿಕ್ಷಣದ ತರಗತಿಗಳಲ್ಲಿ - ಅಂದರೆ ಪ್ರಾಥಮಿಕ ಪೂರ್ವದಿಂದ ಪದವಿವರೆಗಿನ ಸಹಶಿಕ್ಷಣ ತರಗತಿಗಳಲ್ಲಿ - ಆಯಾ ವಿಭಾಗ ಮತ್ತು ಮೀಸಲಾತಿ ಗುಂಪುಗಳಲ್ಲಿ ಶೇ. ೫೦ ಭಾಗವನ್ನು ಹೆಣ್ಣುಮಕ್ಕಳಿಗೆ ಮೀಸಲಿಡಲು ಸೂಚಿಸಿದೆ. ಅಗತ್ಯ ಪ್ರಮಾಣದಲ್ಲಿ ಹೆಣ್ಣುಮಕ್ಕಳು ಪ್ರವೇಶಾವಕಾಶ ಕೋರದಿದ್ದಾಗ ಅವುಗಳನ್ನು ಮೀಸಲಾತಿರಹಿತ ಸೀಟುಗಳೆಂದು ಪರಿಗಣಿಸಬಹುದಾಗಿದೆ.

೫. ಇದೇ ನಿಯಮಾವಳಿಯ ೧೮ನೇ ಪರಿಚ್ಛೇದದ ೨ನೇ ವಿಭಾಗದಲ್ಲಿ ಪ್ರಾಥಮಿಕ ಪೂರ್ವದಿಂದ ಪ್ರೌಢಶಾಲೆಯವರೆಗಿನ ಶಿಕ್ಷಣ ಸಂಸ್ಥೆಗಳು ಪ್ರತಿದಿನ ಕನಿಷ್ಠ ಐದೂವರೆ ಗಂಟೆಗಳ ಕೆಲಸ ಮಾಡಬೇಕೆಂದೂ, ಶನಿವಾರ ಬೆಳಗಿನ ತರಗತಿಗಳನ್ನು ಮಾತ್ರ ನಡೆಸಿ ಅರ್ಧದಿನ ಕೆಲಸ ಮಾಡಬೇಕೆಂದು ನಿರ್ದೇಶಿಸಲಾಗಿದೆ.

ಮೇಲೆ ಉಲ್ಲೇಖಿಸಿದ ಎಲ್ಲ ನಿಯಮಗಳು ಪ್ರಾಥಮಿಕ ಪೂರ್ವ ಶಿಕ್ಷಣಕ್ಕೂ ಸಂಬಂಧಿಸಿವೆ. ಅಂದರೆ ಸರ್ಕಾರವು ಕೆಲವು ವಿಷಯಗಳಲ್ಲಿ - ವಿಶೇಷವಾಗಿ ಸರ್ಕಾರದಿಂದ ಮನ್ನಣೆ ಪಡೆದ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ - ಪ್ರಾಥಮಿಕ ಪೂರ್ವ ಶಿಕ್ಷಣವನ್ನು ನಿಯಮಗಳಡಿಗೆ ತರುವ ಪ್ರಯತ್ನವನ್ನು ಈಗಾಗಲೇ ಮಾಡಿದೆ.

ಈಗ ಪ್ರಾಥಮಿಕ ಪೂರ್ವ ಶಿಕ್ಷಣದಡಿಗೆ ಪೂರ್ಣ ಪ್ರಮಾಣದಲ್ಲಿ - ಕಿಂಡರ್ ಗಾರ್ಟನ್‌ನ (ನರ್ಸರಿ ಶಾಲೆಯ) ಎಲ್.ಕೆ.ಜಿ. ಮತ್ತು ಯು.ಕೆ.ಜಿ. ತರಗತಿಗಳನ್ನೂ ಅಂಗನವಾಡಿಗಳನ್ನೂ ತರುವುದಲ್ಲದೇ ಇವುಗಳಲ್ಲಿ ಏಕರೂಪತೆ ಇರುವಂತೆ ಅಗತ್ಯ ನಿಯಮಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು. ಪ್ರಾಥಮಿಕ ಪೂರ್ವ ಶಿಕ್ಷಣವು ಮಾತೃಭಾಷೆ ಮಾಧ್ಯಮದಲ್ಲೇ ನಡೆಯಬೇಕು. ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯವು ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷಾ ಮಾಧ್ಯಮದ ನೀತಿಯನ್ನು ಒಪ್ಪಿ ತೀರ್ಪು ನೀಡಿರುವುದರಿಂದ ಪ್ರಾಥಮಿಕ ಪೂರ್ವ ಶಿಕ್ಷಣಕ್ಕೆ ಈ ನೀತಿಯನ್ನು ಅನ್ವಯಿಸಲು ಕಾನೂನಿನ ತೊಡಕು ಉಂಟಾಗುವುದಿಲ್ಲವೆಂದು ಭಾವಿಸಬಹುದಾಗಿದೆ. ಯಾವುದೇ ಮಗುವಿನ ಶಿಕ್ಷಣವು ಮಾತೃಭಾಷೆಯ ಮೂಲಕವೇ ಪ್ರಾರಂಭವಾಗಬೇಕಾದ್ದರಿಂದ ಪ್ರಾಥಮಿಕ ಪೂರ್ವ ಶಿಕ್ಷಣದ ಮಾಧ್ಯಮ ಮಾತೃಭಾಷೆಯಾಗಿರುವುದು ಸಮರ್ಥನೀಯವಾದುದು. ಸರ್ಕಾರವು ನಿಗದಿಪಡಿಸಿದ ಸಂಖ್ಯೆಯಷ್ಟು ವಿದ್ಯಾರ್ಥಿಗಳು ಇಲ್ಲದಿರುವ ಕಡೆ ಮಾತೃಭಾಷೆಯ ಬದಲು ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ಪೂರ್ವ ಶಿಕ್ಷಣ ಪಡೆಯಬೇಕೆಂಬ ನಿಯಮ ರೂಪಿಸಬೇಕಾಗುತ್ತದೆ.

ಹಿಂದೆಯೇ ಪ್ರಸ್ತಾಪಿಸಿದಂತೆ ಸರ್ಕಾರವು 'ಕರ್ನಾಟಕ ಶಿಕ್ಷಣ ಸಂಸ್ಥೆಗಳ ನಿಯಮಾವಳಿ, ೧೯೭೫ - ಇದರ ಪ್ರಕಾರ ಈಗಾಗಲೇ ಪ್ರಾಥಮಿಕ ಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕೆಲವು ನಿಯಮಗಳನ್ನು ರೂಪಿಸಿದ್ದು, ಇದನ್ನು ಇನ್ನಷ್ಟು ವಿಸ್ತೃತಗೊಳಿಸಿ ಕ್ರಮಬದ್ಧಗೊಳಿಸಲು, ಕರ್ನಾಟಕ ಶಿಕ್ಷಣ ಅಧಿನಿಯಮ ೧೯೮೩ ಇದರ ಮೂರನೇ ಪರಿಚ್ಛೇದದಿಂದ ದತ್ತವಾದ ಅಧಿಕಾರವನ್ನು ಬಳಸಿಕೊಂಡು ಇದೇ ಅಧಿನಿಯಮದ ಏಳನೇ ಪರಿಚ್ಛೇದದ ಪ್ರಕಾರ, ಪಠ್ಯಕ್ರಮದ ಮಾರ್ಗಸೂಚಿಯನ್ನು ನೀಡಿ, ಒಟ್ಟಾರೆ ಏಕರೂಪತೆ ತರಬೇಕು. ಕರ್ನಾಟಕ ಶಿಕ್ಷಣ ಅಧಿನಿಯಮ ೧೯೮೩ - ಇದರ ಮೂರನೇ ಪರಿಚ್ಛೇದವು ಸಾಮಾನ್ಯ ಶಿಕ್ಷಣವನ್ನು ಒಳಗೊಂಡಂತೆ ಎಲ್ಲ ಹಂತದ ಶಿಕ್ಷಣವನ್ನು ಕ್ರಮಬದ್ಧಗೊಳಿಸುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡಿದೆ. ಏಳನೇ ಪರಿಚ್ಛೇದವು ಯಾವುದೇ ರೀತಿಯ ಶಿಕ್ಷಣಕ್ಕೆ ಪಠ್ಯಕ್ರಮವನ್ನು ನಿಗದಿಗೊಳಿಸುವ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟಿದೆ. ಆದ್ದರಿಂದ ಈ ಎರಡು ಪರಿಚ್ಛೇದಗಳಿಂದ ದತ್ತವಾದ ಅಧಿಕಾರವನ್ನು ಬಳಸಿ ಪ್ರಾಥಮಿಕ ಪೂರ್ವ ಶಿಕ್ಷಣವನ್ನು ಕ್ರಮಬದ್ಧಗೊಳಿಸಿ ಕನ್ನಡ ಮಾಧ್ಯಮವನ್ನು ಅಳವಡಿಸಬಹುದಾಗಿದೆ.

ಪ್ರಾಥಮಿಕ ಪೂರ್ವ ಶಿಕ್ಷಣದಲ್ಲಿ ಕನ್ನಡ ಮಾಧ್ಯಮವನ್ನು ಅಳವಡಿಸುವ ಕ್ರಮವು ಹಿಂದೆಯೇ ಹೇಳಿದಂತೆ ಪ್ರಾಥಮಿಕ ಒಂದನೇ ತರಗತಿಯಿಂದ ಕನ್ನಡ ಮಾಧ್ಯಮದ ಅನುಷ್ಠಾನಕ್ಕೆ ಪೂರಕವಾಗುತ್ತದೆ. ಇದು ತಾರ್ಕಿಕವಾಗಿಯೂ ಸೂಕ್ತವಾಗುತ್ತದೆ. ತಾತ್ವಿಕವಾಗಿಯೂ ಸಮರ್ಥನೀಯವಾಗುತ್ತದೆ.

ಶಿಫಾರಸು ೧

ಕರ್ನಾಟಕ ಶಿಕ್ಷಣ ಅಧಿನಿಯಮ – ೧೯೮೩ – ಇದರಿಂದ ದತ್ತವಾದ ಅಧಿಕಾರವನ್ನು ಬಳಸಿಕೊಂಡು ಸರ್ಕಾರವು ಅಂಗನವಾಡಿ ಮತ್ತು ಕಿಂಡರ್ ಗಾರ್ಟನ್ ಅಂದರೆ ನರ್ಸರಿ ಶಾಲೆಯ (ಎಲ್.ಕೆ.ಜಿ. ಮತ್ತು ಯು.ಕೆ.ಜಿ.) ಶಿಕ್ಷಣವನ್ನು ಒಟ್ಟುಗೂಡಿಸಿ ಪ್ರಾಥಮಿಕಪೂರ್ವ ಶಿಕ್ಷಣಕ್ಕೆ ಏಕರೂಪತೆ ತರಬೇಕು. ಈ ಪ್ರಾಥಮಿಕಪೂರ್ವ ಶಿಕ್ಷಣದಿಂದಲೇ ಕನ್ನಡ ಮಾಧ್ಯಮ ಕಡ್ಡಾಯವಾಗಬೇಕು.

೨. ಪ್ರಾಥಮಿಕ ಶಿಕ್ಷಣ ಮತ್ತು ಕನ್ನಡ ಮಾಧ್ಯಮ

ಕರ್ನಾಟಕ ಶಿಕ್ಷಣ ಅಧಿನಿಯಮ ೧೯೮೩ರ ೨ನೇ ಪರಿಚ್ಛೇದದ ೨೫ನೇ ವಿಭಾಗದಲ್ಲಿ 'ಪ್ರಾಥಮಿಕ ಶಿಕ್ಷಣ ಎಂದರೆ ಈ ಅಧಿನಿಯಮದ ಪ್ರಕಾರ ನಿಗದಿಗೊಳಿಸಿದ ತರಗತಿಗಳ ಶಿಕ್ಷಣ' ಎಂದು ವಿವರಿಸಿರುವುದಲ್ಲದೆ ೨೬ನೇ ವಿಭಾಗದಲ್ಲಿ 'ಪ್ರಾಥಮಿಕ ಶಾಲೆ ಎಂದರೆ ಪ್ರಾಥಮಿಕ ಶಿಕ್ಷಣದ ಯಾವುದೇ ನಿಗದಿತ ತರಗತಿಯವರೆಗಿನ ಶಾಲೆ' ಎಂದು ವಿವರಿಸಲಾಗಿದೆ. ಕರ್ನಾಟಕ ಶಿಕ್ಷಣ ಸಂಸ್ಥೆಗಳ ನಿಯಮಾವಳಿ

೧೯೯೫ ಇದರಲ್ಲಿ ಈ ವಿವರಣೆಯನ್ನು ನಿರ್ದಿಷ್ಟಗೊಳಿಸಲಾಗಿದೆ. ಈ ನಿಯಮಾವಳಿಯ ಮೂರನೇ ಪರಿಚ್ಛೇದದ (ಎ) - ವಿಭಾಗದಲ್ಲಿ ಏಳನೇ ತರಗತಿಯೊಳಗಿನ ವಿಭಾಗಗಳು (Standards) ಪ್ರಾಥಮಿಕ ಶಿಕ್ಷಣವೆಂದು ಸ್ಪಷ್ಟಪಡಿಸಿದ್ದು ೧ ರಿಂದ ೪ನೇ ತರಗತಿಯವರೆಗೆ ಕಿರಿಯ ಪ್ರಾಥಮಿಕ ವರ್ಗ ೫ ರಿಂದ ೭ನೇ ತರಗತಿಯವರೆಗೆ ಹಿರಿಯ ಪ್ರಾಥಮಿಕ ಎಂದು ವಿಂಗಡಿಸಲಾಗಿದೆ. ಈ ವಿಂಗಡಣೆಯು ಕೇವಲ ತಾಂತ್ರಿಕ ಎನ್ನುವುದು ಮೇಲುನೋಟಕ್ಕೇ ಅರಿವಾಗುತ್ತದೆ. ಆದ್ದರಿಂದ ೧ ರಿಂದ ೭ನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣವೆಂಬುದು ಅತ್ಯಂತ ಸ್ಪಷ್ಟ ವಿಚಾರವಾಗಿದೆ.

ಪ್ರಾಥಮಿಕ ಶಿಕ್ಷಣವು ಮಾತೃಭಾಷಾ ಮಾಧ್ಯಮದಲ್ಲಿ ನಡೆಯಬೇಕೆಂದು ಶಿಕ್ಷಣತಜ್ಞರ ಒಟ್ಟಾಭಿಪ್ರಾಯವಾಗಿದೆ, ಕರ್ನಾಟಕ ಸರ್ಕಾರದ ಒಪ್ಪಿತ ನೀತಿಯೂ ಆಗಿದೆ. ಹಿಂದಿನ ಅಧ್ಯಕ್ಷರ ಅವಧಿಯ ಪ್ರಾಧಿಕಾರದ ತಜ್ಞರ ಸಮಿತಿ ಸಹ ೧ ರಿಂದ ೭ನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣವೆಂದು ಪರಿಗಣಿಸಲು ತಿಳಿಸಿ ಮಾತೃಭಾಷಾ ಮಾಧ್ಯಮಕ್ಕೆ ಶಿಫಾರಸ್ಸು ಮಾಡಿದೆ. ಇದನ್ನು ಈಗಿನ ಪ್ರಾಧಿಕಾರವೂ ಒಪ್ಪುತ್ತದೆ. ಪ್ರಾಥಮಿಕ ಶಿಕ್ಷಣದ ಮೊದಲನೇ ತರಗತಿಯಿಂದ ಎಲ್ಲಾ ಶಾಲೆಗಳಲ್ಲಿ ಕನ್ನಡ ಮಾಧ್ಯಮವನ್ನು ಅನುಷ್ಠಾನಕ್ಕೆ ತರಲು ಇರುವ ಒಂದು ತೊಡಕೆಂದರೆ - ರಾಜ್ಯದ ಉಚ್ಚ ನ್ಯಾಯಾಲಯಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಯವರು ಮೇಲ್ಮನವಿ ಸಲ್ಲಿಸಿ ೧೯೮೯ರಿಂದ ಹಿಂದೆ ಪ್ರಾರಂಭವಾದ ಶಾಲೆಗಳಲ್ಲಿ ಆಂಗ್ಲ ಮಾಧ್ಯಮವನ್ನೇ ಉಳಿಸಿಕೊಳ್ಳುವಂತೆ ಸೂಚಿಸುವ ತಾತ್ಕಾಲಿಕ ತಡೆಯಾಜ್ಞೆ ತಂದಿರುವುದು. ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯವು ಪ್ರಾಥಮಿಕ ೧ ರಿಂದ ೪ನೇ ತರಗತಿಯವರೆಗೆ ಕನ್ನಡ ಮಾಧ್ಯಮವನ್ನು ಅಳವಡಿಸುವ ಸರ್ಕಾರದ ಆದೇಶವನ್ನು ಪುರಸ್ಕರಿಸುವುದರಿಂದ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿರುವ ತಡೆಯಾಜ್ಞೆ ತೆರವಾಗುವುದು ಕಷ್ಟವಲ್ಲ. ಈ ದಿಕ್ಕಿನಲ್ಲಿ ರಾಜ್ಯ ಸರ್ಕಾರವು ತನ್ನ ವಕೀಲರಿಗೆ ತಾಕೀತು ಮಾಡಿ ತಡೆಯಾಜ್ಞೆಯ ತೆರವಿಗೆ ತೀವ್ರ ಹಾಗೂ ಶೀಘ್ರ ಕ್ರಮ ಕೈಗೊಳ್ಳಬೇಕು. ಆಗ ರಾಜ್ಯದ ಎಲ್ಲ ಶಿಕ್ಷಣ ಸಂಸ್ಥೆಗಳೂ ೧ ರಿಂದ ೪ನೇ ತರಗತಿಯವರೆಗೆ ಮಾತೃಭಾಷಾ ಮಾಧ್ಯಮಕ್ಕೆ ಪರಿವರ್ತನೆ ಹೊಂದುವುದು ಅನಿವಾರ್ಯವಾಗುತ್ತದೆ. ಸರ್ಕಾರವು ಹೊಸ ಆದೇಶವನ್ನು ಹೊರಡಿಸಿ ಕನ್ನಡ ಮಾಧ್ಯಮವನ್ನು ೭ನೇ ತರಗತಿಯವರೆಗೆ ವಿಸ್ತರಿಸಬೇಕಾಗಿದೆ.

ಶಿಫಾರಸು ೨

(ಅ) ಒಂದನೇ ತರಗತಿಯಿಂದ ಏಳನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣ - ಎಂಬುದನ್ನು ಸರಕಾರದ ದಾಖಲೆಗಳೇ ಒಪ್ಪಿದ್ದು ಈ ಪ್ರಾಥಮಿಕ ಶಿಕ್ಷಣವು - ಅಂದರೆ ೧ ರಿಂದ ೭ನೇ

ತರಗತಿಯವರೆಗಿನ ಶಿಕ್ಷಣವು – ಸಂಪೂರ್ಣವಾಗಿ ಮಾತೃಭಾಷೆ ಅಥವಾ ಕನ್ನಡ ಮಾಧ್ಯಮದ ಶಿಕ್ಷಣವಾಗಬೇಕು. ಆಂಗ್ಲಭಾಷಾ ಮಾಧ್ಯಮದ ಪ್ರಾಥಮಿಕ ಶಾಲೆಗಳು ಕ್ರಮವಾಗಿ ಕನ್ನಡ ಮಾಧ್ಯಮದ ಶಾಲೆಗಳಾಗಿ ಪರಿವರ್ತನೆ ಹೊಂದಬೇಕು.

(ಆ) ಆಂಗ್ಲ ಮಾಧ್ಯಮದ ೧ ರಿಂದ ೪ನೇ ತರಗತಿಗಳು ಕನ್ನಡ ಮಾಧ್ಯಮವಾಗಿ ಪರಿವರ್ತನೆ ಹೊಂದಬೇಕೆನ್ನುವ ಸರ್ಕಾರಿ ಆದೇಶಕ್ಕೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಯವರು ತಂದಿರುವ ತಡೆಯಾಜ್ಞೆಯನ್ನು – ಸುಪ್ರೀಂಕೋರ್ಟಿನ ಮಾತೃಭಾಷಾ ಮಾಧ್ಯಮದ ಪರವಾದ ತೀರ್ಪಿನ ಹಿನ್ನೆಲೆಯಲ್ಲಿ ಕೂಡಲೇ ತೆರವು ಮಾಡಿಸಬೇಕು.

೩. ಕನ್ನಡ ಮಾಧ್ಯಮ : ವೃತ್ತಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಆದ್ಯತೆ

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಬೇಕೆಂಬುದು ಒಂದು ವೈಜ್ಞಾನಿಕ ಆದರ್ಶ. ಶಿಕ್ಷಣ ತಜ್ಞರೂ, ಭಾಷಾ ವಿಜ್ಞಾನಿಗಳೂ ಒಪ್ಪಿರುವ ವಿಷಯ. ಆದರೆ ಕನ್ನಡ ಮಾಧ್ಯಮವನ್ನು ಉನ್ನತ ಶಿಕ್ಷಣದವರೆಗೆ ವಿಸ್ತರಿಸುವ ಆಶಯ ಅನುಷ್ಠಾನಗೊಳ್ಳಬೇಕೆಂಬ ನಮ್ಮೆಲ್ಲರ ದೃಷ್ಟಿಕೋನದ ನಡುವೆಯೂ ಪ್ರಾಥಮಿಕ ಏಳನೇ ತರಗತಿಯವರೆಗೆ ಕನ್ನಡ ಮಾಧ್ಯಮವನ್ನು ಇನ್ನೂ ಕಡ್ಡಾಯ ಮಾಡಲಾಗಿಲ್ಲವೆಂಬ ವಸ್ತುಸ್ಥಿತಿ ಕಣ್ಣೆದುರಿಗಿದೆ. ಸಾಮಾನ್ಯವಾಗಿ ಜನರು ಆಂಗ್ಲ ಮಾಧ್ಯಮದ ಮೂಲಕ ನಿರುದ್ಯೋಗ ನಿವಾರಣೆ ಹೆಚ್ಚು ಸಾಧ್ಯವೆಂಬ ಭಾವನೆಯ ಜೊತೆಗೆ ತಮಗಿಂತ ಮೇಲಿನ ವರ್ಗದ ಮಕ್ಕಳ ಆಂಗ್ಲ ಮಾದರಿಗಳನ್ನು ನೋಡಿ ತಮ್ಮ ಮಕ್ಕಳನ್ನೂ ಹಾಗೇ ಮಾಡಬೇಕೆಂದು ಬಯಸುತ್ತಿದ್ದಾರೆ. ಇಂಥ ಸಂದಿಗ್ಧ ಸಂದರ್ಭದಲ್ಲಿ ನಾವು ಕನ್ನಡ ಮಾಧ್ಯಮವನ್ನು ಉಳಿಸಬೇಕಾಗಿದೆ; ವಿಸ್ತರಿಸಬೇಕಾಗಿದೆ. ಕನ್ನಡ ಮಾಧ್ಯಮ ವ್ಯಾಸಂಗಿಗಳಿಗೆ ಮುಂದೆ ವಿಶೇಷಾವಕಾಶಗಳಿವೆಯೆಂಬ ಭರವಸೆಯನ್ನು ಮೂಡಿಸಬೇಕಾಗಿದೆ. ಈ ಮೂಲಕ ಮಾತೃಭಾಷಾ ಮಾಧ್ಯಮದ ಆದರ್ಶ ಮತ್ತು ವಾಸ್ತವಗಳನ್ನು ಹದವಾಗಿ ಬೆರೆಸಬೇಕಾಗಿದೆ. ಒದಿಗೆ ಜ್ಞಾನ ಮತ್ತು ಉದ್ಯೋಗದ ಎರಡೂ ಆಯಾಮಗಳು ಒದಗಿರುವುದರಿಂದ ಉತ್ತೇಜಕ ಪ್ರಯತ್ನಗಳ ಅಗತ್ಯವಿದೆ.

ಒಂದರಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣ ಹಾಗೂ ಉನ್ನತ ಶಿಕ್ಷಣದಲ್ಲಿ ಆದ್ಯತೆಯ ಮೇಲೆ ಪ್ರವೇಶ ಕೊಡುವುದು ಸರ್ಕಾರದ ನೀತಿಯಾಗಬೇಕು. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ ಉದ್ಯೋಗದಲ್ಲೂ ಆದ್ಯತೆ ನೀಡಬೇಕು. ಹೀಗೆ ಮಾಡುವುದರಿಂದ ನಾಡಿನ ಭಾಷೆ - ಸಂಸ್ಕೃತಿಯ ಅಭ್ಯಾಸಿಗಳಿಗೆ ಉತ್ತೇಜನ ನೀಡಿದಂತಾಗುತ್ತದೆ. ವ್ಯಾಪಾರೀಕರಣಗೊಳ್ಳುತ್ತಿರುವ ಸಮಾಜದಲ್ಲಿ ನಾಡು-ನುಡಿಯ

ಮೌಲ್ಯಗಳು ಮಾಯವಾಗದಂತೆ ನೋಡಿಕೊಂಡ ಜವಾಬ್ದಾರಿಯನ್ನೂ ನಿರ್ವಹಿಸಿದಂತಾಗುತ್ತದೆ.

ಹೀಗೆ ಭಾಷಾ ಮಾಧ್ಯಮವೊಂದಕ್ಕೆ ಉತ್ತೇಜಕವಾಗುವ ನೀತಿಯನ್ನು ರೂಪಿಸಿದರೆ ಕಾನೂನಿನ ತಡೆ ಬರಬಹುದೆಂದು ಕೆಲವರು ವಾದಿಸಲು ಸಾಧ್ಯ. ಆಂಧ್ರಪ್ರದೇಶದಲ್ಲಿ ತೆಲುಗು ವ್ಯಾಸಂಗಿಗಳ ಸಂಬಂಧದಲ್ಲಿ ಶೇ. ೫ರಷ್ಟು ಕೃಪಾಂಕ ಕೊಡುವ ಆದೇಶ ಹೊರಡಿಸಿದ್ದನ್ನು ಸರ್ವೋಚ್ಚ ನ್ಯಾಯಾಲಯವು ರದ್ದು ಮಾಡಿದ್ದು, ಈ ಸಂಗತಿಯನ್ನು ಕರ್ನಾಟಕ ಸರ್ಕಾರದ ಕಾನೂನು ಇಲಾಖೆಯು ಇತ್ತೀಚೆಗೆ ಉಲ್ಲೇಖಿಸಿ, ಕನ್ನಡ ಮಾಧ್ಯಮದವರಿಗೆ ಉದ್ಯೋಗದಲ್ಲಿ ಆದ್ಯತೆ ಕೊಡಲಾಗದೆಂದು ತಿಳಿಸಿದೆ. ವಾಸ್ತವವಾಗಿ ಇದು ತಪ್ಪು ಉಲ್ಲೇಖ ಮತ್ತು ತಪ್ಪು ವ್ಯಾಖ್ಯಾನ. ಆಂಧ್ರಪ್ರದೇಶವು ಕೃಪಾಂಕ ಕೊಡಲು ಮುಂದಾಗಿತ್ತು. ಸರ್ವೋಚ್ಚ ನ್ಯಾಯಾಲಯವು ಕೃಪಾಂಕಕ್ಕೆ ಸಂಬಂಧಪಟ್ಟ ಎಲ್ಲ ಕೇಸುಗಳಲ್ಲೂ ಕೃಪಾಂಕ ವಿರೋಧಿ ತೀರ್ಪು ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು. ಕರ್ನಾಟಕದ ಗ್ರಾಮೀಣ ಕೃಪಾಂಕ ನೀತಿ ಇದಕ್ಕೆ ಇನ್ನೊಂದು ಉದಾಹರಣೆ. ಕೃಪಾಂಕ ನೀಡಿಕೆಗೂ ಆದ್ಯತೆಯ ಮೇಲೆ ಅವಕಾಶ ಕಲ್ಪಿಸುವುದಕ್ಕೂ ವ್ಯತ್ಯಾಸವಿರುವುದರಿಂದ ಕಾನೂನು ಇಲಾಖೆಯ ಉಲ್ಲೇಖ ಮತ್ತು ವ್ಯಾಖ್ಯಾನವನ್ನು ಸರಿಯಲ್ಲ ಎನ್ನಬೇಕಾಗಿದೆ.

ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ವೃತ್ತಿ ಶಿಕ್ಷಣ ಮತ್ತು ಉನ್ನತ ಶಿಕ್ಷಣದಲ್ಲಿ ಆದ್ಯತೆಯ ಮೇಲೆ ಪ್ರವೇಶ ಹಾಗೂ ಉದ್ಯೋಗದಲ್ಲಿ ಆದ್ಯತೆಯ ಅವಕಾಶವೆಂದರೆ, ಕೃಪಾಂಕ ಕೊಡಬೇಕೆಂದು ಅರ್ಥವಲ್ಲ. ಎನ್.ಸಿ.ಸಿ., ಎನ್.ಎಸ್.ಎಸ್.; ಕ್ರೀಡೆ - ಹೀಗೆ ವಿವಿಧ ವಿಶೇಷ ವಿಭಾಗಗಳಿಗೆ ಪ್ರತ್ಯೇಕ ಕೋಟಾ ನಿಗದಿಯಾಗಿರುವುದಕ್ಕೆ ಕಾನೂನಿನ ಮನ್ನಣೆ ಸಿಕ್ಕಿರುವುದರಿಂದ, ಕನ್ನಡ ಮಾಧ್ಯಮದವರಿಗೆ ಈ ಮಾದರಿಯ ಸೌಲಭ್ಯವನ್ನು ವಿಸ್ತರಿಸಿದಾಗ ಕಾನೂನು ವಿರುದ್ಧವಾಗುತ್ತದೆಯೆಂದು ಭಾವಿಸಬೇಕಾಗಿಲ್ಲ. ಬದಲಾಗುತ್ತಿರುವ ಸನ್ನಿವೇಶದಲ್ಲಿ ಸ್ಥಳೀಯ ಭಾಷೆ - ಸಂಸ್ಕೃತಿಗಳು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುವಾಗ ಮತ್ತು ಮಧ್ಯಮ ವರ್ಗಕ್ಕಿಂತ ಕೆಳಗಿರುವವರ ಮಕ್ಕಳೇ ಮುಖ್ಯವಾಗಿ ಕನ್ನಡ ಮಾಧ್ಯಮವನ್ನು ಅನಿವಾರ್ಯವಾಗಿ ಆಯ್ಕೆ ಮಾಡಿಕೊಳ್ಳುತ್ತಿರುವಾಗ, ಕನ್ನಡ ಮಾಧ್ಯಮಕ್ಕೆ ವಿಶೇಷಾವಕಾಶಗಳನ್ನು ಕೊಡುವುದು ಒಂದು ರೀತಿಯ 'ಸಾಮಾಜಿಕ ನ್ಯಾಯ'. ಕನ್ನಡ ಮಾಧ್ಯಮದ ಪರವಾದ ನಿಲುವು ಇಂದಿನ ಸಾಮಾಜಿಕ-ಆರ್ಥಿಕ ಸಂದರ್ಭದಲ್ಲಿ ನಗರ-ಗ್ರಾಮೀಣ ಎಂಬ ವ್ಯತ್ಯಾಸವಿಲ್ಲದೆ ಎಲ್ಲ ವರ್ಗಗಳ ಬಡಜನರ ಪರವಾದ ನಿಲುವಾಗಿರುತ್ತದೆ. ಏಕೆಂದರೆ ಬಹುಪಾಲು ಬಡವರೇ ಕನ್ನಡ ಮಾಧ್ಯಮಕ್ಕೆ ಸೇರುತ್ತಿದ್ದಾರೆ, ಕನ್ನಡ ಮಾಧ್ಯಮವನ್ನು ಬದುಕಿಸುತ್ತಿದ್ದಾರೆ. ಕನ್ನಡ ಮಾಧ್ಯಮಕ್ಕೆ ವಿಶೇಷ ಆದ್ಯತೆ ಕೊಡುವ ಮೂಲಕ ಅವರನ್ನೀಗ ಬದುಕಿಸಬೇಕಾಗಿದೆ.

ಕನ್ನಡ ಮಾಧ್ಯಮದವರಿಗೆ ಮೀಸಲಾತಿಯೆಂದೇ ಈ ಸಲಹೆಯನ್ನು ಗುರುತಿಸಲಾಗುತ್ತದೆಯೆಂದು ಗೊತ್ತು. ಆಗ ಮೀಸಲಾತಿ ಪ್ರಮಾಣದ ಪ್ರಶ್ನೆ ಎದುರಾಗುತ್ತದೆ. ಆಗ ಗ್ರಾಮೀಣ ಅಭ್ಯರ್ಥಿಗಳಿಗೆ ಶೇ. ೨೫ರಷ್ಟು ಮೀಸಲಾತಿ ಕೊಡಲು ಸರ್ಕಾರಕ್ಕೆ ಇರುವ ತಾರ್ಕಿಕ ಹಾಗೂ ತಾತ್ವಿಕ ಕಾರಣ ಮತ್ತು ಕ್ರಮಗಳನ್ನೇ ಕನ್ನಡ ಮಾಧ್ಯಮದ ವ್ಯಾಸಂಗಿಗಳಿಗೂ ಅನ್ವಯಿಸಬಹುದಾಗಿದೆ. ಸರ್ವೋಚ್ಚ ನ್ಯಾಯಾಲಯವು ನಿಗದಿಗೊಳಿಸಿರುವ ಮೀಸಲಾತಿ ಪ್ರಮಾಣದೊಳಗೇ ಆಯಾ ವರ್ಗದ ಮೀಸಲಾತಿ ಪ್ರಮಾಣದಲ್ಲಿ ಆಯಾ ವರ್ಗದ ಕನ್ನಡ ಮಾಧ್ಯಮ ವ್ಯಾಸಂಗಿಗಳಿಗೆ ಆದ್ಯತೆ ಕೊಡಬಹುದೆ ಅಥವಾ ನಿಗದಿತ ಮೀಸಲಾತಿ ಪ್ರಮಾಣವನ್ನು ಮೀರಿಯೂ ಕನ್ನಡ ಮಾಧ್ಯಮದವರಿಗೆ ಆದ್ಯತೆ ಕೊಡಬಹುದೆ ಎಂಬ ವಿಷಯಗಳನ್ನು ಸರಕಾರ ಪರಿಶೀಲಿಸಿ ಸಕಾರಾತ್ಮಕ ತೀರ್ಮಾನ ಕೈಗೊಳ್ಳಬೇಕು. ಊಹಾತ್ಮಕ ತೊಡಕುಗಳು ಇದಕ್ಕೆ ಅಡ್ಡಬರಬಾರದು. ಕನ್ನಡ ಮಾಧ್ಯಮಕ್ಕೆ ಸಂಬಂಧಿಸಿದ ಇಂಥ ವಿಷಯಗಳಲ್ಲಿ ದಿಟ್ಟ ರಾಜಕೀಯ ನಿರ್ಧಾರ ಅಗತ್ಯ.

ಶಿಫಾರಸು ೩

(ಅ) ಒಂದರಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ ಎಲ್ಲ ರೀತಿಯ ವೃತ್ತಿ ಶಿಕ್ಷಣದಲ್ಲಿ (ಬಿ.ಇ.; ಎಂ.ಬಿ.ಬಿ.ಎಸ್.; ಬಿ.ಇಡಿ; ಟಿ.ಸಿ.ಎಚ್., ಐ.ಟಿ.ಐ.; ಪಾಲಿಟೆಕ್ನಿಕ್ ಮುಂತಾದ ಎಲ್ಲಾ ಕೋರ್ಸುಗಳು) ಮತ್ತು ಉನ್ನತ ಶಿಕ್ಷಣದಲ್ಲಿ ಆದ್ಯತೆಯ ಮೇಲೆ ಪ್ರವೇಶ ಕೊಡಬೇಕು.

(ಆ) ಒಂದರಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ ಆದ್ಯತೆಯ ಮೇಲೆ ಉದ್ಯೋಗ ನೀಡಲು ತೀರ್ಮಾನಿಸಿ ನಿರ್ದಿಷ್ಟ ಪ್ರಮಾಣವನ್ನು ನಿಗದಿ ಮಾಡಬೇಕು.

(ಇ) ಅ ಮತ್ತ ಆ ನಲ್ಲಿರುವ ಶಿಫಾರಸುಗಳು ಗಡಿನಾಡು ಮತ್ತು ಹೊರನಾಡಿನ ಅಭ್ಯರ್ಥಿಗಳಿಗೂ ಅನ್ವಯಿಸುತ್ತವೆ. ಇಲ್ಲಿ ಪ್ರದೇಶದ ನಿರ್ಬಂಧವಿಲ್ಲದೆ ಕನ್ನಡ ಮಾಧ್ಯಮದಲ್ಲಿ ೧ ರಿಂದ ೧೦ನೇ ತರಗತಿಯವರೆಗೆ ವ್ಯಾಸಂಗ ಮಾಡಿರುವುದಷ್ಟೇ ಮಾನದಂಡವಾಗಬೇಕು.

೪. ಕನ್ನಡೇತರರ ಶಾಲೆಗಳಲ್ಲಿ ಕನ್ನಡದ ಕಡ್ಡಾಯ ಕಲಿಕೆ

ಕನ್ನಡೇತರ ಮಾತೃಭಾಷಾ ಶಿಕ್ಷಣದಲ್ಲಿ ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಕಲಿಸುವುದು ಅಗತ್ಯವಾಗಿದೆ. ಕನ್ನಡೇತರರು ಕನ್ನಡವನ್ನು ಪ್ರಾಥಮಿಕ ಹಂತದಿಂದಲೇ ಒಂದು ಭಾಷೆಯಾಗಿ ಕಲಿಯದಿದ್ದರೆ ಮುಂದೆ ಕರ್ನಾಟಕದ ಸಾರ್ವಜನಿಕ ಮತ್ತು ಸರ್ಕಾರಿ ವಲಯದಲ್ಲಿ ಗುಣಾತ್ಮಕವಾಗಿ ಪಾಲ್ಗೊಳ್ಳುವುದು ಅಸಾಧ್ಯವಾಗುತ್ತದೆ.

ತಂತಮ್ಮ ಮಾತೃಭಾಷೆಯನ್ನು ಉಳಿಸಿಕೊಂಡೇ ಸಾರ್ವಜನಿಕ ಬದುಕಿನಲ್ಲಿ ತೊಡಗಿಸಿಕೊಳ್ಳುವ ಭಾಗವಾಗಿ ಪ್ರಾದೇಶಿಕ ಭಾಷಾ ಕಲಿಕೆ ಅಗತ್ಯವಾದುದು ಮತ್ತು ಪ್ರಜಾಸತ್ತಾತ್ಮಕವಾದುದು. ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಮೂರನೇ ತರಗತಿಯಿಂದ ಕನ್ನಡೇತರ ಮಾತೃಭಾಷಾ ಶಾಲೆಗಳಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಸಲು ಪ್ರಾರಂಭಿಸಬೇಕು. ಈ ಕ್ರಮಕ್ಕೆ ನ್ಯಾಯಾಲಯದ ತೀರ್ಪಿನ ಬೆಂಬಲವೂ ಇದೆ. ಕರ್ನಾಟಕದ ಉಚ್ಚ ನ್ಯಾಯಾಲಯದ ಪೂರ್ಣಪೀಠವು ೨೫-೧-೧೯೮೯ರಂದು ಗೋಕಾಕ್ ಭಾಷಾ ಸೂತ್ರದ ಬಗ್ಗೆ ತೀರ್ಪಿತ್ತಾಗ - 'ಸಾಮಾನ್ಯವಾಗಿ ಯಾವ ಪ್ರಾಥಮಿಕ ಶಾಲೆಯ ತರಗತಿಯಿಂದ ಎಲ್ಲಾ ವಿದ್ಯಾರ್ಥಿಗಳು ಎರಡನೇ ಭಾಷೆಯನ್ನು ಕಲಿಯುತ್ತಾರೋ ಆ ತರಗತಿಯಿಂದ ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯನ್ನು ಕಡ್ಡಾಯ ಮಾಡಲು' ಒಪ್ಪಿಗೆ ನೀಡಿದೆ. ಕನ್ನಡ ವಿದ್ಯಾರ್ಥಿಗಳಿಗೆ ಮೂರನೇ ತರಗತಿಯಿಂದ ಎರಡನೇ ಭಾಷೆಯಾಗಿ ಇಂಗ್ಲಿಷ್ ಅಥವಾ ಯಾವುದೇ ಭಾರತೀಯ ಭಾಷೆಯನ್ನು ಕಲಿಯಲು ಅವಕಾಶ ಕಲ್ಪಿಸಿ ಕನ್ನಡೇತರ ಮಾತೃಭಾಷಾ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಎರಡನೇ ಭಾಷೆ ಅಥವಾ ಮೂರನೇ ಭಾಷೆಯ ಸ್ಥಾನದಲ್ಲಿ ಕಲಿಸಲು ಯಾವ ಅಡ್ಡಿಯೂ ಇರುವುದಿಲ್ಲ.

ಶಿಫಾರಸು ೪

(ಅ) ಪ್ರಾಥಮಿಕ ಶಿಕ್ಷಣದ ಮೂರನೇ ತರಗತಿಯಿಂದ ಎರಡನೇ ಭಾಷೆಯ ಕಲಿಕೆಯನ್ನು ಪ್ರಾರಂಭಿಸಿ ಆಂಗ್ಲೊ ಇಂಡಿಯನ್ನರನ್ನೂ ಒಳಗೊಂಡಂತೆ ಕನ್ನಡೇತರ ಮಾಧ್ಯಮದ ವಿದ್ಯಾರ್ಥಿಗಳಿಗೆ ಮೂರನೇ ತರಗತಿಯಿಂದ ಕನ್ನಡವನ್ನು ಎರಡನೇ ಭಾಷೆಯಾಗಿ ಕಲಿಸುವುದು ಕಡ್ಡಾಯವಾಗಬೇಕು. ಇದಕ್ಕೆ ಉಚ್ಚ ನ್ಯಾಯಾಲಯವು ೨೫-೧-೧೯೮೯ರಂದು ಕೊಟ್ಟಿರುವ ತೀರ್ಪಿನ ಸಹಮತಿ ಇರುವುದನ್ನು ಮನಗಾಣಬೇಕು.

(ಆ) ಉರ್ದು ಶಾಲೆಗಳನ್ನು ಒಳಗೊಂಡಂತೆ ಅಲ್ಪಸಂಖ್ಯಾತರ ಶಾಲೆಗಳಿಗೆ ಕಡ್ಡಾಯವಾಗಿ ಪೂರ್ಣಾವಧಿ ಕನ್ನಡ ಅಧ್ಯಾಪಕರನ್ನು ನೇಮಿಸಲು ಕೂಡಲೆ ಕ್ರಮ ಕೈಗೊಳ್ಳಬೇಕು.

೫. ಮೂರನೇ ತರಗತಿಯಿಂದ ಇಂಗ್ಲಿಷ್ ಕಲಿಕೆ

ನಾವು ಒಪ್ಪಲಿ ಬಿಡಲಿ ಇಂಗ್ಲಿಷ್ ಕಲಿಕೆಯ ಬಗ್ಗೆ ಬಹುಪಾಲು ಜನರಲ್ಲಿ ವಿಚಿತ್ರ ಆಕರ್ಷಣೆಯಿದೆ. ಆಧುನಿಕ ತಂತ್ರಜ್ಞಾನಗಳು ವಿಸ್ತಾರಗೊಳ್ಳುತ್ತಿರುವ ಈ ಕಾಲದಲ್ಲಿ ಇಂಗ್ಲಿಷ್ ಅನಿವಾರ್ಯವೆಂಬ ಭಾವನೆಯನ್ನು ಬಿತ್ತಲಾಗುತ್ತಿದೆ. ಇಂಗ್ಲಿಷ್ ಕಲಿತರೆ ಉದ್ಯೋಗದ ಅವಕಾಶಗಳು ಹೆಚ್ಚು ಎಂಬ ನಂಬಿಕೆಯನ್ನು ಬಲವಾಗಿ

ಬೆಳೆಸಲಾಗುತ್ತಿದೆ. ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಯಲು ಅಭ್ಯಂತರವಿಲ್ಲ. ಆದರೆ ನಿರುದ್ಯೋಗಕ್ಕೆ 'ಇಂಗ್ಲಿಷ್ ಮಾಧ್ಯಮವೇ ಮದ್ದು' ಎಂಬ ನಂಬಿಕೆಗೆ ಪುಷ್ಟಿ ಕೊಡುವ ಬೆಳವಣಿಗೆಗಳು ಹೆಚ್ಚು ಗೋಚರವಾಗುತ್ತಿರುವುದು ಆತಂಕಕಾರಿ. ವಾಸ್ತವವಾಗಿ ಭಾಷಾ ಮಾಧ್ಯಮಕ್ಕೂ ನಿರುದ್ಯೋಗ ಸಮಸ್ಯೆಯ ನಿವಾರಣೆಗೂ ನಿಕಟ ಸಂಬಂಧವಿಲ್ಲ. ನಿರುದ್ಯೋಗವೆನ್ನುವುದು ನಿರ್ದಿಷ್ಟ ಸಾಮಾಜಿಕ, ಆರ್ಥಿಕ ನೀತಿಯನ್ನೊಳಗೊಂಡ ರಾಜಕೀಯ ವ್ಯವಸ್ಥೆಯ ಉತ್ಪನ್ನ; ಇದು ಭಾಷಾ ಮಾಧ್ಯಮದ ಉತ್ಪನ್ನವಲ್ಲ.

ಆದರೂ ಇಂಗ್ಲಿಷನ್ನು ಒಂದು ಭಾಷೆಯಾಗಿ ಈಗಿರುವುದಕ್ಕಿಂತ ಮುಂಚೆಯೇ ಕಲಿಸಲು ಪ್ರಾರಂಭಿಸಬಹುದಾಗಿದೆ. ಹಿಂದಿನ ಅಧ್ಯಕ್ಷರ ಪ್ರಾಧಿಕಾರದ ತಜ್ಞರ ಸಮಿತಿಯು 'ಮೂರನೆ ತರಗತಿಯಿಂದಲೇ ಇಂಗ್ಲಿಷ್ ಭಾಷೆಯನ್ನು ಕಲಿಯುವ ಅವಕಾಶ ಕಲ್ಪಿಸುವುದರಿಂದ ಜಾಗತೀಕರಣ ಮತ್ತು ಉದಾರೀಕರಣದ ಹಿನ್ನೆಲೆಯಲ್ಲಿ - ಅನಗತ್ಯವಾದರೂ ಪೋಷಕರಲ್ಲಿ ಮನೆಮಾಡಿರುವ ಈ ಇಂಗ್ಲಿಷ್ ಕಲಿಕೆಯಿಂದ ನಮ್ಮ ಮಕ್ಕಳು ವಂಚಿತರಾಗುತ್ತಾರೆಂಬ - ಆತಂಕವನ್ನು ದೂರ ಮಾಡಿದಂತಾಗುತ್ತದೆ' ಎಂದು ತಿಳಿಸಿದೆ. ಜಾಗತೀಕರಣದ ಗಾಳಿಗಿಂತ ಮುಂಚಿನಿಂದಲೂ ಇಂಗ್ಲಿಷ್ ಮಾಧ್ಯಮದ ವ್ಯಾಮೋಹವು ನಮ್ಮ ಸಮಾಜದಲ್ಲಿದೆ. ಇತ್ತೀಚೆಗೆ ಅದರ ಪ್ರಮಾಣ ಹೆಚ್ಚಾಗಿದೆ. ಮಾಹಿತಿ ತಂತ್ರಜ್ಞಾನದ ನೆಲೆಗಳು ವಿಸ್ತರಿಸುತ್ತಿರುವ ಇಂದಿನ ಸಂದರ್ಭದಲ್ಲಿ ಅದಕ್ಕೆ (ಪೂರ್ಣ ನಿಜವಲ್ಲದಿದ್ದರೂ) ಇಂಗ್ಲಿಷ್ ಜ್ಞಾನ ಬೇಕೆಂಬ ಭಾವನೆ ಬಲವಾಗಿದೆ. ಹೀಗಾಗಿ ಇಂಗ್ಲಿಷನ್ನು ಒಂದು ಭಾಷೆಯಾಗಿ ಪ್ರಾಥಮಿಕ ಶಿಕ್ಷಣದ ಮೂರನೇ ತರಗತಿಯಿಂದ ಕಲಿಸಬೇಕೆಂಬ ಸಲಹೆ ಸೂಕ್ತವಾಗಿದೆ.[೦] ಹೀಗೆ ಮಾಡುವುದರಿಂದ ಶಿಕ್ಷಣ ಕ್ರಮದಲ್ಲಿ ಇಂಗ್ಲಿಷ್ ಕಲಿಕೆಯ ಸ್ಥಾನ ಬದಲಾಗದೆ ಹಿಂದಿನಂತೆಯೇ ಇರುತ್ತದೆಯೆಂಬುದನ್ನು ಇಲ್ಲಿ ಗಮನಿಸಬೇಕು. ಈಗ ಇಂಗ್ಲಿಷ್ ಕಲಿಕೆಯು ೫ನೇ ತರಗತಿಯಿಂದ ಪ್ರಾರಂಭವಾಗುತ್ತದೆ. ಅಂದರೆ ಕಲಿಕೆಯ ನಾಲ್ಕು ವರ್ಷಗಳು ಕಳೆದನಂತರ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸಲು ಪ್ರಾರಂಭ ಮಾಡಲಾಗುತ್ತಿದೆ. ಈ ವರದಿಯಲ್ಲಿ ಪ್ರಾಥಮಿಕಪೂರ್ವ ಶಿಕ್ಷಣವನ್ನು ಕ್ರಮಬದ್ಧಗೊಳಿಸಿ ಕನ್ನಡ ಮಾಧ್ಯಮವನ್ನು ಕಡ್ಡಾಯಗೊಳಿಸಬೇಕೆಂದು ಶಿಫಾರಸ್ಸು ಮಾಡಿರುವುದರಿಂದ, ವಿದ್ಯಾರ್ಥಿಗಳು ತಮ್ಮ ಶಿಕ್ಷಣದ ನಾಲ್ಕು ವರ್ಷಗಳ ಕಲಿಕೆಯ ನಂತರವೇ - ಅಂದರೆ ಪ್ರಾಥಮಿಕ ಪೂರ್ವದಲ್ಲಿ ಎರಡು ವರ್ಷ, ಪ್ರಾಥಮಿಕ ಶಿಕ್ಷಣದ ಎರಡು ವರ್ಷ - ೫ನೇ ವರ್ಷದಿಂದ ಇಂಗ್ಲಿಷ್ ಭಾಷೆಯನ್ನು ಕಲಿಯಲು ಪ್ರಾರಂಭಿಸುತ್ತಾರೆ. ಇನ್ನೂ ಸ್ಪಷ್ಟಪಡಿಸುವುದಾದರೆ ಈಗಿರುವಂತೆಯೇ ನಾಲ್ಕು ವರ್ಷಗಳ ಕಾಲ ಕನ್ನಡ ಮಾಧ್ಯಮದಲ್ಲಿ ಓದಿದ ನಂತರವೇ ಇಂಗ್ಲಿಷ್ ಕಲಿಕೆಯನ್ನು - ಪ್ರಾಥಮಿಕ ಮೂರನೇ ತರಗತಿಯಿಂದ ಆರಂಭಿಸಿದಂತಾಗುತ್ತದೆ.

ಇಂಗ್ಲಿಷ್ ಕಲಿಕೆಯು ಮೂರನೇ ತರಗತಿಯಿಂದ ಪ್ರಾರಂಭವಾದ ಕೂಡಲೇ ಇಂಗ್ಲಿಷ್ ಮಾಧ್ಯಮದ ವ್ಯಾಮೋಹ ಪೂರ್ಣವಾಗಿ ಹಿಂಗುತ್ತದೆಯೆಂದು ಭಾವಿಸಬೇಕಾಗಿಲ್ಲ. ಆದ್ದರಿಂದ ಇಂಗ್ಲಿಷ್‌ನ ಕಲಿಕೆಯ ವಿಧಾನವನ್ನೇ ಬದಲಾಯಿಸ ಬೇಕಾದ ಅಗತ್ಯವಿದೆ. ಮಾತೃಭಾಷೆ ಬೋಧನೆಯ ಮಾದರಿಯಲ್ಲೇ ಇಂಗ್ಲಿಷ್ ಭಾಷಾ ಬೋಧನೆಯನ್ನು ನಡೆಸುವುದು ಸೂಕ್ತ ವಿಧಾನವಲ್ಲ. ಇಂಗ್ಲಿಷ್ ಭಾಷೆಯಲ್ಲಿ ಮಾತನಾಡುವ, ಪರಸ್ಪರ ಸಂವಾದಿಸುವ ಸಂವಹನಶೀಲ ಶಕ್ತಿಯನ್ನು ಇಂಗ್ಲಿಷ್ ಕಲಿಕೆಯ ಮುಖ್ಯ ಭಾಗವಾಗಿಸಬೇಕು. ಮೂರು ಮತ್ತು ನಾಲ್ಕನೇ ತರಗತಿಯಲ್ಲಿ ಇಂಗ್ಲಿಷ್ ಮಾತುಗಾರಿಕೆಯೇ ಪಠ್ಯದ ಪ್ರಮುಖ ಅಂಶವಾಗಬೇಕು. ಆನಂತರದ ತರಗತಿಗಳಲ್ಲಿ ಲಿಖಿತ ಪಾಠಗಳು ಮುಖ್ಯವಾಗುತ್ತ ಒಟ್ಟಾರೆ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸುತ್ತಲೇ ಪರಿಣತಿ ಪಡೆಯುವಂತೆ ಮಾಡಿದರೆ ಕನ್ನಡ ಮಾಧ್ಯಮವೂ ಉಳಿಯುತ್ತದೆ; ಇಂಗ್ಲಿಷ್ ಭಾಷೆಯ ಪರಿಣತಿಯೂ ಸಾಧ್ಯವಾಗುತ್ತದೆ.

ಶಿಫಾರಸು ೫

> ಪ್ರಾಥಮಿಕ ಹಂತದ ಮೂರನೇ ತರಗತಿಯಿಂದ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸಲು ಪ್ರಾರಂಭಿಸಬೇಕು. ಕನ್ನಡ ಕಲಿಕೆಯ ವಿಧಾನವನ್ನೇ ಇಂಗ್ಲಿಷ್ ಕಲಿಕೆಗೂ ಅಳವಡಿಸದೆ, ಮಾತುಗಾರಿಕೆ, ಸಂವಾದ, ಸಂವಹನಾಶೀಲತೆಗಳನ್ನು ಬೆಳೆಸುವ ದಿಕ್ಕಿನಲ್ಲಿ ಪರಿಣತಿ ಕೊಡುವಂತೆ ಇಂಗ್ಲಿಷ್ ಕಲಿಕಾ ವಿಧಾನವನ್ನು ಬದಲಾಯಿಸಬೇಕು.

೬. ತ್ರಿಭಾಷಾ ಕಲಿಕೆ ಮತ್ತು ಪರೀಕ್ಷೆ : ಕಡ್ಡಾಯದ ಪ್ರಶ್ನೆ

ಈಗಿರುವ ಪ್ರಾಥಮಿಕ ಮತ್ತು ಪ್ರೌಢಶಾಲಾ ಪಠ್ಯಕ್ರಮದಲ್ಲಿ ಮೂರು ಭಾಷೆಗಳ ಕಲಿಕೆಯನ್ನು ಅಳವಡಿಸಲಾಗಿದೆ. ತ್ರಿಭಾಷಾ ಸೂತ್ರವನ್ನು ಶಿಕ್ಷಣದಲ್ಲಿ ನೆಲೆ ಗೊಳಿಸುವುದು ಈ ಪಠ್ಯಕ್ರಮದ ಉದ್ದೇಶವಾಗಿರಬಹುದು. ಆದರೆ ಕರ್ನಾಟಕ ಶಿಕ್ಷಣ ಅಧಿನಿಯಮ (೧೯೮೩)ದಲ್ಲಿ ನಮೂದಿತವಾದಂತೆ ತ್ರಿಭಾಷಾ ಕಲಿಕೆ ಪ್ರೌಢಶಾಲಾ ಶಿಕ್ಷಣದಿಂದ ಪ್ರಾರಂಭವಾಗಬೇಕು. ಅಧಿನಿಯಮದ ಏಳನೇ ಪರಿಚ್ಛೇದದ ೪(ಎ) ವಿಭಾಗದ ಒಂದನೇ ಅಂಶವಾಗಿ ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷಾ ಕಲಿಕೆಯ ಮಹತ್ವವನ್ನಷ್ಟೇ ಹೇಳಲಾಗಿದೆ. ಕನ್ನಡ ಮಾತೃಭಾಷೆಯಲ್ಲದವರು ಕನ್ನಡ ಕಲಿಯಬೇಕೆಂಬ ಬಗ್ಗೆಯೂ ಸ್ಪಷ್ಟಪಡಿಸಲಾಗಿದೆ. ಆದರೆ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ತ್ರಿಭಾಷಾ ಕಲಿಕೆಯ ಪ್ರಸ್ತಾಪ ಇಲ್ಲವೇ ಇಲ್ಲ. ತ್ರಿಭಾಷಾ ಕಲಿಕೆಯ ಪ್ರಸ್ತಾಪವೇನಿದ್ದರೂ ಪ್ರೌಢಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ವಿಚಾರವಾಗಿದೆ. ಕರ್ನಾಟಕ ಶಿಕ್ಷಣ ಅಧಿನಿಯಮದ ಏಳನೇ ಪರಿಚ್ಛೇದ ೪(ಬಿ) ವಿಭಾಗದ ಒಂದನೇ ಅಂಶವು

ಪ್ರಾದೇಶಿಕ ಭಾಷೆಯ ಕಲಿಕೆಯನ್ನೂ, ಎರಡನೇ ಅಂಶ ಇನ್ನೆರಡು ಭಾಷೆಗಳ ಕಲಿಕೆಯನ್ನೂ ಸ್ಪಷ್ಟವಾಗಿ ಸೂಚಿಸಿದೆ.

ಮೇಲಿನ ವಿವರಗಳಿಂದ ಸ್ಪಷ್ಟವಾಗುವುದು ಇಷ್ಟು; ಕರ್ನಾಟಕ ಶಿಕ್ಷಣ ಅಧಿನಿಯಮದ ಪ್ರಕಾರ ಪ್ರಾಥಮಿಕ ಶಿಕ್ಷಣದಲ್ಲಿ ಮೂರು ಭಾಷೆಗಳ ಕಲಿಕೆಗೆ ಅವಕಾಶವಿಲ್ಲ. ಕನ್ನಡ ಮಾತೃಭಾಷೆಯಲ್ಲದವರು ಮಾತ್ರ ತಮ್ಮ ಮಾತೃಭಾಷೆಯ ಜೊತೆಗೆ ಕನ್ನಡವನ್ನು ಕಲಿಯಬೇಕು. ಮೂರು ಭಾಷೆಗಳ ಕಲಿಕೆ ಪ್ರಾರಂಭವಾಗುವುದು ಪ್ರೌಢಶಾಲೆಯಿಂದ ಮಾತ್ರ.

ಆದರೂ ಅನೇಕ ವರ್ಷಗಳಿಂದ ಶಿಕ್ಷಣ ಇಲಾಖೆಯು ಪ್ರಾಥಮಿಕ ಶಿಕ್ಷಣದ ಹಂತದಿಂದಲೇ ಮೂರು ಭಾಷೆಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಿದೆ. ಮೂರನೇ ತರಗತಿಯಿಂದ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಇಂಗ್ಲಿಷನ್ನೂ ಕನ್ನಡೇತರ ಮಾತೃಭಾಷಾ ಮಾಧ್ಯಮದ ಶಾಲೆಗಳಲ್ಲಿ ಕನ್ನಡವನ್ನೂ ಕಲಿಯಲು ಅವಕಾಶ ಕಲ್ಪಿಸುವುದರಿಂದ ಮೂರನೇ ಭಾಷೆಯೊಂದನ್ನು ಪಠ್ಯಕ್ರಮದಲ್ಲಿ ಅಳವಡಿಸುವುದು ಈಗಲೂ ಅನಿವಾರ್ಯವಾಗುತ್ತದೆ. ಏಕೆಂದರೆ ಎರಡು ಭಾಷೆಗಳನ್ನಷ್ಟೇ ಪಠ್ಯಕ್ರಮದಲ್ಲಿ ನಿಗದಿಗೊಳಿಸಿದರೆ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕನ್ನಡ ಮತ್ತು ಇಂಗ್ಲಿಷನ್ನು ಕಲಿಯಲು ಅವಕಾಶವಿರುತ್ತದೆ. ಕನ್ನಡೇತರ ಮಾತೃಭಾಷಾ ಮಾಧ್ಯಮ ಶಾಲೆಗಳಲ್ಲಿ ಅವರ ಮಾತೃಭಾಷೆ ಮತ್ತು ಕನ್ನಡವನ್ನು ಕಲಿಯಲು ಅವಕಾಶವಿರುತ್ತದೆ. ಆಗ ಕನ್ನಡೇತರ ಮಾತೃಭಾಷಾ ಮಾಧ್ಯಮದವರು ಕನ್ನಡ ಮಾಧ್ಯಮದವರಂತೆ ಇಂಗ್ಲಿಷ್ ಕಲಿಯುವ ಅವಕಾಶದಿಂದ ವಂಚಿತರಾಗುತ್ತಾರೆ. ಇಂಗ್ಲಿಷ್ ಕಲಿಯುವ ಅವಕಾಶವನ್ನು ಅವರು ಕೇಳಬಹುದಾಗಿದೆ. ಈ ಕಾರಣಕ್ಕಾಗಿ ಕನ್ನಡೇತರ ಮಾತೃಭಾಷಾ ಮಾಧ್ಯಮದ ಶಾಲೆಗಳಲ್ಲಿ ಮೊದಲನೇ ಭಾಷೆಯಾಗಿ ಅವರ ಮಾತೃಭಾಷೆ, ಎರಡನೇ ಭಾಷೆಯಾಗಿ ಕನ್ನಡ ಕಡ್ಡಾಯ. ಮೂರನೇ ಭಾಷೆಯಾಗಿ ಇಂಗ್ಲಿಷ್ ಅಥವಾ ಇತರೆ ಭಾರತೀಯ ಭಾಷೆಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕಾಗುತ್ತದೆ. 'ಇತರೆ ಭಾರತೀಯ ಭಾಷೆಗಳು' ಎಂದಿದ್ದರೂ ಸಾಮಾನ್ಯವಾಗಿ ವಿದ್ಯಾರ್ಥಿಗಳು ಇಂಗ್ಲಿಷನ್ನೇ ಆಯ್ಕೆ ಮಾಡಿ ಕೊಳ್ಳುತ್ತಾರೆಂದು ಭಾವಿಸಬಹುದು. ಆಗ ಕನ್ನಡೇತರ ಮಾತೃಭಾಷಾ ಮಾಧ್ಯಮದ ಶಾಲೆಗಳಲ್ಲಿ ಮೂರು ಭಾಷೆಗಳೂ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಎರಡು ಭಾಷೆಗಳೂ ಪಠ್ಯಕ್ರಮದ ಭಾಗವಾದಂತಾಗುತ್ತದೆ. ಒಬ್ಬರಿಗೆ ಎರಡು ಭಾಷೆ, ಇನ್ನೊಬ್ಬರಿಗೆ ಮೂರು ಭಾಷೆ ಎಂಬ ನೀತಿ ಸರಿಯೇ ಎಂಬ ಪ್ರಶ್ನೆ ಎದುರಾಗುತ್ತದೆ. ಕನ್ನಡೇತರರು ಕರ್ನಾಟಕದಲ್ಲಿರುವ ಕಾರಣಕ್ಕಾಗಿ ಕನ್ನಡ ಕಲಿತು ಅದರ ಜೊತೆಗೆ ಮಾತೃಭಾಷೆ ಮತ್ತು ಇಂಗ್ಲಿಷ್ ಎರಡನ್ನೂ ಕಲಿಯುವ ಹೆಚ್ಚುವರಿ ಭಾರವನ್ನು ಹೊತ್ತರೆ ತಪ್ಪೇನು ಎಂಬ ಒಂದು ವಾದವೂ ಕೆಲವು ವಲಯಗಳಲ್ಲಿದೆ. ಆದರೆ ಇಂಥ 'ಅಸಮತೋಲನ'ದ ಬಗ್ಗೆ ಕಾನೂನು ಏನು ಹೇಳುತ್ತದೆಯೆಂಬುದು ಬಹು ಮುಖ್ಯ.

ಇಲ್ಲಿ ಗೋಕಾಕ್ ಸಮಿತಿಯ ಭಾಷಾಸೂತ್ರದ ಬಗ್ಗೆ ರಾಜ್ಯದ ಉಚ್ಚ ನ್ಯಾಯಾಲಯವು ಕೊಟ್ಟಿರುವ ತೀರ್ಪಿನ ಒಂದಂಶವನ್ನು ಗಮನಿಸಬಹುದು. ಗೋಕಾಕ್ ಸಮಿತಿಯ ವರದಿಯಲ್ಲಿ ಪ್ರೌಢಶಾಲಾ ಕಲಿಕೆಗೆ ಮೂರು ಭಾಷೆಗಳನ್ನು ಯೋಜಿಸಿದ್ದು, ಕನ್ನಡ ಕಡ್ಡಾಯ ಪ್ರಥಮ ಭಾಷೆ, ಇನ್ನೆರಡು ಆಯ್ಕೆಯ ಭಾಷೆಗಳು. ಆಯ್ಕೆಯ ಭಾಷೆಗಳಲ್ಲಿ ಕನ್ನಡ ವಿದ್ಯಾರ್ಥಿಯೊಬ್ಬ (ಪ್ರಥಮ ಭಾಷೆ ಕನ್ನಡವನ್ನು ಕಡ್ಡಾಯವಾಗಿ ಕಲಿಯುತ್ತ) ಮತ್ತೆ ಕನ್ನಡವನ್ನೇ ಒಂದು ಭಾಷೆಯಾಗಿ ಆಯ್ಕೆ ಮಾಡಿಕೊಳ್ಳಲೂ ಅವಕಾಶವಿತ್ತು. ಈ ಅವಕಾಶ ಕನ್ನಡೇತರ ವಿದ್ಯಾರ್ಥಿಗಳಿಗೆ ಲಭ್ಯವಾಗುವುದಿಲ್ಲ. ಏಕೆಂದರೆ ಅವರು ಕಡ್ಡಾಯವಾಗಿ ಕನ್ನಡವನ್ನು ಪ್ರಥಮ ಭಾಷೆಯಾಗಿ ಕಲಿತು ಇನ್ನೆರಡು ಭಾಷೆಗಳಲ್ಲಿ ಮಾತೃಭಾಷೆ ಮತ್ತು ಬೇರೊಂದು ಭಾಷೆಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಅವರಿಗೆ ಎರಡು ಸಾರಿ ಮಾತೃಭಾಷೆಯ ಆಯ್ಕೆ ಮಾಡಿಕೊಳ್ಳಲು ಅವಕಾಶವಾಗುವುದಿಲ್ಲ. (ಈ ವಿವರಗಳು ಮುಂದೆ ಪರಿಷ್ಕೃತಗೊಂಡು ಆದೇಶವಾದದ್ದು ಬೇರೆ ವಿಷಯ) ರಾಜ್ಯದ ಉಚ್ಚ ನ್ಯಾಯಾಲಯದ ಪೂರ್ಣಪೀಠ ೨೫-೧-೧೯೮೯ರಂದು ನೀಡಿದ ತನ್ನ ತೀರ್ಪಿನಲ್ಲಿ ಈ ಅಸಮತೋಲನವನ್ನು ಗುರುತಿಸಿ 'ಕಡ್ಡಾಯ ಪ್ರಥಮ ಭಾಷೆ ಕನ್ನಡವಲ್ಲದೆ, ಆಯ್ಕೆ ಮಾಡಿಕೊಳ್ಳಬೇಕಾದ ಮಿಕ್ಕೆರಡು ಭಾಷೆಗಳಲ್ಲಿ ಒಂದು ಕನ್ನಡವನ್ನೇ ಆಯ್ಕೆ ಮಾಡಿಕೊಳ್ಳುವುದು ಕನ್ನಡ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲವನ್ನುಂಟು ಮಾಡುತ್ತದೆ. ಕನ್ನಡೇತರ ವಿದ್ಯಾರ್ಥಿಗಳು ಕನ್ನಡ ವಿದ್ಯಾರ್ಥಿಗಳಿಗೆ ಸಮಾನವಾಗದಂತೆ ಮಾಡುತ್ತದೆ. ಆದ್ದರಿಂದ ಇದು ಸೂಕ್ತವಲ್ಲ' ಎಂಬ ಅಭಿಪ್ರಾಯವನ್ನು ನೀಡಿದೆ. ಕನ್ನಡೇತರರಿಗೆ ಮೂರು ಭಾಷೆಗಳು, ಕನ್ನಡಿಗರಿಗೆ ಎರಡು ಭಾಷೆಗಳನ್ನು ನಿಗದಿ ಪಡಿಸಿದರೆ ಇದೇ ರೀತಿಯ ಅಭಿಪ್ರಾಯವು ಮತ್ತೆ ಮರುಕಳಿಸುತ್ತದೆ. ಆದ್ದರಿಂದ ಇಂಗ್ಲಿಷ್ ಭಾಷೆಯ ಅಳವಡಿಕೆ ಮತ್ತು ಕಡ್ಡಾಯ ಕನ್ನಡ ಕಲಿಕೆ ಎರಡೂ ದೃಷ್ಟಿಗಳಿಂದ ಕನ್ನಡ ಮಾಧ್ಯಮ ಮತ್ತು ಕನ್ನಡೇತರ ಮಾತೃಭಾಷಾ ಮಾಧ್ಯಮದ ಶಾಲೆಗಳಲ್ಲಿ ಸಮಾನವಾಗಿ ಮೂರು ಭಾಷೆಗಳ ಕಲಿಕೆಯನ್ನು ಅಳವಡಿಸುವುದು ಅನಿವಾರ್ಯವಾಗುತ್ತದೆ.

ಈಗ ಕಲಿಕೆ ಮತ್ತು ಪರೀಕ್ಷೆಗಳು ಕಡ್ಡಾಯವಾಗಬೇಕೆ ಬೇಡವೆ ಎಂಬ ಪ್ರಶ್ನೆ ಏಳುವುದು. ಸಾಮಾನ್ಯವಾಗಿ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿಸುವಾಗ ಕೆಲವನ್ನು ಕಲಿಕೆ ಕಡ್ಡಾಯ, ಪರೀಕ್ಷೆ ಐಚ್ಛಿಕವೆಂದೂ ಅಥವಾ ಕಲಿಕೆ ಮತ್ತು ಪರೀಕ್ಷೆಗಳೆರಡೂ ಐಚ್ಛಿಕವೆಂದೊ ತಿಳಿಸಿ ಪಠ್ಯಕ್ರಮದಲ್ಲಿ ಅಳವಡಿಸುವ ಪರಿಪಾಠವಿದೆ. (ಕೆಲವೊಮ್ಮೆ ತಜ್ಞರ ವರದಿಗಳೂ ಹೀಗೇ ಸೂಚಿಸುವುದುಂಟು). ಸರ್ಕಾರಿ ಆದೇಶ ಸಂಖ್ಯೆ ಇಡಿ ೨೮ ಪಿಜಿಸಿ ೨೯ ದಿನಾಂಕ : ೨೯ನೇ ಏಪ್ರಿಲ್ ೧೯೯೪ - ಇದರಲ್ಲಿ ಬರುವ 'ಆ' ವಿಭಾಗವು ಹೀಗೆ ಹೇಳುತ್ತದೆ : "ಮೂರನೇ ತರಗತಿಯಿಂದ ಕನ್ನಡೇತರರಿಗೆ ಕನ್ನಡವು ಐಚ್ಛಿಕ ವಿಷಯವಾಗಿರುತ್ತದೆ. ಇದನ್ನು ಸ್ವಪ್ರೇರಣೆಯಿಂದ ಮಾತ್ರ ಕಲಿಸಲಾಗುವುದು.

ವರ್ಷಾಂತ್ಯದಲ್ಲಿ ಮೂರನೇ ಮತ್ತು ನಾಲ್ಕನೇ ತರಗತಿಗಳಲ್ಲಿ ಕನ್ನಡ ಭಾಷೆಯ ಯಾವುದೇ ಪರೀಕ್ಷೆಯಿರುವುದಿಲ್ಲ."

ಯಾವುದೇ ಭಾಷೆ ಹಾಗೂ ವಿಷಯಗಳನ್ನು ಹೀಗೆ ಐಚ್ಛಿಕಗೊಳಿಸಿ ಕಲಿಕೆ ಮತ್ತು ಪರೀಕ್ಷೆಯಿಂದ ವಿನಾಯಿತಿ ನೀಡುವುದು ಶಿಕ್ಷಣದ ಮೂಲ ಆಶಯಕ್ಕೇ ಎರವಾಗುವ ಸಂಗತಿಯಾಗಿದೆ. ಕಲಿಕೆಯನ್ನು ಕಡ್ಡಾಯ ಮಾಡಿ ಪರೀಕ್ಷೆಯನ್ನು ಐಚ್ಛಿಕಗೊಳಿಸುವುದಾಗಲಿ, ಕಲಿಕೆ ಮತ್ತು ಪರೀಕ್ಷೆಗಳೆರಡನ್ನೂ ಐಚ್ಛಿಕಗೊಳಿಸುವುದಾಗಲಿ, ಕಲಿಕೆ ಸ್ವಪ್ರೇರಣೆ ಎನ್ನುವುದಾಗಲಿ, ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ಆಸಕ್ತಿಯನ್ನು ನಾಶಮಾಡುವ ಕ್ರಮಬದ್ಧ ಪ್ರಯತ್ನವಾಗುತ್ತದೆ. ಇನ್ನೊಂದು ಅಂಶವನ್ನು ಇಲ್ಲಿ ಗಮನಿಸಬೇಕು. ಹೆಚ್ಚು ಭಾಷೆಗಳನ್ನು ಕಲಿಯುವ ಆಸಕ್ತಿ ಮತ್ತು ಶಕ್ತಿ ಚಿಕ್ಕ ವಯಸ್ಸಿನಲ್ಲಿ ಅಗಾಧವಾಗಿರುತ್ತದೆ. ವೈಜ್ಞಾನಿಕ ವಿಶ್ಲೇಷಣೆಗಳಿಂದ ಇದು ದೃಢಪಟ್ಟಿದೆ. ಮಕ್ಕಳ ಹನ್ನೆರಡನೇ ವಯಸ್ಸಿನವರೆಗೆ ಹೆಚ್ಚು ಭಾಷೆಗಳನ್ನು ಕಲಿಯುವ ಶಕ್ತಿಯಿರುತ್ತದೆಯೆಂದು ಇಂಥ ವಿಶ್ಲೇಷಣೆಗಳು ಖಾತರಿಪಡಿಸಿವೆ. ವಸ್ತುಸ್ಥಿತಿ ಹೀಗಿರುವಾಗ ಕಲಿಕೆ ಮತ್ತು ಪರೀಕ್ಷೆಗಳನ್ನು ಐಚ್ಛಿಕಗೊಳಿಸುವುದು ಸರಿಯೆನಿಸುವುದಿಲ್ಲ. ಕಲಿಕೆ ಕಡ್ಡಾಯ, ಪರೀಕ್ಷೆ ಐಚ್ಛಿಕ ಎಂದು ಹೇಳಿದರೂ ಅಂತಿಮ ಪರಿಣಾಮದಲ್ಲಿ ಕಲಿಕೆಯೂ ಐಚ್ಛಿಕ ಸ್ವರೂಪವನ್ನೇ ಪಡೆಯುತ್ತದೆ. ಈ ಹಿನ್ನೆಲೆಯಲ್ಲಿ ಮುಂದಿನ ಅಂಶಗಳನ್ನು ಗಮನಿಸಬೇಕು.

ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷಾಮಾಧ್ಯಮವನ್ನು ಶಿಕ್ಷಣತಜ್ಞರು ಮತ್ತು ನ್ಯಾಯಾಲಯ ಈಗ ಒಪ್ಪಿಕೊಂಡಂತಾಗಿದೆ. ಕನ್ನಡೇತರರಿಗೆ ಕನ್ನಡವನ್ನು ಒಂದು ಭಾಷೆಯಾಗಿ ಕಡ್ಡಾಯ ಮಾಡಲು ರಾಜ್ಯದ ಉಚ್ಚ ನ್ಯಾಯಾಲಯದ ಪೂರ್ಣಪೀಠದ ಸಹಮತಿಯಿದೆ. ಇಂಗ್ಲಿಷ್ ಭಾಷೆಯನ್ನು ಮಕ್ಕಳು ಚೆನ್ನಾಗಿ ಕಲಿಯಬೇಕೆಂಬ ಭಾವನೆ ಪೋಷಕರಲ್ಲಿ ಬಲವಾಗುತ್ತಿದೆ. ಈ ಮೂರು ಅಂಶಗಳನ್ನು ಗಮನಿಸಿ ಮೂರು ಭಾಷೆಗಳ ಕಲಿಕೆಯನ್ನು ಅಳವಡಿಸಿ, ಕಲಿಕೆ ಮತ್ತು ಪರೀಕ್ಷೆಯನ್ನು ಕಡ್ಡಾಯ ಮಾಡುವುದು ಕಾನೂನಿನ ದೃಷ್ಟಿಯಿಂದಲೂ ವಿರೋಧವನ್ನು ಎದುರಿಸುವುದಿಲ್ಲ. ಬದಲಾಗಿ ಕಲಿಕೆಯನ್ನು ಸಾರ್ಥಕಗೊಳಿಸಿದಂತಾಗುತ್ತದೆ.

ಈ ದೃಷ್ಟಿಕೋನಗಳನ್ನು ಒಪ್ಪಿಯೂ ವಿದ್ಯಾರ್ಥಿಗಳಿಗೆ ಒಂದು ರಿಯಾಯಿತಿಯನ್ನು ಕೊಡಬಹುದಾಗಿದೆ. ಅದೇಂದರೆ, ತಾನು ಕಲಿಯುವ ಮೂರೂ ಭಾಷೆಗಳ ಪರೀಕ್ಷೆಯಲ್ಲಿ ಭಾಗವಹಿಸಿ ಕನ್ನಡವನ್ನು ಬಿಡದೆ ಯಾವುದಾದರೂ ಎರಡು ಭಾಷೆಗಳಲ್ಲಿ ಉತ್ತೀರ್ಣರಾಗುವುದನ್ನು ಕಡ್ಡಾಯ ಮಾಡಬಹುದಾಗಿದೆ. ಇದರಿಂದ ವಿದ್ಯಾರ್ಥಿಯ ಕಲಿಕೆ ಪೂರ್ಣ ಪ್ರಮಾಣದಲ್ಲಿ ನಡೆದು, ಕೊನೆಯಲ್ಲಿ ರಿಯಾಯಿತಿಯ ಆಯ್ಕೆ ವಿದ್ಯಾರ್ಥಿಯದೇ ಆಗಿರುತ್ತದೆ. ಈ ಆಯ್ಕೆಯು ಸಾಮಾನ್ಯವಾಗಿ ಪ್ರಾರಂಭದಲ್ಲೇ ನಡೆಯುವುದಿಲ್ಲ. ಪರೀಕ್ಷೆ ಬಂದಾಗ ಈ ಬಗ್ಗೆ ಯೋಚಿಸಲಾಗುತ್ತದೆ. ಕನ್ನಡದಲ್ಲಂತೂ

ಕಡ್ಡಾಯವಾಗಿ ತೇರ್ಗಡೆಯಾಗಬೇಕಾಗಿರುತ್ತದೆ. ಹೀಗಾಗಿ ತ್ರಿಭಾಷಾ ಕಲಿಕೆಯಿದ್ದೂ ದ್ವಿಭಾಷಾ ಆಯ್ಕೆಗೆ ಒಂದು ಅವಕಾಶವಿರುತ್ತದೆ.

ಶಿಫಾರಸು ೬

ಕನ್ನಡೇತರ ಮಾತೃಭಾಷಾ ಮಾಧ್ಯಮದವರಿಗೆ ಒಂದು ಭಾಷೆಯಾಗಿ ಕನ್ನಡ ಕಲಿಕೆಯನ್ನು ಕಡ್ಡಾಯಗೊಳಿಸುವ ಮತ್ತು ಕನ್ನಡ ಹಾಗೂ ಕನ್ನಡೇತರರು ಪ್ರಾಥಮಿಕ ಶಿಕ್ಷಣದ ಮೂರನೇ ತರಗತಿಯಿಂದಲೇ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಯುವ ದೃಷ್ಟಿಯಿಂದ ಮೂರು ಭಾಷೆಗಳ ಕಲಿಕಾ ನೀತಿಯನ್ನು ಮುಂದುವರಿಸಿ, ಕಲಿಕೆ ಮತ್ತು ಪರೀಕ್ಷೆಗಳನ್ನು ಕಡ್ಡಾಯಗೊಳಿಸಬೇಕು. (ಈಗಿರುವಂತೆ ಕನ್ನಡವನ್ನು ಸ್ವಪ್ರೇರಣೆಯ ಕಲಿಕೆ, ಪರೀಕ್ಷೆ ಇಲ್ಲ - ಎಂದು ಹೇಳಬಾರದು. ಕನ್ನಡವನ್ನೂ ಒಳಗೊಂಡಂತೆ ಪೂರ್ಣ ಪಠ್ಯಕ್ರಮವು ಕಡ್ಡಾಯವಾಗಿರಬೇಕೆಂಬುದು ಈ ಶಿಫಾರಸ್ಸಿನ ಆಶಯ) ಆದರೆ ಕನ್ನಡವನ್ನು ಬಿಡದೆ ಯಾವುದಾದರೂ ಎರಡು ಭಾಷೆಗಳಲ್ಲಿ ತೇರ್ಗಡೆ ಹೊಂದಿದರೂ ಸಾಕೆಂದು ನಿಯಮ ರೂಪಿಸಬೇಕು.

೭. ಕನ್ನಡ ಭಾಷೆ ಮತ್ತು ಐಚ್ಛಿಕ ವಿಷಯ : ವಿಶೇಷಾನುಮತಿ

ಕನ್ನಡ ಮಾಧ್ಯಮ ಶಿಕ್ಷಣ : ವಿಶೇಷಾನುದಾನ

ಇಂದಿನ ಸನ್ನಿವೇಶದಲ್ಲಿ ಕನ್ನಡ ಸಾಹಿತ್ಯವನ್ನು ಐಚ್ಛಿಕ ವಿಷಯವಾಗಿ ಓದಲು ಮುಂದೆ ಬರುವುದೇ ಒಂದು ವಿಶೇಷ ಎನ್ನುವಂತಾಗಿದೆ. ಅನೇಕ ವಿದ್ಯಾರ್ಥಿಗಳು ಪದವಿಪೂರ್ವ ಶಿಕ್ಷಣದಲ್ಲೇ ಕನ್ನಡವನ್ನು ಐಚ್ಛಿಕ ವಿಷಯವಾಗಿ ಓದಲು ಇಚ್ಛಿಸಿ ಪ್ರವೇಶ ಪಡೆಯುತ್ತಿದ್ದಾರೆ. ಆದರೆ ಉಳಿದ ವಿಷಯಗಳಿಗೆ ಬೇಕಾದ ವಿದ್ಯಾರ್ಥಿಗಳ ಸಂಖ್ಯೆಯಂಥ ತಾಂತ್ರಿಕ ಷರತ್ತುಗಳ ಕಾರಣಕ್ಕಾಗಿ ಅನೇಕ ಪದವಿಪೂರ್ವ ಕಾಲೇಜುಗಳಲ್ಲಿ ಕನ್ನಡವು ಐಚ್ಛಿಕ ವಿಷಯಗಳಲ್ಲಿ ಒಂದಾಗಲು ಸಾಧ್ಯವಾಗುತ್ತಿಲ್ಲವೆಂಬ ದೂರಿದೆ. ಪದವಿ ಮತ್ತು ಪದವಿಪೂರ್ವ ಶಿಕ್ಷಣದಲ್ಲಿ ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಆಸಕ್ತಿ ತೋರಿಸುವವರನ್ನು ಪ್ರೋತ್ಸಾಹಿಸಲು ಕೆಲವು ತಾಂತ್ರಿಕ ಷರತ್ತುಗಳನ್ನು ಸಡಿಲಿಸಿ ವಿಶೇಷಾವಕಾಶ ಕಲ್ಪಿಸುವ ಅಗತ್ಯವಿದೆ. ವೃತ್ತಿಶಿಕ್ಷಣದ ಒಲವು ಹೆಚ್ಚಾಗಿರುವ ಸನ್ನಿವೇಶದಲ್ಲಿ ಕನ್ನಡ ಭಾಷೆ - ಸಾಹಿತ್ಯಗಳ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಅಧ್ಯಯನ ಮಾಡಲು ಮುಂದಾಗುವ ವಿದ್ಯಾರ್ಥಿಗಳಿಗೆ ಉತ್ತೇಜಕ ವಾತಾವರಣವನ್ನು ನಿರ್ಮಾಣ ಮಾಡುವುದು ಅಗತ್ಯ.

ಇದು ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳೆರಡಕ್ಕೂ ಅನ್ವಯಿಸುವ ವಿಷಯವಾಗಿದೆ. ಜೊತೆಗೆ ಕನ್ನಡ ಮಾಧ್ಯಮ ಶಾಲೆ - ಕಾಲೇಜುಗಳನ್ನು ಹಾಗೂ

ಕನ್ನಡ ಐಚ್ಛಿಕ ತರಗತಿಗಳನ್ನು ತೆರೆಯಲಿಚ್ಛಿಸುವ ಶಿಕ್ಷಣ ಸಂಸ್ಥೆಗಳಿಗೆ ಅನಗತ್ಯ ಅಡೆತಡೆಗಳಿಲ್ಲದೆ ಅನುಮತಿ ನೀಡಬೇಕು.

ಜೊತೆಗೆ ಸಂಪೂರ್ಣ ಕನ್ನಡ ಮಾಧ್ಯಮದ ಶಾಲೆ - ಕಾಲೇಜುಗಳಿಗೆ ನಿರ್ದಿಷ್ಟ ಹಂತದಿಂದ ವಿಶೇಷ ಅನುದಾನ ಕೊಡುವ ಬಗ್ಗೆ ನಿಯಮಾವಳಿಗಳನ್ನು ರೂಪಿಸಬೇಕು. ಉದಾಹರಣೆಗೆ ಹೇಳುವುದಾದರೆ, ಕರ್ನಾಟಕ ಸರ್ಕಾರವು ನಿಗದಿಪಡಿಸಿದ ಕನ್ನಡ ಮಾಧ್ಯಮದ ತರಗತಿಗಳ ಹಂತವಲ್ಲದೆ, ಈ ಹಂತದ ಆಚೆಯ ತರಗತಿಗಳನ್ನು ಸ್ವಪ್ರೇರಣೆಯಿಂದ ಕನ್ನಡ ಮಾಧ್ಯಮದಲ್ಲಿ ನಡೆಸುತ್ತಿದ್ದರೆ ಅಂತಹವರಿಗೆ ಅನುದಾನ ಕೊಡುವುದು ಒಂದು ಪ್ರೋತ್ಸಾಹಕ ಕ್ರಮವಾಗುತ್ತದೆ. ಒಟ್ಟು ಕನ್ನಡ ಮಾಧ್ಯಮ ಶಾಲೆ - ಕಾಲೇಜುಗಳ ಬಗ್ಗೆಯೂ ಈ ದಿಕ್ಕಿನಲ್ಲಿ ಸ್ಪಷ್ಟ ನಿಲುವು ತಳೆಯಬೇಕಾಗಿದೆ.

ಶಿಫಾರಸು ೭

ಕನ್ನಡ ಭಾಷಾ ಮಾಧ್ಯಮ ಮತ್ತು ಕನ್ನಡ ಐಚ್ಛಿಕ ವಿಷಯ ಬೋಧನೆಗೆ ಅವಕಾಶ ಕಲ್ಪಿಸುವ ಶಿಕ್ಷಣ ಸಂಸ್ಥೆಗಳಿಗೆ ವಿಶೇಷವೆಂದು ಪರಿಗಣಿಸಿ ಮುಕ್ತ ಅನುಮತಿ ನೀಡಬೇಕು. ಪದವಿ ಪೂರ್ವ ಮತ್ತು ಪದವಿ ಶಿಕ್ಷಣದಲ್ಲಿ ಕನ್ನಡವನ್ನು ಉಳಿದ ವಿಷಯಗಳೊಂದಿಗೆ ಐಚ್ಛಿಕವಾಗಿ ವ್ಯಾಸಂಗ ಮಾಡಲು ಇಚ್ಛಿಸುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಷರತ್ತುಗಳನ್ನು ಅಗತ್ಯ ಪ್ರಮಾಣದಲ್ಲಿ ಸಡಿಲಿಸಿ 'ವಿಶೇಷಾವಕಾಶ' ಕಲ್ಪಿಸಬೇಕು. ಸಂಪೂರ್ಣ ಕನ್ನಡ ಮಾಧ್ಯಮದ ಶಾಲೆ – ಕಾಲೇಜುಗಳಿಗಾಗಿ ವಿಶೇಷಾನುದಾನ ನೀತಿಯನ್ನು ರೂಪಿಸಬೇಕು.

೮. ವೃತ್ತಿಶಿಕ್ಷಣದಲ್ಲಿ ಕನ್ನಡ ಕಲಿಕೆ

ಇತ್ತೀಚಿನ ದಿನಗಳಲ್ಲಿ ವೃತ್ತಿಶಿಕ್ಷಣವೇ ಪೂರ್ಣ ಶಿಕ್ಷಣವೆಂಬ ಭಾವನೆ ಬಲವಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಇದಕ್ಕೆ ಸಾರ್ವಜನಿಕರ ದೃಷ್ಟಿಕೋನ ವಷ್ಟೇ ಕಾರಣವಲ್ಲ. ಉದ್ಯಮದ ನೆಲೆಗಳನ್ನು ಮೈಗೂಡಿಸಿಕೊಂಡ ಶಿಕ್ಷಣ ನೀತಿಯೂ ಕಾರಣ. ದೂರಗಾಮಿ ಪರಿಣಾಮಗಳನ್ನು ಯೋಚಿಸದೆ ಇದ್ದರೆ ನಮ್ಮ ಸಮಾಜವನ್ನು ತಪ್ಪುದಾರಿಗೆ ಎಳೆದ ಕಳಂಕ ಶಿಕ್ಷಣ ನೀತಿಗೆ ತಟ್ಟುತ್ತದೆ. ಶಿಕ್ಷಣದಲ್ಲಿ ಸಾಮಾನ್ಯ ಶಿಕ್ಷಣದ ಮಹತ್ವವನ್ನು ಸಂಪೂರ್ಣವಾಗಿ ಮರೆಸುವಂತೆ ವೃತ್ತಿಶಿಕ್ಷಣದ ಮಹತ್ವವನ್ನು ಮೆರೆಸುವುದು ಆರೋಗ್ಯಕರ ಆಶಯವೆನಿಸುವುದಿಲ್ಲ. ಒಂದು ಹಂತದವರೆಗೆ ಸಾಮಾನ್ಯ ಶಿಕ್ಷಣವೇ ಮುಖ್ಯವಾಗಬೇಕು; ಮಾನವಿಕ ವಿಷಯಗಳ ಮತ್ತು ಸಾಮಾನ್ಯ ವಿಜ್ಞಾನದ ಅಭ್ಯಾಸವನ್ನು ಗೌಣವಾಗದಂತೆ ನೋಡಿಕೊಳ್ಳಬೇಕು. ಸಾಮಾನ್ಯ ಶಿಕ್ಷಣದ ಪಠ್ಯಕ್ರಮದಲ್ಲಿ ವೃತ್ತಿಪರ ವಿಷಯ ಐಚ್ಛಿಕ ವಿಷಯಗಳಲ್ಲೊಂದಾಗಿ ಇರಬಹುದೇ ಹೊರತು ಅದೇ ಶಿಕ್ಷಣದ ಪೂರ್ಣಭಾಗವನ್ನು ಆಕ್ರಮಿಸಬಾರದು.

ಒಟ್ಟಾರೆಯಾಗಿ ಹೇಳುವುದಾದರೆ ಶಿಕ್ಷಣ ನೀತಿಯು ಜ್ಞಾನಮುಖಿ ಮತ್ತು ಉದ್ಯೋಗಮುಖಿ ನೆಲೆಗಳನ್ನು ಹದವರಿತು ಅಳವಡಿಸಿಕೊಳ್ಳುವ ಸಮತೋಲನವನ್ನು ಅಂತರ್ಗತ ಮಾಡಿಕೊಳ್ಳಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಸಮತೋಲನಕ್ಕೆ ಧಕ್ಕೆ ತರುವ ನೀತಿನಿರೂಪಣಾ ಕ್ರಮಗಳು ಕಾಣಿಸುತ್ತಿವೆ. ವೃತ್ತಿಶಿಕ್ಷಣವೆಂದ ಕೂಡಲೆ ಸಾಮಾನ್ಯ ಶಿಕ್ಷಣದ ಜ್ಞಾನಶಾಖೆಗಳನ್ನು ಬದಿಗೊತ್ತುವ ಪರಿಪಾಠ ಕಾಣಿಸುತ್ತಿದೆ. ಇದರಿಂದ ನಮ್ಮ ಯುವ ಜನರಲ್ಲಿ ವೃತ್ತಿಮನೋಧರ್ಮ ಮತ್ತು ವೃತ್ತಿಮೌಲ್ಯಗಳನ್ನು ಬೆಳೆಸುವುದಕ್ಕೆ ಮಾತ್ರ ಕ್ರಮಬದ್ಧ ಶಿಕ್ಷಣ ಕೊಟ್ಟಂತಾಗುತ್ತದೆ. ಶಿಕ್ಷಣ ನೀತಿಯ ಈ 'ದೋಷ'ದಿಂದಾಗಿ ವ್ಯಕ್ತಿತ್ವಗಳೆಲ್ಲ ವೃತ್ತಿಪರವಾಗಿ, ಮೌಲ್ಯಗಳೆಲ್ಲ 'ವ್ಯಾಪಾರ'ಗಳಾಗಿ ಪರಿಣಮಿಸುತ್ತವೆ. ವೃತ್ತಿಶಿಕ್ಷಣದ ಜೊತೆ ಜೊತೆಗೆ ಭಾಷೆ, ಸಂಸ್ಕೃತಿ, ಸಮಾಜಗಳ ಬಗ್ಗೆ ಆಸಕ್ತಿ - ಅಭಿರುಚಿಗಳನ್ನು ಮೂಡಿಸುವುದರ ಮೂಲಕ ಶಿಕ್ಷಣ ಮತ್ತು ಶಿಕ್ಷಣಾರ್ಥಿಗಳನ್ನು ಸಮಾಜಮುಖಿಯಾಗಿಸುವ ಹೊಣೆಗಾರಿಕೆ ಬಹು ಮುಖ್ಯವಾದುದು.

ಆದರೆ ಶಿಕ್ಷಣ ನೀತಿಯ ತಾರತಮ್ಯದಿಂದಾಗಿ, ಸಾಮಾನ್ಯ ಶಿಕ್ಷಣದ ವಿದ್ಯಾರ್ಥಿಗಳು ಭಾಷೆ-ಸಂಸ್ಕೃತಿಗಳ ಬಗ್ಗೆ ನಿಗದಿತ ಪಠ್ಯವನ್ನು ಓದಿದರೆ, ವೃತ್ತಿ ಶಿಕ್ಷಣದವರು ಕೇವಲ ತಮ್ಮ ಆಯ್ಕೆಯ ಐಚ್ಛಿಕ ವಿಷಯವನ್ನೇ ಪೂರ್ಣ ಪ್ರಮಾಣದಲ್ಲಿ ಓದುತ್ತಾರೆ. ಈಗ ಪದವಿ ತರಗತಿಗಳನ್ನೇ ಉದಾಹರಣೆಗೆ ತೆಗೆದುಕೊಳ್ಳೋಣ. ಬಿ.ಎ., ಬಿ.ಎಸ್‌ಸಿ.ಯಂಥ ಪದವಿ ಕೋರ್ಸುಗಳಲ್ಲಿ ಕನ್ನಡವನ್ನು ಒಂದು ಭಾಷಾ ವಿಷಯವಾಗಿ ಓದಲು ಅವಕಾಶವಿದೆ. ಆದರೆ ಪದವಿ ತರಗತಿಗಳಾಗಿದ್ದರೂ ಬಿ.ಸಿ.ಎ.; ಬಿ.ಬಿ.ಎ., ಬಿ.ಬಿ.ಎಂ.; ಬಿ.ಹೆಚ್.ಎಂ. ಮುಂತಾದ ವೃತ್ತಿಪರ ಪದವಿ ತರಗತಿಗಳಿಗೆ ಕನ್ನಡ ಒಂದು ಭಾಷಾ ವಿಷಯವಾಗಿಲ್ಲ. ಈ ಕೋರ್ಸುಗಳು ಬಿ.ಎ., ಬಿ.ಎಸ್‌ಸಿ. ರೀತಿಯಲ್ಲೇ ಪದವಿ ತರಗತಿಗಳು. ಆದರೆ ವೃತ್ತಿಪರ ಕೋರ್ಸುಗಳಾದ್ದರಿಂದ ಪದವಿ ತರಗತಿಗಳ ಸಾಮಾನ್ಯ ಪಠ್ಯಕ್ರಮದಿಂದ ಇವುಗಳಿಗೆ ವಿನಾಯಿತಿ ನೀಡಲಾಗಿದೆ. ಬಿ.ಇಡಿ. ಪದವಿಯದು ಇನ್ನೊಂದು ಕತೆ; ಒಂದು ಹಂತದಲ್ಲಿ ಕನ್ನಡವನ್ನೇ ತೆಗೆದುಹಾಕಲಾಯಿತು. ಆನಂತರ ಒತ್ತಾಯದ ಮೇಲೆ ಐಚ್ಛಿಕವಾಗಿ - ಉಳಿದ ವಿಷಯಗಳಿಗಿಂತ ಕಡಿಮೆ ಅಂಕದ ವಿಷಯವಾಗಿ - ಪಠ್ಯಕ್ರಮದಲ್ಲಿ ಸೇರಿಸಲಾಯಿತು. ಟಿ.ಸಿ.ಎಚ್. ನಲ್ಲೂ ಕನ್ನಡ ಕಡ್ಡಾಯ ವಿಷಯವಾಗಿಲ್ಲವೆಂದು ತಿಳಿದು ಬಂದಿದೆ. ಅಧ್ಯಾಪಕರ ತರಬೇತಿ ಪಡೆದವರು ಬಹುಪಾಲು ಕರ್ನಾಟಕದ ಮಕ್ಕಳಿಗೇ ಪಾಠ ಹೇಳಿಕೊಡಬೇಕು. ಹೀಗಿದ್ದರೂ ಹೊರರಾಜ್ಯದ ಅಭ್ಯರ್ಥಿಗಳನ್ನಷ್ಟೇ ಗಮನದಲ್ಲಿಟ್ಟು ಕೊಂಡು ಸ್ಥಳೀಯ ಭಾಷೆ-ಸಂಸ್ಕೃತಿಗಳನ್ನು ನಿರ್ಲಕ್ಷಿಸುವುದು ಆರೋಗ್ಯಕರ ನೀತಿಯಲ್ಲ. ಈಗ ಎಲ್.ಎಲ್.ಬಿ. ವಿಷಯಕ್ಕೆ ಬರೋಣ. ಕರ್ನಾಟಕದ ಕಕ್ಷಿದಾರರಿಗೆ ವಕಾಲತ್ತು ವಹಿಸಬೇಕಾದವರು ಎಲ್.ಎಲ್.ಬಿ. ಶಿಕ್ಷಣ ಪಡೆಯುತ್ತಿದ್ದರೂ ಕನ್ನಡವನ್ನು - ಮಾಧ್ಯಮದ ಮಾತಿರಲಿ - ಒಂದು ಭಾಷೆಯಾಗಿಯಾದರೂ ಕೆಲವು ವಿಶ್ವವಿದ್ಯಾಲಯಗಳಲ್ಲಿ ಬೋಧಿಸುತ್ತಿಲ್ಲ. ನರ್ಸಿಂಗ್ ಶಾಲೆಗಳಲ್ಲಿ ಕನ್ನಡ ಇಲ್ಲ. ನರ್ಸಿಂಗ್ ತರಬೇತಿ

ಪಡೆದವರು ಇಲ್ಲಿನ ರೋಗಿಗಳ ಜೊತೆ ಮಾತನಾಡಬೇಕಾದವರು. ಇಡೀ ನರ್ಸಿಂಗ್ ತರಬೇತಿಯಲ್ಲಿ ಕನ್ನಡ ಮಾಧ್ಯಮವನ್ನು ಅಳವಡಿಸಿದರೂ ತಪ್ಪಿಲ್ಲ. ಇನ್ನು ಪಾಲಿಟೆಕ್ನಿಕ್ ವಿಷಯಕ್ಕೆ ಬಂದರೆ, ಎಲ್ಲಾ ಪಾಲಿಟೆಕ್ನಿಕ್‌ಗಳಲ್ಲಿ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸಲಾಗುತ್ತಿದೆ. ಆದರೆ ಕನ್ನಡವನ್ನು ಪಠ್ಯಕ್ರಮದಲ್ಲಿ ಸೇರಿಸಿಲ್ಲ. ಇದೆಂಥ ವಿಪರ್ಯಾಸ! ಜೊತೆಗೆ ಸಿನಿಮಾಟೋಗ್ರಾಫಿಯಂಥ ತಾಂತ್ರಿಕ ಡಿಪ್ಲೋಮಾದಾರರು ಕನ್ನಡ ಮತ್ತು ಸಾಹಿತ್ಯದ ಸ್ವಲ್ಪಮಟ್ಟಿನ ತಿಳಿವಳಿಕೆ ಪಡೆಯುವುದರಿಂದ ಕಲಾತ್ಮಕ ದೃಷ್ಟಿಕೋನಕ್ಕೆ ಪೂರಕವಾಗುತ್ತದೆಯೆಂಬ ಅಂಶವನ್ನೂ ಇಲ್ಲಿ ಗಮನಿಸಬಹುದು.

ಈಗ ನಾಡಿನ ಅತಿ ಮಹತ್ವದ ಶಿಕ್ಷಣವೆನ್ನಿಸಿಕೊಳ್ಳುತ್ತಿರುವ ಇಂಜಿನಿಯರಿಂಗ್ ಮತ್ತು ವೈ ಕೀಯ ವೃತ್ತಿಶಿಕ್ಷಣದ ವಿಷಯವನ್ನು ಗಮನಿಸೋಣ. ಇಲ್ಲಿ ಯಾವ ಭಾಷೆಯನ್ನೂ ಪಠ್ಯಕ್ರಮದ ಭಾಗವಾಗಿ ಬೋಧಿಸುವುದಿಲ್ಲ. ಹಿಂದೆ ಇಂಜಿನಿಯರಿಂಗ್ ಕೋರ್ಸುಗಳ ಮೊದಲೆರಡು ವರ್ಷ ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿಸಲಾಗುತ್ತಿತ್ತು. ಈಗ ಅದನ್ನು ಕೈ ಬಿಡಲಾಗಿದೆ. ಹೊರರಾಜ್ಯದ ವಿದ್ಯಾರ್ಥಿಗಳು ಗಣನೀಯ ಸಂಖ್ಯೆಯಲ್ಲಿರುವುದರಿಂದ ಕನ್ನಡವನ್ನು ಪಠ್ಯಕ್ರಮದ ಭಾಗವಾಗಿ ಮಾಡುವ ಮಾತು ಮೇಲ್ನೋಟಕ್ಕೆ ಅತಾರ್ಕಿಕ ಎನ್ನಿಸಬಹುದೇನೊ! ಆದರೆ ಜರ್ಮನಿ, ಜಪಾನ್ ಮತ್ತು ರಷ್ಯಾದಂಥ ದೇಶಗಳಲ್ಲಿ ಶಿಕ್ಷಣಕ್ಕಾಗಿ ಬರುವ ವಿದೇಶಿ ವಿದ್ಯಾರ್ಥಿಗಳಿಗೆ ಅವರ ಪಠ್ಯಕ್ರಮದ ಭಾಗವಾಗಿಯೇ ಮೊದಲ ಕೆಲವು ತಿಂಗಳು ಆಯಾ ದೇಶದ ಭಾಷೆಯನ್ನು ಕಲಿಸಲಾಗುತ್ತದೆ. ಇದರ ಹಿಂದಿನ ಉದ್ದೇಶ - ಶಿಕ್ಷಣದ ಸಂದರ್ಭದಲ್ಲಿ ಆ ಸಮಾಜದ ಜೊತೆ ವಿದ್ಯಾರ್ಥಿಗಳು ಬೆರೆಯಬೇಕು ಮತ್ತು ಶಿಕ್ಷಣದ ಕಾರಣಕ್ಕಾಗಿಯೇ ಸಾರ್ವಜನಿಕ ಸಂಪರ್ಕ ಸಾಧಿಸುವುದು ಸುಲಭವಾಗಬೇಕು ಎಂಬುದಾಗಿದೆ. ಕರ್ನಾಟಕದಲ್ಲಾದರೂ ಅಷ್ಟೆ. ಇಂಜಿನಿಯರಿಂಗ್ ಮತ್ತು ವೈದ್ಯಕೀಯ ವಿದ್ಯಾರ್ಥಿಗಳು ತಮ್ಮ ಶಿಕ್ಷಣದ ಸಂದರ್ಭದಲ್ಲಿ ಸಾರ್ವಜನಿಕರ ಜೊತೆ ಸಂಪರ್ಕಕ್ಕೆ ಬರುವುದು ಅನಿವಾರ್ಯ. ಪ್ರಾಯೋಗಿಕ ತರಗತಿಗಳಿಗಾಗಿ ವೈದ್ಯಕೀಯ ವಿದ್ಯಾರ್ಥಿಗಳು ರೋಗಿಗಳನ್ನು ಮಾತನಾಡಿಸುವುದು, ಅವರನ್ನು ಅರ್ಥಮಾಡಿ ಕೊಳ್ಳುವುದು ಅನಿವಾರ್ಯವಲ್ಲವೆ? ಅವರು ಕನ್ನಡೇತರ ರೋಗಿಗಳಿಗೆ ಮಾತ್ರ ವೈದ್ಯರಾಗಬೇಕೆ? ಇಂಜಿನಿಯರಿಂಗ್ ವಿದ್ಯಾರ್ಥಿಗಳಾದರೂ ಅಷ್ಟೆ. ಅವರಿಗೆ ಸಾರ್ವಜನಿಕ ಸಂಪರ್ಕವೂ ಬೇಡ, ಇಷ್ಟಕ್ಕೂ ಮುಂದೆ ಅವರು ಈ ರಾಜ್ಯದ ಕೆಲಸಕ್ಕೆ ಸೇರುವುದಿಲ್ಲವೆಂದು ಹೇಳಲಾಗುತ್ತದೆಯೇ? ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣಕ್ಕೆ ಸೇರಿದ ಹೊರ ರಾಜ್ಯದ ಅಥವಾ ಕನ್ನಡವನ್ನು ಓದಲು ಬರೆಯಲು ಬಾರದ ವಿದ್ಯಾರ್ಥಿಗಳಿಗೆ ಅಧಿಕೃತ ಪಠ್ಯಕ್ರಮದ ಭಾಗವಾಗಿಯೇ ಪ್ರಾರಂಭದ ಕೆಲವು ತಿಂಗಳು ಕನ್ನಡ ಭಾಷೆಯನ್ನು ಕಲಿಸಬೇಕು. ಅಸಮತೋಲನವನ್ನು ನಿವಾರಿಸಲು, ಅದೇ ಅವಧಿಯಲ್ಲಿ ಕನ್ನಡದ ವಿದ್ಯಾರ್ಥಿಗಳಿಗೆ ಸೂಕ್ತ ಪಠ್ಯಕ್ರಮದೊಂದಿಗೆ ಕನ್ನಡ ಬೋಧನೆ ಮಾಡಬೇಕು.

ಕೃಷಿ ವಿಶ್ವವಿದ್ಯಾಲಯಗಳಲ್ಲಿ ಕನ್ನಡದ ಆದ್ಯತೆಗೆ ಸಂಬಂಧಿಸಿದಂತೆ ಒತ್ತಾಯ ಮಾಡಲೇಬೇಕಾಗಿದೆ. ಜನಸಾಮಾನ್ಯರ ಬದುಕಿನ ಭಾಗವಾದ ಕೃಷಿ ಸಂಬಂಧಿ ಬೋಧನೆಯು ಕೇವಲ ಆಂಗ್ಲಮಾಧ್ಯಮದಲ್ಲಿರುವುದು ಒಂದು ವಿಪರ್ಯಾಸ. ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗವೊಂದು ಇದ್ದು ಅದು ಅನುವಾದ ಕಾರ್ಯವನ್ನು ನೋಡಿಕೊಳ್ಳುತ್ತಿದೆ. ಧಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ ಹೀಗೆ ಒಂದು ಕನ್ನಡ ವಿಭಾಗವೂ ಇಲ್ಲ. ಒಟ್ಟಾರೆ ಹೇಳುವುದಾದರೆ ಕೃಷಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಮಾಧ್ಯಮ ಬೋಧನೆಗೆ ಅವಕಾಶವಿರಬೇಕು.

ಮತ್ತೊಂದು ಅಂಶವನ್ನು ಇಲ್ಲಿ ಗಮನಿಸಬೇಕು. ಬಿ.ಸಿ.ಎ., ಬಿ.ಬಿ.ಎ., ಬಿ.ಬಿ.ಎಂ., ಬಿ.ಎಚ್.ಎಂ. ಮುಂತಾದ ಕೋರ್ಸುಗಳನ್ನು ಸಾಮಾನ್ಯವಾಗಿ ಸರ್ಕಾರಿ ಕಾಲೇಜುಗಳಿಗೆ ಕೊಡುತ್ತಿಲ್ಲ; ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಇಂಥ ಕೋರ್ಸುಗಳನ್ನು ಹೆಚ್ಚಾಗಿ ಕೊಡುತ್ತಿದ್ದು ಬಡ ಕನ್ನಡಿಗರ ಕೈಗೆ ಎಟುಕುವುದು ಕಷ್ಟವಾಗುತ್ತಿದೆ. ಇಷ್ಟೇ ಅಲ್ಲ, ಸರ್ಕಾರವೊಂದು ತನ್ನಿಂದ ನಡೆಸಲ್ಪಡುವ ಕಾಲೇಜುಗಳಿಗೆ ಇಂಥ ಕೋರ್ಸುಗಳನ್ನು ಆದ್ಯತೆಯ ಮೇಲೆ ಕೊಡದೆ ಇರುವುದು ಜನಮುಖಿ ಶಿಕ್ಷಣ ನೀತಿಯೆನ್ನಿಸುವುದಿಲ್ಲ. ಸರ್ಕಾರಿ ಕಾಲೇಜುಗಳಲ್ಲಿ ಖಾಸಗಿ ಸಂಸ್ಥೆಗಳಿಗಿಂತ ಕಡಿಮೆ ಶುಲ್ಕವನ್ನು ಕಟ್ಟಿಸಿಕೊಂಡು ಈ ರೀತಿಯ ಕೋರ್ಸುಗಳಿಗೆ ಪ್ರವೇಶ ದೊರಕಿಸಿಕೊಟ್ಟರೆ ಬಡ ಕನ್ನಡಿಗರಿಗೆ ಅನುಕೂಲವಾಗುತ್ತದೆ. ಶಿಕ್ಷಣ ನೀತಿಯೂ ಸರಿದಿಕ್ಕಿನತ್ತ ಸಾಗಿದಂತಾಗುತ್ತದೆ. ಪ್ರತಿಷ್ಠಿತವೆಂದು ಕರೆಯಲ್ಪಡುವ ಶಿಕ್ಷಣ ಸಂಸ್ಥೆಗಳಿಗೆ ಫಲವತ್ತಾದ ಕೋರ್ಸುಗಳನ್ನೂ ಸ್ವಾಯತ್ತತೆಯನ್ನೂ ಕೊಡುವ ಔದಾರ್ಯಕ್ಕೆ ಬದಲಾಗಿ, ಸರ್ಕಾರಿ ಶಾಲೆ - ಕಾಲೇಜುಗಳನ್ನು ಪ್ರತಿಷ್ಠಿತಗೊಳಿಸುವುದು ಶಿಕ್ಷಣನೀತಿಯ ಮುಖ್ಯ ಭಾಗವಾಗಬೇಕು.

ಶಿಫಾರಸು ೮

(ಅ) ಬಿ.ಸಿ.ಎ., ಬಿ.ಬಿ.ಎಂ., ಬಿ.ಎಚ್.ಎಂ. ಮುಂತಾದ ಎಲ್ಲ ಪದವಿ ತರಗತಿಗಳಲ್ಲಿ ಉಳಿದ ಪದವಿ ತರಗತಿಗಳಂತೆಯೇ ಕನ್ನಡವೂ ಪಠ್ಯಕ್ರಮದ ಭಾಗವಾಗಬೇಕು. ಈ ಮೂಲಕ ಪದವಿ ತರಗತಿಗಳ ಪಠ್ಯಕ್ರಮದಲ್ಲಿ ಏಕರೂಪತೆಯನ್ನು ಸಾಧಿಸಬೇಕು.

(ಆ) ಎಲ್.ಎಲ್.ಬಿ., ಐ.ಟಿ.ಐ., ನರ್ಸಿಂಗ್ ಶಾಲೆ ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಕನ್ನಡವನ್ನು ಒಂದು ಭಾಷಾ ವಿಷಯವಾಗಿ ಕಲಿಸಬೇಕು. ಅಲ್ಲದೆ ಈ ಕೋರ್ಸುಗಳಲ್ಲಿ ಕನ್ನಡ ಮಾಧ್ಯಮಕ್ಕೆ ಅವಕಾಶ ಕಲ್ಪಿಸಬೇಕು.

(ಇ) ಬಿ.ಇಡಿ., ಟಿ.ಸಿ.ಎಚ್.ಗಳಲ್ಲಿ ಕನ್ನಡ ಕಡ್ಡಾಯ ಭಾಷೆಯಾಗಿರಬೇಕು. ಉಳಿದ ವಿಷಯಗಳಿಗೆ ಸಮಾನವಾಗಿರುವಂತೆ ಅಂಕಗಳನ್ನು ನಿಗದಿ ಮಾಡಬೇಕು.

(ಈ) ವಿದೇಶಿ ವಿದ್ಯಾರ್ಥಿಗಳಿಗೆ ಜರ್ಮನಿ, ಜಪಾನ್, ರಷ್ಯಾ ಮುಂತಾದ ದೇಶಗಳಲ್ಲಿ ಆಯಾ ದೇಶದ ಭಾಷೆಯನ್ನು ಕಲಿಸುವ ಮಾದರಿಯಲ್ಲಿ ನಮ್ಮ ರಾಜ್ಯದ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣದ (ಬಿ.ಇ., ಎಂ.ಬಿ.ಬಿ.ಎಸ್., .ಡಿ.ಎಸ್. ಇತ್ಯಾದಿ) ಮೊದಲೆರಡು ಸೆಮಿಸ್ಟರ್‌ಗಳಲ್ಲಿ ಹೊರರಾಜ್ಯದ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವುದನ್ನು ಪಠ್ಯಕ್ರಮದ ಭಾಗವಾಗಿಸಬೇಕು. ಅಸಮತೋಲನದ ನಿವಾರಣೆಗಾಗಿ ಅದೇ ಅವಧಿಯಲ್ಲಿ ಕನ್ನಡ ವಿದ್ಯಾರ್ಥಿಗಳಿಗೆ ಸೂಕ್ತ ಪಠ್ಯಕ್ರಮದೊಂದಿಗೆ ಕನ್ನಡವನ್ನು ಬೋಧಿಸಬೇಕು.

(ಉ) ಕೃಷಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಮಾಧ್ಯಮದ ತರಗತಿಗಳು ನಡೆಯುವಂತೆ ಸೂಕ್ತ ವ್ಯವಸ್ಥೆ ಮಾಡಬೇಕು. ಅನುವಾದ ಕಾರ್ಯವನ್ನು ಒಳಗೊಂಡಂತೆ ಒಟ್ಟು ಕನ್ನಡಪರ ಕ್ರಿಯೆಗಾಗಿ ಎಲ್ಲ ಕೃಷಿ ವಿಶ್ವವಿದ್ಯಾಲಯ ಗಳಲ್ಲಿ ಕನ್ನಡ ವಿಭಾಗ ಇರಬೇಕು.

(ಊ) ಬಡ ಕನ್ನಡಿಗರ ಅನುಕೂಲಕ್ಕಾಗಿ ಮತ್ತು ಶಿಕ್ಷಣ ನೀತಿಯನ್ನು ಜನಮುಖಿಗೊಳಿಸುವ ಉದ್ದೇಶಕ್ಕಾಗಿ ವೃತ್ತಿಪರ ಪದವಿ ಕೋರ್ಸುಗಳನ್ನು ಆದ್ಯತೆಯ ಮೇಲೆ ಸರ್ಕಾರಿ ಕಾಲೇಜುಗಳಿಗೆ ಕೊಡಬೇಕು.

೯. ವಿಶ್ವವಿದ್ಯಾಲಯಗಳಲ್ಲಿ 'ಕ್ರಿಯಾತ್ಮಕ ಕನ್ನಡ'

ವಿಶ್ವವಿದ್ಯಾಲಯವೆಂದರೆ 'ಆಂಗ್ಲ ಭಾಷಾಲಯ'ವೆಂದೇ ಅನೇಕರ ಮೂಢನಂಬಿಕೆ. ಇಲ್ಲಿ ನಡೆಯುವ ಬಹುಪಾಲು ಸಮಾರಂಭಗಳು, ಆಂತರಿಕ ಸಭೆಗಳು ಆಂಗ್ಲ ಭಾಷೆಯಲ್ಲೇ ನಡೆಯುತ್ತವೆ. ಪ್ರಾದೇಶಿಕ ಭಾಷೆಗಳಿಗೆ ಇರುವ ಸಾಧ್ಯತೆಗಳನ್ನು ನಂಬಲು ಸಿದ್ಧವಿಲ್ಲದ ವ್ಯಕ್ತಿತ್ವಗಳು ಇಲ್ಲಿ 'ವಿಕಾಸ' ಹೊಂದುತ್ತವೆ ಎಂದು ನಂಬಿಸ ಲಾಗುತ್ತಿದೆ. ಇಂಥ ಸನ್ನಿವೇಶದಲ್ಲಿ ವಿಶ್ವವಿದ್ಯಾಲಯಗಳು ಕನ್ನಡಕ್ಕೆ ಅಗತ್ಯವಿರುವಷ್ಟು ಆದ್ಯತೆ ಕೊಟ್ಟರೆ ಅದೊಂದು ಅಸಾಧಾರಣ ಹೆಜ್ಜೆಯಾಗುತ್ತದೆ. ಪ್ರಾಯೋಗಿಕವಾಗಿ ಸಾಧ್ಯವಾದ ಕನ್ನಡಪರ ಕ್ರಮಗಳನ್ನು, ವಿಶ್ವವಿದ್ಯಾಲಯಗಳು ಕೈಗೊಳ್ಳುವುದರ ಮೂಲಕ, ಹೆಚ್ಚು ಹೆಚ್ಚು ಜನಮುಖಿಯಾಗುವ, ಪ್ರಜಾಸತ್ತಾತ್ಮಕವಾಗುವ ಕ್ರಿಯೆಯಲ್ಲಿ ತೊಡಗಿಸಿಕೊಳ್ಳಬೇಕು.

ಈ ದಿಕ್ಕಿನಲ್ಲಿ, ಒಂದು ಕಾರ್ಯಸಾಧ್ಯಕ್ರಮವಾಗಿ, 'ಕ್ರಿಯಾತ್ಮಕ ಕನ್ನಡ'ವನ್ನು (Functional Kannada) ವಿಶ್ವವಿದ್ಯಾಲಯಗಳಲ್ಲಿ ಒಂದು ಪಠ್ಯವಾಗಿ ಬೋಧಿಸುವ ಅಗತ್ಯವಿದೆ. ಈಗಿರುವ ಕನ್ನಡ ಭಾಷಾ ವಿಷಯದ ಜೊತೆಗೆ ಇದನ್ನು ಬೋಧಿಸ ಬೇಕಾಗುತ್ತದೆ. ವಿಶ್ವವಿದ್ಯಾಲಯಗಳಲ್ಲಿ ಈಗಿರುವ ಕನ್ನಡ ಪಠ್ಯವು ಸಾಮಾನ್ಯವಾಗಿ ಸಾಹಿತ್ಯ ಕೇಂದ್ರಿತವಾಗಿರುತ್ತದೆ. ವಿದ್ಯಾರ್ಥಿಗಳಲ್ಲಿ ಸಾಂಸ್ಕೃತಿಕ ಅರಿವನ್ನು ಮೂಡಿಸುವ

ಒಂದು ಸಾಧನವಾಗಿ ಸಾಹಿತ್ಯಾದಿ ಕಲೆಗಳ ಸಾಮಾನ್ಯ ತಿಳುವಳಿಕೆ ಅಗತ್ಯವಾದುದು. ಆದ್ದರಿಂದ ಈಗಿರುವ ಪಠ್ಯದ ಜೊತೆಗೆ 'ಕ್ರಿಯಾತ್ಮಕ ಕನ್ನಡ'ವನ್ನು ಪ್ರತ್ಯೇಕವಾಗಿ ಬೋಧಿಸುವುದು ಸೂಕ್ತವಾದುದು. ಭಾಷಾ ಬಳಕೆಯ ವಿವಿಧ ವಿಧಾನಗಳು, ಮಾತಿನ ವಿವಿಧ ರೂಪಗಳು, ಸಂಪರ್ಕದ ಸಾಧ್ಯತೆಗಳು, ಆಧುನಿಕ ಸಂದರ್ಭದ ಸವಾಲುಗಳ ನಡುವೆ ಭಾಷಾ ಬಳಕೆಯು ತೆಗೆದುಕೊಳ್ಳುವ ತಿರುವುಗಳು - ಹೀಗೆ ಸಮಕಾಲಿನ ಹಾಗೂ ಸಂಗತ ವಿಷಯಗಳನ್ನು ಒಳಗೊಂಡ ಪಠ್ಯಕ್ರಮವನ್ನು ರೂಪಿಸಿ, ವಿಶ್ವವಿದ್ಯಾಲಯದ ಪದವಿ ಶಿಕ್ಷಣದಲ್ಲಿ ಬೋಧಿಸುವ ಅಗತ್ಯವಿದೆ. ಇದು ಕಲಾ ವಿಭಾಗದ ವಿದ್ಯಾರ್ಥಿಗಳಿಗಷ್ಟೇ ಅಲ್ಲ; ವಿಜ್ಞಾನ, ವಾಣಿಜ್ಯ, ವೃತ್ತಿಪರ ಶಿಕ್ಷಣ - ಹೀಗೆ ಎಲ್ಲಾ ವಿಭಾಗಗಳಿಗೂ ಉಪಯುಕ್ತವಾಗುತ್ತದೆ.

ಶಿಫಾರಸು ೯

ಎಲ್ಲ ವಿಶ್ವವಿದ್ಯಾಲಯಗಳ ಎಲ್ಲ ವಿಷಯಗಳ ಪದವಿ ತರಗತಿಗಳಿಗೆ 'ಕ್ರಿಯಾತ್ಮಕ ಕನ್ನಡ' ಪಠ್ಯಕ್ರಮವನ್ನು ರೂಪಿಸಿ, ಬೋಧಿಸುವ ವ್ಯವಸ್ಥೆಯಾಗಬೇಕು.

೧೦. ಕನ್ನಡ ಸಂಸ್ಕೃತಿ ಪಠ್ಯ ಮತ್ತು ಪಠ್ಯವಿಷಯ ಪುನರ್ ವಿಂಗಡನೆ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ ೧೯೯೪ರ ೧೬ನೇ ಪರಿಚ್ಛೇದ ೫(ಜೆ) ಹೀಗೆ ಹೇಳುತ್ತದೆ; "ಕನ್ನಡ ಪಠ್ಯಪುಸ್ತಕಗಳ ಗುಣಮಟ್ಟ ಪರೀಕ್ಷಿಸಿ ಲೋಪದೋಷಗಳೇನಾದರೂ ಇದ್ದರೆ ಅದನ್ನು ಸರಿಪಡಿಸಿಕೊಳ್ಳಲು ಸೂಚನೆ ನೀಡತಕ್ಕದ್ದು."

ಕನ್ನಡ ಪಠ್ಯಪುಸ್ತಕಗಳನ್ನು ಪರಿಶೀಲಿಸಿದಾಗ, ಅವುಗಳು ಸಂಪೂರ್ಣ ಸಾಂಸ್ಕೃತಿಕ ಪಠ್ಯಗಳಾಗಿ ರೂಪಾಂತರಗೊಳ್ಳುವ ಅಗತ್ಯವಿದೆ ಎನ್ನಿಸುತ್ತದೆ. ಇದರರ್ಥ ಈಗಿರುವ ಪಠ್ಯಪುಸ್ತಕಗಳಲ್ಲಿ ಸಾಂಸ್ಕೃತಿಕ ಸಂಗತಿಗಳು ಇಲ್ಲವೆಂದಲ್ಲ, ಎಲ್ಲ ರೀತಿಯ ವಿಷಯಗಳನ್ನು ಕನ್ನಡ ಭಾಷೆಯಲ್ಲಿ ಬರೆದು / ಬರೆಸಿ ಸಂಕಲಿಸುವ ಸ್ವರೂಪಕ್ಕೂ, ಭಾಷಾ ವಿಷಯದ ಪಠ್ಯಪುಸ್ತಕಗಳು ಸಾಂಸ್ಕೃತಿಕ ಸ್ವರೂಪವನ್ನು ಪಡೆಯಬೇಕೆಂಬ ಪರಿಕಲ್ಪನೆಗೂ ವ್ಯತ್ಯಾಸವಿದೆಯೆಂಬುದನ್ನು ಇಲ್ಲಿ ಗಮನಿಸಬೇಕು.

ಕರ್ನಾಟಕ ಶಿಕ್ಷಣ ಅಧಿನಿಯಮ ೧೯೮೩ - ಇದರ ಏಳನೇ ಪರಿಚ್ಛೇದದಲ್ಲಿ ಪಠ್ಯಕ್ರಮವು ಒಳಗೊಳ್ಳಬೇಕಾದ ಅನೇಕ ಅಂಶಗಳನ್ನು ಸೂಚಿಸಲಾಗಿದೆ. ರಾಷ್ಟ್ರೀಯ ಸಮಗ್ರತೆ, ಪೌರಪ್ರಜ್ಞೆ, ವೈಜ್ಞಾನಿಕ ಮನೋಧರ್ಮ, ಶೋಧನಾತ್ಮಕತೆ ಮತ್ತು ಸುಧಾರಣಾ ಶಕ್ತಿ, ಮಾನವತೆ - ಇಂಥ ಅನೇಕ ಸಮಾಜಮುಖಿ ವಿಷಯಗಳಲ್ಲದೆ, 'ಬಹುಮುಖೀ ಸಂಸ್ಕೃತಿಯ ಶ್ರೀಮಂತ ಪರಂಪರೆಯ ರಕ್ಷಣೆ ಮತ್ತು ಪರಿಶೀಲನೆ'ಯ

ಅಂಶವನ್ನು ಪ್ರತ್ಯೇಕವಾಗಿ ಪ್ರಸ್ತಾಪಿಸಲಾಗಿದೆ. ಶಿಕ್ಷಣ ಅಧಿನಿಯಮದಲ್ಲಿ ಸೂಚಿತವಾದ ಈ ಅಂಶಗಳು ವಿದ್ಯಾರ್ಥಿಗಳ ವೃತ್ತಿ ಪರತೆಗೆ ಹಾಗೂ ಇತರೆ ಪಠ್ಯ ವಿಷಯಗಳಿಗೆ ಪರ್ಯಾಯವಾಗಿ ಅಥವಾ ಸಂವಾದಿಯಾಗಿ ಬೆಳೆಯಬೇಕಾದ ಮೌಲಿಕ ಮನೋಧರ್ಮಕ್ಕೆ ಒತ್ತು ನೀಡಿರುವುದು ಗಮನೀಯವಾದುದು. ಶಿಕ್ಷಣದ ಉದ್ದೇಶದಲ್ಲಿ ಸಾಮಾಜಿಕ ಮೌಲ್ಯಬದ್ಧತೆ ಇರುವುದನ್ನು ಶಿಕ್ಷಣ ಅಧಿನಿಯಮವು ಸ್ಪಷ್ಟಪಡಿಸುತ್ತದೆ.

ಆದರೆ ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಮತ್ತು ಸಾಮಾಜಿಕ ಕಳಕಳಿಗಳ ಸಂಬಂಧ ಗಾಢವಾಗುತ್ತಿಲ್ಲ; ಸಾಂಸ್ಕೃತಿಕ ತಿಳುವಳಿಕೆಗೆ ಅಗತ್ಯ ಪ್ರಮಾಣದ ಮಹತ್ವ ಸಿಗುತ್ತಿಲ್ಲ. ಬದಲಾಗಿ ಓದುವವರೆಲ್ಲ ವ್ಯಾಪಾರಿ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕಾಗಿದೆಯೆಂಬ ಭಾವನೆ ಬೆಳೆಯುತ್ತಿದೆ ಅಥವಾ ಬೆಳೆಸಲಾಗುತ್ತಿದೆ. ಲಾಭ-ನಷ್ಟಗಳ ಲೆಕ್ಕ ಇಡುವ ಯಂತ್ರಗಳಾಗಿ ಮನುಷ್ಯರನ್ನು ಮಾರ್ಪಡಿಸುವ ಪ್ರಕ್ರಿಯೆಯು ವಿವಿಧ ಆಯಾಮಗಳಲ್ಲಿ ಹರಡಿಕೊಳ್ಳುತ್ತಿದೆ. ಇಂಥ ಸನ್ನಿವೇಶದಲ್ಲಿ ನಾವು 'ಕರ್ನಾಟಕ ಶಿಕ್ಷಣ ಅಧಿನಿಯಮದ' ಆಶಯಗಳನ್ನು ಜ್ಞಾಪಿಸಿಕೊಳ್ಳುತ್ತ ಪಠ್ಯಕ್ರಮದ ಬಗ್ಗೆ ಮರುಚಿಂತನೆ ಮಾಡಬೇಕಾಗಿದೆ. ಪಠ್ಯಕ್ರಮವು ಸಮಕಾಲೀನ ಅಗತ್ಯಗಳನ್ನೂ ಪೂರೈಸಬೇಕು.; ಸಾಮಾಜಿಕ - ಸಾಂಸ್ಕೃತಿಕ ಆಯಾಮವನ್ನೂ ಪಡೆಯಬೇಕು - ಇದು ಪಠ್ಯಕ್ರಮದ ಒಟ್ಟಾರೆ ಸ್ವರೂಪವಾಗಬೇಕು. ಆಗ ಸಮಾಜ ವಿಜ್ಞಾನವು ಸಾಮಾಜಿಕ ನೆಲೆಯ ವಿಷಯಗಳನ್ನು ಒಳಗೊಂಡು ಸಾಮಾಜಿಕ ಪ್ರಜ್ಞೆಯನ್ನು ಪ್ರೇರೇಪಿಸುವಂತೆ ರೂಪುಗೊಳ್ಳಬೇಕು. ವಿಜ್ಞಾನದ ವಿಷಯ ಮಾಹಿತಿಯ ಜೊತೆಗೆ ವೈಜ್ಞಾನಿಕ ಮನೋಧರ್ಮವನ್ನು ಬೆಳೆಸಬೇಕು. ವೃತ್ತಿಪರ ವಿಷಯಗಳು ತಂತಮ್ಮ ಕ್ಷೇತ್ರದ ಪರಿಣತಿಯನ್ನು ನೆಲೆಗೊಳಿಸಬೇಕು. ಭಾಷೆ-ಸಾಹಿತ್ಯದ ಪಠ್ಯಕ್ರಮ ಸಂಪೂರ್ಣ ಸಾಂಸ್ಕೃತಿಕವಾಗಬೇಕು. ಹೀಗೆ ವಿಷಯ ವಿಂಗಡಣೆಯಾದಾಗ ಪಠ್ಯಕ್ರಮಕ್ಕೊಂದು ಖಚಿತ ಸ್ವರೂಪ ಲಭ್ಯವಾಗಲು ಸಾಧ್ಯ.

ಇಲ್ಲಿಯವರೆಗೆ ಪ್ರಸ್ತಾಪಿಸಿದ ವಿಷಯಗಳ ಹಿನ್ನೆಲೆಯಲ್ಲಿ ನಮ್ಮ ಪಠ್ಯಕ್ರಮವನ್ನು ಮರುಚಿಂತನೆಗೆ ಒಳಪಡಿಸಬೇಕೆಂಬ ಒತ್ತಾಸೆಯನ್ನು ಪ್ರಕಟಿಸುತ್ತ, ಕನ್ನಡ ಪಠ್ಯಗಳು ಸಂಪೂರ್ಣ ಸಾಂಸ್ಕೃತಿಕ ಪಠ್ಯಗಳಾಗಬೇಕೆಂದು ಈ ವರದಿಯು ಒತ್ತಾಯಿಸುತ್ತದೆ. ಪ್ರಾಥಮಿಕ ನಾಲ್ಕನೇ ತರಗತಿಯವರೆಗೆ ಮುಖ್ಯವಾಗಿ ಭಾಷಾಭ್ಯಾಸ ನಡೆಯುತ್ತದೆ. ಅದು ಸರಿಯಾದ ಕ್ರಮವೂ ಹೌದು. ಅನಂತರ ಐದನೇ ತರಗತಿಯಿಂದ ಪ್ರಾರಂಭಿಸಿ ಮುಂದಿನ ಕನ್ನಡ ಪಠ್ಯಗಳಲ್ಲಿ ಬರಬೇಕಾದ ವಿಷಯ ವ್ಯಾಪ್ತಿಯನ್ನು ವಿಕಾಸಕ್ರಮದಲ್ಲಿ ವಿಂಗಡಿಸಿಕೊಳ್ಳಬೇಕು. ಅಗತ್ಯವೆನ್ನಿಸಿದರೆ ಪ್ರೌಢಶಾಲೆ ಹತ್ತನೇ ತರಗತಿಯವರೆಗೆ ಒಂದು ಘಟಕ, ಪದವಿಪೂರ್ವ ತರಗತಿಗಳು ಇನ್ನೊಂದು ಘಟಕ ಮತ್ತು ಪದವಿ ತರಗತಿಗಳು ಮತ್ತೊಂದು ಘಟಕ-ಹೀಗೆ ಮೂರು ಹಂತಗಳಲ್ಲಿ ಪಠ್ಯಕ್ರಮ ರೂಪಿಸ ಬಹುದು. ಒಟ್ಟಾರೆ ಪಠ್ಯಕ್ರಮವು ವಿಕಾಸಮುಖಿಯಾಗಿರಬೇಕು. ಅಂದರೆ ಪುನರಾವೃತ್ತಿಯಾಗದಂತೆ ಪ್ರತಿಯೊಂದು ಘಟಕದ ಪಠ್ಯಪಾಠಗಳನ್ನು ಸಂಯೋಜಿಸಬೇಕು.

'ನಿರಂತರತೆ' (ಕಂಟಿನ್ಯುಟಿ) ಒಂದು ಮುಖ್ಯಾಂಶವಾದರೆ ಕನ್ನಡ ಪಠ್ಯಪುಸ್ತಕಗಳು ಕನ್ನಡ ಸಂಸ್ಕೃತಿ ಪಠ್ಯಗಳಾಗಬೇಕೆಂಬುದು ಇನ್ನೊಂದು ಪ್ರಮುಖಾಂಶ. ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ವಿಕಾಸಕ್ರಮವು ಪಠ್ಯಗಳ ಮೂಲಕ ಪ್ರಕಟವಾಗುತ್ತ ಹೋಗಬೇಕು. ಸಾಹಿತ್ಯ, ಕಲೆ, ಜಾನಪದ, ಪುರಾಣ, ಸ್ಥಳೀಯ ಸಂಸ್ಕೃತಿಯ ವಿಶೇಷ ಘಟನೆಗಳು, ಸೂಫಿ ಸಂಸ್ಕೃತಿಯ ವಿಷಯಗಳು, ಸಾಮರಸ್ಯದ ನೆಲೆಗಳು - ಹೀಗೆ ಅನೇಕ ವಿಷಯಗಳು ವಿವಿಧ ಹಂತಗಳಲ್ಲಿ ಆಯಾ ತರಗತಿಗೆ ತಕ್ಕ ಭಾಷಾ ವಿಧಾನದಲ್ಲಿ ಒಳಗೊಳ್ಳಬೇಕು. ಈ ವಿಷಯಗಳೆಲ್ಲ ಗಂಭೀರ ಚರ್ಚೆಯ ಲೇಖನಗಳಾಗಬೇಕಿಲ್ಲ. ಕತೆಯ ಮಾದರಿಯಲ್ಲಿರಬಹುದು. ಪ್ರಸಂಗಗಳ ಮಾದರಿಯಲ್ಲಿರಬಹುದು. ಒಟ್ಟಾರೆ ಆಸಕ್ತಿದಾಯಕವಾಗಿರಬೇಕು. ಕೆಲವು ಜನಪದ ಕತೆಗಳು, ರಾಮಾಯಣ - ಮಹಾಭಾರತದ ಕಥಾ ಪ್ರಸಂಗಗಳು, ಕವಿಗಳು, ಕಲಾವಿದರು, ತತ್ವಪದಕಾರರೇ ಮುಂತಾದ ಮುಖ್ಯರ ವ್ಯಕ್ತಿಚಿತ್ರಗಳು ಅಥವಾ ಅವರ ಕೃತಿಗಳ ಮೂಲಕ ಪರಿಚಯ - ಹೀಗೆ ಕ್ರಮಬದ್ಧವಾಗಿ ಸಾಂಸ್ಕೃತಿಕ ಪರಂಪರೆಯನ್ನು ಕಲಿಸಿಕೊಡುವಂತಿರಬೇಕು. ಕನ್ನಡದ ಅಕ್ಷರಗಳಲ್ಲಿ ಎಲ್ಲ ರೀತಿಯ ವಿಷಯಗಳನ್ನು ಒಟ್ಟುಹಾಕುವುದು ಕನ್ನಡ ಪಠ್ಯವಾಗಬಾರದು. ಏಕೆಂದರೆ ಬೇರೆ ಬೇರೆ ವಿಷಯಗಳನ್ನು ಅದೇ ತರಗತಿಯ ಬೇರೆ ಪಠ್ಯವಿಷಯಗಳಲ್ಲಿ ಕಲಿಸಲು ಸಾಧ್ಯ. ಈ ವಿಚಾರಧಾರೆಯ ಸ್ಪಷ್ಟತೆಗಾಗಿ ಕನ್ನಡ ಪಠ್ಯ ಪುಸ್ತಕವೊಂದು ಒಳಗೊಂಡ ವಿಷಯಗಳನ್ನು ಮುಂದಿನಂತೆ ಪ್ರಸ್ತಾಪಿಸಬಹುದಾಗಿದೆ.

'ಕನ್ನಡ ಭಾರತಿ ೬' ಎಂಬ ಪಠ್ಯಪುಸ್ತಕವನ್ನು ಆರನೇ ತರಗತಿಯ ಪ್ರಥಮ ಭಾಷೆಯ ಪಠ್ಯಪುಸ್ತಕವಾಗಿ ನಿಗದಿಪಡಿಸಲಾಗಿದೆ. ಈ ಕನ್ನಡ ಪಠ್ಯದಲ್ಲಿರುವ - ಹವ್ಯಾಸಗಳು (ಪುಟ ೫) ಲೋಕನಾಯಕ ಜಯಪ್ರಕಾಶ ನಾರಾಯಣ್ (ಪುಟ ೩೧) ಲೆನಿನ್ ತೀರ್ಮಾನ (ಪುಟ ೪೨) ರೆಡ್‌ಕ್ರಾಸ್ (ಪುಟ ೪೭) ಕಂಪ್ಯೂಟರ್ (ಪುಟ ೫೪) ಪುಸ್ತಕ ಪ್ರೇಮಿ ಅಂಬೇಡ್ಕರ್ (ಪುಟ ೫೯) ಬಿದಿರು (ಪುಟ ೬೫) ಒಲಂಪಿಕ್ ಕ್ರೀಡೆಗಳು (ಪುಟ ೭೨) - ಈ ಪಾಠಗಳನ್ನು ಗಮನಿಸಿ. ಈ ವಿಷಯಗಳನ್ನು ಯಾವುದೇ ವಿದ್ಯಾರ್ಥಿ ಖಂಡಿತ ಓದಬೇಕು, ಮನನ ಮಾಡಿಕೊಳ್ಳಬೇಕು. ಈ ಬಗ್ಗೆ ಎರಡು ಮಾತಿಲ್ಲ. ಆದರೆ ಇಲ್ಲಿನ ಕೆಲವು ವಿಷಯಗಳನ್ನು ಇದೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿ ಮತ್ತಷ್ಟು ವಿವರಗಳೊಂದಿಗೆ ಸೇರಿಸಬಹುದಿತ್ತು. ಡಾ।। ಅಂಬೇಡ್ಕರ್, ಲೆನಿನ್, ಜಯಪ್ರಕಾಶ ನಾರಾಯಣ ಇಂಥ ಮಹನೀಯರನ್ನು ಸಮಾಜ ವಿಜ್ಞಾನ ಅಥವಾ ಚರಿತ್ರೆ ಪಠ್ಯದಲ್ಲೂ 'ಕಂಪ್ಯೂಟರ್, ಬಿದಿರು' ಪಾಠಗಳನ್ನು ವಿಜ್ಞಾನ ಪಠ್ಯದಲ್ಲೂ, ಹವ್ಯಾಸಗಳು ಮತ್ತು ಒಲಂಪಿಕ್ ಕ್ರೀಡೆ - ಪಾಠಗಳನ್ನು ಕ್ರೀಡಾ ಘಟಕದಲ್ಲೂ ಬೋಧಿಸಲು ಸಾಧ್ಯ. ಕನ್ನಡ ಪಠ್ಯವನ್ನು ಓದುವ ವಿದ್ಯಾರ್ಥಿಗಳು ಅದೇ ಕಾಲಕ್ಕೆ ಸಮಾಜ ವಿಜ್ಞಾನ ಮತ್ತು ವಿಜ್ಞಾನಗಳನ್ನು ವ್ಯಾಸಂಗ ಮಾಡುವುದರಿಂದ, ಯಾವ್ಯಾವ ವಿಷಯವನ್ನು ಎಲ್ಲೆಲ್ಲಿ ಕಲಿಯಬೇಕೊ ಅಲ್ಲಲ್ಲಿ ಕಲಿಯುತ್ತಾರೆ. ಆದರೆ

ನಮ್ಮಲ್ಲಿ ಪಠ್ಯಕ್ರಮವನ್ನು ಒಂದು ಸಮಗ್ರ ಘಟಕವಾಗಿ ಕೊಡುವ ಪರಿಪಾಠ ಇಲ್ಲವಾದ್ದರಿಂದ ವಿವಿಧ ಪಠ್ಯ ವಿಷಯಗಳಿಗೆ ಸಂಬಂಧಿಸಿದ ಪಠ್ಯಪುಸ್ತಕ ಸಮಿತಿಗಳು ಪರಸ್ಪರ ಚರ್ಚಿಸುವ ವ್ಯವಸ್ಥೆಯಿಲ್ಲ. ಆದ್ದರಿಂದ ಪ್ರತ್ಯೇಕ ಘಟಕಗಳಾಗಿ ತೀರ್ಮಾನ ತೆಗೆದುಕೊಳ್ಳುತ್ತವೆ. ವಿಷಯಾಧಾರಿತ ಪಠ್ಯಕ್ರಮಗಳು ತಂತಮ್ಮ ವಿಷಯಗಳ ವ್ಯಾಪ್ತಿಯನ್ನು ಖಚಿತಪಡಿಸಿಕೊಂಡಾಗ ಮತ್ತು ಅದಕ್ಕನುಗುಣವಾಗಿ ಪಠ್ಯಪುಸ್ತಕಗಳನ್ನು ರೂಪಿಸಿದಾಗ, ಶಿಕ್ಷಣಕ್ಕೊಂದು ಸ್ಪಷ್ಟ ದಿಕ್ಕು ಮತ್ತು ದರ್ಶನ ಒದಗುತ್ತದೆ. ಪ್ರತಿಯೊಂದು ವಿಷಯದ ಪಠ್ಯಪುಸ್ತಕಕ್ಕೂ ಸ್ವಂತಿಕೆ ಮತ್ತು ಸ್ವೋಪಜ್ಞತೆ ಲಭ್ಯವಾಗುತ್ತದೆ.

ಶಿಫಾರಸು ೧೦

ಐದನೇ ತರಗತಿಯಿಂದ ಪ್ರಾರಂಭಿಸಿ ಕನಿಷ್ಠ ಪದವಿ ಪೂರ್ವ ತರಗತಿಯ ವರೆಗೆ ಕನ್ನಡ ಪಠ್ಯಪುಸ್ತಕಗಳು ಕನ್ನಡ ಸಂಸ್ಕೃತಿ ಪಠ್ಯಗಳಾಗಿ ರೂಪಾಂತರ ಹೊಂದಬೇಕು. ಸಮಕಾಲೀನ ಸಂಸ್ಕೃತಿಯ ಸಂಗತಿಗಳನ್ನೂ ಒಳ ಗೊಂಡಂತೆ ವಿಕಾಸ ಕ್ರಮದಲ್ಲಿ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಆಸಕ್ತಿದಾಯಕ ಪರಿಚಯವಾಗಬೇಕು. 'ಕನ್ನಡ ಭಾರತಿ' ಮುಂತಾದ ಹೆಸರುಗಳ ಬದಲು 'ಕನ್ನಡ ಸಂಸ್ಕೃತಿ ಪಠ್ಯ' ಅಥವಾ 'ಕನ್ನಡ ಸಾಂಸ್ಕೃತಿಕ ಪಠ್ಯ' ಎಂದು ಹೆಸರಿಸಬೇಕು.

೧೧. ಕಂಪ್ಯೂಟರ್ ಶಿಕ್ಷಣದಲ್ಲಿ ಕನ್ನಡ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ ೧೯೯೪ ಇದರ ಪರಿಚ್ಛೇದ ೧೫(ಡಿ) ಹೀಗೆ ಹೇಳುತ್ತದೆ : "....ಕಂಪ್ಯೂಟರ್ಸ್, ಟೆಲಿಪ್ರಿಂಟರ್ಸ್, ಟೆಲೆಕ್ಸ್ ಇತ್ಯಾದಿ ಆಧುನಿಕ ಉಪಕರಣಗಳಲ್ಲಿ ಕನ್ನಡವನ್ನು ಬಳಸುವ ಬಗ್ಗೆ ಅಧ್ಯಯನ ಹಾಗೂ ಸಮಾಲೋಚನೆ ನಡೆಸತಕ್ಕದ್ದು ಮತ್ತು ಈ ಸಂಬಂಧದಲ್ಲಿ ಕನ್ನಡವನ್ನೇ ಸಂಪೂರ್ಣವಾಗಿ ಬಳಸುವುದಕ್ಕೆ ಪ್ರೇರಕವಾಗಬಹುದಾದ ನಿರ್ಣಯಗಳನ್ನು ಕೈಗೊಂಡು, ಅದನ್ನು ಕಾರ್ಯಗತಗೊಳಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳತಕ್ಕದ್ದು."

ಕಂಪ್ಯೂಟರ್, ಇಂದು ಕಚೇರಿಗಳ ಅವಿಭಾಜ್ಯ ಅಂಗವಾಗುತ್ತಿದೆ. ಆಡಳಿತದಲ್ಲಿ ಕಂಪ್ಯೂಟರ್ ಬಳಕೆ ನಿರೀಕ್ಷೆ ಮೀರಿ ಹೆಚ್ಚಾಗುತ್ತಿದೆ. ಹೀಗಿರುವಾಗ 'ಕಂಪ್ಯೂಟರ್ ಕನ್ನಡೀಕರಣ' ಒಂದು ಆದ್ಯತೆಯ ಕಾರ್ಯಕ್ರಮವಾಗಬೇಕು. ಕರ್ನಾಟಕದ ಆಡಳಿತ ಭಾಷೆ ಕನ್ನಡ ಎಂದು ಒಪ್ಪಿ ಸಾಕಷ್ಟು ಅನುಷ್ಠಾನಗೊಳಿಸಿರುವಾಗ ಕಂಪ್ಯೂಟರ್ ಕಾರಣಕ್ಕಾಗಿ ಮತ್ತೆ ಹಿಂದಕ್ಕೆ ಹೋಗುವಂತಾಗಬಾರದು. ಈ ದೃಷ್ಟಿಯಿಂದ ಕಂಪ್ಯೂಟರ್ ಕಲಿಕೆಯಲ್ಲಿ ಕನ್ನಡ ಒಂದು ಕಡ್ಡಾಯ ಅಂಶವಾಗಬೇಕು. ಕಂಪ್ಯೂಟರ್ ಶಿಕ್ಷಣವೆಂದರೆ ಕೇವಲ ಆಂಗ್ಲಮೂಲ ಶಿಕ್ಷಣ ಎಂದಾಗಬಾರದು. ಕಂಪ್ಯೂಟರ್ ಶಿಕ್ಷಣ ಪಡೆದವರೆಲ್ಲ ವಿದೇಶಗಳಿಗೆ ಹೋಗುವುದಿಲ್ಲ. ಅನೇಕರು ಕರ್ನಾಟಕದ

ಆಡಳಿತದ ಅಂಗವಾಗಿ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಸರ್ಕಾರವು ಮತ್ತು ಸರ್ಕಾರದಿಂದ ಮನ್ನಣೆ ಪಡೆದ ಸಂಸ್ಥೆಗಳು ನಡೆಸುತ್ತಿರುವ ಕಂಪ್ಯೂಟರ್ ಶಿಕ್ಷಣದಲ್ಲಿ ಕನ್ನಡವನ್ನು ಬೋಧನೆ ಹಾಗೂ ಬಳಕೆಯ ಅಂಶವಾಗಿ ಅಳವಡಿಸಿಕೊಳ್ಳುವುದು ಅಗತ್ಯ. ಆಂಗ್ಲ ಭಾಷೆಯನ್ನಷ್ಟೇ ಕಂಪ್ಯೂಟರ್ ಶಿಕ್ಷಣದ ಮಾಧ್ಯಮ ಹಾಗೂ ಬಳಕೆಯ ಭಾಷೆಯಾಗಿಸಿಕೊಂಡರೆ ಸರ್ಕಾರದ ಆಡಳಿತ ಭಾಷಾ ನೀತಿಯ ಅನುಷ್ಠಾನಕ್ಕೆ ಅದು ಪೂರಕ ಕ್ರಮವಾಗುವುದಿಲ್ಲ.

ಶಿಫಾರಸು ೧೧

ಸರ್ಕಾರದ ಮತ್ತು ಸರ್ಕಾರದಿಂದ ಮನ್ನಣೆ ಪಡೆದ ಸಂಸ್ಥೆಗಳ ಕಂಪ್ಯೂಟರ್ ಶಿಕ್ಷಣದಲ್ಲಿ ಕನ್ನಡವು ಬೋಧನೆ ಮತ್ತು ಬಳಕೆಯ ಭಾಷೆಯಾಗಬೇಕು. ಇಂಗ್ಲಿಷೊಂದೇ ಬೋಧನೆ ಹಾಗೂ ಬಳಕೆಯ ಭಾಷೆಯಾಗಿರಬಾರದು.

೧೨. ಪ್ರಥಮ ಭಾಷೆಯ ಪ್ರಶ್ನೆ

ನಮ್ಮ ಶಿಕ್ಷಣ ಕ್ರಮದಲ್ಲಿ ಪ್ರಥಮ ಭಾಷೆಯ ಪ್ರಶ್ನೆಯನ್ನು ಸ್ಪಷ್ಟವಾಗಿ ಉತ್ತರಿಸಿಕೊಳ್ಳಬೇಕಾಗಿದೆ. ಮಾತೃಭಾಷೆಗಳಿಗೆ ಅರ್ಥಾತ್ ಜನಭಾಷೆಗಳಿಗೆ ಧಕ್ಕೆಯಾಗದಂತೆ ಪ್ರಥಮ ಭಾಷೆಯ ಪಟ್ಟಿಯನ್ನು ಸಿದ್ಧಮಾಡಬೇಕೆಂಬುದು ಒಂದು ಅಂಶವಾದರೆ, ತಾತ್ವಿಕವಾಗಿ ಯಾವ್ಯಾವು ಪ್ರಥಮ ಭಾಷೆಗಳಾಗಿರಬೇಕೆಂಬುದು ಇನ್ನೊಂದು ಅಂಶ. ಮಾತೃಭಾಷೆಗಳಿಗೆ ಅಥವಾ ಜನಭಾಷೆಗಳಿಗೆ ಧಕ್ಕೆಯಾಗದಂತೆ - ಎಂದು ಹೇಳುವಾಗ ಮಾತೃಭಾಷೆ ಅಥವಾ ನಮ್ಮ ನಾಡಿನ ಜನಭಾಷೆಗಳಲ್ಲದ ಭಾಷೆಗಳನ್ನು ಪ್ರಥಮ ಭಾಷೆಯ ಪಟ್ಟಿಯಲ್ಲಿ ಸೇರಿಸುವ ಪರಿಪಾಠ ನಮ್ಮಲ್ಲಿದೆ ಯೆಂಬುದು ಸ್ಪಷ್ಟ. ತಾತ್ವಿಕವಾಗಿ ಯಾವ್ಯಾವು ಪ್ರಥಮ ಭಾಷೆಗಳಾಗಿರಬೇಕೆಂಬ ಪ್ರಶ್ನೆಗೂ ಇಲ್ಲೇ ಉತ್ತರವಿದೆ. ಮಾತೃಭಾಷೆ ಅಥವಾ ನಮ್ಮ ನಾಡಿನ ಜನಭಾಷೆಗಳಲ್ಲದ ಬೇರೆ ಯಾವ ಭಾಷೆಗಳೂ ಶಿಕ್ಷಣ ಕ್ರಮದಲ್ಲಿ ಪ್ರಥಮ ಭಾಷೆಯ ಪಟ್ಟಿಗೆ ಸೇರಬಾರದು - ಎಂಬುದು ನಮ್ಮ ತಾತ್ವಿಕ ನಿಲುವಾಗಬೇಕು. ಮೇಲ್ನೋಟಕ್ಕೆ ತಾತ್ವಿಕ ನಿಲುವನ್ನು ಒಪ್ಪಿ ಜನಭಾಷೆಗಳ ಪರವಾಗಿ ಮಾತನಾಡುವ ಕೆಲವರಾದರೂ ಸಂಸ್ಕೃತದಂಥ ಶಾಸ್ತ್ರೀಯ ಭಾಷೆಯ (Classical Language) ವಿಷಯ ಬಂದಾಗ ಅದನ್ನೂ ಪ್ರಥಮ ಭಾಷೆಯ ಪಟ್ಟಿಗೆ ಸೇರಿಸಬೇಕೆಂದು ಹೇಳುತ್ತಾರೆ. ಈಗ ಪ್ರೌಢಶಾಲೆಯ ಪ್ರಾರಂಭದಿಂದ ಸಂಸ್ಕೃತವು ಪ್ರಥಮ ಭಾಷೆಯ ಪಟ್ಟಿಗೆ ಸೇರಿದೆ. ಆದರೆ ಏಳನೇ ತರಗತಿಯವರೆಗೆ ಸಂಸ್ಕೃತ, ಅರೇಬಿಕ್, ಪರ್ಷಿಯನ್ ಭಾಷೆಗಳು ಪ್ರಥಮ ಭಾಷೆಗಳಲ್ಲ. ಸರ್ಕಾರದ ಆದೇಶ ಸಂಖ್ಯೆ ಇಡಿ.೨೮, ಪಿಜಿಸಿ ೯೪ ದಿನಾಂಕ ೨೯-೪-೧೯೯೪ ಇದರಲ್ಲಿ ಈ ಅಂಶ ಸ್ಪಷ್ಟವಾಗಿದೆ. ವಿವರಗಳು ಹೀಗಿವೆ :

೧. ಸಾಮಾನ್ಯವಾಗಿ ಮಗುವಿನ ಮಾತೃಭಾಷೆಯೇ ಮಾಧ್ಯಮವಾಗಬೇಕೆಂದು ನಿರೀಕ್ಷಿಸಿರುವ ೧ ರಿಂದ ೪ನೇ ತರಗತಿಯವರೆಗೆ ಅನುಬಂಧ-೧ರಲ್ಲಿ ತಿಳಿಸಿರುವ ಭಾಷೆಗಳ ಪೈಕಿ ಒಂದು ಮಾತೃಭಾಷೆ ಅಥವಾ ಕನ್ನಡ ಮಾತ್ರ ಕಡ್ಡಾಯ ಭಾಷೆಯಾಗಿರುತ್ತದೆ.

೨. ೫ನೇ ತರಗತಿಯಿಂದ ಅಂದರೆ ಸಾಮಾನ್ಯ ಪದ್ಧತಿಯಂತೆ ದ್ವಿತೀಯ ಭಾಷೆಯನ್ನು ಕಲಿಸುವ ವ್ಯವಸ್ಥೆ ಎಲ್ಲಿದೆಯೋ ಅಲ್ಲಿಂದ ವಿದ್ಯಾರ್ಥಿ, ಅನುಬಂಧ-೧ರಲ್ಲಿ ತಿಳಿಸಿರುವ ಭಾಷೆಗಳಿಂದ ಆಯ್ಕೆ ಮಾಡಿದ ಪ್ರಥಮ ಭಾಷೆಯಾಗಿರದ ಭಾಷೆಯನ್ನು ದ್ವಿತೀಯ ಭಾಷೆಯಾಗಿ ಅಭ್ಯಾಸ ಮಾಡಬೇಕು. ಕನ್ನಡವನ್ನು ಪ್ರಥಮ ಭಾಷೆಯಾಗಿ ಅಭ್ಯಾಸ ಮಾಡದ ಮಗುವು, ಕನ್ನಡವನ್ನು ದ್ವಿತೀಯ ಭಾಷೆಯಾಗಿ ಕಲಿಯಬೇಕು ಎಂಬ ಷರತ್ತಿಗೆ ಇದು ಒಳಪಟ್ಟಿದೆ.

೩. ೫ನೇ ತರಗತಿಯಿಂದ ತೃತೀಯ ಭಾಷೆಯನ್ನು ಕಲಿಯಲು ಅವಕಾಶ ಕಲ್ಪಿಸಲಾಗುವುದು. ತೃತೀಯ ಭಾಷೆಯು ವಿದ್ಯಾರ್ಥಿಯ ಪ್ರಥಮ ಮತ್ತು ದ್ವಿತೀಯ ಭಾಷೆಯಾಗಿ ಅಭ್ಯಾಸ ಮಾಡಿದ ಭಾಷೆಯಾಗಿರಬಾರದು. ವಿದ್ಯಾರ್ಥಿ ಅಭ್ಯಾಸ ಮಾಡಬಹುದಾದ ತೃತೀಯ ಭಾಷೆಯ ವಿವರವನ್ನು ಅನುಬಂಧ-೨ರಲ್ಲಿ ನೀಡಿದೆ.

ಸರ್ಕಾರಿ ಆದೇಶದ ಈ ಅಂಶಗಳಿಂದ ಸ್ಪಷ್ಟವಾಗುವುದೆಂದರೆ ಅನುಬಂಧ-೧ ರಲ್ಲಿರುವ ಭಾಷೆಗಳು ಪ್ರಥಮ ಭಾಷೆಗಳು; ಅನುಬಂಧ-೨ರಲ್ಲಿರುವ ಭಾಷೆಗಳು ತೃತೀಯ ಭಾಷೆಗಳು, ಜೊತೆಗೆ 'ಅನುಬಂಧ-೧ರಲ್ಲಿ ತಿಳಿಸಿರುವ ಭಾಷೆಗಳ ಪೈಕಿ ಒಂದು ಮಾತೃಭಾಷೆ...' ಎಂಬ ಸಾಲು ಪ್ರಥಮ ಭಾಷೆಯ ಪಟ್ಟಿಯಲ್ಲಿ ಮಾತೃಭಾಷೆಗಳಿರುತ್ತವೆ ಎಂಬುದನ್ನೂ ಸೂಚಿಸಿದೆ. ಈಗ ಅನುಬಂಧ-೧ ಮತ್ತು ಅನುಬಂಧ-೨ರ ಭಾಷೆಗಳನ್ನು ನೋಡೋಣ;

ಅನುಬಂಧ-೧ : ಕನ್ನಡ, ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಹಿಂದಿ, ಉರ್ದು, ಇಂಗ್ಲಿಷ್.

ಅನುಬಂಧ-೨ : ಕನ್ನಡ, ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಹಿಂದಿ, ಉರ್ದು, ಇಂಗ್ಲಿಷ್, ಸಂಸ್ಕೃತ, ಅರೆಬಿಕ್, ಪರ್ಷಿಯನ್.

ಇಲ್ಲಿ ಎರಡು ಪ್ರಶ್ನೆಗಳು ಏಳುತ್ತವೆ. ಮೊದಲನೆಯದಾಗಿ - ಪ್ರಥಮ ಭಾಷೆ / ಮಾತೃಭಾಷೆಗಳ ಪಟ್ಟಿಯಾದ ಅನುಬಂಧ-೧ರಲ್ಲಿ ಇಂಗ್ಲಿಷ್ ಏಕೆ ಇದೆ? - ಎಂಬ ಪ್ರಶ್ನೆ. ಇಂಗ್ಲಿಷ್ ನಮ್ಮ ದೇಶದಲ್ಲಿ ಯಾರ ಮಾತೃಭಾಷೆ? ಆಂಗ್ಲೋ-ಇಂಡಿಯನ್ನರ 'ಮಾತೃಭಾಷೆ' ಎಂದು ಉತ್ತರಿಸಬಹುದಾದರೂ ಆಂಗ್ಲೋ ಇಂಡಿಯನ್ನರಲ್ಲದವರೂ ಇಂಗ್ಲಿಷ್ ಮಾಧ್ಯಮಕ್ಕೆ ಸೇರುತ್ತಿರುವುದಕ್ಕೆ ಏನು ಉತ್ತರ? ಇಂಗ್ಲಿಷನ್ನು ಒಂದು ಭಾಷೆಯಾಗಿ ಕಲಿತು ಪರಿಣಿತರಾಗುವ ಅವಕಾಶವನ್ನು ನಾವು ನಿರಾಕರಿಸಬೇಕಾಗಿಲ್ಲ. ಆದರೆ ಇಂಗ್ಲಿಷ್ ಮಾಧ್ಯಮಕ್ಕೆ ಇತರರಿಗೆ ಅವಕಾಶ ಕೊಡಬೇಕಾಗಿಲ್ಲ.

ಎರಡನೆಯದಾಗಿ - ಏಳನೇ ತರಗತಿಯವರೆಗೆ ಅನ್ವಯಿಸುವ ಭಾಷಾ ಕಲಿಕೆಯ ಪಟ್ಟಿಗಳಲ್ಲೊಂದಾದ ಅನುಬಂಧ-೨ರಲ್ಲಿ ಮಾತ್ರ ಸಂಸ್ಕೃತ, ಅರೆಬಿಕ್, ಪರ್ಷಿಯನ್ ಭಾಷೆಗಳನ್ನು ಸೇರಿಸಿರುವುದರಿಂದ ಹಾಗೂ ಅನುಬಂಧ-೧ರಲ್ಲಿ ಸೇರಿಸಿಲ್ಲವಾದ್ದರಿಂದ ಸಂಸ್ಕೃತ, ಅರೆಬಿಕ್, ಪರ್ಷಿಯನ್ ಭಾಷೆಗಳು ಮಾತೃಭಾಷೆ ಅಥವಾ ಪ್ರಥಮ ಭಾಷೆಯ ಪಟ್ಟಿಯಲ್ಲಿ ಸೇರುವಂತಿಲ್ಲವೆಂಬ ಸಿದ್ಧಾಂತವನ್ನು ಸ್ಪಷ್ಟಪಡಿಸಿದಂತಾಗಿದೆ.

ಆದರೆ, ೮ನೇ ತರಗತಿಯಿಂದ ಮಾತೃಭಾಷೆಗಳ ಜೊತೆಗೆ ಸಂಸ್ಕೃತದಂಥ ಶಾಸ್ತ್ರೀಯ ಭಾಷೆಯನ್ನು ಸೇರಿಸುವುದರ ಮೂಲಕ ಶಿಕ್ಷಣ ಇಲಾಖೆಯು ಒಂದರಿಂದ ಏಳನೇ ತರಗತಿಯವರೆಗೆ ಅನ್ವಯಿಸಿದ ತನ್ನ ಸಿದ್ಧಾಂತವನ್ನು ತಾನೇ ಮುರಿದಂತಾಗಿದೆ. ಸದ್ಯದ ಸ್ಥಿತಿಯಲ್ಲಿ ಯಾರ ಮಾತೃಭಾಷೆಯೂ ಅಲ್ಲದ, ಜನಬಳಕೆಯಲ್ಲೂ ಇಲ್ಲದ ಸಂಸ್ಕೃತದಂಥ ಶಾಸ್ತ್ರೀಯ ಭಾಷೆಯನ್ನು ಮಾತೃಭಾಷೆ ಹಾಗೂ ಜನಭಾಷೆಗಳಿಗೆ ಎದುರು ಸ್ಪರ್ಧಿಯನ್ನಾಗಿ ಮಾಡಲಾಗಿದೆ. ಏಳನೇ ತರಗತಿಯವರೆಗೆ ಪ್ರಥಮ ಭಾಷೆಯಾಗಿಲ್ಲದೆ ಇದ್ದುದರಿಂದ ಎಂಟನೇ ತರಗತಿಯ ಸಂಸ್ಕೃತ ಪಠ್ಯವು ಹಿಂದಿನ ತರಗತಿಗಳ ಮುಂದುವರಿಕೆಯಾಗದೆ, ಪ್ರಾರಂಭ ಪಠ್ಯವಾಗುವುದು ಸಹಜ. ಆಗ ಕನ್ನಡವೇ ಮುಂತಾದ ಮಾತೃಭಾಷೆಗಳ ಪಠ್ಯಕ್ರಮಕ್ಕೂ ಸಂಸ್ಕೃತವೇ ಮುಂತಾದ ಶಾಸ್ತ್ರೀಯ ಭಾಷೆಗಳ ಪಠ್ಯಕ್ರಮಕ್ಕೂ ಗುಣ ಮತ್ತು ಪ್ರಮಾಣದಲ್ಲಿ ವ್ಯತ್ಯಾಸವುಂಟಾಗುತ್ತದೆ. ಸಂಸ್ಕೃತವು 'ಸುಲಭ' ಎಂಬ ಭಾವನೆ ಮೂಡಿಸಿ, ಅಂಕಗಳ ಆಕರ್ಷಣೆಯಿಂದ ವಿದ್ಯಾರ್ಥಿಗಳು ಕನ್ನಡದ ಬದಲು ಸಂಸ್ಕೃತವನ್ನು ಆಯ್ಕೆಮಾಡಿಕೊಳ್ಳುವುದು ಸಾಮಾನ್ಯ. ಇದು ಪದವಿಪೂರ್ವ ಶಿಕ್ಷಣಕ್ಕೂ ಅನ್ವಯಿಸುತ್ತದೆ. ಪ್ರಥಮ ಭಾಷೆ ಪಟ್ಟಿಯಲ್ಲಿ ಸಂಸ್ಕೃತದಂಥ ಶಾಸ್ತ್ರೀಯ ಭಾಷೆಗಳು ಸೇರುವ ಬಗ್ಗೆ ಚರ್ಚೆಗಳು ನಡೆದದ್ದು ಅವುಗಳ ಸಾರವನ್ನು ಈಗ ನೋಡೋಣ:

ಶಾಸ್ತ್ರೀಯ ಭಾಷೆಯಾದ ಸಂಸ್ಕೃತವನ್ನು ಪ್ರೌಢಶಾಲೆಯಿಂದ ಪ್ರಥಮ ಭಾಷೆಯಾಗಿ ಕಲಿಸುತ್ತಿರುವುದರಿಂದ ಕನ್ನಡ ಕಲಿಕೆಗೆ ಧಕ್ಕೆಯಾಗುತ್ತದೆಯೆಂಬ ವಿಚಾರ ಪ್ರಬಲವಾದಾಗ ಮಾನ್ಯ ಶ್ರೀ ದೇವರಾಜ ಅರಸು ಅವರ ನೇತೃತ್ವದ ಸರ್ಕಾರವು ೧೯೭೯ರ ಅಕ್ಟೋಬರ್‌ನಲ್ಲಿ ಆದೇಶವೊಂದನ್ನು ಹೊರಡಿಸಿ ಸಂಸ್ಕೃತವನ್ನು ಪ್ರೌಢಶಾಲಾ ಶಿಕ್ಷಣದ ಪ್ರಥಮ ಭಾಷೆಯ ಪಟ್ಟಿಯಿಂದ ತೆಗೆದು, ತೃತೀಯ ಭಾಷೆಗಳ ಪಟ್ಟಿಗೆ ಸೇರಿಸಿತು. (ಅಂದರೆ ಈಗ ೧೯೯೪ರ ಸರ್ಕಾರಿ ಆದೇಶದ ಅನುಬಂಧ ೨-ರಲ್ಲಿ ತೃತೀಯ ಭಾಷೆಯಾಗಿ ಏಳನೇ ತರಗತಿಯವರೆಗೆ ಕಲಿಯುವ ಅವಕಾಶವಿರುವಂತೆ ಆಗಲೂ ಇದ್ದು ಅದನ್ನೇ, ಪ್ರೌಢಶಾಲೆಗೆ ವಿಸ್ತರಿಸಲಾಯಿತು.) ಆದರೆ ಆನಂತರ ಅಧಿಕಾರಕ್ಕೆ ಬಂದ ಮಾನ್ಯ ಶ್ರೀ ಗುಂಡೂರಾವ್ ಅವರ ನೇತೃತ್ವದ ಸರ್ಕಾರವು ಶ್ರೀ ಅರಸು ಸರ್ಕಾರದ ಆದೇಶವನ್ನು ಬದಲಿಸಿ ಸಂಸ್ಕೃತವನ್ನು ಪ್ರೌಢಶಾಲಾ ಶಿಕ್ಷಣದ ಪ್ರಥಮ ಭಾಷೆಗಳ ಪಟ್ಟಿಗೆ ಸೇರಿಸಿತು. ಈ ಕ್ರಮ ಕರ್ನಾಟಕದಾದ್ಯಂತ ವಿವಾದಕ್ಕೆಡೆ ಮಾಡಿತು. ತೀವ್ರ ಪ್ರಮಾಣದ ವಿರೋಧ ವ್ಯಕ್ತವಾಯಿತು. ಆಗ ಸರ್ಕಾರವು ೫-೧೦-೧೯೮೦ರಂದು

ಆದೇಶವೊಂದನ್ನು ಹೊರಡಿಸಿ ಡಾ॥ ವಿ. ಕೃ. ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿ ಈ ವಿಷಯದಲ್ಲಿ ಮಾರ್ಗದರ್ಶನವನ್ನು ಅಪೇಕ್ಷಿಸಿತು. ಈ ಸಮಿತಿಯು ಪ್ರಥಮ ಭಾಷೆಯ ಪಟ್ಟಿಯಿಂದ ಸಂಸ್ಕೃತವೊಂದನ್ನು ಮಾತ್ರ ತೆಗೆಯದೆ ಕನ್ನಡವನ್ನು ಹೊರತುಪಡಿಸಿ ಎಲ್ಲಾ ಮಾತೃಭಾಷೆಗಳನ್ನೂ ತೆಗೆದು, ಕನ್ನಡವನ್ನು ಏಕೈಕ ಪ್ರಥಮ ಭಾಷೆಯನ್ನಾಗಿ ಮಾಡಬೇಕೆಂದು ತಿಳಿಸಿತು. ಮೇಲ್ನೋಟಕ್ಕೆ ಇದು ಕನ್ನಡಕ್ಕೆ ಸಿಕ್ಕಿದ ಅಗ್ರಸ್ಥಾನದಂತೆ ಕಂಡರೂ ಸಂವಿಧಾನಾತ್ಮಕ ಹಕ್ಕುಗಳನ್ನು ಅರ್ಥಮಾಡಿಕೊಂಡವರಿಗೆ ಒಂದೇ ಭಾಷೆಯನ್ನು ಪ್ರಥಮ ಭಾಷೆಯೆಂದು ಕಡ್ಡಾಯ ಮಾಡುವುದು ಕಷ್ಟವೆಂಬ ವಿಷಯ ತಿಳಿದಿತ್ತು. ಇದು, ಮುಂದೆ ನ್ಯಾಯಾಲಯದಲ್ಲಿ ಸಾಬೀತಾಯಿತು. ೨೫-೧-೧೯೮೯ರಂದು ಹೊರಬಿದ್ದ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪು ಅಲ್ಪಸಂಖ್ಯಾತರ ಸಂವಿಧಾನಾತ್ಮಕ ಹಕ್ಕುಗಳ ಬಗ್ಗೆ ಗಮನ ಸೆಳೆದು ಕನ್ನಡವನ್ನು ಏಕೈಕ ಪ್ರಥಮ ಭಾಷೆಯಾಗಿಸುವುದು ಸೂಕ್ತವಲ್ಲವೆಂದು ಸ್ಪಷ್ಟಪಡಿಸಿತು. ಇದರ ಫಲವಾಗಿ ಕನ್ನಡದ ಜೊತೆಗೆ ಕರ್ನಾಟಕವಾಸಿಗಳ ಇತರೆ ಮಾತೃಭಾಷೆಗಳು ಪ್ರಥಮ ಭಾಷೆಗಳ ಪಟ್ಟಿಯಲ್ಲಿ ಸೇರುವುದು ಅನಿವಾರ್ಯವಾಯಿತು. ಆದರೆ ಇದೇ ಸಂದರ್ಭದಲ್ಲಿ ಸಂಸ್ಕೃತವು ಪ್ರೌಢಶಾಲಾ ಶಿಕ್ಷಣದಿಂದ ಪ್ರಾರಂಭಿಸಿ ಮುಂದಿನ ಶಿಕ್ಷಣದ ಪ್ರಥಮ ಭಾಷೆಗಳ ಪಟ್ಟಿಯಲ್ಲಿ ಸ್ಥಾನ ಪಡೆದದ್ದು ವಿಪರ್ಯಾಸದ ಸಂಗತಿ.

ಇದು ಯಾವುದೇ ಭಾಷೆಯನ್ನು ನಿರ್ಲಕ್ಷಿಸುವ ಅಥವಾ ವಿರೋಧಿಸುವ ಪ್ರಶ್ನೆಯಲ್ಲ. ಪ್ರಥಮ ಭಾಷೆಗಳ ಪಟ್ಟಿಯಲ್ಲಿ ಮಾತೃಭಾಷೆಗಳಲ್ಲದೆ ಬೇರೆ ಭಾಷೆಗಳು ಇರಬೇಕೆ ಎಂಬ ಸೈದ್ಧಾಂತಿಕ ಪ್ರಶ್ನೆ ಇಲ್ಲಿ ಮುಖ್ಯವಾದುದು. ಇದಕ್ಕೆ ಕೊಡಬೇಕಾದ ಉತ್ತರ ತೀರಾ ನೇರ ಮತ್ತು ಸ್ಪಷ್ಟ : ಪ್ರಥಮ ಭಾಷೆಗಳ ಪಟ್ಟಿಯಲ್ಲಿ ಮಾತೃಭಾಷೆಗಳು ಮಾತ್ರ ಇರಬೇಕು. ಮಾತೃಭಾಷೆ ಬೇಡ ಎನ್ನುವ ವಿದ್ಯಾರ್ಥಿ ಪ್ರಥಮ ಭಾಷೆಯಾಗಿ ಪ್ರಾದೇಶಿಕ ಭಾಷೆಯನ್ನು ಕಲಿಯಬೇಕು. ಯಾವುದೇ ಪೂರ್ವಾಗ್ರಹ ಹಾಗೂ ವ್ಯಾಮೋಹವಿಲ್ಲದೆ ಶಿಕ್ಷಣ ಕ್ರಮದಲ್ಲಿ ಇಂಥ ಭಾಷಾ ನೀತಿಯನ್ನು ಅಳವಡಿಸುವ ಅಗತ್ಯವನ್ನು ಮನಗಂಡು ಯಾವ ಯಾವ ಭಾಷೆಗಳಿಗೆ ಪಠ್ಯಕ್ರಮದಲ್ಲಿ ಯಾವ ಯಾವ ಸ್ಥಾನ - ಎಂಬುದನ್ನು ನಾವು ಖಚಿತಪಡಿಸಬೇಕಾಗಿದೆ. ತಾತ್ವಿಕ ನೆಲೆಯೊಂದೇ ಇದಕ್ಕೆ ಆಧಾರವಾಗಬೇಕಾಗಿದೆ.

ಆಂಗ್ಲೊ ಇಂಡಿಯನ್ನರಲ್ಲದವರು ಇಂಗ್ಲಿಷನ್ನು ಪ್ರಥಮ ಭಾಷೆಯಾಗಿ ಮತ್ತು ಮಾಧ್ಯಮವಾಗಿ ಆಯ್ಕೆ ಮಾಡಿಕೊಳ್ಳಲು ಅವಕಾಶ ಕೊಡಲೇಕೂಡದು. ಅಲ್ಲದೆ ಆಂಗ್ಲೊ ಇಂಡಿಯನ್ನರು ಪ್ರಾದೇಶಿಕ ಭಾಷೆಯನ್ನು ಕಲಿಯುವುದು ಕಡ್ಡಾಯವಾಗಬೇಕು. ಸಂಸ್ಕೃತವನ್ನು ಅಥವಾ ಯಾವುದೇ ಶಾಸ್ತ್ರೀಯ ಭಾಷೆಗಳನ್ನು ಮಾತೃಭಾಷೆಗಳು ಮಾತ್ರ ಇರಬೇಕಾದ ಪ್ರಥಮ ಭಾಷೆಗಳ ಪಟ್ಟಿಯಲ್ಲಿ ಸೇರಿಸುವುದು ಸೈದ್ಧಾಂತಿಕವಾಗಿ ಸೂಕ್ತವಲ್ಲ. ಇಂಗ್ಲಿಷನ್ನಾಗಲಿ, ಸಂಸ್ಕೃತವನ್ನಾಗಲಿ ಅಭ್ಯಾಸ ಮಾಡಲು, ಪರಿಣತಿ

ಪಡೆಯಲು, ಐಚ್ಛಿಕ ಅವಕಾಶಗಳಿರಲಿ. ಪಠ್ಯಕ್ರಮದಲ್ಲಿ ಸೂಕ್ತ ಅವಕಾಶ ಲಭ್ಯವಾಗಲಿ. ಪ್ರಥಮ ಭಾಷಾ ಕಲಿಕೆಯೆಂದರೆ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ ಮಾತ್ರ ಎಂದಾಗಲಿ.

ಶಿಫಾರಸು ೧೨

ಶಿಕ್ಷಣ ಕ್ರಮದ ಪ್ರಥಮ ಭಾಷೆಗಳ ಪಟ್ಟಿಯಲ್ಲಿ ನಮ್ಮ ದೇಶದೊಳಗಿನ ಜನರ ಅಧಿಕೃತ ಮಾತೃಭಾಷೆಗಳು ಮಾತ್ರ ಇರಬೇಕು. ವಿದ್ಯಾರ್ಥಿಯು ಪ್ರಥಮ ಭಾಷೆಯಾಗಿ ತನ್ನ ಮಾತೃಭಾಷೆಯನ್ನು ಕಲಿಯಬೇಕು ಅಥವಾ ತನ್ನ ಮಾತೃಭಾಷೆಯ ಬದಲು ರಾಜ್ಯದ ಪ್ರಾದೇಶಿಕ ಭಾಷೆಯನ್ನು ಮಾತ್ರ ಕಲಿಯಲು ಅವಕಾಶವಿರಬೇಕು. ಕರ್ನಾಟಕವಾಸಿಗಳ ಮಾತೃಭಾಷೆಗಳಲ್ಲದ ಸಂಸ್ಕೃತದಂಥ ಶಾಸ್ತ್ರೀಯ ಭಾಷೆಗಳು ಪ್ರಥಮ ಭಾಷೆಗಳ ಪಟ್ಟಿಯಲ್ಲಿರಬಾರದು. ಆಂಗ್ಲೊ ಇಂಡಿಯನ್ನರು ತಮ್ಮ 'ಮಾತೃಭಾಷೆ'ಯೆಂದು ಸ್ಥಾಪಿಸಿಕೊಂಡಿರುವ ಇಂಗ್ಲಿಷನ್ನು ಇತರರು ಪ್ರಥಮ ಭಾಷೆ ಮತ್ತು ಮಾಧ್ಯಮವಾಗಿ ಆಯ್ಕೆ ಮಾಡಿಕೊಳ್ಳಲು ಅವಕಾಶವಿರಬಾರದು.

೧೩. ಕನ್ನಡ ಕಲಿಯುವ – ಕಲಿಸುವ ಹಕ್ಕು: ಕನ್ನಡದ ಹಕ್ಕು

ಉನ್ನತ ಶಿಕ್ಷಣದವರೆಗೆ ಕನ್ನಡ ಮಾಧ್ಯಮ ವಿಸ್ತಾರಗೊಳ್ಳಬೇಕೆಂಬುದು ನಮ್ಮ ಆದರ್ಶ; ಅಪೇಕ್ಷೆ. ಕಡೇಪಕ್ಷ ಏಳನೇ ತರಗತಿಯವರೆಗೆ ಅಂದರೆ ಪ್ರಾಥಮಿಕ ಹಂತದ ಕೊನೆಯವರೆಗೆ ಕನ್ನಡ ಮಾಧ್ಯಮ ಅನುಷ್ಠಾನಗೊಳ್ಳಬೇಕೆಂಬುದು ಸದ್ಯದ ವಾಸ್ತವಿಕ ಒತ್ತಾಯ. ಇದರರ್ಥ ಮುಂದಿನ ಶಿಕ್ಷಣವು ಆಂಗ್ಲ ಭಾಷಾ ಮಾಧ್ಯಮದಲ್ಲಿ ಇರಬೇಕೆಂದಲ್ಲ. ಉನ್ನತ ಶಿಕ್ಷಣದವರೆಗೂ ಕನ್ನಡದಲ್ಲಿ ಪಾಠ ಕೇಳುವ ಅವಕಾಶ ನಮ್ಮ ವಿದ್ಯಾರ್ಥಿಗಳಿಗೆ ಲಭ್ಯವಾಗಬೇಕು. ಅಧಿಕೃತವಾಗಿ ಕನ್ನಡ ಮಾಧ್ಯಮವನ್ನು ಅಳವಡಿಸದೆ ಇದ್ದಾಗಲೂ ನಿರ್ದಿಷ್ಟ ಸಂಖ್ಯೆಯ ವಿದ್ಯಾರ್ಥಿಗಳು ಕನ್ನಡದಲ್ಲಿ ಪಾಠ ಕೇಳುವ ಅಪೇಕ್ಷೆ ವ್ಯಕ್ತಪಡಿಸಿದರೆ ಅದಕ್ಕೆ ಅವಕಾಶವಿರಬೇಕು. ಅಂತೆಯೇ ಅಧ್ಯಾಪಕರು ಕನ್ನಡ ಮಾಧ್ಯಮದಲ್ಲಿ ಪಾಠ ಮಾಡಲು ಅಪೇಕ್ಷಿಸಿದರೆ ಅದಕ್ಕೂ ಅವಕಾಶವಿರಬೇಕು. ಕನ್ನಡವು ಅಧಿಕೃತ ಶಿಕ್ಷಣ ಮಾಧ್ಯಮವಾಗದೆ ಇರುವ ತರಗತಿಗಳ ಹಂತದಲ್ಲಿ ಅವು ಕನ್ನಡಾಂಗ್ಲ ತರಗತಿಗಳಾಗಿ ಪರಿವರ್ತನೆ ಹೊಂದಲು ಯಾವುದೇ ಅಡ್ಡಿಯಾಗದಂತೆ ಅಥವಾ ಕನ್ನಡದಲ್ಲಿ ಪಾಠ ಕೇಳುವ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿದ್ದಲ್ಲಿ ಪ್ರತ್ಯೇಕ ವಿಭಾಗ ಮಾಡಿ ಕನ್ನಡ ಮಾಧ್ಯಮದ ಮೂಲಕ ಪಾಠ ಮಾಡಲು ಮತ್ತು ಪರೀಕ್ಷೆ ನಡೆಸಲು ಅಗತ್ಯ ಕ್ರಮಗಳ ಮೂಲಕ ಅವಕಾಶ ಒದಗಿಸಬೇಕು.

ಶಿಫಾರಸು ೧೩

ಅಧಿಕೃತವಾಗಿ ಕನ್ನಡವು ಕಡ್ಡಾಯ ಶಿಕ್ಷಣ ಮಾಧ್ಯಮವಾಗದೆ ಇರುವ ಯಾವುದೇ ಹಂತದ ತರಗತಿಗಳಲ್ಲಿ ನಿರ್ದಿಷ್ಟ ಸಂಖ್ಯೆಯ ವಿದ್ಯಾರ್ಥಿಗಳು ಕನ್ನಡದಲ್ಲಿ ಪಾಠ ಕೇಳಲು ಅಪೇಕ್ಷಿಸಿದರೆ ಆಂಗ್ಲ ಭಾಷೆಯ ಜೊತೆಗೆ ಕನ್ನಡದಲ್ಲೂ ಪಾಠ ಮಾಡಲು ಅವಕಾಶವಿರಬೇಕು ಅಥವಾ ಗಣನೀಯ ಪ್ರಮಾಣದ ವಿದ್ಯಾರ್ಥಿಗಳು ಕನ್ನಡದಲ್ಲಿ ಮಾತ್ರ ಪಾಠ ಕೇಳಲು ಇಚ್ಛಿಸಿದರೆ ಪ್ರತ್ಯೇಕ ವಿಭಾಗ ತೆರೆಯಲು ಅವಕಾಶವಿರಬೇಕು ಮತ್ತು ಅವರಿಗೆ ಕನ್ನಡದಲ್ಲೇ ಪರೀಕ್ಷೆ ನಡೆಸಬೇಕು. ಆಂಗ್ಲ ಮಾಧ್ಯಮ ತರಗತಿಗಳಲ್ಲಿ ಕನ್ನಡದ ಪಾಠ ಹೇಳಲು ಇಚ್ಛಿಸುವ ಅಧ್ಯಾಪಕರಿದ್ದರೆ ಅದಕ್ಕೆ ಅವಕಾಶವಿರಬೇಕು. ಈ ಬಗ್ಗೆ ಅಗತ್ಯಕ್ರಮಗಳನ್ನು ಕೈಗೊಳ್ಳಬೇಕು. ಒಟ್ಟಿನಲ್ಲಿ ಶಿಕ್ಷಣದ ಎಲ್ಲಾ ಹಂತಗಳಲ್ಲಿ, ಕನ್ನಡದಲ್ಲಿ ಪಾಠ ಕೇಳುವುದು ಮತ್ತು ಕನ್ನಡದಲ್ಲಿ ಪಾಠ ಮಾಡುವುದು, ಒಂದು ಹಕ್ಕಾಗಬೇಕು.

೧೪. ಶಿಕ್ಷಣದಲ್ಲಿ ಏಕರೂಪತೆ

ಶಿಕ್ಷಣದಲ್ಲಿ ಏಕರೂಪತೆಯನ್ನು ತರುವುದರ ಮೂಲಕ ಕನ್ನಡ ಮತ್ತು ಶಿಕ್ಷಣ - ಎರಡಕ್ಕೂ ಮೌಲಿಕ ನೆಲೆಯನ್ನು ಒದಗಿಸಿದಂತಾಗುತ್ತದೆ.

ಏಕರೂಪತೆಯೆಂದರೆ ಶಿಕ್ಷಣ ಮತ್ತು ಸಂಸ್ಕೃತಿಯ ಬಹುರೂಪತೆಯನ್ನು ನಿರಾಕರಿಸುವುದಲ್ಲ. ಶಿಕ್ಷಣದ ಆಂತರಂಗಿಕ ವ್ಯವಸ್ಥೆಯಲ್ಲಿ ಬಹುರೂಪತೆಯನ್ನು ಕಾಯ್ದುಕೊಳ್ಳಬೇಕು. ಆದರೆ ಆಡಳಿತಾತ್ಮಕ ನೀತಿ ನಿರೂಪಣೆಯಲ್ಲಿ ಏಕರೂಪತೆ ಇರಬೇಕು. ಈ ಮಾತನ್ನು ಹೀಗೆ ಸ್ಪಷ್ಟಪಡಿಸಬಹುದು :

ಅ) ಪ್ರಾಥಮಿಕ ಪೂರ್ವ ಶಿಕ್ಷಣದಲ್ಲಿ ಸರ್ಕಾರಿ ಪೋಷಿತ ಅಂಗನವಾಡಿಗಳೂ ಇವೆ; ಖಾಸಗಿ ಕಿಂಡರ್ ಗಾರ್ಟನ್‌ಗಳೂ (ನರ್ಸರಿ ಶಾಲೆಗಳು) ಇವೆ. ಇವೆರಡರ ಸ್ವರೂಪದಲ್ಲಿರುವ ವ್ಯತ್ಯಾಸವನ್ನು ಹೋಗಲಾಡಿಸಿ ಒಂದು ಬಂಧಕ್ಕೆ ಅಳವಡಿಸಿ, ಕನ್ನಡ ಮಾಧ್ಯಮವನ್ನು ಅಳವಡಿಸುವುದರಿಂದ ಏಕರೂಪತೆ ಲಭ್ಯವಾಗಿ, ಸಾಮಾಜಿಕ - ಆರ್ಥಿಕ ಅಸಮಾನತೆಯನ್ನು ಒಂದು ಹಂತದಲ್ಲಾದರೂ ಹತ್ತಿಕ್ಕಿದಂತಾಗುತ್ತದೆ.

ಆ) ಪ್ರಾಥಮಿಕ ಪೂರ್ವ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣದಲ್ಲಿ ಸರ್ಕಾರದಿಂದ ನಿಗದಿತವಾದ ಪಠ್ಯಗಳ ಜೊತೆಗೆ ತಮಗಿಷ್ಟ ಬಂದ ಪಠ್ಯಗಳನ್ನು ಹೇರುವ ಪ್ರವೃತ್ತಿಯನ್ನು ನಿಷೇಧಿಸಬೇಕು. ಪಠ್ಯಕ್ರಮದಲ್ಲಿ ಏಕರೂಪತೆ ತರಬೇಕು. ಪಠ್ಯಪುಸ್ತಕಗಳ ಒಳಗಿನ ವಿಷಯಗಳಲ್ಲಿ ಬಹುರೂಪತೆ ಇರಬೇಕು.

೧೫. ಗಡಿನಾಡು - ಹೊರನಾಡುಗಳಲ್ಲಿ ಕನ್ನಡ - ಕನ್ನಡಿಗ

ಕರ್ನಾಟಕದ ಗಡಿಭಾಗದ ಒಳ ಸಮೀಪ ಮತ್ತು ಹೊರ ಸಮೀಪದ ಪ್ರದೇಶಗಳು ಮತ್ತು ಹೊರನಾಡನ್ನು ವಿಶೇಷವಾಗಿ ಪರಿಗಣಿಸಿ, ಅಲ್ಲಿ ಕನ್ನಡದಲ್ಲಿ ವ್ಯಾಸಂಗ ಮಾಡುವವರಿಗೆ ಅಗತ್ಯ ಪ್ರೋತ್ಸಾಹ ಕೊಡಬೇಕು. ಅವರು ಕನ್ನಡವನ್ನು ಉಳಿಸಿಕೊಳ್ಳುತ್ತಿರುವಾಗ ಅವರನ್ನು ಉಳಿಸುವುದು ಸರ್ಕಾರದ ಒಂದು ಹೊಣೆಯಾಗಬೇಕು.

ಗಡಿನಾಡಿನ ಸಮಸ್ಯೆಗಳು ವಿಶಿಷ್ಟ ಸ್ವರೂಪವನ್ನು ಪಡೆದಿವೆ. ಗಡಿನಾಡೆಂದರೆ ಕನಿಷ್ಠ ಎರಡು ಭಾಷೆಗಳ, ಎರಡು ಸಂಸ್ಕೃತಿಗಳ ಮತ್ತು ಎರಡು ಸರ್ಕಾರಗಳ ಸಮಸ್ಯೆ. ಕರ್ನಾಟಕದ ಒಳಗಿನ ಗಡಿಭಾಗದಲ್ಲಿ ಹೊರರಾಜ್ಯದ ಭಾಷೆ-ಸಂಸ್ಕೃತಿಗಳ ಪ್ರಭಾವವಿರುವಂತೆ, ಹೊರಗಿನ ಗಡಿಭಾಗದಲ್ಲಿ ಕರ್ನಾಟಕದ ಪ್ರಭಾವವೂ ಇರುತ್ತದೆ. ಪ್ರಮಾಣದಲ್ಲಿ ವ್ಯತ್ಯಾಸವಿರಬಹುದಾದರೂ 'ಪ್ರಭಾವ' ಎನ್ನುವುದು ಒಂದು ವಸ್ತುಸ್ಥಿತಿ. ಸಂಪೂರ್ಣ ಹೊರನಾಡಿನಲ್ಲಿರುವವರು ಬೇರೆ ರಾಜ್ಯದ ಭಾಗವಾಗಿದ್ದೂ ಕನ್ನಡವನ್ನು ಕಾಪಾಡಿಕೊಳ್ಳುವುದು ಒಂದು ವಿಶೇಷವೇ ಸರಿ. ತಮ್ಮೊಳಗೆ ತಾವು ಕಳೆದು ಹೋಗದಂತೆ ನೋಡಿಕೊಳ್ಳುವ ಒತ್ತಾಸೆಯಾಗಿ ಕನ್ನಡವನ್ನು ಉಳಿಸಿಕೊಳ್ಳುವ ಗಡಿನಾಡು ಹಾಗೂ ಹೊರನಾಡಿನ ಕನ್ನಡಿಗರ ಪ್ರೀತಿಪೂರ್ವಕ ಪ್ರಯತ್ನಕ್ಕೆ ಕರ್ನಾಟಕವೂ ಪ್ರತಿಸ್ಪಂದಿಸಬೇಕಾದ್ದು ಒಂದು ನೈತಿಕ ಜವಾಬ್ದಾರಿಯೂ ಹೌದು : ಪ್ರಜಾಸತ್ತಾತ್ಮಕ ಮೌಲ್ಯವೂ ಹೌದು. ಈ ಹಿನ್ನೆಲೆಯಲ್ಲಿ ಮುಂದೆ ಕಂಡ ಶಿಫಾರಸುಗಳನ್ನು ಮಾಡಲಾಗಿದೆ.

ಶಿಫಾರಸು ೧೫

(ಅ) ಗಡಿನಾಡು ಮತ್ತು ಹೊರನಾಡಿನ ಕನ್ನಡಿಗರ ಸಮಸ್ಯೆಗಳ ಚರ್ಚೆಗೆ ಗಡಿಭಾಗದ ರಾಜ್ಯಗಳ ಎಲ್ಲ ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರು, ಸಂಸ್ಕೃತಿ ಸಚಿವರು, ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗಳು, ಇತರೆ ವರಿಷ್ಠಾಧಿಕಾರಿಗಳು ಭಾಷಾಭಿವೃದ್ಧಿಗೆ ಸಂಬಂಧಿಸಿದ ಅಧಿಕೃತ ಪರಿಷ್ಠರು – ವರ್ಷಕ್ಕೆ ಎರಡು ಸಾರಿಯಾದರೂ ಸೇರಿ ಚರ್ಚಿಸುವ ವ್ಯವಸ್ಥೆಯನ್ನು ಮಾಡಬೇಕು. ಇದಕ್ಕೆ ಕರ್ನಾಟಕ ಸರ್ಕಾರವೇ ನೇತೃತ್ವವಹಿಸಿ ಮುಂದಾಗಬೇಕು.

(ಆ) ಗಡಿನಾಡು ಮತ್ತು ಮತ್ತು ಹೊರನಾಡಿನವರು ಒಂದರಿಂದ ಹತ್ತನೆಯ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗಮಾಡಿದ್ದರೆ, ಅಂಥವರಿಗೆ ಕರ್ನಾಟಕದೊಳಗಿನ ಅಭ್ಯರ್ಥಿಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಮುಕ್ತವಾಗಿ ನೀಡಬೇಕು. ಇಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವುದೊಂದೇ ಮಾನದಂಡವಾಗಬೇಕು.

(ಇ) ಕರ್ನಾಟಕದ ಗಡಿಭಾಗದ ಹೊರ ಸಮೀಪದ ಅಸಂಖ್ಯಾತ ವಿದ್ಯಾರ್ಥಿಗಳು ಗಡಿಭಾಗದ ಒಳಸಮೀಪದ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದು ಅಂಥವರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸಲು ಪಾಸ್ ಸೌಲಭ್ಯ ಒದಗಿಸಬೇಕು.

(ಈ) ಗಡಿಭಾಗದ ಒಳಸಮೀಪದ ಸರ್ಕಾರಿ ಕನ್ನಡ ಶಾಲೆಗಳು ತೀರಾ ದುಃಸ್ಥಿತಿಯಲ್ಲಿದ್ದು ಅವುಗಳ ಅಭಿವೃದ್ಧಿಗಾಗಿ ಪ್ರತ್ಯೇಕ ಆರ್ಥಿಕ ಸೌಲಭ್ಯ ನೀಡಬೇಕು. ಗಡಿಭಾಗದಲ್ಲಿ ಇನ್ನೂ ಅನೇಕ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳ ಅಗತ್ಯವಿದ್ದು ಸರ್ಕಾರವು ಸಮೀಕ್ಷೆ ನಡೆಸಿ ಅಗತ್ಯವಿದ್ದ ಕಡೆ ಕನ್ನಡ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲು ತಕ್ಷಣ ಕ್ರಮಕೈಗೊಳ್ಳಬೇಕು.

(ಉ) ಗಡಿಭಾಗದ ಒಳಸಮೀಪದ ಪ್ರದೇಶಗಳಲ್ಲಿ ಕನ್ನಡ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲು ಮುಂದೆ ಬರುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ವಿಶೇಷ ಆದ್ಯತೆಯ ಮೇಲೆ ಅನುಮತಿ ಕೊಡಬೇಕು.

(ಊ) ಗಡಿಭಾಗದ ಹೊರಸಮೀಪದಲ್ಲಿರುವ ಹಾಗೂ ತಾಂತ್ರಿಕವಾಗಿ ಹೊರರಾಜ್ಯಕ್ಕೆ ಸೇರಿರುವ ಕನ್ನಡ ಶಾಲೆಗಳಿಗೆ ಪ್ರೋತ್ಸಾಹಕವಾಗಿ ಗ್ರಂಥ ಭಂಡಾರ, ಪ್ರಯೋಗಾಲಯ, ಪೀಠೋಪಕರಣ – ಇಂಥ ಸೌಲಭ್ಯಗಳಿಗಾಗಿ ನಿಗದಿತ ಪ್ರಮಾಣದ ಸಹಾಯಧನ ಕೊಡಲು ಸರ್ಕಾರವು ಕ್ರಮಕೈಗೊಳ್ಳಬೇಕು.

(ಋ) ಹೊರರಾಜ್ಯಗಳ ಒಳಗೆ ಹಾಗೂ ಗಡಿಭಾಗದಲ್ಲಿರುವ ಕನ್ನಡ ಶಾಲೆಗಳಿಗೆ ಪಠ್ಯಪುಸ್ತಕಗಳ ವಿತರಣೆ ಸರಿಯಾಗಿ ಆಗುತ್ತಿಲ್ಲ. ಅಧ್ಯಾಪಕರ ನೇಮಕವೂ ವಿಳಂಬವಾಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ರಾಜ್ಯ ಸರ್ಕಾರಗಳ ಮೇಲೆ ನಮ್ಮ ಸರ್ಕಾರವು ಕಾಲಕಾಲಕ್ಕೆ ಒತ್ತಡ ತರಬೇಕು.

(ೠ) ಕರ್ನಾಟಕದ ಟಿ.ಸಿ.ಎಚ್.ನಂತೆಯೇ ಮಹಾರಾಷ್ಟ್ರದಲ್ಲಿ ಡಿ.ಇ.ಡಿ. ಎಂಬ ಕೋರ್ಸು ಇದೆ. ಕರ್ನಾಟಕದಲ್ಲಿ ಟಿ.ಸಿ.ಎಚ್. ಮಾಡಿದ ಮರಾಠಿಗರಿಗೆ ಮಹಾರಾಷ್ಟ್ರ ಸರ್ಕಾರವು ಶಿಕ್ಷಕರ ಹುದ್ದೆಗೆ ಅರ್ಜಿ ಸಲ್ಲಿಸಲು ಅವಕಾಶ ಕೊಡುತ್ತಿದ್ದು, ಮಹಾರಾಷ್ಟ್ರದಲ್ಲಿ ಕನ್ನಡದಲ್ಲಿ ಡಿ.ಇ.ಡಿ. ಮಾಡಿದ ಕನ್ನಡಿಗರಿಗೆ ಕರ್ನಾಟಕದಲ್ಲಿ ಶಿಕ್ಷಕರ ಹುದ್ದೆಗೆ ಅರ್ಜಿ ಸಲ್ಲಿಸಲು ಅವಕಾಶವಿಲ್ಲವೆಂದು ಹೇಳಲಾಗಿದೆ. ಕನ್ನಡದಲ್ಲಿ ಮಾಡಿದ ಡಿ.ಇ.ಡಿ. ಕೋರ್ಸು ಟಿ.ಸಿ.ಎಚ್.ಗೆ ಸಮಾನವೆಂದು ಪರಿಗಣಿಸಿ ಶಿಕ್ಷಕ ಹುದ್ದೆಗೆ ಅರ್ಜಿ ಹಾಕಲು ಅವಕಾಶ ಕೊಡಬೇಕು.

(ಎ) ಗಡಿನಾಡು ಮತ್ತು ಹೊರನಾಡಿನಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಕೆಲಸಗಳಿಗೆ ಉತ್ತೇಜಕವಾಗುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶೇಷ ಆದ್ಯತೆಯ ಮೇಲೆ ಪ್ರತ್ಯೇಕ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು.

ಕೊನೆಯ ಮಾತು

ಈ ವರದಿಯಲ್ಲಿ ಪ್ರಸ್ತಾಪಿಸಿರುವ ಅಂಶಗಳು ಪ್ರಧಾನವಾಗಿ ಕನ್ನಡಕ್ಕೆ ಮತ್ತು ಒಟ್ಟಾರೆಯಾಗಿ ಶಿಕ್ಷಣದ ಸ್ವರೂಪಕ್ಕೆ ಸಂಬಂಧಿಸಿರುವ ಅಂಶ ಸ್ಪಷ್ಟವಾಗಿದೆಯೆಂದು ಭಾವಿಸುತ್ತ ಭಾಷಾನೀತಿಯ ಅನುಷ್ಠಾನವನ್ನು ಕುರಿತು ದೇಶದ ಸರ್ವೋಚ್ಚ ನ್ಯಾಯಾಲಯವು ದಿನಾಂಕ : ೮-೧೨-೧೯೯೩ರಂದು ನೀಡಿದ ತೀರ್ಪಿನಲ್ಲಿ ಹೇಳಿದ ಬಹುಮುಖ್ಯ ವಿಚಾರವೊಂದರ ಆಶಯದ ಕಡೆಗೆ ಮತ್ತೊಮ್ಮೆ ಗಮನ ಸೆಳೆಯಬಹುದಾಗಿದೆ. ಕರ್ನಾಟಕ ಸರ್ಕಾರದ ೧೯-೬-೧೯೮೯ರ ಆದೇಶದ ಸಿಂಧುತ್ವವನ್ನು ಎತ್ತಿ ಹಿಡಿದ ದೇಶದ ಸರ್ವೋಚ್ಚ ನ್ಯಾಯಾಲಯವು "ಭಾಷಾ ನೀತಿಯನ್ನು ಪರಿಣಾಮಕಾರಿಯಾಗಿ ಹೇಗೆ ಜಾರಿಗೊಳಿಸಬೇಕೆಂಬುದು ರಾಜ್ಯಕ್ಕೆ ಬಿಳಿದಿದೆ... ವಿಚಾರದಲ್ಲಿ ನ್ಯಾಯಾಲಯವು ಹಸ್ತಕ್ಷೇಪ ಮಾಡಬಾರದು" ಎಂದು ಅಭಿಪ್ರಾಯಪಟ್ಟಿದೆ.

ಸರ್ಕಾರವು ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯ ಹಾಗೂ ಜನಸಂಸ್ಕೃತಿಯ ಆಶಯಗಳನ್ನು ಅರ್ಥಮಾಡಿಕೊಂಡು, ಅರ್ಥಪೂರ್ಣ ಕ್ರಮಗಳ ಮೂಲಕ, ಕನ್ನಡ ಮತ್ತು ಶಿಕ್ಷಣದ ಮೌಲ್ಯಗಳನ್ನು ಗಟ್ಟಿಗೊಳಿಸುತ್ತದೆಯೆಂದು ನಂಬಲಾಗಿದೆ.

ಇಲ್ಲಿಯುವರೆಗೆ ಕನ್ನಡ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಬರಗೂರು ರಾಮಚಂದ್ರಪ್ಪನವರ ನೇತೃತ್ವದಲ್ಲಿ ಸಲ್ಲಿಸಿದ ವರದಿಯನ್ನು ಯಥಾವತ್ತಾಗಿ ಉಲ್ಲೇಖಿಸಲಾಗಿದೆ.

■

ಅಧ್ಯಾಯ-೧೨

ಕೇಂದ್ರೀಯ ಪಠ್ಯಕ್ರಮದ ಶಾಲೆಗಳು

ದೇಶದಲ್ಲಿ ಒಂದು ಸ್ಥಳದಿಂದ ಬೇರೆ ಸ್ಥಳಕ್ಕೆ ವರ್ಗವಾಗುವ, ಅದರಲ್ಲೂ ವಿಶೇಷವಾಗಿ ಕೇಂದ್ರ ಸರಕಾರದ ಮಕ್ಕಳಿಗಾಗಿ ದ್ವಿತೀಯ ವೇತನ ಆಯೋಗದ ಶಿಫಾರಸಿನಂತೆ ಕೇಂದ್ರ ಸರಕಾರ ಕೇಂದ್ರೀಯ ಶಾಲೆಗಳನ್ನು ಮೊದಲಿಗೆ ತೆರೆಯಿತು. ನಂತರ ಕೇಂದ್ರ ಸರಕಾರವೇ ಎಲ್ಲ ಕಡೆ ಶಾಲೆಗಳನ್ನು ತೆರೆಯುವುದು ದುಸ್ಸಾಧ್ಯವೆಂದು ಅರಿತು ಖಾಸಗಿಯವರು ಕೇಂದ್ರೀಯ ಪಠ್ಯಕ್ರಮದ ಅನುಸಾರ ಶಾಲೆಗಳನ್ನು ತೆರೆಯಲು ಅನುಮತಿ ಇತ್ತಿತ್ತು.

ಬಹುಮಟ್ಟಿಗೆ ಕೇಂದ್ರ ಸರಕಾರದ ಇಲ್ಲವೇ ಅಂತಾರಾಜ್ಯ ವರ್ಗಾವಣೆಯ ಪೋಷಕರ ಮಕ್ಕಳಿಗೆ ಸೀಮಿತವಾಗಿದ್ದ ಪ್ರವೇಶಗಳು ಹೆಚ್ಚೆಚ್ಚು ಮುಕ್ತವಾಗತೊಡಗಿದವು. ಬರಬರುತ್ತಾ ಈಗಿನ ಹಲವು ಶಾಲೆಗಳಲ್ಲಿ ಸ್ಥಳೀಯರೆ ಹೆಚ್ಚಿರುತ್ತಾರೆ.

ಮೊದಲ ಆದ್ಯತೆ ಕೇಂದ್ರ ಸರಕಾರಿ ನೌಕರರ ಮಕ್ಕಳಿಗೆ ನೀಡಿ, ನಂತರ ಕೇಂದ್ರದಿಂದ ಸಹಾಯಧನ ಪಡೆಯುವ ಸ್ವಾಯತ್ತ ಸಂಸ್ಥೆಗಳ ನೌಕರರ ಮಕ್ಕಳಿಗೆ ನೀಡಿ, ಉಳಿದ ಸ್ಥಾನಗಳನ್ನು ಸ್ಥಳೀಯರಿಗೆ ನೀಡಲಾಗುತ್ತಿತ್ತು. ಆದರೆ ಈ ಪದ್ಧತಿಯನ್ನು ಈಗ ಗಾಳಿಗೆ ತೂರುತ್ತಿರುವುದರ ಜತೆಗೆ ಬೇಡಿಕೆಯಿದೆ ಎಂಬ ಕಾರಣ ತೋರಿಸಿ, ಇರುವ ಶಾಲೆಗಳಲ್ಲೂ ಹೆಚ್ಚುವರಿ ವಿಭಾಗಗಳನ್ನು ತೆರೆಯಲು ಅವಕಾಶ ನೀಡಲಾಗುತ್ತದೆ. ಇದರಿಂದ ಒಂದು ವೇಳೆ ೧೯೮೯ಕ್ಕೆ ಮುಂಚೆ ಆರಂಭವಾಗಿರುವ ರಾಜ್ಯ ಪಠ್ಯಕ್ರಮದ ಆಂಗ್ಲ ಮಾಧ್ಯಮ ಶಾಲೆಗಳಿಗೆ ಕೊಡಲಾಗಿರುವ ತಡೆಯಾಜ್ಞೆ ತೆರವಾದರೂ ಕೇಂದ್ರೀಯ ಶಾಲೆಗಳೆಂಬ ಹೆಸರಿನಲ್ಲಿ ಆಂಗ್ಲಮಾಧ್ಯಮ ಶಾಲೆಗಳು ಉಳಿದುಕೊಂಡು, ಹೆಚ್ಚುತ್ತಾ ಹೋಗುವ ಅಪಾಯವನ್ನು ನಮ್ಮ ಸರಕಾರ ಅರ್ಥ ಮಾಡಿಕೊಳ್ಳದಿದ್ದರೆ ಹಿಂಬಾಗಿಲಿನಿಂದ ಇಂಗ್ಲಿಷ್ ಮಾಧ್ಯಮಶಾಲೆಗಳು ಬೆಳೆಯುತ್ತಾ ಹೋಗುತ್ತವೆ.

ವಿದ್ಯೆಯನ್ನು ವ್ಯಾಪಾರದ ಸೊಗಸಾದ ಮಾರ್ಗವಾಗಿ ಕಂಡುಕೊಂಡಿರುವ ಖಾಸಗಿ ಸಂಸ್ಥೆಗಳು ೧೯೮೯ಳರ ಆಜ್ಞೆ ಒಂದಲ್ಲ ಒಂದು ದಿನ ಊರ್ಜಿತವಾಗುತ್ತದೆ ಎಂಬುದನ್ನು ದೂರಾಲೋಚನೆಯ ಮೂಲಕ ಕಂಡುಕೊಂಡಿವೆ. ಇವುಗಳಿಗೆ

ನಿರಾಕ್ಷೇಪಣಾ ಪತ್ರ ನೀಡಬೇಕಾದ ಸರಕಾರ ಅದನ್ನು ಇದುವರೆಗೂ ಮನಗಂಡಿಲ್ಲ. ಬೆಂಗಳೂರಿನಲ್ಲಿ ನೂರಾರು ಶಾಲೆಗಳು ಈ ರೀತಿ ಪ್ರಾರಂಭವಾಗಿವೆ. ಅಂತಾರಾಜ್ಯ ವರ್ಗಾವಣೆಯ ಪೋಷಕರ ಮಕ್ಕಳು ಅತಿ ಕಡಿಮೆ ಇರುವಂತಹ ಮೈಸೂರು ನಗರದಲ್ಲಿ ಇಪ್ಪತ್ತು ವರ್ಷಗಳ ಹಿಂದೆ ಕೇವಲ ಮೂರು ಕೇಂದ್ರ ಪಠ್ಯಕ್ರಮದ ಶಾಲೆಗಳಿದ್ದರೆ, ಇದೀಗ ೧೩ಕ್ಕೂ ಹೆಚ್ಚು ಕೇಂದ್ರೀಯ ಶಾಲೆಗಳಿವೆ ಎನ್ನಲಾಗಿದೆ. ಈ ಶಾಲೆಗಳಲ್ಲಿ ಸ್ಥಳೀಯರ ಮಕ್ಕಳೇ ಹೆಚ್ಚಿದ್ದಾರೆ. ಬೆಂಗಳೂರಿನಲ್ಲಿ ಅನೇಕ ಖಾಸಗಿ ಶಾಲೆಗಳು ಒಂದೇ ಆವರಣದಲ್ಲಿ ರಾಜ್ಯ ಹಾಗೂ ಕೇಂದ್ರ ಪಠ್ಯಕ್ರಮದ ತರಗತಿಗಳನ್ನು ನಡೆಸಿವೆ. ಮಾತೃಭಾಷಾ ಮಾಧ್ಯಮವನ್ನು ಕಡ್ಡಾಯಗೊಳಿಸಿದ ೧೯೯೪ರ ಆದೇಶವನ್ನು ಪ್ರಶ್ನಿಸಿ ಹೂಡಲಾಗಿರುವ ದಾವೆ ವಜಾ ಆದರೆ ಕೇಂದ್ರ ಪಠ್ಯಕ್ರಮದ ಮೂಲಕ ಇಂಗ್ಲಿಷ್ ಮಾಧ್ಯಮ ಮುಂದುವರಿಸುವ ಹುನ್ನಾರ ಈ ಶಾಲೆಗಳದು. ಅಂತಹ ಸ್ಥಿತಿ ಉಂಟಾದಾಗ ಕೇಂದ್ರೀಯ ಪಠ್ಯಕ್ರಮದ ಶಾಲೆಗಳನ್ನು ಮುಂದುವರಿಸುವ, ತೆರೆಯುವ ಪ್ರಯತ್ನಗಳೂ ನಡೆಯಬಹುದು.

ಆದ್ದರಿಂದ ರಾಜ್ಯ ಸರಕಾರ ಇನ್ನು ಮುಂದೆ ಹೊಸದಾಗಿ ಕೇಂದ್ರೀಯ ಶಾಲೆಗಳಿಗೆ ಅನುಮತಿ ನೀಡಬಾರದು. ಒಂದು ವೇಳೆ ನೀಡಿದರೆ ಅದು ಅಂತಾರಾಜ್ಯ ವರ್ಗಾವಣೆಯ ಪೋಷಕರ ಮಕ್ಕಳಿಗೆ ಮಾತ್ರ ಎಂದು ಕಟ್ಟುನಿಟ್ಟು ಮಾಡಬೇಕು. ನಿರಾಕ್ಷೇಪಣೆಯ ಪತ್ರಕ್ಕೆ ರಾಜ್ಯ ಸರಕಾರದ ಶಿಕ್ಷಣ ಇಲಾಖೆ ಕೊಡುವ ಒಪ್ಪಿಗೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಅಸ್ತು ಎನ್ನಬೇಕೆಂಬ ಆದೇಶವನ್ನು ಸರಕಾರ ರೂಪಿಸಬೇಕು. ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಅನುಷ್ಠಾನದ ಹೊಣೆಗಾರಿಕೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೂ ವಹಿಸುವುದರಿಂದ ಅಂತಹ ಆದೇಶ ಅಸಿಂಧುವಾಗದು.

೧೯೯೪ರಲ್ಲಿ ಹೊರಡಿಸಿರುವ ಆದೇಶದ ಪ್ರಕಾರ ರಾಜ್ಯ ಸರಕಾರ ಕೇಂದ್ರೀಯ ಪಠ್ಯಕ್ರಮದ ಶಾಲೆಗಳಿಗೆ ನಿರಾಕ್ಷೇಪಣಾ ಪತ್ರ ಕೊಡುವ ಮುನ್ನ ಅಲ್ಲಿ ಅಂತಾರಾಜ್ಯ ವರ್ಗಾವಣೆಯ ಪೋಷಕರ ಮಕ್ಕಳು ಸಾಕಷ್ಟಿದ್ದಾರೆಯೇ ಎಂಬುದನ್ನು ಪರಿಗಣಿಸಬೇಕೆಂದು ಸೂಚಿಸಿದೆ.

ಇದನ್ನು ಬಳಸಿಕೊಂಡು ಈಗಿರುವ ಎಲ್ಲ ಕೇಂದ್ರೀಯ ಶಾಲೆಗಳಲ್ಲೂ ಸಮೀಕ್ಷೆ ನಡೆಸಿ, ಅಂತಾರಾಜ್ಯ ವರ್ಗಾವಣೆಯ ಪೋಷಕರ ಮಕ್ಕಳ ಸಂಖ್ಯೆಗಿಂತ ಸ್ಥಳೀಯ ಮಕ್ಕಳ ಸಂಖ್ಯೆ ಹೆಚ್ಚಿರುವ ಶಾಲೆಗಳಿಗೆ ಕೊಟ್ಟಿರುವ ನಿರಾಕ್ಷೇಪಣಾ ಪತ್ರವನ್ನು ರಾಜ್ಯ ಸರಕಾರ ಹಿಂತೆಗೆದುಕೊಳ್ಳಬೇಕು. ಅಪೇಕ್ಷೆಪಟ್ಟರೆ ಆ ಶಾಲೆಗಳಿಗೆ ಮಾತೃಭಾಷೆ ಅಥವಾ ಪ್ರದೇಶ ಭಾಷಾ ಮಾಧ್ಯಮದ ತರಗತಿಗಳನ್ನು ಆರಂಭಿಸಲು ಅವಕಾಶ ನೀಡಬಹುದು.

ಇಲ್ಲವಾದರೆ ಮಾತೃಭಾಷಾ ಮಾಧ್ಯಮದ ದಾವೆಯಲ್ಲಿ ರಾಜ್ಯ ಸರಕಾರ ಜಯ ಸಾಧಿಸಿದರೂ, ಇಂಗ್ಲಿಷ್ ಮಾಧ್ಯಮ ಶಾಲೆಗಳು ಬೇರೊಂದು ರೂಪದಲ್ಲಿ ಮುಂದುವರೆದು, ಶಿಕ್ಷಣದ ಸಾರ್ಥಕತೆಯ ಉದ್ದೇಶಕ್ಕೆ ಭಂಗ ತರುತ್ತವೆ. ■

ಅಧ್ಯಾಯ-೧೩

ಮತ್ತೊಮ್ಮೆ ಗೋಕಾಕ್ ಮಾದರಿ ಚಳುವಳಿ!

ವೀರಪ್ಪ ಮೊಯ್ಲಿಯವರ ಸರಕಾರ ೧೯೯೪ರಲ್ಲಿ ೧ರಿಂದ ೪ನೇ ತರಗತಿವರೆಗೆ ಮಾತೃಭಾಷೆ ಅಥವಾ ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕೆಂದು ಸರಕಾರಿ ಆದೇಶವನ್ನೇನೋ ಹೊರಡಿಸಿತು. ಆದರೆ ೧೯೮೯ಕ್ಕಿಂತ ಮುಂಚೆ ಆರಂಭವಾಗಿದ್ದ ಖಾಸಗಿ ಶಾಲೆಗಳವರು ಅದನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದರು. ಈ ಅರ್ಜಿಯಲ್ಲಿ ಮಧ್ಯಪ್ರವೇಶ ಅರ್ಜಿಯನ್ನು ಸಾಹಿತಿಗಳ ಪರವಾಗಿ ವಕೀಲ ಸಿ. ಎಚ್. ಹನುಮಂತರಾಯ ಮತ್ತು ಶ್ರೀಮತಿ ಹೇಮಲತಾ ಮಹಿಷಿ ಸಲ್ಲಿಸಿದರು. ಆಗ ಖಾಸಗಿ ಶಾಲೆಗಳಿಗೆ ತಕ್ಷಣವೇ ತಡೆಯಾಜ್ಞೆ ಸಿಗಲಿಲ್ಲ. ಆದರೆ ನ್ಯಾಯಾಲಯದ ವತಿಯಿಂದ ಸರ್ಕಾರಕ್ಕೆ ನೋಟೀಸು ಹೋಯಿತು. ಸರಕಾರ ತನ್ನ ಆಜ್ಞೆಯನ್ನು ಸಮರ್ಥಿಸಿಕೊಂಡಿತಾದರೂ ತೀರ್ಪು ಬರುವವರೆಗೆ ಆದೇಶ ಉಲ್ಲಂಘಿಸುವ ಶಾಲೆಗಳ ಮೇಲೆ ಕ್ರಮಕೈಗೊಳ್ಳುವುದಿಲ್ಲ ಎಂದು ನ್ಯಾಯಾಲಯಕ್ಕೆ ವಾಗ್ದಾನ ಮಾಡಿತು. ಅನಂತರ ಏಕ ನ್ಯಾಯಾಧೀಶರ ಪೀಠದಿಂದ ಮೂರು ಜನ ನ್ಯಾಯಾಧೀಶರ ಪೀಠಕ್ಕೆ ದಾವೆಯು ವರ್ಗಾವಣೆಗೊಂಡಿತು.

ಇಲ್ಲಿ ಸಹ್ಯಾದ್ರಿ ಎಜುಕೇಷನಲ್ ಟ್ರಸ್ಟ್ ದಾವೆಗೆ ಸಂಬಂಧಿಸಿದಂತೆ ಕರ್ನಾಟಕ ಸರಕಾರದ ಮೇಲ್ಮನವಿ ಇತ್ಯರ್ಥವಾಗದಿರುವುದನ್ನು ಉಲ್ಲೇಖಿಸಿ, ಅದು ಇತ್ಯರ್ಥವಾಗುವವರೆಗೆ ಸರ್ಕಾರದ ವಾಗ್ದಾನ ಜಾರಿಯಲ್ಲಿರುತ್ತದೆಂದು ಉಚ್ಚ ನ್ಯಾಯಾಲಯ ಆದೇಶಿಸಿ, ಖಾಸಗಿ ಶಾಲೆಗಳ ರಿಟ್ ಅರ್ಜಿ ವಿಚಾರಣೆಯನ್ನು ಮುಂದೂಡಿತು.

ಇಲ್ಲಿಂದ ಮುಂದೆ ತಡೆಯಾಜ್ಞೆ ತೆರವು ಮಾಡಿಸುವಲ್ಲಿ ಸರಕಾರ ದಿವ್ಯ ನಿರಾಸಕ್ತಿ ತಾಳಿತು.

ಸಹ್ಯಾದ್ರಿ ಎಜುಕೇಷನಲ್ ಟ್ರಸ್ಟ್ ದಾವೆಯಲ್ಲಿ ಸರಕಾರ ಮಾಡಿಕೊಂಡಿದ್ದ ಮೇಲ್ಮನವಿಯನ್ನು ೧೯೯೪ರ ಆದೇಶದಲ್ಲಿ ಸರಕಾರ ಹಿಂತೆಗೆದುಕೊಂಡರೆ ಮೇಲಿನ

ತಡೆಯಾಜ್ಞೆಯನ್ನು ಸುಲಭವಾಗಿ ತೆರವು ಮಾಡಿಸಬಹುದೆಂಬ ನಿವೃತ್ತ ಮುಖ್ಯ ನ್ಯಾಯಾಧೀಶರಾದ ಶ್ರೀ ರಾಮಾಜೋಯಿಸರ ಸಲಹೆಯನ್ನು ಸರಕಾರ ಗಣನೆಗೇ ತೆಗೆದುಕೊಳ್ಳಲಿಲ್ಲ.

ಶಿಕ್ಷಣ ಮಾಧ್ಯಮದ ಬಗ್ಗೆ ಈ ಮೊದಲ ತೀರ್ಪುಗಳಲ್ಲೇ ಎಲ್ಲವನ್ನು ಹೇಳಿರುವುದರಿಂದ, ತತ್ಸಂಬಂಧವಾದ ಎಲ್ಲ ಮೇಲ್ಮನವಿಗಳೂ ನಿರರ್ಥಕವೆಂದು ಹೇಳಿ, ಸರ್ವೋಚ್ಚ ನ್ಯಾಯಾಲಯದ ಐವರು ನ್ಯಾಯಾಧೀಶರ ಸಾಂವಿಧಾನಿಕ ಪೀಠ ಎಲ್ಲ ರಿಟ್ ಅರ್ಜಿಗಳನ್ನೂ ೧೯೯೯ರಲ್ಲಿ ವಿಲೇ ಮಾಡಿತು.

ಇದನ್ನು ಉಲ್ಲೇಖಿಸಿ, ಸರಕಾರ ತಕ್ಷಣವೇ ಅಡ್ವೊಕೇಟ್ ಜನರಲ್ ಮೂಲಕ ತಡೆಯಾಜ್ಞೆ ತೆರವಿಗೆ ಅರ್ಜಿ ಸಲ್ಲಿಸಬೇಕಿತ್ತು. ಇಲ್ಲಿಯೂ ಸರಕಾರಿ ವಕೀಲರು ಸಾವಧಾನವಾಗಿ ಕ್ರಮಕೈಗೊಂಡರು. ತ್ವರಿತ ವಿಚಾರಣೆಗೆ ಸರಕಾರದ ಕಡೆಯಿಂದ ತೀವ್ರ ಒತ್ತಡ ಬಾರದ ಕಾರಣದಿಂದ ೧೯೯೪ರ ಆದೇಶವನ್ನು ಪ್ರಶ್ನಿಸಿದ ಖಾಸಗಿ ಶಾಲೆಗಳ ದಾವೆ ಹನ್ನೊಂದು ವರ್ಷಗಳವರೆಗೆ ಮತ್ತೆ ಉಚ್ಚ ನ್ಯಾಯಾಲಯದಲ್ಲಿ ನಾನಾ ಕಾರಣಗಳಿಂದಾಗಿ ವಿಚಾರಣೆಗೆ ಬರಲಿಲ್ಲ.

ಆದರೆ ಏತನ್ಮಧ್ಯೆ ೧೯೮೯ರ ನಂತರ, ಕನ್ನಡ ಮಾಧ್ಯಮದಲ್ಲಿ ತರಗತಿಗಳನ್ನು ನಡೆಸುವುದಾಗಿ ವಾಗ್ದಾನ ನೀಡಿ, ಮಾನ್ಯತೆ ಪಡೆದಿದ್ದ ಶಾಲೆಗಳವರು ತಮಗೆ ಇಂಗ್ಲಿಷ್ ಮಾಧ್ಯಮದಲ್ಲಿ ತರಗತಿ ನಡೆಸಲು ಸರಕಾರ ಅವಕಾಶ ನೀಡಬೇಕೆಂದು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ವಜಾ ಆಯಿತು. ಕನ್ನಡ ಮಾಧ್ಯಮದಲ್ಲಿ ತರಗತಿ ನಡೆಸುವುದಾಗಿ ಬರೆದುಕೊಟ್ಟು ಮಾನ್ಯತೆ ಪಡೆದಿರುವ ಶಾಲೆಗಳ ಮನವಿಯನ್ನು ಪುರಸ್ಕರಿಸಲಾಗದು ಎಂದು ಉಚ್ಚ ನ್ಯಾಯಾಲಯ ತೀರ್ಪಿತ್ತಿತು. ಇದರಿಂದ ಈ ಶಾಲೆಗಳಲ್ಲಾದರೂ ಏಳನೇ ತರಗತಿವರೆಗೆ ಮಾತೃಭಾಷಾ ಮಾಧ್ಯಮವನ್ನು ಸರಕಾರ ವಿಸ್ತರಿಸಬಹುದಿತ್ತು. ಸರಕಾರ ಇದನ್ನೂ ಮಾಡಲಿಲ್ಲ. ತಡೆಯಾಜ್ಞೆ ೧೯೮೯ಕ್ಕಿಂತ ಮುಂಚಿತವಾಗಿ ಪ್ರಾರಂಭವಾದ ಸುಮಾರು ೧ ಸಾವಿರ ಶಾಲೆಗಳಿಗೆ ಅನ್ವಯವಾಗುತ್ತಿತ್ತೇ ಹೊರತು - ೧೯೮೯ರ ನಂತರ ಪ್ರಾರಂಭವಾದ ಸುಮಾರು ೫ ಸಾವಿರ ಶಾಲೆಗಳಿಗೆ ಅನ್ವಯಿಸುವುದಿಲ್ಲ. ಇದರಿಂದಾಗಿ ಆ ಶಾಲೆಗಳಲ್ಲಿ ಏಳನೇ ತರಗತಿವರೆಗೆ ಮಾತೃಭಾಷಾ ಮಾಧ್ಯಮವನ್ನು ವಿಸ್ತರಿಸಬಹುದಿತ್ತು.

ಕೇಂದ್ರ ಸರಕಾರ 'ಸರ್ವ ಶಿಕ್ಷಣ ಅಭಿಯಾನ'ದ ಅಂಗವಾಗಿ ೧ರಿಂದ ೫ನೇ ತರಗತಿವರೆಗೆ ಕಿರಿಯ ಪ್ರಾಥಮಿಕ ಶಿಕ್ಷಣ ಎಂದು ಘೋಷಿಸಿತು. ಇದರಂತೆ ಮಾತೃಭಾಷಾ ಶಿಕ್ಷಣ ಮಾಧ್ಯಮವನ್ನು ೫ನೇ ತರಗತಿವರೆಗೆ ವಿಸ್ತರಿಸಿ ರಾಜ್ಯ ಸರಕಾರ ೨೦೦೩ರಲ್ಲಿ ಆದೇಶ ಹೊರಡಿಸಿತು. ಈ ಆದೇಶ ೧೯೮೯ರ ನಂತರ ಪ್ರಾರಂಭವಾದ ಶಾಲೆಗಳಿಗೆ ಅನ್ವಯವಾಗಬೇಕಿತ್ತು.

ಏಕೆಂದರೆ ೧೯೮೯ರ ನಂತರ ಕನ್ನಡ ಮಾಧ್ಯಮದಲ್ಲಿ ತರಗತಿಗಳನ್ನು ನಡೆಸುವುದಾಗಿ ವಾಗ್ದಾನ ನೀಡಿ ಪ್ರಾರಂಭವಾಗಿರುವ ಬಹುತೇಕ ಶಾಲೆಗಳೂ ಕದ್ದು ಮುಚ್ಚಿ ಇಂಗ್ಲಿಷ್ ಮಾಧ್ಯಮದಲ್ಲಿ ತರಗತಿಗಳನ್ನು ನಡೆಸುತ್ತಿವೆ. ಅವುಗಳ ಮೇಲೆ ಇಲಾಖೆ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಹಾಗಿರುವಾಗ ಮೇಲಿನ ಆದೇಶ ಎಷ್ಟರಮಟ್ಟಿಗೆ ಜಾರಿಯಾಗಿದೆಯೋ ತಿಳಿಯದು.

ಆದರೆ ಸರಕಾರ ತಡೆಯಾಜ್ಞೆ ತೆರವಿಗೂ ಪ್ರಾಮಾಣಿಕ ಪ್ರಯತ್ನ ನಡೆಸಲಿಲ್ಲ. ತಡೆಯಾಜ್ಞೆ ಅನ್ವಯಿಸದ ಶಾಲೆಗಳಲ್ಲಿ ಏಳನೇ ತರಗತಿವರೆಗೆ ಮಾತೃಭಾಷಾ ಮಾಧ್ಯಮ ವಿಸ್ತರಿಸಬೇಕೆಂಬ ಚಂಪಾ ಹಾಗೂ ಬರಗೂರು ವರದಿಯ ಶಿಫಾರಸಿನ ಅನುಷ್ಠಾನಕ್ಕೆ ಆಲೋಚನೆಯನ್ನೂ ಮಾಡಲಿಲ್ಲ.

ಬರಗೂರು ರಾಮಚಂದ್ರಪ್ಪನವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಪ್ರಾಧಿಕಾರದ ಪರವಾಗಿ ರವಿವರ್ಮಕುಮಾರ್ ಅವರನ್ನು ವಕೀಲರನ್ನಾಗಿ ನೇಮಿಸಿ, ತ್ವರಿತ ವಿಚಾರಣೆಗೆ ಯತ್ನಿಸಿದರಾದರೂ ಹೆಚ್ಚಿನ ಪ್ರಯೋಜನ ಆಗಲಿಲ್ಲ.

ಇಷ್ಟೆಲ್ಲ ಆದಮೇಲೆ ಹನ್ನೊಂದನೆ ವರ್ಷದಲ್ಲಿ ಅಂದರೆ ಏಪ್ರಿಲ್ ೨೦೦೪ರಂದು ರಿಟ್ ಅರ್ಜಿ ವಿಚಾರಣೆಗೆ ಬಂತು. ನ್ಯಾಯಾಲಯದ ತೀರ್ಮಾನ ತ್ವರಿತವಾಗಿ ಆಗಿ, ೨೦೦೪-೦೫ರಿಂದಲಾದರೂ ಮಾತೃಭಾಷಾ ಮಾಧ್ಯಮದ ಆಜ್ಞೆ ಜಾರಿಗೆ ಬರುವುದೇನೋ ಎಂದು ಆಶಿಸಲಾಗಿತ್ತು. ಅಷ್ಟರಲ್ಲಿ ಇಂಗ್ಲಿಷ್ ಮಾಧ್ಯಮದ ಶಾಲೆಗಳವರು ತಾವು ಒಂದನೇ ತರಗತಿಯಿಂದ ಕನ್ನಡವನ್ನು ಕಲಿಸುವ ಪ್ರಸ್ತಾಪ ಮುಂದಿಟ್ಟಾಗ ಇಂಗ್ಲಿಷ್ ಮಾಧ್ಯಮದ ಶಾಲೆಗಳಲ್ಲಿ ಕನ್ನಡವನ್ನೂ, ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಇಂಗ್ಲಿಷನ್ನೂ ಒಂದನೇ ತರಗತಿಯ ಪ್ರಸ್ತಾವವನ್ನು ಸರಕಾರ ಒಪ್ಪಿಕೊಳ್ಳುವುದೇ ಎಂದು ಕೇಳಿ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ವಿಚಾರಣೆಯನ್ನು ಮುಂದಕ್ಕೆ ಹಾಕಿತು.

ಇದನ್ನು ಹಲವು ಸಾಹಿತಿಗಳು, ಕನ್ನಡ ಹೋರಾಟಗಾರರು ಪ್ರತಿಭಟಿಸಿದ ನಂತರ, ಶಿಕ್ಷಣ ಮಾಧ್ಯಮದ ಬಗ್ಗೆ ಸರ್ಕಾರದ ನಿಲುವು ಅಚಲವಾಗಿದೆ, ಪ್ರಾಥಮಿಕ ಶಿಕ್ಷಣ ಮಾತೃಭಾಷಾ ಮಾಧ್ಯಮದಲ್ಲೇ ನಡೆಯಬೇಕು ಎಂದು ತಿಳಿಸಿ ಸರ್ಕಾರದ ವತಿಯಿಂದ ಪ್ರಮಾಣಪತ್ರವನ್ನೇನೋ ಸಲ್ಲಿಸಲಾಯಿತು.

ನವೆಂಬರ್ ೨, ೨೦೦೪ರಂದು ಚಂದ್ರಶೇಖರ ಪಾಟೀಲರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಏಳನೇ ತರಗತಿವರೆಗೆ ಮಾತೃಭಾಷೆ ಅಥವಾ ಪ್ರದೇಶ ಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕೆಂದು ವರದಿ ಸಲ್ಲಿಸಿದ್ದ ಅವರಿಗೆ ಶಿಕ್ಷಣ ಮಾಧ್ಯಮದ

ಸಮಸ್ಯೆ ಬಾಧಿಸುತ್ತಲಿತ್ತು. ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಶಿಕ್ಷಣ ಸಚಿವರ ಸಮ್ಮುಖದಲ್ಲಿ ಕರೆದಿದ್ದ ರಾಜ್ಯಮಟ್ಟದ ಸಮಾಲೋಚನಾ ಸಭೆ ಮಾದರಿಯಲ್ಲೇ ಶಿಕ್ಷಣ ಮಾಧ್ಯಮದ ಕುರಿತು ಮತ್ತೊಂದು ಸಭೆಯನ್ನು ಕರೆಯುವ ಸೂಕ್ತ ನಿರ್ಧಾರವನ್ನು ಕೈಗೊಂಡರು.

ಅದರಂತೆ ಮೇ ೩, ೨೦೦೫ರಂದು ಈಗಿನ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಶ್ರೀ ರಾಮಲಿಂಗಾರೆಡ್ಡಿ ಅವರ ಸಮ್ಮುಖದಲ್ಲಿ ಹಿರಿಯ ಸಾಹಿತಿಗಳು ಮತ್ತು ಹೋರಾಟಗಾರರ ರಾಜ್ಯಮಟ್ಟದ ಸಮಾಲೋಚನಾ ಸಭೆಯನ್ನು ಕರೆದಿದ್ದರು.

ಮೊದಲು ಈ ಸಭೆಯನ್ನು ಶಿಕ್ಷಣ ಮಾಧ್ಯಮಕ್ಕೆ ಸೀಮಿತವಾಗಿ ಕರೆಯುವುದು ಅವರ ಉದ್ದೇಶವಾಗಿತ್ತು. ಆದರೆ ಅಷ್ಟರಲ್ಲಿ ೧ನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯ ಪ್ರಸ್ತಾವದ ಬಗ್ಗೆ ಸರಕಾರ ಜನಾಭಿಪ್ರಾಯ ಸಂಗ್ರಹಿಸಲು ನಿರ್ಧರಿಸಿದ ಕಾರಣ, ರಾಜ್ಯದಲ್ಲಿ ಪರ ವಿರೋಧದ ಅಭಿಪ್ರಾಯಗಳು ವ್ಯಕ್ತವಾಗತೊಡಗಿದವು. ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ಸಂಘಟನೆಗಳು ೧ನೇ ತರಗತಿಯಿಂದ ಇಂಗ್ಲಿಷ್ ಕಲಿಕೆಯನ್ನು ವಿರೋಧಿಸಿದವು. ಹೀಗಾಗಿ ಆ ಪ್ರಶ್ನೆಯೂ ಸಭೆಯ ವಿಷಯಸೂಚಿಯಲ್ಲಿ ಸೇರಬೇಕಾಯಿತು. ಈ ಸಭೆಯಲ್ಲಿ ಏಳನೇ ತರಗತಿವರೆಗೆ ಮಾತೃಭಾಷೆ ಅಥವಾ ಪ್ರದೇಶಭಾಷೆ ಕಡ್ಡಾಯ ಮಾಧ್ಯಮವಾಗಬೇಕೆಂಬ ಬಗ್ಗೆ ಸರ್ವಾನುಮತದ ಒತ್ತಾಯ ವ್ಯಕ್ತವಾಯಿತು. ಆದರೆ ಒಬ್ಬಿಬ್ಬರು ೧ನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಬೆಂಬಲಿಸಿದರೆ, ಉಳಿದವರು ವಿರೋಧಿಸಿದರು.

ಶಿಕ್ಷಣ ಮಾಧ್ಯಮಕ್ಕೆ ಸಂಬಂಧಿಸಿದಂತೆ ತಡೆಯಾಜ್ಞೆಯನ್ನು ಸರಕಾರ ತಕ್ಷಣ ತೆರವು ಮಾಡಿಸಬೇಕು. ೧ನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಪ್ರಾರಂಭಿಸಬಾರದು, ೩ನೇ ತರಗತಿಯಿಂದ ಐಚ್ಛಿಕವಾಗಿ ಕಲಿಸಬಹುದೆಂಬ ನಿಲುವಿಗೆ ಹೆಚ್ಚು ಬೆಂಬಲ ದೊರೆಯಿತು. ಸಭೆಗೆ ಆಗಮಿಸಿದ್ದ ಸಚಿವರು ಸಭೆಯ ಭಾವನೆಗಳನ್ನು ಸಂಪುಟದಲ್ಲಿ ಮಂಡಿಸಿ, ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಇದೇ ಸಭೆಯಲ್ಲಿ ಸ್ಥಳೀಯರೇ ಹೆಚ್ಚಿರುವ ಕೇಂದ್ರೀಯ ಶಾಲೆಗಳ ಮಾನ್ಯತೆ ರದ್ದು ಮಾಡಿ, ಉಳಿಯುವ ಶಾಲೆಗಳಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಸಬೇಕೆಂದೂ ಒತ್ತಾಯಿಸಲಾಯಿತು.

ಅನಂತರ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ನೇತೃತ್ವದಲ್ಲಿ ನಡೆದ ಕನ್ನಡ ಸಂಘಟನೆಗಳ ಸಭೆಯಲ್ಲಿ ಸರ್ಕಾರ ತಡೆಯಾಜ್ಞೆ ತೆರವು ಮಾಡಿಸದಿದ್ದರೆ, ಜೂನ್ ೧೩, ೨೦೦೫ರಿಂದ ಮತ್ತೊಂದು ಗೋಕಾಕ್ ಮಾದರಿಯ ಚಳುವಳಿಯನ್ನು ಆರಂಭಿಸಲು ನಿರ್ಧರಿಸಲಾಯಿತು.

ಅದರಂತೆ ಜೂನ್ ೧೪, ೨೦೦೫ರಂದು ನಾಡಿನಾದ್ಯಂತ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಎಲ್ಲ ಕಡೆ ಸಾಹಿತಿಗಳು, ಕನ್ನಡ ಸಂಘಟನೆಗಳ ಕಾರ್ಯಕರ್ತರು ಮತ್ತಿತರರು ಧರಣಿ ಕಾರ್ಯಕ್ರಮ ನಡೆಸಿ, ಹಕ್ಕೊತ್ತಾಯ ಪತ್ರಗಳನ್ನು ಸಲ್ಲಿಸಿದರು.

ಬೆಂಗಳೂರಿನಲ್ಲಿ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಹೆಸರಾಂತ ಸಾಹಿತಿಗಳು ಮತ್ತು ಕನ್ನಡ ಕಾರ್ಯಕರ್ತರು ಸೇರಿದಂತೆ ಇತರರು ನೂರಾರು ಸಂಖ್ಯೆಯಲ್ಲಿ ಸೇರಿದ್ದರು. ಸರ್ಕಾರದ ಪರವಾಗಿ ವಾರ್ತಾ ಸಚಿವ ಶಿವರಾಂ ಅವರು ಹಕ್ಕೊತ್ತಾಯ ಪತ್ರ ಸ್ವೀಕರಿಸಿದರು.

ಚಳುವಳಿಯ ನಡೆ, ಸರ್ಕಾರದ ಮುಂದಿನ ನಿಲುವನ್ನು ಅವಲಂಬಿಸಿದೆ.

■

ಅಧ್ಯಾಯ-೧೪

ಮುಗಿಸುವ ಮುನ್ನ

ಭಾರತದಲ್ಲಿ ಬ್ರಿಟಿಷರ ಕಾಲದಿಂದಲೇ ದೇಶಭಾಷಾ ಮಾಧ್ಯಮದ ಬೇಡಿಕೆ ಸಾಗಿಬಂದಿರುವುದನ್ನು ನಾವು ಗಮನಿಸಿದ್ದೇವೆ.

ಕರ್ನಾಟಕದಲ್ಲಂತೂ ಮೊದಲ ಕನ್ನಡ ಸಾಹಿತ್ಯ ಸಮ್ಮೇಳನದಿಂದಲೇ ಕನ್ನಡ ಮಾಧ್ಯಮಕ್ಕಾಗಿ ಮೊರೆ ಕೇಳಿಬಂತು. ಹತ್ತಿರ ಹತ್ತಿರ ಒಂದು ಶತಮಾನವಾದರೂ ಆ ಆಗ್ರಹ ಇನ್ನೂ ಕೊನೆಗೊಂಡಿಲ್ಲ.

ದುರಂತವೆಂದರೆ ಆಗಿನ ಆಂದೋಲನದ ಮೊರೆ ಉನ್ನತ ಶಿಕ್ಷಣ ಕನ್ನಡದಲ್ಲಾಗಬೇಕು ಎಂಬುದಾಗಿದ್ದರೆ, ಈಚಿನ ದಶಕಗಳಲ್ಲಿ ಶಾಲೆಗಳಲ್ಲಿ ಕನ್ನಡ ಮಾಧ್ಯಮಕ್ಕಾಗಿ ಒತ್ತಾಯಿಸುವ ಗತಿ ಬಂದಿದೆ. ೧೯೯೪ರಲ್ಲಿ ಸರಕಾರ ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷಾ ಮಾಧ್ಯಮ ಜಾರಿ ಬಗ್ಗೆ ಐತಿಹಾಸಿಕ ನಿರ್ಧಾರ ಕೈಗೊಂಡರೂ ಅದು ಕೇವಲ ಕಾಗದದ ಮೇಲೆ ಉಳಿದಿದೆ.

೧೯೮೯ಕ್ಕಿಂತ ಮುಂಚೆ ಆರಂಭವಾದ ಶಾಲೆಗಳು ಅದಕ್ಕೆ ಉಚ್ಚ ನ್ಯಾಯಾಲಯದಿಂದ ತಂದ ತಡೆಯಾಜ್ಞೆ ಹನ್ನೆರಡು ವರುಷ ಕಳೆದರೂ ತೆರವಾಗಿಲ್ಲ. ಆ ದಿಸೆಯಲ್ಲಿ ಸರಕಾರದಿಂದಲೂ ಪ್ರಾಮಾಣಿಕ ಪ್ರಯತ್ನ ನಡೆದಿಲ್ಲ.

ಹೀಗಿರುವಾಗ ತಾಂತ್ರಿಕ ಶಿಕ್ಷಣವೂ ಸೇರಿದಂತೆ ಸ್ನಾತಕೋತ್ತರ ಶಿಕ್ಷಣದವರೆಗೆ ದೇಶಭಾಷೆಯೇ ಶಿಕ್ಷಣ ಮಾಧ್ಯಮವಾಗಬೇಕು ಎಂಬುದು ಹಗಲುಗನಸು ಎನಿಸುತ್ತದೆಯಲ್ಲವೆ?

ಅದು ನಿಜ. ಆದರೂ ಕನ್ನಡ ಮಕ್ಕಳ ಜ್ಞಾನಾರ್ಜನೆ ವಿಕಾಸಗತಿಯಲ್ಲಿ ಸಾಗಬೇಕಾದರೆ ಅದು ಆಗಲೇಬೇಕು.

ನವೆಂಬರ್, ೨೦೦೬ರಂದು ಅಖಂಡ ಕರ್ನಾಟಕದ ಚಿನ್ನದ ಹಬ್ಬ. ಆ ವೇಳೆಗಾದರೂ ಪೂರ್ವ ಪ್ರಾಥಮಿಕದಿಂದ ಏಳನೇ ತರಗತಿವರೆಗೆ ದೇಶಭಾಷೆಯೇ ಎಲ್ಲೆಡೆ ಶಿಕ್ಷಣ ಮಾಧ್ಯಮವಾಗಲಿ. ತಾಂತ್ರಿಕ ಶಿಕ್ಷಣವೂ ಸೇರಿದಂತೆ, ಸ್ನಾತಕೋತ್ತರ ಹಂತದವರೆಗೂ ದೇಶಭಾಷೆಯೇ ಶಿಕ್ಷಣ ಮಾಧ್ಯಮವಾಗುವುದಕ್ಕೆ ಮೊದಲ ಹೆಜ್ಜೆಯಾಗಿ ಪಠ್ಯಪುಸ್ತಕ, ಪರಾಮರ್ಶನ ಗ್ರಂಥಗಳನ್ನು ರಚಿಸಲು ಒಂದು ಪಠ್ಯಪುಸ್ತಕ ನಿರ್ದೇಶನಾಲಯವಾದರೂ ಆರಂಭವಾಗಲಿ.

ಇಂಗ್ಲಿಷನ್ನು ಶಿಕ್ಷಣ ಮಾಧ್ಯಮವಾಗಿ ಮುಂದುವರೆಸುವುದಕ್ಕಿಂತ, ಅದನ್ನು ಬದಲಾಯಿಸುವುದರಿಂದ ಉಂಟಾಗಬಹುದಾದ ಅರಾಜಕತೆಯನ್ನೇ ನಾನು ಸ್ವಾಗತಿಸುತ್ತೇನೆ ಎಂದಿದ್ದ ಗಾಂಧೀಜಿಯವರ ಮಾತುಗಳು ನಮ್ಮನ್ನು ಆಳುವವರ ವಿವೇಕವನ್ನು ತೆರೆಸಲಿ.

ಸ್ವತಂತ್ರ ಭಾರತದಲ್ಲಿ ಇಂಗ್ಲಿಷ್ ಮಾಧ್ಯಮ ಇರುವುದಿಲ್ಲ ಎಂಬ ಅವರ ನಂಬಿಕೆಯನ್ನು ಈಗಲಾದರೂ ನಿಜಗೊಳಿಸುವ ಪ್ರಯತ್ನ ಆರಂಭವಾಗಲಿ. ■

ಕೃತಿಕಾರರ ಪರಿಚಯ



ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ವಿಶ್ವಕೋಶ ವಿಭಾಗದಲ್ಲಿ ಸಹಾಯಕ ನಿರ್ದೇಶಕರಾಗಿದ್ದಾರೆ.

ಎಂ.ಎಸ್ಸಿ (ಭೂವಿಜ್ಞಾನ), ಎಂ.ಎ.(ಕನ್ನಡ) ಮತ್ತು ಎಲ್.ಎಲ್.ಬಿ ಪದವೀಧರರಾದ ಇವರು ಬಿ.ಎಸ್.ಸಿ. ಪರೀಕ್ಷೆಯಲ್ಲಿ ಭೌತಶಾಸ್ತ್ರ ಮತ್ತು ಭೂವಿಜ್ಞಾನ ವಿಷಯಗಳನ್ನು ಕನ್ನಡದಲ್ಲಿ ಉತ್ತರಿಸಿ ಪ್ರಥಮ ದಾಖಲೆಯನ್ನು ಮಾಡಿದ್ದಾರೆ. ಮೈಸೂರು ಚೇತನ ಕನ್ನಡ ಸಂಘಕ್ಕೆ ಕಾರ್ಯದರ್ಶಿಯಾಗಿ ದಶಕಕ್ಕೂ ಹೆಚ್ಚು ಕಾಲ ನಾಟಕ ಚಳುವಳಿಯಂತಹ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ನಡೆಸಿದ್ದಾರೆ.

ಗೋಕಾಕ್ ಚಳುವಳಿಯಲ್ಲಿ ಕನ್ನಡ ಚಳುವಳಿಗೆ ನೇರವಾಗಿ ಧುಮುಕಿ, ಬಂಧಿತರೂ ಆಗಿದ್ದ ಇವರು ಅಂದಿನಿಂದ ಇಂದಿನವರೆಗೆ ಮೈಸೂರಿನ ಕನ್ನಡ ಕ್ರಿಯಾ ಸಮಿತಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಮುಂತಾದ ಪದವಿಗಳಲ್ಲಿದ್ದು ಕನ್ನಡದ ಸಮಸ್ಯೆಗಳಿಗೆ ಸಂದಿಸುತ್ತಾ ಬಂದಿದ್ದಾರೆ. ಪ್ರತಿಷ್ಠಿತ ಸಂಘ ಸಂಸ್ಥೆಗಳು ನಡೆಸಿರುವ ವಿಚಾರ ಸಂಕಿರಣಗಳು ಮೆತ್ತಿತರ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಾರೆ. ಹಲವಾರು ಲೇಖನಗಳನ್ನು ದೈನಂದಿನ ಕನ್ನಡ ಪತ್ರಿಕೆಗಳಲ್ಲಿ ಬರೆದಿದ್ದಾರೆ.

ಸಹ ಲೇಖಕರ ಜತೆಗೂಡಿ ಬದಲಾಗುತ್ತಿರುವ ಭೂಮಿ. ಭೂಸ್ವರೂಪ ವಿಜ್ಞಾನ ಒಂದು ರೂಪರೇಖೆ ಎಂಬ ಕೃತಿಗಳನ್ನು ಬರೆದಿದ್ದಾರೆ. ಶಾಲಾ ವಿದ್ಯಾರ್ಥಿಗಳ ಇಂಗ್ಲಿಷ್–ಕನ್ನಡ ನಿಘಂಟುವನ್ನು ಸಂಪಾದಿಸಿದ್ದಾರೆ. ಸ್ವತಃ ಪ್ರಕಾಶಕರಾಗಿ ಕನ್ನಡದಲ್ಲಿ ಮಕ್ಕಳ ಪುಸ್ತಕಗಳನ್ನು ವೈಜ್ಞಾನಿಕವಾಗಿ ಹೊರತರುವ ಪ್ರಯತ್ನವಾಗಿ ಮಹಾಭಾರತದ ಎರಡು ಸಂಪುಟಗಳು, ಪಂಚತಂತ್ರ, ಈಸೋಪನ ನೀತಿಕತೆಗಳು ಮೊದಲಾದ ೫೦ಕ್ಕೂ ಹೆಚ್ಚು ಕಿರುಹೊತ್ತುಗೆಗಳನ್ನು, ವರದಕ್ಷಿಣೆ ನಿಷೇಧ, ಕಾರ್ಮಿಕ ಸಂಘ ಮೊದಲಾದ ೨೦ ಕ್ಕೂ ಹೆಚ್ಚು ನವಸಾಕ್ಷರ ಹೊತ್ತುಗೆಗಳನ್ನು ಜನಸಾಮಾನ್ಯರಿಗಾಗಿ ಭೂಮಿ, ರೈಲು, ಮರುಭೂಮಿ, ಅಗ್ನಿಪರ್ವತ ಮೊದಲಾದ ವಿಜ್ಞಾನ ಪುಸ್ತಕಗಳನ್ನು ಹೊರತಂದಿದ್ದಾರೆ.

ಸ್ನಾತಕೋತ್ತರ ಹಂತದವರೆಗೂ ಕನ್ನಡವೇ ಶಿಕ್ಷಣ ಮಾಧ್ಯಮವಾಗಬೇಕು ಎಂದು ದೃಢವಾಗಿ ಪ್ರತಿಪಾದಿಸುವ ಲೇಖಕರು ಈ ಕೃತಿಯಲ್ಲಿ ಇತಿಹಾಸದ ಜಾಡಿನಲ್ಲಿ ಆಂಗ್ಲವೇತ್ತರಿಂದ ಹಿಡಿದು ಭಾರತೀಯರ ಈವರೆಗಿನ ದೇಶಭಾಷಾ ಮಾಧ್ಯಮದ ಪ್ರತಿಪಾದನೆಯನ್ನು, ಕನ್ನಡ ನೆಲದಲ್ಲಿನ ಕಾರ್ಯಸಾಧನೆಯನ್ನು ಚಿತ್ರಿಸುವ ಪ್ರಯತ್ನ ಮಾಡಿದ್ದಾರೆ.

ವಿಳಾಸ: ಶ್ರೀ ಸ.ರ. ಸುದರ್ಶನ

ಎಸ್.೫, ವಿ.ವಿ. ಅಧ್ಯಾಪಕರ ನಿವಾಸಗಳು

೧ನೇ ಮೇನ್, ಸ್ರಸ್ವರಿಪುರಂ

ಮೈಸೂರು – ೫೭೦ ೦೦೯

ದೂರವಾಣಿ: ೯೨೪೩೫೦೩೯೧೩

[illegible]


[illegible]

[illegible]

ಕನ್ನಡ ಸಂಸ್ಕೃತಿಯ ವಿಕಾಸ ಪ್ರಕ್ರಿಯೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ತೊಂಬತ್ತು ವರ್ಷಗಳಿಂದ ತೊಡಗಿ ಕೊಂಡಿರುವ ರೀತಿ ಅನನ್ಯ. ಹತ್ತು ಹಲವಾರು ದಿಕ್ಕುಗಳಲ್ಲಿ ಹರಡಿರುವ ಪರಿಷತ್ತಿನ ಒಂದು ಮುಖ್ಯ ಕ್ರಿಯಾ ಯೋಜನೆ : ಪುಸ್ತಕ ಪ್ರಕಟನೆ.

ಪರಿಷತ್ತು ಹಮ್ಮಿಕೊಳ್ಳುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಡೀ ಕನ್ನಡ ಕುಲಕೋಟಿಯ ಪಾಲಿಗೆ ಒಂದು ಸಾಂಸ್ಕೃತಿಕ ಹಬ್ಬವೇ. ವರ್ಷದುದ್ದಕ್ಕೂ ನಾವೆಲ್ಲ ಮೆಲುಕು ಹಾಕುವ ಸಂದರ್ಭವಿದು.

ಬೀದರಿನಲ್ಲಿ ನಡೆಯಲಿರುವ ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗೆಂದು ಪರಿಷತ್ತು ಹೊರತಂದಿರುವ ೭೨ ಪುಸ್ತಕಗಳು, ಮುಖ್ಯವಾಗಿ ಸೃಜನೇತರ ವಲಯದ ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿದ್ದು, ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೂಲ್ಯ ಸೇರ್ಪಡೆಗಳಾಗಿವೆ.



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮